ಮನವಿಗಳು

ಶ್ರೀ ಪಿ. ರಾಮದೇವ್.—ಅರಬ್ ದೇಶಗಳಿಗೆ ಮುಸ್ಲಿಂ ಬಾಂಧವರ ಹೆಣ್ಣು ಮಕ್ಕಳ ಮಾರಾಟ ನಡೆಯುತ್ತಿದೆ. ನನ್ನ ಮತದಾರ ಕ್ಷೇತ್ರದಲ್ಲಿ ಮುಸ್ಲಿಂ ಸಂಘ ಸಂಸ್ಥೆಗಳು ಸರ್ಕಾರಕ್ಕೆ ಅಪೀಲ್ ಮಾಡಿದ್ದಾರೆ. ಮೊನ್ನೆ ದಿವಸ ಅಶೋಕಾ ಹೋಟೆಲ್‌ನಲ್ಲಿ ಇಂಥಾದ್ದೊಂದು ಪ್ರಕರಣ ವರದಿಯಾಗಿದೆ. ಸರ್ಕಾರದವರು ಇದರ ಬಗ್ಗೆ ಸೂಕ್ತ ಗಮನ ತೆಗೆದುಕೊಳ್ಳಬೇಕು. ಇದರ ಬಗ್ಗೆ ನಾನು ಒಂದು ನೋಟೀಸ್ ಕೊಟ್ಟಿದ್ದೇನೆ.

ಅಧ್ಯಕ್ಷರು.—ನಿನ್ನೆ ಕೊಟ್ಟಿದ್ದೀರಾ?

ಶ್ರೀ ಪಿ. ರಾಮದೇವ್.—ಹೌದು. ಬಡ ಹೆಣ್ಣುಮಕ್ಕಳ ರಕ್ಷಣೆ ಕೊಡಬೇಕು.

ಶ್ರೀಮತಿ ಅನಸೂಯ ಗಜಾನನ ಶರ್ಮ.—ಕೆಲವು ವಿಷಯಗಳ ಬಗ್ಗೆ ನೋಟೀಸ್ ಕೊಟ್ಟಿದ್ದರೂ ಇನ್ನೂ ಬಂದಿಲ್ಲ. ಇನ್ನು ಎರಡು ಮೂರು ದಿವಸಗಳಲ್ಲಿ ಅಧಿವೇಶನ ಮುಗಿಯುತ್ತದೆ. ಅಷ್ಟರೊಳಗೆ ಇದು ಚರ್ಚೆಗೆ ಬರುವ ಹಾಗೆ ಮಾಡುತ್ತೀರಾ?

ಶ್ರೀ ಎಂ.ವಿ. ರಾಜಶೇಖರಮೂರ್ತಿ.—ಕ್ಷಾಮ ಪರಿಸ್ಥಿತಿ ಬಗ್ಗೆ ಯಾವಾಗ ಚರ್ಚೆ ಮಾಡುತ್ತೀರಿ ಸ್ವಾಮಿ?

ಅಧ್ಯಕ್ಷರು.—ಅಪ್ರೋಪ್ರಿಯೇಷನ್ ಬಿಲ್ ಆದ ಮೇಲೆ ಮಾಡೋಣ.

ಶ್ರೀ ಮುತ್ತಿನಪೆಂಡಿನ ಮಠ್.—ನಿನ್ನೆ ಈ ಸದನದಲ್ಲಿ ಬಂಗಾರಪ್ಪನವರು ಮಂತ್ರಿಗಳ ಮೇಲೆ ಮತ್ತು ಕೆಲವು ಸದಸ್ಯರ ಮೇಲೆ ಎಪಿಎಂಸಿ ಸೆಸ್ ಸಂಗ್ರಹ ಮಾಡುವ ವಿಷಯದಲ್ಲಿ ಹಣದ ಅವ್ಯವಹಾರ ನಡೆದಿದೆ ಎಂದು ಈ ಸದನದಲ್ಲಿ ವೈಯಕ್ತಿಕವಾಗಿ ಕೆಲವು ಆಪಾದನೆಗಳನ್ನು ಮಾಡಿದ್ದಾರೆ. ಆದರೆ ಈ ಎಪಿಎಂಸಿ ಸೆಸ್‌ನ್ನು ಎರಡು ಪರ್ಸೆಂಟ್ ಮಾಡಿದ್ದಾರೆ ವ್ಯಾಪಾರಸ್ಥರ ಐದು ಸಾವಿರ ರಿಟ್ ಪಿಟಿಷನ್‌ಗಳು ಎರಡು ತಿಂಗಳಲ್ಲೇ ನಿಕಾಲ್ ಆಗುತ್ತಿದ್ದವೆ? ಸರ್ಟಿಫೈಡ್ ಕಾಪಿಗಳು ಕೂಡ ನಮಗೆ ಸಿಕ್ಕಿದೆ. ಎಲ್ಲಾ ವ್ಯಾಪಾರಗಾರರ ಸಂಘಸಂಸ್ಥೆಗಳು ಈ ವಿಷಯದಲ್ಲಿ ಸುಪ್ರೀಂ ಕೋರ್ಟಿಗೆ ಅಪೀಲ್ ಹೋಗುವ ವಿಷಯದಲ್ಲಿ ವಿಚಾರದಲ್ಲಿದ್ದಾರೆ. ಬಂಗಾರಪ್ಪನವರು ಸುಳ್ಳು ಆಪಾದನೆ ಮಾಡಿದ್ದಾರೆಂದು ಈ ಸದನದ ಮುಂದೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

FINANCIAL BUSINESS

Discussion and voting of Demand Nos. 5,7,8,42,22,41 and 53 for the year 82-83.

† ಶ್ರೀ ಜಿ. ರಾಜುಗೌಡ(ಹನೂರ್).—ಮಾನ್ಯ ಅಧ್ಯಕ್ಷರೇ, ನಿನ್ನೆ ದಿವಸ ರಾಜ್ಯದ ಕೈಗಾರಿಕೆಗಳ ಬಗ್ಗೆ ಮಾತನಾಡುತ್ತಾ ಮುಂದೆ ಬರತಕ್ಕಂಥ ಹೊಸ ಕೈಗಾರಿಕೆಗಳಲ್ಲಿ ಸ್ಥಳೀಯ ಅಭ್ಯರ್ಥಿಗಳಿಗೆ ಆದ್ಯತೆ ಕೊಡಬೇಕೆಂದು ಮತ್ತು ಪೂರಕ ಘಟಕಗಳಿಗೆ ಹೆಚ್ಚಿನ ಆದ್ಯತೆ ಕೊಡಬೇಕೆಂದು ಸೂಚಿಸಿದ್ದೇನೆ. ಇನ್ನೊಂದು ಮುಖ್ಯವಾದ ವಿಷಯವೆಂದರೆ ನಮ್ಮ ರಾಜ್ಯದ ಕೈಗಾರಿಕಾ ಬೆಳವಣಿಗೆ ದೃಷ್ಟಿಯಿಂದ ಕೈಗಾರಿಕಾ ಶೆಡ್ಡುಗಳು ಮತ್ತು ಕೈಗಾರಿಕಾ ಪ್ಲಾಟುಗಳನ್ನು ನಿರ್ಮಾಣ ಮಾಡತಕ್ಕಂಥಾದ್ದು ಸರಿಯಷ್ಟೆ. ಇವುಗಳ ನಿರ್ಮಾಣಕ್ಕೆ ಕರ್ನಾಟಕ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ ಮತ್ತು ಕರ್ನಾಟಕ ಇಂಡಸ್ಟ್ರಿಯಲ್ ಏರಿಯಾ ಡೆವಲಪ್‌ಮೆಂಟ್ ಬೋರ್ಡ್ ಇದೆ. ಈ ಎರಡು ಸಂಸ್ಥೆಗಳ ಕಾರ್ಯ ವ್ಯಾಪ್ತಿಯನ್ನು ಇವುಗಳ ನಿರ್ಮಾಣಕ್ಕೆ ಮಾತ್ರ ಮೀಸಲಾಗಿಡಬೇಕು. ಶೆಡ್ಡುಗಳ ಮತ್ತು ಪ್ಲಾಟ್‌ಗಳ ವಿತರಣೆ ಮಾಡುವ ವ್ಯವಸ್ಥೆಯ ಆಡಳಿತವನ್ನು ಆಯಾ ಜಿಲ್ಲೆಯ ಕೈಗಾರಿಕಾ ಕೇಂದ್ರದ ವ್ಯಾಪ್ತಿಗೆ ಒಳಪಡಿಸಬೇಕೆಂದು ಸಲಹೆ ಕೊಡಲು ಇಚ್ಛೆಪಡುತ್ತೇನೆ. ಒಂದು ಉದಾಹರಣೆಯನ್ನು ಹೇಳುವುದಾದರೆ ಯಾವ ರೀತಿ ಕರ್ನಾಟಕ ಪವರ್ ಕಾರ್ಪೋರೇಷನ್ ಪ್ರಾಜೆಕ್ಟ್‌ಗಳನ್ನು ಮಾಡಿ ನಂತರ ಅದರ ಆಡಳಿತವನ್ನು ಕರ್ನಾಟಕ ಎಲೆಕ್ಟ್ರಿಸಿಟಿ ಬೋರ್ಡ್‌ಗೆ ವರ್ಗಾಯಿಸುತ್ತದೆ, ಅದೇ ರೀತಿಯಲ್ಲಿ ಈ ಶೆಡ್ಡುಗಳು ಮತ್ತು ಪ್ಲಾಟ್‌ಗಳ ವಿತರಣೆ ಮಾಡಲಿಕ್ಕೆ ಒಂದು ರಾಜ್ಯಮಟ್ಟದ ಸಮಿತಿಯನ್ನು ಮಾಡಿ ಕೈಗಾರಿಕಾ ನಿರ್ದೇಶಕರನ್ನು ಅಧ್ಯಕ್ಷರನ್ನಾಗಿಯೂ, ಕೇಂದ್ರ ಕಚೇರಿಯ ನಿರ್ದೇಶಕರನ್ನು ಕಾರ್ಯದರ್ಶಿಯಾಗಿ ಮಾಡಿ ಆಯಾಯ ಜಿಲ್ಲೆಯ

ಕೇಂದ್ರಗಳ ಜನರಲ್ ಮ್ಯಾನೇಜರುಗಳನ್ನು, ಕಾರ್ಪೊರೇಷನ್ ಮಂಡಲಿಗಳ ಮುಖ್ಯಸ್ಥರನ್ನು ಮತ್ತು ಇದರ ಎಲ್ಲಾ ಅಧಿಕಾರಿಗಳನ್ನು ಸದಸ್ಯರನ್ನಾಗಿ ಮಾಡಬೇಕೆಂದು ಹೇಳಲು ಬಯಸುತ್ತೇನೆ. ಈ ರೀತಿ ಮಾಡದೇ ಹೋದರೆ ಈ ಕರ್ನಾಟಕ ಇಂಡಸ್ಟ್ರೀಯಲ್ ಏರಿಯಾ ಡೆವಲಪ್‌ಮೆಂಟ್ ಬೋರ್ಡ್ ಮಿನಿ ಪಿ.ಡಬ್ಲ್ಯೂ.ಡಿ. ಆಗಿ ಬಿಡುತ್ತದೆ. ಈಗಾಗಲೇ ಹಾಗೆಯೇ ಆಗುತ್ತಿದೆ, ಇದನ್ನು ತಡೆಗಟ್ಟಬೇಕು ಈ ಸಂಸ್ಥೆಗಳು ಕೈಗಾರಿಕಾ ಇಲಾಖೆಯ ವ್ಯಾಪ್ತಿಯಲ್ಲಿ ಕೆಲಸ ಮಾಡಬೇಕೇ ವಿನಹ ಬೇರೆ ಸಂಸ್ಥೆಗಳಂತೆ ಕೆಲಸ ಮಾಡುವುದು ಇಲಾಖೆಯ ಬೆಳವಣಿಗೆ ದೃಷ್ಟಿಯಿಂದ ಹಿತಕರವಲ್ಲ ಎಂದು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

ಮಾನ್ಯ ಅಧ್ಯಕ್ಷರೇ, ಯಾವ ರೀತಿ ಶರೀರದ ಎಲ್ಲಾ ಅಂಗಗಳೂ ಒಂದೇ ಸಮನಾಗಿ ಬೆಳೆಯಬೇಕು, ಕೈ, ಕಾಲುಗಳು ಬೇರೆ ಬೇರೆಯಾಗಿ ಬೆಳದರೆ ಸರಿಯಿರುವುದಿಲ್ಲವೋ, ಅದೇ ರೀತಿಯಲ್ಲಿ ಈ ಸಂಸ್ಥೆಗಳು ಬೇರೆ ಬೇರೆಯಾಗಿರದೆ ಒಂದೇ ಸಮನಾಗಿ ಬೆಳವಣಿಗೆಯನ್ನು ಸಾಧಿಸಿಕೊಂಡು ಬರಬೇಕಾದರೆ ನಾನು ಹೇಳಿದ ಸಲಹೆಗಳನ್ನು ಆದಷ್ಟು ಬೇಗನೆ ಇಲಾಖೆಯವರು ಕಾರ್ಯಗತ ಮಾಡಬೇಕೆಂದು ಹೇಳಿ ಇನ್ನು, ರೇಷ್ಮೆ ಕೈಗಾರಿಕೆಯ ಬಗ್ಗೆ ಮಾತನಾಡಲು ಇಚ್ಛೆಪಡುತ್ತೇನೆ. ರೇಷ್ಮೆ ಕೈಗಾರಿಕೆ ಎನ್ನತಕ್ಕಂಥಾದ್ದು ನಿಜವಾಗಿಯೂ ಕೂಡ ಬಂಡವಾಳ ಪ್ರಧಾನವಾದ ಕೈಗಾರಿಕೆಯಲ್ಲ, ದುಡಿಮೆ ಪ್ರಧಾನವಾದ ಕೈಗಾರಿಕೆಯೆಂದು ನಿನ್ನೆ ದಿವಸ ಮಾತನಾಡುವಾಗ ಒತ್ತಿ ಹೇಳಿದ್ದೇನೆ. ಕೇವಲ ಸ್ವಲ್ಪ ಬಂಡವಾಳದಿಂದ ೨೫ ಸಾವಿರ ರೂಪಾಯಿ ಬಂಡವಾಳ ಹೂಡಿದರೆ ೩೦ ಜನರಿಗೆ ಕೆಲಸ ಕೊಡಲು ಸಾಧ್ಯವಾಗುತ್ತ. ಒಂದು ಎಕರೆ ಹಿಪ್ಪ ನೇರಳೆ ಗಿಡಗಳನ್ನು ಬೆಳೆಸುವುದರಿಂದ ವರ್ಷಪೂರ್ತಿ ಐದು ಜನರಿಗೆ ಲಾಭದಾಯಕ ಉದ್ಯೋಗ ಒದಗಿಸಿ ಕೊಡಲಿಕ್ಕೆ ಸಾಧ್ಯವೆಂಬ ನಾನು ಒತ್ತಿ ಹೇಳಲು ಬಯಸುತ್ತೇನೆ. ಆದ್ದರಿಂದ ಬಂಡವಾಳ ಪ್ರಧಾನ ಕೈಗಾರಿಕೆಗಳಿಂದ ಸಂಪತ್ತು ಕೇಂದ್ರೀಕೃತವಾಗುತ್ತದೆ. ಯಾವ ರೀತಿ ನೀರು ಒಂದೇ ಕಡೆ ಸಂಗ್ರಹವಾಗಿದ್ದರೆ ಅದು ಕೊಳೆತು ನಾರುತ್ತದೆಯೋ ಅದೇ ರೀತಿ ಸಂಪತ್ತು ಕೂಡ ಒಂದೇ ಕಡೆ ಶೇಖರಣೆಯಾದಾಗ ಸಮಾಜದಲ್ಲಿ ಅಸಮಾನತೆಯ ದುರ್ಗಂಧ ಮೂಡಲು ಅವಕಾಶವಾಗುತ್ತದೆ ರೇಷ್ಮೆ ಕೈಗಾರಿಕೆ ಈ ರಾಜ್ಯದಲ್ಲಿ ಬಡವರಿಗೆ ಕಲ್ಪವೃಕ್ಷ ಕಾಮಧೇನು ಆಗಿದೆ. ಆದ್ದರಿಂದ ದುಡಿಮೆ ಪ್ರಧಾನವಾದ ಈ ಕೈಗಾರಿಕೆಯಿದೆ ಹೆಚ್ಚಿನ ಪ್ರಾಶಸ್ತ್ಯ ಕೊಡಬೇಕು, ಆದರೆ ದುರ್ದೈವದಿಂದ ಹಿಂದೆ ಶ್ರೀಮತಿ ರೇಣುಕಾ ರಾಜೇಂದ್ರನ್ ರವರು ಈ ಇಲಾಖೆಯ ಮಂತ್ರಿಯಾಗಿದ್ದರು, ಅವರು ರಾಜೀನಾಮೆ ಕೊಟ್ಟ ನಂತರ ಪೂರ್ಣ ಮಟ್ಟದ ಮಂತ್ರಿಗಳು ಈ ಖಾತೆಗಿಲ್ಲದೆ ಹೆಚ್ಚಿನ ಪ್ರಾಮುಖ್ಯತೆ ಈ ಕೈಗಾರಿಕೆಗೆ ಸಿಕ್ಕದೆ ಇದರ ಕೆಲಸ ಸ್ಥಗಿತವಾಗಿದೆ ಮತ್ತು ಕುಂಠಿತವಾಗಿದೆ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಸ್ವಾಮಿ, ಈ ಇಲಾಖೆ ಸಾಧಿಸಿರತಕ್ಕ ಪ್ರಗತಿಯಾದರೂ ಏನು ಎನ್ನತಕ್ಕಂಥಾದ್ದನ್ನು ವಿಮರ್ಶೆ ಮಾಡಿದಾಗ ಕಳೆದ ಎರಡು ವರ್ಷಗಳಿಂದೀಚೆಗೆ, ಈ ಸಿಲ್ಕ್ ಡೆವಲಪ್‌ಮೆಂಟ್ ಕಾರ್ಪೊರೇಷನ್, ಸಿಲ್ಕ್ ಎಕ್ಸ್‌ಚೇಂಜ್ ಮತ್ತು ರೇಷ್ಮೆ ಮಾರುಕಟ್ಟೆ ಮಂಡಲಿ ಎನ್ನತಕ್ಕಂಥಾದ್ದು ಅಸ್ತಿತ್ವಕ್ಕೆ ಬಂದಿದೆ. ಅದರ ಕಾರ್ಯವ್ಯಾಪ್ತಿ ಏನು, ಎಷ್ಟರಮಟ್ಟಿಗೆ ಅದು ಕೆಲಸ ಕಾರ್ಯಗಳನ್ನು ಸಾಧಿಸಿದೆ ಎನ್ನತಕ್ಕಂಥಾದ್ದನ್ನು ನಾನು ವಿಮರ್ಶೆ ಮಾಡಿದಾಗ, ಈ ರೇಷ್ಮೆ ವಿನಿಮಯ ಕೇಂದ್ರ ಮತ್ತು ಈ ಸಂಸ್ಥೆಗಳು ಯಾವ ಒಂದು ಸಂದರ್ಭದಲ್ಲಿ. ಯಾವ ಸನ್ನಿವೇಶದಲ್ಲಿ ಅಸ್ತಿತ್ವಕ್ಕೆ ಬಂದುವು ಎಂಬುದನ್ನು ಯೋಚನೆ ಮಾಡಿದಾಗ, ಈ ರಾಜ್ಯದಲ್ಲಿ ಸುಮಾರು ೬೦೦೦ ರೇಷ್ಮೆ ದಾರವನ್ನು ಬಿಚ್ಚತಕ್ಕ ಘಟಕಗಳು ಇದ್ದುವು. ಅವರೆಲ್ಲರೂ ಕೂಡ ತಾವು ಉತ್ಪಾದನೆ ಮಾಡತಕ್ಕಂಥ ರೇಷ್ಮೆಯನ್ನು ತಂದು ಬೆಂಗಳೂರಿನಲ್ಲಿರತಕ್ಕ ಕೋಠಿವಾಲಾಗಳ ಮುಖಾಂತರ ಮಾರಾಟ ಮಾಡುತ್ತಿದ್ದರು. ಆಗ ಎಲ್ಲರೂ ಹೇಳುತ್ತಿದ್ದರು, ಏನೆಂದರೆ, ನಮ್ಮ ರಾಜ್ಯದಲ್ಲಿರತಕ್ಕ ಈ ರೇಷ್ಮೆ ದಾರವನ್ನು ಬಿಚ್ಚತಕ್ಕವರು ಅನೇಕ ವಿಧವಾಗಿ ಶೋಷಣೆಗೆ ಒಳಗಾಗುತ್ತಾರೆ ಅವರಿಗೆ ಸರಿಯಾದ ದರ ಸಿಕ್ಕುತ್ತಾ ಇಲ್ಲ, ತೂಕದಲ್ಲಿ ಮೋಸವಾಗುತ್ತಿದೆ, ಆದುದರಿಂದ ಈ ರೀತಿ ಮಾರಾಟ ಮಾಡುವುದನ್ನು ತಪ್ಪಿಸಬೇಕು, ರೇಷ್ಮೆ ವಿನಿಮಯ ಕೇಂದ್ರವನ್ನು ತರಬೇಕು, ಅಲ್ಲಿ ರೇಷ್ಮೆಯನ್ನು ಉತ್ಪಾದನೆ ಮಾಡತಕ್ಕವರು ಮತ್ತು ಕೊಂಡುಕೊಳ್ಳತಕ್ಕವರಿಬ್ಬರೂ ಬರಬೇಕು ಎಂದು ಅದನ್ನು ಮಾಡಿದರು. ಅದಕ್ಕೋಸ್ಕರ ಆಕ್ಟ್ ತಂದರು. ಇವತ್ತು ರಾಜ್ಯದಲ್ಲಿರತಕ್ಕ ಪ್ರತಿಯೊಬ್ಬ ರೇಷ್ಮೆ ಉತ್ಪಾದನೆ ಮಾಡತಕ್ಕವರೂ ಕೂಡ ಈ ವಿನಿಮಯ ಕೇಂದ್ರಕ್ಕೆ ರೇಷ್ಮೆ ತರುತ್ತಾರೆ, ಮತ್ತು ಕೊಂಡುಕೊಳ್ಳತಕ್ಕವರೂ ಕೂಡ ಅಲ್ಲಿಗೆ ಬರುತ್ತಾರೆ. ಅಂದಮೇಲೆ ಆ ರೇಷ್ಮೆ ವಿನಿಮಯ ಕೇಂದ್ರ ಕೆಲಸ ಮಾಡಿದೆಯೋ ಎಂದು ನಾನು ಕೇಳುತ್ತಾ ಇದ್ದೇನೆ, ಅದು ಏನೂ ಸಹ ಮಾಡಿಲ್ಲ. ಎಂತೆಂತಹವರಿಗೆ ಎಂತೆಂತಹ ಬೆಲೆ ಎಂದು ಗೊತ್ತು ಮಾಡಲಿಲ್ಲ. ಜೊತೆಗೆ ರೇಷ್ಮೆಯನ್ನು ಒತ್ತೆ ಇಟ್ಟುಕೊಂಡು ದುಡ್ಡು

ಕೊಡಬೇಕು ಎನ್ನತಕ್ಕ ವ್ಯವಸ್ಥೆಯನ್ನು ಮಾಡಿಲ್ಲ, ಯಾರು ಎಷ್ಟಕ್ಕೆ ಕೇಳುತ್ತಾರೋ ಅಷ್ಟಕ್ಕೆ ಮಾರುತ್ತಾರೆ ಮತ್ತೆ ರೇಷ್ಮೆ ವಿನಿಮಯ ಕೇಂದ್ರಕ್ಕೆ ಎಷ್ಟು ರೇಷ್ಮೆ ಬರುತ್ತದೋ ಅದರಲ್ಲಿ ಶೇಕಡ ೨೫ ರಷ್ಟಾದರೂ ಕೊಂಡುಕೊಳ್ಳಬೇಕು ಎನ್ನತಕ್ಕ ನಿಯಮವಿತ್ತು. ಈಗ ಇಷ್ಟಬಂದವರು ತೆಗೆದುಕೊಳ್ಳುತ್ತಾರೆ, ಇಲ್ಲದೆ ಹೋದರೆ ಇಲ್ಲ, ಈ ವಿನಿಮಯ ಕೇಂದ್ರ ಬೆಲೆಯನ್ನು ನಿಯಂತ್ರಣ ಮಾಡಬೇಕು ಎನ್ನತಕ್ಕಂಥ ಉದ್ದೇಶದಿಂದ ಸ್ಥಾಪನೆಯಾಯಿತು. ಆ ಕೆಲಸವನ್ನು ಇದು ಮಾಡಿದೆಯೇ, ಮಾಡಿಲ್ಲ. ೧೯೮೨ರ ಜನವರಿಯಲ್ಲಿ ಕೆ.ಜಿ. ರೇಷ್ಮೆ ೬೦೦–೬೫೦ ರೂಪಾಯಿ ಇತ್ತು, ಕೇವಲ ೬೦ ದಿವಸಗಳಲ್ಲಿ ಮಾರ್ಚಿ ಕೊನೆಯೊಳಗೆ ೩೦೦–೩೫೦ಕ್ಕೆ ಬಂತು, ಅಂದರೆ ಒಂದು ಕೆ.ಜಿ. ರೇಷ್ಮೆಗೆ ೨೫೦ ರೂಪಾಯಿ ನಷ್ಟವಾಗುತ್ತದೆ. ಹೀಗಾದರೆ ಅವರು ಯಾವ ರೀತಿ ಬೆಲೆ ನಿಯಂತ್ರಣ ಮಾಡಿದರು. ಆಗ ಪ್ರತಿಯೊಬ್ಬರೂ ಸುಮಾರು ೫೦ ಸಾವಿರದಿಂದ ಒಂದು ಲಕ್ಷದವರೆಗೆ ಲುಕ್ಸಾನು ಅನುಭವಿಸಿದ್ದಾರೆ. ಯಾವ ಉದ್ದೇಶಕ್ಕಾಗಿ ಈ ರೇಷ್ಮೆ ವಿನಿಮಯ ಕೇಂದ್ರ ಬಂತು, ಆ ಉದ್ದೇಶ ಪೂರ್ಣವಾಗಲಿಲ್ಲ, ಪ್ರೈಸ್ ಸ್ಟೆಬಿಲೈಸ್ ಮಾಡಲಿಲ್ಲ, ಬೆಲೆಯನ್ನು ಹತೋಟಿಯಲ್ಲಿಟ್ಟುಕೊಳ್ಳಲಿಕ್ಕೆ ಹಿಂದೆ ಬಿದ್ದಿದೆ. ಕಮಿಷನ್ ೨–೩ ಕೋಟಿ ರೂಪಾಯಿ ಸಂಪಾದನೆ ಮಾಡಿದರು, ಆದರೆ ಇದರ ಬಗ್ಗೆ ಏನೂ ಮಾಡಲಿಲ್ಲ. ರೇಷ್ಮೆ ದಾರವನ್ನು ಇಟ್ಟುಕೊಂಡು ಬಡ್ಡಿ ರಹಿತವಾದ ಸಾಲವನ್ನು ಕೊಡಬೇಕಾಗಿತ್ತು. ಅದನ್ನೂ ಕೂಡ ಮಾಡಲಿಲ್ಲ, ಇದು ಸುಮ್ಮನೆ ಕಮಿಷನ್ ಏಜೆಂಟಾಗಿದೆ. ಬೆಂಗಳೂರಿನ ಅವಿನ್ಯೂ ರಸ್ತೆಯಲ್ಲಿ ಕೋಠಿವಾಲಾಗಳು ಹೇಗೆ ಕೆಲಸ ಮಾಡುತ್ತಾರೋ ಹಾಗೆ ಈ ರೇಷ್ಮೆ ವಿನಿಮಯ ಕೇಂದ್ರ ಒಂದು ದೊಡ್ಡ ಕೋಠಿವಾಲಾ ಆಗಿದೆ. ಅಲ್ಲಿಗೆ ಬರತಕ್ಕವರಿಂದ ಕಮಿಷನ್ ಬಾಚಿಕೊಂಡು ವರ್ಷಕ್ಕೆ ೨–೩ ಕೋಟಿ ರೂಪಾಯಿ ಸಂಪಾದನೆ ಮಾಡುತ್ತಿದ್ದಾರಲ್ಲಾ ಅದರಿಂದ ಯಾವ ಜನಗಳಿಗೂ ಅನುಕೂಲವಾಗಲಿಲ್ಲ. ಹಿಂದೆ ರೇಷ್ಮೆ ಬೆಲೆ ಜಾಸ್ತಿ ಇದ್ದಾಗ ವೀವರ್ಸ್‌ಗೆ ತೊಂದರೆಯಾಯಿತು, ಆಗ ೧೦೦ ರೂಪಾಯಿ ಕಡಿಮೆ ಮಾಡಿ ಅವರಿಗೆ ಕೊಡಬೇಕಾಗಿತ್ತು, ಅದನ್ನೂ ಸಹ ಮಾಡಲಿಲ್ಲ, ಯಾರಿಗೂ ಒಳ್ಳೆಯದು ಮಾಡಲಿಲ್ಲ. ಇದು ಒಂದು ದೊಡ್ಡ ವರ್ತಕನಾಗಿ ಕೆಲಸ ಮಾಡುತ್ತಿದೆ ಎನ್ನತಕ್ಕಂಥ ಮಾತನ್ನು ಹೇಳಲಿಕ್ಕೆ ಇಷ್ಟಪಡುತ್ತೇನೆ, ಇನ್ನು ಮುಂದಾದರೂ ಸಹ ರೇಷ್ಮೆ ವಿನಿಮಯ ಕೇಂದ್ರದಲ್ಲಿ ರೇಷ್ಮೆ ಮಾರಾಟ ಮಂಡಲಿಯವರು ಕೊನೇಪಕ್ಷ ಶೇಕಡ ೨೫ ರಷ್ಟಾದರೂ ಹರಾಜಿನಲ್ಲಿ ಭಾಗವಹಿಸಿ ತೆಗೆದುಕೊಳ್ಳಬೇಕು, ಅದನ್ನು ಸ್ಟಾಕ್ ಇಟ್ಟುಕೊಳ್ಳಬೇಕು. ಎಲ್ಲೆಲ್ಲಿ ಬೆಲೆಗಳು ಗಗನಕ್ಕೆ ಏರುತ್ತವೋ ಅಲ್ಲಿ ಬೆಲೆಗಳನ್ನು ಕಂಟ್ರೋಲ್ ಮಾಡತಕ್ಕದ್ದು ಮತ್ತು ಆಗ ರೇಷ್ಮೆಯನ್ನು ಬಿಡುಗಡೆ ಮಾಡಬೇಕು. ಈ ಮೂಲಕ ಕೆಲಸಗಳನ್ನು ಮಾಡಬಹುದೇ ವಿನಹ, ಯಾರೋ ಬಂದು ತೆಗೆದುಕೊಳ್ಳಲಿ ಅಂದರೆ ನೀವು ಇರುವುದು ಏತಕ್ಕೆ, ಏತಕ್ಕೋಸ್ಕರ ಪ್ರೈಸ್ ಸ್ಟೆಬಿಲೈಸ್ ಎಂದು ಮಾಡಿದಿರಿ. ಆದ್ದರಿಂದ ದಯಮಾಡಿ ಈ ಒಂದು ಕೆಲಸವನ್ನು ಸರಿಯಾದ ರೀತಿಯಲ್ಲಿ ಮಾಡಿದಾಗ ಈ ರಾಜ್ಯದಲ್ಲಿರತಕ್ಕ ಎಲ್ಲಾ ರೇಷ್ಮೆ ಉತ್ಪಾದಕರು ಬದುಕಲಿಕ್ಕೆ ಸಹಾಯವಾಗುತ್ತದೆ ಎನ್ನತಕ್ಕ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಕೋರ್ ಪ್ರೈಸ್ ಎಂದು ಹೇಳುತ್ತೀರಿ, ಅದನ್ನು ಯಾವಾಗ ಮಾಡಿದಿರಿ, ಎಲ್ಲಿ ಮಾಡಿದಿರಿ ಏನು ಮಾಡಿದಿರಿ. ಕೋರ್ ಪ್ರೈಸ್ ಕೆಳಗೆ ಬಂದಾಗ ರೇಷ್ಮೆ ಮಾರಾಟ ಮಂಡಲಿ ಎಲ್ಲಿ ಪರ್ಚೇಸ್ ಮಾಡುತ್ತದೆ. ಈ ಬಗ್ಗೆ ಯಾವ ಅಧಿಕಾರಿಗೂ ಕೂಡ ಜವಾಬ್ದಾರಿಯನ್ನು ವಹಿಸಿಕೊಳ್ಳುವುದಿಲ್ಲ. ಏಕೆಂದರೆ ಪರ್ಚೇಸ್ ಮಾಡಿದರೆ ಎಲ್ಲಿ ಲುಕ್ಸಾನಾಗುತ್ತದೋ ಎಂದು ಬೇಜವಾಬ್ದಾರಿಯಿಂದ ಕೆಲಸ ಮಾಡಿದಾಗ ಅವರು ರಕ್ಷಣೆಗೆ ಎಲ್ಲಿಗೆ ಹೋಗಲಿಕ್ಕೆ ಸಾಧ್ಯ. ಆದ್ದರಿಂದ ದಯಮಾಡಿ ಕೋರ್ ಪ್ರೈಸ್ ಎಂದು ಏನು ನಿಗದಿ ಮಾಡುತ್ತೀರೋ ಅದರ ಕೆಳಗೆ ಬಂದಾಗ ಪೂರ್ಣವಾಗಿ ರೇಷ್ಮೆಯನ್ನು ತಾವು ತೆಗೆದುಕೊಳ್ಳಲಿಕ್ಕೆ ಪ್ರಯತ್ನ ಮಾಡಬೇಕು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಲಾಭ ನಷ್ಟದ ದೃಷ್ಟಿಯಿಂದ ನೋಡಬಾರದು ಎಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಯಾವಾಗಲೂ ಕೂಡ ಪೂರ್ವಭಾವಿಯಾಗಿ ಸಮೀಕ್ಷೆ ನಡೆಸಬೇಕು. ಇವತ್ತಿನ ದಿವಸ ಎಷ್ಟು ಮೊಟ್ಟೆಗಳು ಬೇಕು ಎಂದು ತಿಳಿದು ರೈತರ ಬೇಡಿಕೆಗೆ ಅನುಗುಣವಾಗಿ ಇಲಾಖೆ ಬೆಳೆಯಬೇಕು. ನಿಮ್ಮ ಇಲಾಖೆ ಸಾಕಷ್ಟು ಬೆಳೆಯದೇ ಹೋದರೆ ನಿಮ್ಮಿಂದ ಯಾವ ವಿಧವಾದ ಪ್ರಗತಿಯನ್ನು ಸಾಧಿಸಲಿಕ್ಕೆ ಆಗುವುದಿಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಬೈವೋಲ್ಟೀನ್ ವಿಚಾರ. ವರ್ಷೇ ವರ್ಷೇ ಬೈವೋಲ್ಟೀನ್ ಕಡಿಮೆಯಾಗಿದೆ. ಏಕೆ ಹೀಗಾಯಿತು ? ೧೯೭೭–೭೮ರಲ್ಲಿ ೮ ಕೆ.ಜಿ. ಗೂಡಿಗೆ ಒಂದು ಕೆ.ಜಿ. ರೇಷ್ಮೆ ಬರುತ್ತಿತ್ತು. ಇವತ್ತಿನ ದಿವಸ ೧೦ ಕೆ.ಜಿ. ಗೂಡಿಗೆ ಒಂದು ಕೆ.ಜಿ. ರೇಷ್ಮೆ ಬರುತ್ತಿದೆ. ಏಕೆ. ನೀವು ಬೈವೋಲ್ಟೀನ್‌ಗೆ ಬಹಳ ದುಡ್ಡು ಖರ್ಚು ಮಾಡಿದಿರಿ, ಏನು ಪ್ರಯೋಜನವಾಯಿತು ? ಅದೇ ದುಡ್ಡನ್ನು ಮಲ್ಟಿವೋಲ್ಟೀನ್‌ಗೆ ತಾವು ಖರ್ಚು ಮಾಡಿದ್ದರೆ ನಿಜವಾಗಿಯೂ ಕೂಡ ಹೆಚ್ಚಿನ ಪ್ರಗತಿಯನ್ನು ಸಾಧಿಸುವುದಕ್ಕೆ ಸಾಧ್ಯವಿತ್ತು.

ಸುಮಾರು ೧೦೦ ಮೊಟ್ಟೆಗೆ ೧೫ ಕೆ.ಜಿ. ಗೂಡು ಉತ್ಪಾದನೆ ಮಾಡುತ್ತಾರೆ, ಆದರೆ ಮಲ್ಟಿವೋಲ್ಟೀನ್ ನಲ್ಲಿ ಅದೇ ೧೦೦ ಮೊಟ್ಟೆಗೆ ೨೦ರಿಂದ ೩೦ ಕೆ.ಜಿ. ಉತ್ಪಾದನೆಯಾಗುತ್ತದೆ, ಅಂದಮೇಲೆ ನೀವು ಏತ ಕೊಕ್ಕೋಸ್ಕರ ಬೈವೋಲ್ಟೀನ್‌ಗೆ ದುಡ್ಡು ಖರ್ಚು ಮಾಡಿದಿರಿ. ಅಲ್ಲದೇ ಅದರಲ್ಲಿ ಗಂಡು ಸಂತಾನಕ್ಕೆ ಬೇಕಾದಷ್ಟು ಬೆಳೆಯುತ್ತಾ ಇಲ್ಲ, ಸಣ್ಣ ಹೆಣ್ಣು ಚಿಟ್ಟೆಗಳನ್ನು ಉಪಯೋಗಿಸಿ ಮೊಟ್ಟೆ ಮಾಡುತ್ತಾ ಇದ್ದಾರೆ. ಅದರಿಂದ ಏನು ಪ್ರಯೋಜನವಾಯಿತು. ಈ ಸಂಶೋಧನಾ ಕೇಂದ್ರ ವಿಸ್ತರಣೆಯಾಗಿದೆಯೇ ಹೊರತು, ಪ್ರಗತಿ ಏನಾಗಿದೆಯೆಂದರೆ ಶೂನ್ಯ ಎಂದು ಹೇಳಬೇಕಾಗುತ್ತದೆ. ಇಲ್ಲಿ ಗಂಡು ಸಂತಾನಕ್ಕೆ ಬೇಕಾದ ಹುಳು ಸಹ ಸಿಗುತ್ತಾ ಇಲ್ಲ, ಸಣ್ಣ ಚಿಟ್ಟೆಯ ಗೂಡನ್ನು ಹಾಕುತ್ತಿದ್ದಾರೆ. ಆದುದರಿಂದ ದಯಮಾಡಿ ಈ ಕಡೆ ಗಮನಹರಿಸಬೇಕು ಮತ್ತು ಸರಿಯಾದ ರೀತಿಯಲ್ಲಿ ವ್ಯವಸ್ಥೆ ಮಾಡಬೇಕು ಎಂದು ನಾನು ತಮ್ಮನ್ನು ಕೇಳಿಕೊಳ್ಳುತ್ತಾ ಇದ್ದೇನೆ.

ಮತ್ತೆ ಅಧಿಕಾರಿಗಳನ್ನು ಪರದೇಶಕ್ಕೆ ಕಳಿಸತಕ್ಕ ವಿಷಯ. ಅಧಿಕಾರಿಗಳನ್ನು ಪರದೇಶಕ್ಕೆ ಕಳಿಸಿ, ಸಂತೋಷ. ಆದರೆ ಎಂತಹವರನ್ನು ಕಳಿಸುತ್ತಿದ್ದೀರಿ. ಪರದೇಶದಿಂದ ಬಂದು ೬ ತಿಂಗಳು ಒಂದು ವರ್ಷದಲ್ಲಿ ರಿಟೈರ್ ಆಗತಕ್ಕ ಅಧಿಕಾರಿಗಳನ್ನು ಕಳಿಸುತ್ತಿದ್ದೀರಲ್ಲ ಅವರಿಂದ ಏನು ಪ್ರಯೋಜನ. ರಿಟೈರ್ ಆಗುವುದು ೬ ತಿಂಗಳು, ಒಂದು ವರ್ಷ ಇರತಕ್ಕ ಅಧಿಕಾರಿಗಳು ಪರದೇಶಕ್ಕೆ ಹೋಗಿದ್ದಾರೆ, ಅವರ ಹೆಸರನ್ನು ನಾನು ಕೊಡುತ್ತೇನೆ. ಅವರಿಂದ ಏನು ಪ್ರಗತಿಯನ್ನು ಸಾಧಿಸಲಿಕ್ಕೆ ಸಾಧ್ಯ. ಏತಕ್ಕೋಸ್ಕರ ಅಂಥವರನ್ನು ಕಳಿಸುತ್ತೀರಿ, ಏಕೆ ದುಡ್ಡನ್ನು ಖರ್ಚು ಮಾಡುತ್ತೀರಿ. ಅದರ ಬದಲು ಈ ಕೈಗಾರಿಕೆಯಲ್ಲಿ ನಮ್ಮಂಥ ಜೀವನದಲ್ಲಿ ಹಾಸುಹೊಕ್ಕಾಗಿರತಕ್ಕಂಥ ಪ್ರಗತಿಪರ ರೈತರನ್ನು ಏಕೆ ಕಳಿಸಬಾರದು ?

ಇನ್ನು ಊಜಿ ನೊಣದ ಬಗ್ಗೆ ಹೇಳುವುದಾದರೆ, ಊಜಿನೊಣ ಟಿಪ್ಪುಸುಲ್ತಾನ್ ಕಾಲದಲ್ಲಿ ಇರಲಿಲ್ಲಿ ಈಗ ಬಂದಿದೆ ಇದನ್ನು ಯಾವರೀತಿ ನಿಯಂತ್ರಣ ಮಾಡಬೇಕು ಎನ್ನತಕ್ಕಂಥಾದು ನಿಮ್ಮಿಂದ ಸಾಧ್ಯವಿಲ್ಲ. ಇದರ ಹೆಸರಿನಲ್ಲಿ ಯಥೇಚ್ಛವಾಗಿ ಹಣ ಪೋಲಾಗಿದೆ. ಇದನ್ನು ತಾವೆಲ್ಲರೂ ಕೂಡ ಒಪ್ಪಿಕೊಳ್ಳಲೇ ಬೇಕು. ಇದು One step forward two steps backward ಆಗಿಬಿಟ್ಟಿದೆ. ವಿಶ್ವ ಸಂಸ್ಥೆಯಿಂದ ಹಣವನ್ನು ಪಡೆದು ಈ ಒಂದು ಕೈಗಾರಿಕೆಯನ್ನು ಬೆಳೆಸಬೇಕು ಎಂಬ ನಿಮ್ಮ ಅಡ್ವರ್‌ಟೈಸ್‌ಮೆಂಟನ್ನು ನೋಡಿದಾಗ, ಊಜಿ ನೊಣವನ್ನು ನಿಯಂತ್ರಣ ಮಾಡದೇ ಹೋದರೆ ಇದು One step forward two steps backward ಎನ್ನತಕ್ಕ ರೀತಿ ಆಗುತ್ತದೆ. ಉದಾಹರಣೆಗೆ ತಮ್ಮ ಮೂಗಿನ ನೇರದಲ್ಲಿರತಕ್ಕಂಥ ಬಿತ್ತನೆ ತಳಿ ಕೇಂದ್ರ ಏನಿದೆಯೋ ಅಲ್ಲಿರತಕ್ಕ ಊಜಿ ನೊಣವನ್ನು ತಾವು ಕಂಟ್ರೋಲ್ ಮಾಡಲಿಲ್ಲ. ಇನ್ನು ರಾಜ್ಯದಲ್ಲಿರತಕ್ಕ ರೇಷ್ಮೆ ರೀಲರುಗಳಿಗೆ ನೈಲಾನ್ ಬಲೆ ಹೋಸಿದ್ದೇವೆ, ತಂತಿ ಬಲೆ ಕೊಟ್ಟಿದ್ದೇವೆ, ಊಜಿ ನೊಣಗಳನ್ನು ಕಡಿಮೆ ಮಾಡಿದ್ದೇವೆ ಎಂದು ಹೇಳುತ್ತೀರಿ. ನಿಮ್ಮ ಆಡಳಿತಕ್ಕೆ ಒಳಪಟ್ಟಿರತಕ್ಕಂಥ ಬಿತ್ತನೆ ಕೇಂದ್ರದಲ್ಲೇ ಇನ್ನೂ ಊಜಿನೊಣ ಹೋಗಿಲ್ಲ, ಇನ್ನು ಇಡೀ ರಾಜ್ಯದಲ್ಲಿರತಕ್ಕ ಊಜಿ ನೊಣಗಳನ್ನು ಕಂಟ್ರೋಲ್ ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ? ದಯಮಾಡಿ ಯೋಚನೆಮಾಡಿ. ಇದನ್ನು ಯಾವರೀತಿ ಕಂಟ್ರೋಲ್ ಮಾಡುವುದಕ್ಕೆ ಸಾಧ್ಯವಿದೆ ಎನ್ನುವುದರ ಕಡೆ ತಮ್ಮ ಗಮನವನ್ನು ಹರಿಸಿ ಆದಷ್ಟು ಬೇಗನೆ ಕಂಟ್ರೋಲ್ ಮಾಡದೇಹೋದರೆ ನಿಜವಾಗಿಯೂ ಇದು ಒಂದು ದೊಡ್ಡ ಮಾರಕವಾಗುತ್ತದೆ ಎಂದು ಹೇಳಲಿಕ್ಕೆ ಇಷ್ಟಪಡುತ್ತೇನೆ. ಮೊದಲನೆಯದಾಗಿ ಬಿತ್ತನೆ ಗೂಡು ಇರತಕ್ಕ ಪ್ರದೇಶದಲ್ಲಿ ಇಲಾಖೆಯವರು ಊಜಿ ನೊಣವನ್ನು ನಿಯಂತ್ರಣ ಮಾಡಲಿಕ್ಕೆ ಏರ್ಪಾಟು ಮಾಡಬೇಕು, ಇಲ್ಲದೇ ಹೋದರೆ ಈ ಕೈಗಾರಿಕೆ ಹಾಳಾಗುತ್ತದೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ತಾವು ಸಕಾಲದಲ್ಲಿ ಮೊಟ್ಟೆಯನ್ನು ಸರಬರಾಜು ಮಾಡದೇ ಇದ್ದರೆ ರಾಜ್ಯದಲ್ಲಿ ಕೋಟ್ಯಾಂತರ ರೂಪಾಯಿ ನಷ್ಟವಾಗುತ್ತದೆ. ಇವತ್ತಿನದಿವಸ ತಾವು ಮೊಟ್ಟೆ ಬೆಲೆ ೧೦೦ ರೂಪಾಯಿ ಮಾಡಿದಿರಿ, ಆದರೆ ಕೊಂಡುಕೊಳ್ಳುವುದಕ್ಕೆ ಸಿಗುತ್ತಾ ಇಲ್ಲ. ತಾವು ಜಾಸ್ತಿ ಮೊಟ್ಟೆ ತಯಾರು ಮಾಡಿದರೆ ಮಾರಾಟವಾಗದೇ ಇಲಾಖೆಗೆ ನಷ್ಟವಾಗಬಹುದು ಎನ್ನತಕ್ಕ ದೃಷ್ಟಿಯಿಂದ ನೋಡಿದರೆ ಸಾಧ್ಯವಾಗುವುದಿಲ್ಲ. ಬಹುಶಃ ಇವನ್ನು ನೀವು ಲಾಭ ನಷ್ಟದ ದೃಷ್ಟಿಯಿಂದ ನೋಡಬಾರದು. ಲಕ್ಷಾಂತರ ಮೊಟ್ಟೆ ನಷ್ಟವಾದರೂ ಚಿಂತೆಯಿಲ್ಲ, ಆದರೆ ರೈತರಿಗೆ ಕೋಟ್ಯಾಂತರ ರೂಪಾಯಿ ನಷ್ಟವಾಗುತ್ತದೆ. ಆದ್ದರಿಂದ ದಯಮಾಡಿ ಇದನ್ನು ಲಾಭ ನಷ್ಟದ ದೃಷ್ಟಿಯಿಂದ ನೋಡಬಾರದು. ಯಥೇಚ್ಛವಾಗಿ ಮೊಟ್ಟೆಗಳನ್ನು ತಯಾರು ಮಾಡಬೇಕು, ಸರಬರಾಜು ಆಗದೇ ನಿಂತು ಹೋಗಿ ಇಲಾಖೆಗೆ ಸಾವಿರಾರು ರೂಪಾಯಿ ನಷ್ಟವಾದರೂ ಚಿಂತೆಯಿಲ್ಲ. ಆದರೆ ಕೋಟ್ಯಾಂತರ ರೂಪಾಯಿ ನಷ್ಟ ಮಾಡುವುದಕ್ಕೆ ತಾವು ಮುಂದೆ ಬರಬಾರದು. ಆದ್ದರಿಂದ ಈ ವ್ಯವಹಾರವನ್ನು ಪರದೇಶಕ್ಕೆ

ಕಳುಹಿಸಿ ಕೊಡಲು ಬೇಕಾದಷ್ಟು ಹಣವನ್ನು ಖರ್ಚು ಮಾಡುತ್ತಿದ್ದೀರಿ. ಆದರೆ ಮಳೆಗಾಲದಲ್ಲಿ ಚಂದ್ರಿಕಾ ಗೂಡಿನಲ್ಲಿರತಕ್ಕ ಹುಳು ಒಳಗಡೆ ಮೂತ್ರ ವಿಸರ್ಜನೆ ಮಾಡಿದರೆ ಆ ಗೂಡು ಕೆಟ್ಟು ಹೋಗುತ್ತದೆ. ಆ ರೀತಿ ಕೆಟ್ಟು ಹೋಗದೇ ಇರುವ ಬಗ್ಗೆ ಏನು ನಿಮ್ಮ ಅಧಿಕಾರಿಗಳು ಅಲ್ಲಿಂದ ಅಧ್ಯಯನ ಮಾಡಿಕೊಂಡು ಬಂದಿದ್ದಾರೆ ? ಆದುದರಿಂದ ನೀವು ಪರದೇಶಕ್ಕೆ ನಿಮ್ಮ ಅಧಿಕಾರಿಗಳನ್ನು ಕಳುಹಿಸಿದರೆ ಇದರ ಬಗ್ಗೆ ಹೆಚ್ಚಿನ ಸಂಶೋಧನೆ ಮಾಡುವುದಕ್ಕೆ ಕಳುಹಿಸಬೇಕೇ ಹೊರತು ಇಲ್ಲದಿದ್ದರೆ ಏನೂ ಪ್ರಯೋಜನವಾಗುವುದಿಲ್ಲ.

ಶ್ರೀ ವೈ. ರಾಮಕೃಷ್ಣ.—ಸನ್ಮಾನ್ಯ ಅಧ್ಯಕ್ಷರೇ, ಯಾವ ಅಧಿಕಾರಿಗಳಿಗೆ ಕನಿಷ್ಟ ಪಕ್ಷ ೩ ವರ್ಷಗಳಾದರೂ ಸರ್ವಿಸ್ ಇರುತ್ತದೆಯೋ ಅಂಥವರನ್ನೇ ಪರದೇಶಕ್ಕೆ ಆರಿಸಿ ಕಳುಹಿಸಿ ಕೊಡುತ್ತಿದ್ದೇವೆ. ಡೆಮಾನಸ್ಟ್ರೇಟರ್ ಮತ್ತು ಕೆಳಗಿನ ದರ್ಜೆಯವರಿಗೆ ಕನಿಷ್ಟ ೧೦ ವರ್ಷಗಳ ಅವಧಿಯಾದರೂ ಇರಬೇಕೆಂದು ಆ ರೀತಿ ಮಾಡಿದ್ದೇವೆ, ಆದುದರಿಂದ ಇದನ್ನು ತಾವು ತಿಳಿದುಕೊಳ್ಳಬೇಕು.

ಶ್ರೀ ಜಿ. ರಾಜುಗೌಡ.—ಕೆಲವು ಜಾಯಿಂಟ್ ಡೈರೆಕ್ಟರ್‌ಗಳವರು ೩ ವರ್ಷದ ಅವಧಿಗಿಂತ ಮೊದಲೇ ನಿವೃತ್ತಿ ಹೊಂದುವಂತವರಿದ್ದಾರೆ. ಒಂದು, ಒಂದೂವರೆ ವರ್ಷದಲ್ಲಿ ನಿವೃತ್ತಿ ಹೊಂದುವಂಥವರನ್ನೂ ಸಹ ತಾವು ಕಳುಹಿಸಿದ್ದಿರೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸ್ವಾಮಿ, ಇನ್ನು ಈ ಜಾಯಿಂಟ್ ಡೈರೆಕ್ಟರ್ ಬಗ್ಗೆ ಕೆಲವು ವಿಷಯಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ರೇಷ್ಮೆ ಇಲಾಖೆಯಲ್ಲಿ ೧೦ ಜನ ಜಾಯಿಟ್ ಡೈರೆಕ್ಟರ್‌ಗಳು ಇದ್ದಾರೆ. ಬಹುಶಃ ಯಾವ ಇಲಾಖೆಯಲ್ಲೂ ಒಂದೇ ಕೇಡರಿನ ೧೦ ಜನ ಜಾಯಿಂಟ್ ಡೈರೆಕ್ಟರ್‌ಗಳವರು ಇಲ್ಲ. ಹೀಗಿರುವುದರಿಂದಲೇ ಈ ಇಲಾಖೆಯ ಕೆಲಸಕಾರ್ಯಗಳು ಏತಿ ಎಂದರೆ ಪ್ರೇತಿ ತರಹ ನಡೆಯುತ್ತಿದೆ. ಯಾವ ಕೆಲಸಕಾರ್ಯಗಳಲ್ಲಿಯೂ ಒಂದು ಸಾಮರಸ್ಯವಿಲ್ಲ. ಆದುದರಿಂದ ಆ ರೀತಿ ಒಂದೇ ಕಡೆ ಇರುವವರನ್ನು ತೆಗೆದು ಬೇರೆ ಕಡೆಗೆ ಹಾಕುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ವರ್ಲ್ಡ್ ಬ್ಯಾಂಕ್‌ನವರಿಂದ ೧೦೦ ಕೋಟಿ ರೂಪಾಯಿಗಳ ಯೋಜನೆಗೆ ಮಂಜೂರಾತಿ ದೊರಕಿರುವಾಗ, ನೀವು ಅದನ್ನು ಎಲ್ಲಿ ಉಪಯೋಗಿಸಬೇಕೋ ಅಲ್ಲಿ ಅದನ್ನು ಉಪಯೋಗಿಸದೇ ಯಾರೋ ಒಬ್ಬ ಮಂತ್ರಿಗಳವರು ಗುಲ್ಬರ್ಗದ ಹತ್ತಿರ ಜೇವರ್ಗಿಯ ಹತ್ತಿರ ಭಾವಿ ತೆಗೆದು ಫಾರಂ ಮಾಡಿದ್ದಾರೆಂದು ಅಲ್ಲಿ ಈ ಯೋಜನೆಯನ್ನು ಪ್ರಾರಂಭಿಸುವುದರಿಂದ ಏನು ಪ್ರಯೋಜನವಾಗುತ್ತದೆ ? ಅಲ್ಲಿ ಎಷ್ಟು ಎಕರೆ ಹಿಪ್ಪುನೇರಳೆಯನ್ನು ಬೆಳೆಯುತ್ತಿದ್ದಾರೆ, ಈ ರೀತಿ ೧೦೦ ಕೋಟಿ ರೂಪಾಯಿಗಳ ಯೋಜನೆಯನ್ನು ಅಲ್ಲಿ ಹಾಕುವುದರಿಂದ ಏನು ಪ್ರಯೋಜನ ದೊರೆಯುತ್ತದೆ ? ಏನು ಹುಡುಗಾಟ ಆಡುತ್ತಿದ್ದೀರಾ ? ಆದುದರಿಂದ ಇಷ್ಟು ಹಣವನ್ನು ಎಲ್ಲಿ ಹಾಕಿದರೆ ಅದರಿಂದ ಪ್ರಯೋಜನ ದೊರೆಯುತ್ತದೆಯೋ ಅಂಥಾ ಕಡೆ ಹಾಕಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತೆ ಈ ರೇಷ್ಮೆ ಕೈಗಾರಿಕೆಗಳಿಂದ ಯಾವ ರೀತಿಯಾಗಿ ನಷ್ಟವಾಗಿದೆಂಬುದನ್ನು ಸಹ ಇಲ್ಲಿ ತಿಳಿಸಿದ್ದೀರಿ. ೧೯೮೧–೮೨ ರಲ್ಲಿ ೭ ರೇಷ್ಮೇ ಕೈಗಾರಿಕೆಗಳಿಂದ ೯೦ ಲಕ್ಷ ರೂಪಾಯಿಗಳ ನಷ್ಟವಾಗಿದೆಂದು ಉತ್ತರದಲ್ಲಿ ತಿಳಿಸಿದ್ದೀರಿ, ಇಷ್ಟೊಂದು ಅಕ್ಯುಮುಲೇಟೆಡ್ ಲಾಸ್ ಆಗುವುದಕ್ಕೆ ಅಲ್ಲಿ ಯಾರನ್ನ ಕೊರತೆ ಮತ್ತು ವೇತನ ಜಾಸ್ತಿ ಮಾಡಿದ್ದೇವೆ ಮತ್ತು ಕೆಲಸಗಾರರಿಗೆ ವಿಶ್ರಾಂತಿ ವೇತನ ಕೊಡುತ್ತಿದ್ದೇವೆಂದು ಅದರಿಂದ ಲಾಸ್ ಆಗಿದೆಂದು ಹೇಳಿದ್ದೀರಿ. ಆದರೆ ಆ ಕಾರಣ ಅಲ್ಲವೇ ಅಲ್ಲ, ಈ ರೇಷ್ಮೇ ಕೈಗಾರಿಕೆಗಳಲ್ಲಿ ನಡೆಯುತಕ್ಕ ಅವ್ಯವಹಾರಗಳ ಬಗ್ಗೆ ನೀವು ಒಳಹೊಕ್ಕು ನೋಡಿ ಅಲ್ಲಿ ಯಾವ ರೀತಿಯಾಗಿ ನಡೆಯುತ್ತಿದೆಂಬುದು ನಿಮಗೇ ಅರ್ಥವಾಗುತ್ತದೆ. ಅನೇಕ ವಿಧವಾದ ಹಣ ಅಲ್ಲಿ ಪೋಲು ಆಗುತ್ತಿದೆ, ಅದನ್ನು ಸರಿಪಡಿಸುವುದಕ್ಕೆ ತಾವು ಗಮನ ನೀಡಬೇಕೆಂದು ಸಲಹೆ ಮಾಡುವುದಕ್ಕೆ ಬಯಸುತ್ತೇನೆ. ಈಗಿರತಕ್ಕ ಡೈರೆಕ್ಟರ್‌ರವರ ಬಗ್ಗೆ ನಮಗೆ ಅಪಾರವಾದ ಗೌರವವಿದೆ, ಅವರು ಇರಲಿ ಆಡಳಿತಕ್ಕೋಸ್ಕರವಾಗಿ ಒಬ್ಬ ಐ.ಎ.ಎಸ್. ಅಧಿಕಾರಿಗಳು ಇರಬೇಕು ಇಟ್ಟುಕೊಳ್ಳಿ, ಆದರೆ ತಾಂತ್ರಿಕವಾಗಿ ಜ್ಞಾನವನ್ನು ಪಡೆದಿರತಕ್ಕವರನ್ನು ನಿಮ್ಮ ಇಲಾಖೆಯಲ್ಲಿಯೇ ೩೦ ವರ್ಷಗಳ ಕಾಲ ಯಾರು ಕೆಲಸ ಮಾಡಿದ್ದಾರೆ ಅಂಥವರ ಸೇವೆಯನ್ನು ನೀವು ಪರಿಗಣಿಸಿ ಮತ್ತೊಬ್ಬ ಡೈರೆಕ್ಟರ್ ಹುದ್ದೆಯನ್ನು ಮಾಡಿ ಅಂಥವರಿಗೆ ಪ್ರಮೋಷನ್ ಕೊಡಿ. ಸ್ವಾಮಿ ಸಿಲ್ಕ್ ಮಾರ್ಕೆಟಿಂಗ್ ಫೆಡರೇಷನ್ನಿನ ಮೂಲಕವಾಗಿ ೮೦-ಸಾವಿರ ರೂಪಾಯಿಗಳನ್ನು ೫ ವರ್ಷಗಳ ಅವಧಿಯಲ್ಲಿ ವಸೂಲಿ ಮಾಡಿದ್ದೀರಿ. ಇನ್ನೂ ನಿಮಗೆ ಅದರಿಂದ ಯಥೇಚ್ಛವಾಗಿ ಆದಾಯ ಬರಬಹುದಾಗಿದೆ ಅದಕ್ಕೆ ತಮಗೊಂದು ಸಣ್ಣ ಸಲಹೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ರಾಜ್ಯದಲ್ಲಿ ಸುಮಾರು ೧೭ ಸಿಲ್ಕ್ ರೀಲರ್ಸ್ ಸೊಸೈಟಿಗಳು ಇದೆ. ಅಲ್ಲಿಗೆ ಒಬ್ಬರನ್ನು ಸೀನಿಯರ್ ಇನ್ಸ್‌ಪೆಕ್ಟರ್‌ನ್ನು ಇಟ್ಟಿದ್ದೀರಿ.

ಅವರಿಗೆ ೧೫೮೦ ರೂ.ಗಳ ಸಂಬಳವನ್ನು ಕೊಡುತ್ತಿದ್ದೀರಿ. ಅವರು ಈ ಮೋಟ್ಟೆಯನ್ನು ತಯಾರು ಮಾಡುವುದರಲ್ಲಿ ಒಳ್ಳೆಯ ತರಬೇತಿಯನ್ನು ಹೊಂದಿದ್ದಾರೆ, ಆದುದರಿಂದ ಅವರಿಗೆ ಈಗಿರತಕ್ಕ ಕೆಲಸದ ಜೊತೆಗೆ ಈ ಮೋಟ್ಟೆಯನ್ನು ವಿಶೇಷವಾಗಿ ತಯಾರಿಸತಕ್ಕ ಕೆಲಸವನ್ನು ಅವರಿಗೇ ಏತಕ್ಕೆ ವಹಿಸಬಾರದೆಂದು ಕೇಳುತ್ತೇನೆ. ಇನ್ನು ಮುಖ್ಯವಾದ ವಿಷಯಗಳನ್ನು ಪ್ರಸ್ತಾಪ ಮಾಡಬೇಕಾಗಿತ್ತು ಆದರೆ ಅಧ್ಯಕ್ಷರು ಬೆಲ್ ಬಾರಿಸುತ್ತಿರುವುದರಿಂದ ಇಷ್ಟು ವಿಷಯವನ್ನು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್. ಗಂಗಾಧರನ್ (ಕೃಷ್ಣರಾಜ).— ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದಲ್ಲಿ ವ್ಯವಸಾಯ ಕ್ಷೇತ್ರವನ್ನು ಬಿಟ್ಟರೆ ಅಧಿಕವಾಗಿ ಜನತೆಯ ಜೀವನಕ್ಕೆ ಆಧಾರವಾಗಿರತಕ್ಕಂಥ ಇಲಾಖೆ ಎಂದರೆ ಕೈಗಾರಿಕೆ ಇಲಾಖೆ. ನಮ್ಮ ದೇಶದಲ್ಲಿ ವ್ಯವಸಾಯವನ್ನೇ ಅವಲಂಬಿಸಿ ಸುಮಾರು ೪೦ ಲಕ್ಷ ಜನ ಜೀವನ ಮಾಡುತ್ತಿದ್ದಾರೆ, ಕೈಗಾರಿಕೆಯನ್ನು ಆದರಿಸಿ ಜೀವನ ಮಾಡುತ್ತಿರುವವರು ೧೨ ಲಕ್ಷ ಜನ ಇದ್ದಾರೆ. ಇಂಥಾ ಒಂದು ಪ್ರಾಮುಖ್ಯವಾದ ಇಲಾಖೆಗೆ ನಾವು ಖರ್ಚು ಮಾಡುವ ಹಣ ವರ್ಷಕ್ಕೆ ೫೫, ೪೫ ಕೋಟಿ ರೂಪಾಯಿಗಳು ಮಾತ್ರ. ಇಷ್ಟು ಹಣವನ್ನು ನಾವು ಖರ್ಚು ಮಾಡಿದರೂ ನಮ್ಮಲ್ಲಿ ಸಾಕಷ್ಟು ಕೈಗಾರಿಕೆಗಳನ್ನು ಅಭಿವೃದ್ಧಿ ಪಡಿಸುವಂಥಾ ದಿಕ್ಕಿನಲ್ಲಿ ಕಾರ್ಯಗಳು ನಡೆಯುತ್ತಿಲ್ಲ. ಇದಕ್ಕೆ ಕಾರಣಗಳು ಅನೇಕವಾಗಿರಬಹುದು. ಈ ಇಲಾಖೆಗೋಸ್ಕರವಾಗಿಯೇ ನಾವು ಒಬ್ಬರನ್ನು ಮಂತ್ರಿಗಳನ್ನು ಮಾಡಿದ್ದರೂ ಸಹ ಈ ಕೈಗಾರಿಕೆಗಳು ಬೆಳೆಯದೇ ಇರುವುದನ್ನು ನೋಡಿದರೆ ಆಶ್ಚರ್ಯವಾಗುತ್ತಿದೆ ಇವತ್ತು ನಾವು ಕೈಗಾರಿಕೆಗಳನ್ನು ಬೆಳೆಸಬೇಕಾಗಿದ್ದರೆ, ಅದಕ್ಕೆ ಮುಖ್ಯವಾಗಿ ಕಚ್ಚಾ ಮಾಲು, ತಾಂತ್ರಿಕ ಜ್ಞಾನ, ಬಂಡವಾಳ ಮತ್ತು ಅದಕ್ಕೆ ಸೂಕ್ತವಾದ ಮಾರುಕಟ್ಟೆ ಇವು ನಾಲ್ಕು ಮುಖ್ಯವಾದ ಅಂಶಗಳಾಗಿದೆ. ನಮ್ಮಲ್ಲಿ ಸಾಕಷ್ಟು ಕಚ್ಚಾ ಮಾಲು ಇದೆ ಅದನ್ನು ಸಂಪೂರ್ಣವಾಗಿ ವಿನಿಯೋಗ ಮಾಡಿಕೊಳ್ಳುತ್ತಿಲ್ಲ, ಮತ್ತೆ ನಮ್ಮಲ್ಲಿರತಕ್ಕ ತಾಂತ್ರಿಕ ಜ್ಞಾನವನ್ನು ಸರಿಯಾಗಿ ಬಳಸಿಕೊಳ್ಳತಕ್ಕ ಶಕ್ತಿ ನಮ್ಮಲ್ಲಿ ಇಲ್ಲ. ಇನ್ನು ನಮ್ಮ ದೇಶದಲ್ಲಿ ಬಂಡವಾಳವನ್ನು ಹೂಡತಕ್ಕ ಪ್ರೇರಕ ಶಕ್ತಿ ಬೆಳೆದು ಬಂದಿಲ್ಲ. ಇನ್ನು ಕೊನೆಯಲ್ಲಿ ನಮ್ಮಲ್ಲಿ ಉತ್ಪನ್ನವಾಗತಕ್ಕ ವಸ್ತುಗಳಿಗೆ ಒಳ್ಳೆಯ ಮಾರುಕಟ್ಟೆಗಳನ್ನು ಒದಗಿಸಿ ಕೊಡುವುದರಲ್ಲಿ ಯಾವ ಪ್ರಯತ್ನ ಮಾಡುತ್ತಿಲ್ಲ. ಇನ್ನು ಎ. ಜಿ. ರವರ ವರದಿ ಪ್ರಕಾರವಾಗಿ ನಾವು ನೋಡಿದರೆ, ಕಾರ್ಪೊರೇಷನ್, ಗೌರ್ವನ್‌ಮೆಂಟ್ ಕಂಪನೀಸ್, ಜಾಯಿಂಟ್ ಸೆಕ್ಟರ್, ಕೋ-ಆಪರೇಟಿವ್ ಇನ್‌ಸ್ಟಿಟ್ಯೂಷನ್‌ಗಳಲ್ಲಿ ೨೮ ಕೋಟಿ ರೂಪಾಯಿಗಳನ್ನು ಹೂಡಿದ್ದೇವೆ. ನಾವು ಒಂದು ವರ್ಷಕ್ಕೆ ಸಂಪಾದನೆ ಮಾಡತಕ್ಕ ಹಣ ಎಷ್ಟು ಎಂದು ನೋಡುವುದಾದರೆ ೪.೬೯ ಕೋಟಿ ರೂಪಾಯಿಗಳಿಗೆ ಒಂದೂವರೆ ಪರ್ಸೆಂಟ್ ಲಾಭ ಬರುತ್ತಿದೆ, ಅಂದರೆ ಎಷ್ಟರ ಮಟ್ಟಿಗೆ ಪ್ರಗತಿಯನ್ನು ಕೈಗಾರಿಕೆಗಳಲ್ಲಿ ಸಾಧನ ಮಾಡುತ್ತಿದ್ದೇವೆ ಎನ್ನುವುದು ಇದರಿಂದಲೇ ಗೊತ್ತಾಗುತ್ತದೆ ಇನ್ನು ಮಂಡ್ಯ ಷುಗರ್ ಫ್ಯಾಕ್ಟರಿಯಲ್ಲಿ ಒಂದೂವರೆ ಕೋಟಿ ರೂಪಾಯಿಗಳ ಬಂಡವಾಳವನ್ನು ಹೂಡಿದ್ದರೆ ಮೂರುವರೆ ಕೋಟಿ ನಷ್ಟವಾಗುತ್ತಿದೆ. ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್‌ನಲ್ಲಿ ೨.೧೬ ಕೋಟಿ ಬಂಡವಾಳವನ್ನು ಹೂಡಿದರೆ ೬ ಕೋಟಿ ನಷ್ಟವನ್ನು ಅನುಭವಿಸುತ್ತಿದೆ. ಚಿತ್ರದುರ್ಗ ಕಾಪರ್ ಇಂಡಸ್ಟ್ರೀಸ್‌ನಲ್ಲಿ ೫೫ ಲಕ್ಷ ರೂ. ಬಂಡವಾಳವಿದ್ದರೆ ೧೫೫ ೭೯ ಲಕ್ಷ ರೂ. ಗಳ ನಷ್ಟವಾಗಿದೆ, ಇದೇ ರೀತಿ ಮೈಸೂರು ಅಸಿಟೇಟ್ ಫ್ಯಾಕ್ಟರಿಯಲ್ಲಿ ಒಂದೂಕಾಲು ಕೋಟಿ ಬಂಡವಾಳ ಹೂಡಿದ್ದರೆ ೧೦½ ಕೋಟಿ ರೂ. ಗಳ ನಷ್ಟವನ್ನು ಅನುಭವಿಸುತ್ತಿದ್ದಾರೆ.

೧೦-೩೦ ಎ. ಎಂ.

ಹಾಗೇ ಇನ್ನೂ ೬ ಯೂನಿಟ್‌ಗಳನ್ನು ಕೊಟ್ಟಿದ್ದಾರೆ, ಅದರಲ್ಲಿ ೮.೭೯ ಕೋಟಿ ರೂಪಾಯಿ ಬಂಡವಾಳ ಹಾಕಿ ೨.೩೦ ಕೋಟಿ ರೂಪಾಯಿ ನಷ್ಟ ಅನುಭವಿಸುತ್ತಿದ್ದಾರೆ. ಸಿಲ್ಕ್ ಫಿಲೇಚರ್ಸ್ ಬಗ್ಗೆ ಹೇಳುವುದಾದರೆ ೬.೫೮ ಕೋಟಿ ರೂಪಾಯಿ ಬಂಡವಾಳ ಹಾಕಿ ೪.೮೫ ಕೋಟಿ ರೂಪಾಯಿ ನಷ್ಟವಾಗುತ್ತಿದೆ. ಹೀಗೆ ಒಂದರ ಹಿಂದೆ ಒಂದು ನಷ್ಟ ಅನುಭವಿಸುವ ಇಲಾಖೆಯಾಗಿದೆ. ಈ ರೀತಿಯಾಗಿ ಒಟ್ಟು ೫೫ ಕೋಟಿ ರೂಪಾಯಿ ಬಂಡವಾಳ ಹಾಕಿದ್ದಾರೆ. ಲೆಕ್ಕದ ಪ್ರಕಾರ ೧೯೬೦ನೇ ಮಾರ್ಚ್ ಕೊನೆವರೆಗೆ ಸರ್ಕಾರ ಕೊಟ್ಟಿರತಕ್ಕ ಸಾಲ ೪೬ ಕೋಟಿ ರೂಪಾಯಿ ಹಾಗೆ ಇದೆ. ಅದು ಇನ್ನೂ ವಾಪಸ್ಸು ಬಂದಿಲ್ಲ, ಹೀಗೆ ಕೈಗಾರಿಕಾಭಿವೃದ್ಧಿ ಎಷ್ಟರ ಮಟ್ಟಿಗೆ ಆಗುತ್ತಿದೆ ಎಂಬುದಕ್ಕೆ ಕೆಲವು ಕಾರಣಗಳನ್ನು ಗಮನಿಸಬೇಕಾಗಿದೆ. ಇಷ್ಟು ನಷ್ಟ ಅನುಭವಿಸುವುದಕ್ಕೆ ಕಾರಣವೇನು ಎಂಬುದನ್ನು

ಆಲೋಚನೆ ಮಾಡಿದಾಗ ಕಂಡದ್ದು ಕರಪ್ಷನ್. ಕೆಲಸಗಾರರನ್ನು ನೇಮಿಸಿಕೊಳ್ಳುವಾಗ, ರಾ-ಮೆಟೀರಿಯಲ್ಸ್ ಅನ್ನು ಕೊಳ್ಳುವಾಗ, ಉತ್ಪಾದಿಸಿದ ಪದಾರ್ಥಗಳನ್ನು ಮಾರಾಟ ಮಾಡುವಾಗ ಭ್ರಷ್ಟಾಚಾರ ನಡೆಯುತ್ತಿದೆ. ಈ ೩ ಬಾಬುಗಳಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ ಎಂಬುದನ್ನು ಅನೇಕ ನಿದರ್ಶನಗಳಿಂದ ನೋಡಬಹುದು. ೧೯೬೪ರಲ್ಲಿ ಜವಹರ್‌ಲಾಲ್ ನೆಹರೂರವರು ಪ್ರಧಾನಿಯಾಗಿದ್ದಾಗ ಸಂತಾನಮ್ ಕಮಿಟಿ ಮಾಡಿ ಕರಪ್ಷನ್ ಬಗ್ಗೆ ವರದಿ ತಯಾರು ಮಾಡಿಸಿದರು. ಅದರಲ್ಲಿ ಒಂದು ಮಾತು ಹೇಳಿದ್ದಾರೆ. ಅದು ಈ ರೀತಿ ಇದೆ.—

> "It was represented to us that corruption has increased to an extent that people have started losing faith in the integrity of public administration. The general belief about failure of integrity amongst Ministers is as damaging as the actual failure".

ಹೀಗೆ ಎಲ್ಲೆಲ್ಲೂ ಕರಪ್ಷನ್ ಇರುವುದನ್ನು ನೋಡುತ್ತಿದ್ದೇವೆ. ಇನ್ನೊಂದು ರೀತಿಯಲ್ಲಿ ಈ ದೇಶದಲ್ಲಿ ಹೇಗೆ ಕರಪ್ಷನ್ ಆಗುತ್ತಿದೆ ಎಂದರೆ, ಸೋಪ್ ಅಂಡ್ ಡಿಟರ್ಜಂಟ್ ಅದರಲ್ಲಿ ಎಲ್ಲಿಯೂ ಕೂಡ ನಡೆಯದೆ ಇರುವ ರೀತಿಯಲ್ಲಿ ಭ್ರಷ್ಟಾಚಾರ ನಡೆದಿದೆ. ಬಹಳ ಇಲಾಖೆಯವರು ಯಂತ್ರೋಪಕರಣಗಳನ್ನು ಸರಬರಾಜು ಮಾಡತಕ್ಕವರು ಇದ್ದರು. ಯಾವ ಕಾರಣದಿಂದಲೋ ಏನೋ ಎಲ್ಲವನ್ನು ಬಿಟ್ಟು ಬ್ಯಾಲೆಸ್ಟ್-ಇಂಡಿಯ ಹೀಗೆ ಎಲ್ಲೆಲ್ಲೋ ಕೊಂಡುಕೊಂಡರು. ಬ್ಯಾಲೆಸ್ಟದವರು ಊದಿಮಾನ ಮತ್ತಿತರ ಕಡೆಗಳಿಗೆ ೩ ಕೋಟಿ ರೂಪಾಯಿಗೆ ಸರಬರಾಜು ಮಾಡಿದರೆ ಇವರು ಟರ್ನ್-ಕೀ-ಸಿಸ್ಟಂ ಎಂದು ಮಾಡಿ ೪.೬೧ ಕೋಟಿ ರೂಪಾಯಿಗೆ ಕೊಂಡುಕೊಂಡಿದ್ದಾರೆ. ಅವರಿಗೆ ಬಂದ ಎಲ್ಲ ಮಾಲಿನಿಂದ ಒಟ್ಟು ಒಂದು ಕೋಟಿ ರೂಪಾಯಿ ನಷ್ಟವಾಗಿದೆ. ನಮ್ಮವರೇ ತಯಾರಿಸಿದ ಉತ್ತಮವಾದ ಯಂತ್ರಗಳನ್ನು ತಂದು ಲಾಭದಾಯಕವಾಗಿ ಕೆಲಸ ಮಾಡಬಹುದಾಗಿತ್ತು. ಅದನ್ನು ಮಾಡುವುದಕ್ಕೆ ಬದಲಾಗಿ ೪.೬೧ ಕೋಟಿ ರೂಪಾಯಿಗಳನ್ನು ಇಟಾಲಿಯನ್ ಸರ್ಕಾರದ ಮೆಷಿನ್ನಿಗೆ ಕೊಟ್ಟು ತಂದಿದ್ದಾರೆ. ನಮಗೆ ಜರ್ಮನ್ ಸರ್ಕಾರದವರು ಮತ್ತು ಯು. ಕೆ. ಯವರು ಕೊಡುವುದಕ್ಕೆ ತಯಾರಿದ್ದರು. ಎಲ್ಲವನ್ನು ಮರೆಮಾಚಿ ೪.೬೧ ಕೋಟಿ ರೂಪಾಯಿಗಳನ್ನು ಕೊಟ್ಟು ತರಲು ಕಾರಣವೇನು ? ಇದು ಭ್ರಷ್ಟಾಚಾರದ ಒಂದು ನಿದರ್ಶನ. ಇಂಥ ಅನೇಕ ಭ್ರಷ್ಟಾಚಾರದ ನಿದರ್ಶನಗಳನ್ನು ನಾವು ಕಾಣುತ್ತಿದ್ದೇವೆ. ಮಾಸಿಯಪ್ಪನವರು ಕೂಡ ತಾವು ಕೊಟ್ಟ ವರದಿಯಲ್ಲಿ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಹೀಗೆ ಯಂತ್ರೋಪಕರಣಗಳನ್ನು ಕೊಳ್ಳುವುದರಲ್ಲಿ, ಕೆಲಸಗಾರರನ್ನು ನೇಮಿಸಿಕೊಳ್ಳುವುದರಲ್ಲಿ ಭ್ರಷ್ಟಾಚಾರ ನಡೆಯುತ್ತಿರುವುದನ್ನು ಕಾಣುತ್ತಿದ್ದೇವೆ. ಸಾಮಾನ್ಯ ಕೆಲಸಗಾರರನ್ನು ತೆಗೆದುಕೊಳ್ಳುವುದಕ್ಕೆ ೩ ಸಾವಿರ ರೂಪಾಯಿಗಳನ್ನು ಡಿಮ್ಯಾಂಡ್ ಮಾಡುತ್ತಿದ್ದಾರೆ. ಅಂದಾಗ ಅಧಿಕಾರಿಗಳನ್ನು ತೆಗೆದ ಕೊಳ್ಳಬೇಕಾದರೆ ಎಷ್ಟು ಡಿಮ್ಯಾಂಡ್ ಮಾಡುತ್ತಾರೆಂಬುದನ್ನು ನೋಡಬಹುದು. ಯಾವುದೇ ಪಬ್ಲಿಕ್ ಅಂಡರ್ ಟೇಕಿಂಗ್ಸ್‌ನಲ್ಲಿ ನೋಡಿದರೂ ಸ್ಟ್ಯಾಫ್ ಪ್ಯಾಟ್ಟರ್ನ್ ಬಗ್ಗೆ ಒಂದು ರ್‍ಯಾಷನಲ್ ಸಿಸ್ಟಂ ಇಲ್ಲ. ೧೦೦ ಜನ ಕೆಲಸ ಮಾಡುವ ಜಾಗದಲ್ಲಿ ೧೫೦ ಜನರಿದ್ದಾರೆ. ಉದಾಹರಣೆಗೆ, ರಾಮಕೃಷ್ಣ ಅವರ ಡೈರಿಯಲ್ಲಿ ನೋಡುತ್ತಿದ್ದೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ.— ಯಾವ ಕಂಪನಿಯಲ್ಲಿ ಆ ರೀತಿ ಇದೆ ?

ಶ್ರೀ ಹೆಚ್. ಗಂಗಾಧರನ್.— ಎಲ್ಲೆಲ್ಲೂ ಇದೆ. ಪಬ್ಲಿಕ್ ಅಂಡರ್‌ಟೇಕಿಂಗ್ಸ್‌ನಲ್ಲಿ ಕಾಣಬಹುದು.

ಶ್ರೀ ವೈ. ರಾಮಕೃಷ್ಣ. - ನಾವು ಫ್ಲಡ್-೨ ಯೋಜನೆಯನ್ನು ಒಪ್ಪಿಕೊಂಡಿದ್ದೇವೆ. ಅದರಲ್ಲಿ ತರಬೇತಾದವರಿಗೆ ಕೆಲಸ ಕೊಡಬೇಕಾಗುತ್ತದೆ. ಅದು ಕಳೆದ ತಿಂಗಳು ಜಾರಿಗೆ ಬಂತು. ಈಗ್ಗೆ ೨-೩ ತಿಂಗಳಿನಿಂದ ಜನ ಜಾಸ್ತಿ ಆಗಿದ್ದಾರೆ.

ಶ್ರೀ ಹೆಚ್. ಗಂಗಾಧರನ್ — ಫ್ಲಡ್ ಆಫ್ ಎಂಪ್ಲಾಯೀಸ್ ತೆಗೆದುಕೊಳ್ಳುವುದಕ್ಕೆ ಪೂರ್ವದಲ್ಲಿ ತಜ್ಞರನ್ನು ಕಳುಹಿಸಿ ಎಲ್ಲ ಇಲಾಖೆಯಲ್ಲೂ ಪರಿಶೀಲನೆ ನಡೆಸಬೇಕು. ಪಬ್ಲಿಕ್ ಅಂಡರ್ ಟೇಕಿಂಗ್ಸ್‌ನಲ್ಲಿ ಲಾಸ್ ಆಗುವುದಕ್ಕೆ ಕಾರಣವೇನೆಂದರೆ ಓವರ್ ಸ್ಟ್ಯಾಫ್. ಅವಶ್ಯಕತೆ ಇಲ್ಲದಷು.

ಜನರನ್ನು ತುಂಬಿಸಿದ್ದಾರೆ. ವಿಕ್ರಾಂತ್ ಕಂಪನಿಯಲ್ಲಿ ಏನಾಗಿದೆ ಎಂಬುದನ್ನು ನೋಡಿ. ಅಲ್ಲಿ ೧೦ ಕೋಟಿ ರೂಪಾಯಿ ನಷ್ಟವಾಗುವುದಕ್ಕೆ ಕಾರಣವೇನು ? ಇದನ್ನೆಲ್ಲ ನೋಡಿದಾಗ ಓವರ್ ಸ್ಟಾಫ್ ಇರುವುದೇ ಮೂಲ ಕಾರಣವೆಂಬುದು ಸ್ಪಷ್ಟವಾಗುತ್ತದೆ. ತಮಗೆ ಬೇಕಾದವರನ್ನು ತುಂಬತಕ್ಕ ಪದ್ಧತಿ ಇರುವುದರಿಂದ ನಷ್ಟವಾಗಿದೆ, ಇದು ಒಂದು ಮುಖ್ಯ ಕಾರಣ. ಆ ಕಾರ್ಖಾನೆಯಲ್ಲಿ ಕೆಲಸ ಮಾಡತಕ್ಕ ಇನ್‌ಕಾಂಪಿಟೆಂಟ್ ವ್ಯಕ್ತಿಗಳನ್ನು ಮ್ಯಾನೇಜ್‌ಮೆಂಟಿನಲ್ಲಿ ಹಾಕಿದ್ದಾರೆ. ಇದಕ್ಕೆ ಒಂದು ನಿದರ್ಶನ ಬೇಕಾದರೆ ಹೇಳಬಹುದು. ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್ ಲಿಮಿಟೆಡ್ ಎಂದು ಒಂದು ಸಂಸ್ಥೆ ಇತ್ತು, ಅದು ಲಾಭದಾಯಕವಾಗಿ ಕೆಲಸ ಮಾಡುತ್ತಿತ್ತು. ಈಗ ಅಲ್ಲಿಗೆ ಯಾರೋ ಒಬ್ಬರು ಟೆಕ್ನಿಕಲ್ ನಾಲೆಡ್ಜ್ ಇಲ್ಲದ ಐ. ಎ. ಎಸ್. ಅಧಿಕಾರಿಯನ್ನು ಮ್ಯಾನೇಜಿಂಗ್ ಡೈರೆಕ್ಟರಾಗಿ ಹಾಕಿದ್ದಾರೆ. ಚರಿತ್ರೆ, ಭೂಗೋಳ ಓದಿದವರನ್ನು ತೆಗೆದುಕೊಂಡು ಹೋಗಿ ಎಲೆಕ್ಟ್ರಿಕಲ್ ಕಂಪನಿಯಲ್ಲಿ ತೆಗೆದುಕೊಂಡು ಹೋಗಿ ಹಾಕಿದರೆ ಅವರೇನು ಕೆಲಸ ಮಾಡಬಲ್ಲರು ? ಹೀಗಾಗಿ ಇವತ್ತಿನ ದಿವಸ ಅಲ್ಲಿ ನಷ್ಟವುಂಟಾಗಲು ಪ್ರಾರಂಭವಾಗಿದೆ.

ಶ್ರೀ ವೈ. ರಾಮಕೃಷ್ಣ.— ಈಗ ಅಲ್ಲಿ ಐ. ಎ. ಎಸ್. ಅಧಿಕಾರಿಗಳು ಇಲ್ಲ.

ಶ್ರೀ ಹೆಚ್. ಗಂಗಾಧರನ್.— ಇದುವರೆಗೆ ಇದ್ದರು. ಆ ಕಂಪನಿಯನ್ನು ನಿಮ್ಮ ಕೈಯಲ್ಲಿ ನಡೆಸುವುದಕ್ಕಾಗದಿದ್ದರೆ ಬಿ. ಇ. ಎಲ್. ನವರಿಗಾದರೂ ಕೊಡಿ.

ಶ್ರೀ ಕೆ. ಬಿ. ಮಲ್ಲಪ್ಪ.— ದಯವಿಟ್ಟು ಅದನ್ನು ಬಿ. ಇ. ಎಲ್. ನವರಿಗೆ ಕೊಡಿಸತಕ್ಕ ಪ್ರಯತ್ನ ಮಾಡಿದರೆ ನೂರಾರು ಮಂದಿ ಕೆಲಸಗಾರರಿಗೆ ಕೆಲಸ ಸಿಗುತ್ತದೆ, ಹಣ ಸಿಗುತ್ತದೆ

ಶ್ರೀ ಹೆಚ್. ಗಂಗಾಧರನ್.— ಚನ್ನಾಗಿ ಕೆಲಸ ಮಾಡುವವರು ಯಾರಿಗಾದರೂ ಕೊಡಿ ಐ. ಎ. ಎಸ್. ಅಧಿಕಾರಿಗಳನ್ನು ಹಾಕಿ ೧೦ ಕೋಟಿ ರೂಪಾಯಿ ನಷ್ಟವಾದರೂ ಏತಕ್ಕೆ ನಷ್ಟವಾಗುತ್ತಿದೆ ಎಂಬುದರ ಬಗ್ಗೆ ವರದಿ ಕೊಡಲಿಲ್ಲ, ತನಿಖೆ ಮಾಡಲಿಲ್ಲ. ಸಿಲ್ಕ್ ಫ್ಯಾಕ್ಟರಿಯಲ್ಲಿ ಇಷ್ಟು ವರ್ಷದಿಂದ ನಷ್ಟವಾಗುತ್ತಿದ್ದರೂ ಸರ್ಕಾರ ಕಣ್ಮುಚ್ಚಿಕೊಂಡು ಕುಳಿತಿದೆ. ಈ ರೀತಿ ನಷ್ಟವಾಗುವುದಕ್ಕೆ ಕಾರಣವೇನು ಎಂಬುದನ್ನು ವಿಚಾರ ಮಾಡಲಿಲ್ಲ. ಇದನ್ನು ನಾವು ನೋಡಬೇಕಾಗಿದೆ, ಅಧಿಕಾರಿಗಳಿದ್ದರೂ ಲಕ್ಷುರಿ ಎಕ್ಸ್‌ಪೆಂಡಿಚರ್ ಮಾಡುವುದಕ್ಕೆ. ಯಾವುದಕ್ಕೆ ಅವಶ್ಯಕತೆ ಇಲ್ಲವೋ ಅದಕ್ಕೆ ಅನವಶ್ಯಕವಾಗಿ ಖರ್ಚುಗಳನ್ನು ಮಾಡುತ್ತಾ ಕೈಗಾರಿಕೆಗಳು ಕೆಲಸ ಮಾಡುತ್ತಿವೆ. ಅದರ ಬಗ್ಗೆ ಸರ್ಕಾರ ಗಮನ ಕೊಡಬೇಕಾಗಿದೆ. ಮ್ಯಾನೇಜ್‌ಮೆಂಟ್‌ನಲ್ಲಿ ಬಂದ ಅಧಿಕಾರಿಗಳು ೩ ವರ್ಷ ಇರುತ್ತಾರೆ. ಅವರು ಇರುವ ಕಾಲದಲ್ಲಿ ನೌಕರರೊಡನೆ ಸರಿಯಾಗಿ ವರ್ತಿಸುವುದಿಲ್ಲ ಮತ್ತು ರಾ–ಮೆಟೀರಿಯಲ್ಸ್ ಅನ್ನು ಕೊಳ್ಳುವಾಗ ಅಗತ್ಯಕ್ಕಿಂತ ಹೆಚ್ಚಾಗಿ ಕೊಳ್ಳುತ್ತಾರೆ ಅದಕ್ಕೆ ಪಬ್ಲಿಕ್ ಅಂಡರ್ ಟೇಕಿಂಗ್ಸ್ ಬಗ್ಗೆ ಮಾನ್ಯ ಮಸಿಯಪ್ಪನವರು ಒಂದು ಮಾತು ಹೇಳಿದ್ದಾರೆ. ರಾ–ಮೆಟೀರಿಯಲ್ಸ್ ಮತ್ತು ಕಾಂಪೋನೆಂಟ್ಸ್ ಬಗ್ಗೆ ಹೇಳುತ್ತಾ, ೧೦ ಕೋಟಿ ರೂಪಾಯಿಗಳ ರಾ–ಮೆಟೀರಿಯಲ್ಸ್ ಕೆಲವು ಕಂಪನಿಯಲ್ಲಿ ಇದೆ ಎಂದು ೧೯೮೨ರ ವರದಿಯಲ್ಲಿ ಕೊಟ್ಟಿದ್ದಾರೆ. ಎನ್. ಜಿ. ಇ. ಎಫ್. ನಲ್ಲಿ ಒಂದು ಕೋಟಿ ರೂಪಾಯಿನ ಅನ್‌ನೆಸೆಸರಿ ಮೆಟೀರಿಯಲ್ಸ್ ಇದೆ ಎಂದು ವರದಿ ಕೊಟ್ಟಿದ್ದಾರೆ ಆ ರೀತಿಯಲ್ಲಿ ನಷ್ಟವಾಗತಕ್ಕ ಪರಿಸ್ಥಿತಿಯನ್ನು ಉಂಟು ಮಾಡಿಕೊಂಡಿದ್ದಾರೆ. ಇದರ ಬಗ್ಗೆ ಸರ್ಕಾರ ತೀವ್ರ ಗಮನ ಕೊಡಬೇಕೆಂದು ಹೇಳುತ್ತೇನೆ. ವ್ಯವಸ್ಥಿತ ರೀತಿಯಲ್ಲಿ ಉಪಯೋಗಿಸಿಕೊಳ್ಳತಕ್ಕ ಕಾರ್ಯಕ್ರಮ ಮಾಡದಿದ್ದರೆ ಕೈಗಾರಿಕೆಗಳು ದಿನೇದಿನೇ ಕ್ಷೀಣಿಸುತ್ತವೆಯೇ ಹೊರತು ಅಭಿವೃದ್ಧಿಯಾಗುವುದಿಲ್ಲ. ಇನ್ನು ಈ ದೇಶದಲ್ಲಿರತಕ್ಕ ಸಣ್ಣ ಕೈಗಾರಿಕೆಗಳ ಬಗ್ಗೆ ಹೇಳುವುದಾದರೆ, ಸೆಂಟ್ರಲ್ ಸೆಕ್ಟಾರಿನಲ್ಲಿ ಸುಮಾರು ೧.೫ ಲಕ್ಷ ಕೈಗಾರಿಕೆಗಳು ಬರುತ್ತವೆ. ಅದರ ಬಗ್ಗೆ ತಜ್ಞರು ಒಂದು ಮಾತು ಹೇಳಿದ್ದಾರೆ. ಅದೇನೆಂದರೆ. ೧೦ ದೊಡ್ಡ ದೊಡ್ಡ ನಗರಗಳಲ್ಲಿ ೮೦ ಸಾವಿರ ಅಂದರೆ ಶೇಕಡ ೬೦ರಷ್ಟು ಕೈಗಾರಿಕೆಗಳು ಇವೆ ಎಂದು ಹೇಳಿದ್ದಾರೆ. ಸಣ್ಣ ಕೈಗಾರಿಕೆಗಳು ಎಲ್ಲಿ ಜಾಸ್ತಿ ಇವೆ ಎಂದರೆ, ಬೆಂಗಳೂರು, ಮಂಗಳೂರಿನಂಥ ನಗರಗಳಲ್ಲಿವೆಯೇ ಹೊರತು ಗ್ರಾಮಾಂತರ ಪ್ರದೇಶಗಳಲ್ಲಿ ಇಲ್ಲ. ಸಣ್ಣ ಕೈಗಾರಿಕೆಗಳು ಎಷ್ಟರಮಟ್ಟಿಗೆ ಪ್ರಗತಿಯಾಗಿವೆ ಎಂಬ ಬಗ್ಗೆ ಮೊನ್ನೆ ಮಾನ್ಯ ಸಚಿವರು ಹೇಳಿದರು ನಮ್ಮಲ್ಲಿರತಕ್ಕ ೧೫೫೮ ಯೂನಿಟ್‌ಗಳಲ್ಲಿ ೪೭೭ ರಾ–ಮೆಟೀರಿಯಲ್ಸ್ ಅನ್ನು ಮಿಸ್‌ಯೂಸ್ ಮಾಡಿವೆ, ೬೩ ನಾನ್ ಎಕ್ಸಿಸ್ಟೆಂಟ್ ಆಗಿವೆ, ೧೨೯ ಕೆಲಸ ಮಾಡುತ್ತಿಲ್ಲ, ೯೦ ಯೂನಿಟ್‌ಗಳು ಎಲ್ಲಿವೆ ಎಂಬುದು ಗೊತ್ತಿಲ್ಲ, ೧೬ ಯೂನಿಟ್‌ಗಳಲ್ಲಿ ೧೦೨.೭ ಲಕ್ಷ ರೂಪಾಯಿ ಬೆಲೆಬಾಳುವ ೧೪೦ ಮೆಟ್ರಿಕ್ ಟನ್ ಸ್ಟೈನ್‌ಲೆಸ್ ಸ್ಟೀಲ್ ಅನ್ನು ಮಿಸ್‌ಯೂಸ್ ಮಾಡಿವೆ, ೭೯ ಯೂನಿಟ್‌ಗಳು ೧೫೫೮ ಮೆಟ್ರಿಕ್ ಟನ್ ಐರನ್ ಮತ್ತು

ಸ್ಟೀಲನ್ನು ಮಿಸ್‌ಯೂಸ್ ಮಾಡಿವೆ. ಇದು ಎಲ್ಲ ಒಂದೇ ಸಾರಿ ಆಗಿರತಕ್ಕ ದುರ್ಗತಿ. ಇನ್ನು ಹೊಸದಾಗಿ ಲೈಸೆನ್ಸ್ ಪಡೆಯಲು ಅರ್ಜಿ ಸಲ್ಲಿಸಿರತಕ್ಕವರು ೧೩೬ ಮಂದಿ ಎಂದು ಹೇಳಿದ್ದಾರೆ. ಅದರಲ್ಲಿ ಎಷ್ಟು ಜನಕ್ಕೆ ಲೈಸೆನ್ಸ್ ಕೊಟ್ಟಿದ್ದೀರಿ ? ಆ ಪೈಕಿ ಕನ್ನಡಿಗರು ಎಷ್ಟು ? ಹರಿಜನ-ಗಿರಿಜನ ಎಷ್ಟು ? ಈ ಮಾಹಿತಿಯನ್ನು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ.

136 applications received. The Central Government has issued 46 letters of intent amounting to Rs. 210 Crores which will have to provide employment to 25,000 peoples. ಅದರಲ್ಲಿ ಎಷ್ಟು ಕಾರ್ಯಾರಂಭ ಮಾಡಿದೆ, ಎಷ್ಟು ಜನರಿಗೆ ಈಗಾಗಲೇ ನೌಕರಿಯನ್ನು ಒದಗಿಸಿಕೊಟ್ಟಿದೆ ಎಂಬುದನ್ನು ಸರ್ಕಾರದವರು ತಿಳಿಸಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಒಂದು ಮಾತನ್ನು ದುಃಖದಿಂದ ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ೧೯೭೦ನೇ ಇಸವಿಯಿಂದ ಇಲ್ಲಿಯವರೆಗೆ ಕೇಂದ್ರ ಸರ್ಕಾರದಿಂದ ಬಂಡವಾಳ ಹಾಕಿದಂಥ ಭಾರಿ ಕೈಗಾರಿಕೆಗಳು ಎಷ್ಟು ಬಂದಿದೆಯೆಂದರೆ not even a single heavy industry has come up in Karnataka since 1970. ನಾವೆಲ್ಲಾ ಬಹಳ ಪ್ರಿಯವಾಗಿದ್ದವರಾದರೂ ಒಂದು ಭಾರಿ ಕೈಗಾರಿಕೆಯನ್ನು ಕೇಂದ್ರ ಸರ್ಕಾರ ಕೊಟ್ಟಿಲ್ಲ, ೧೯೭೧ನೇ ಇಸವಿಗಿಂತ ಮುಂಚೆ ೧೬ ಕೋಟಿ ರೂಪಾಯಿ ಆ ಬಾಬಿನಲ್ಲಿ ಕರ್ನಾಟಕಕ್ಕೆ ಬಂದಿದೆ. After 1971, a steel factory goes to Salem in Tamilnadu and the diesel engine factory goes to Thirupathi. ಎಲ್ಲ ರಾಜ್ಯಗಳಲ್ಲೂ ನೂರಾರು ಕೋಟಿ ರೂಪಾಯಿ ಬಂಡವಾಳ ಹಾಕಿ ಕೇಂದ್ರ ಸರ್ಕಾರ ಕಾರ್ಖಾನೆಗಳನ್ನು ಪ್ರಾರಂಭ ಮಾಡಿದ್ದರೆ ಕರ್ನಾಟಕವನ್ನು ಕಡೆಗಣಿಸಿದೆ. ಆದರೂ ಕರ್ನಾಟಕ ಸರ್ಕಾರ ಏತಕ್ಕೆ ಕಣ್ಣು ಮುಚ್ಚಿಕೊಂಡು ಕುಳಿತಿದೆ. ಒಂದು ಭಾರಿ ಕೈಗಾರಿಕೆಯನ್ನು ಸ್ಥಾಪನೆ ಮಾಡುವುದಕ್ಕೆ ನಾವು ಅಸಮರ್ಥವಾಗಿದ್ದೇವೆಯೆ ? ಐದು ಯೋಜನೆಗಳಿಂದ out of the capital outlay in industry. only 1% is invested here. ಎಂದು ದುಃಖದಿಂದ ಹೇಳಬೇಕಾಗಿದೆ. ೧೯೭೩ನೇ ಇಸವಿಯಲ್ಲಿ ಕೈಗಾರಿಕೆಗಳ ಬಗ್ಗೆ ಅಧ್ಯಯನ ನಡೆಸಲು ನಮ್ಮ ಸರ್ಕಾರ ಎಕ್ಸ್‌ಪರ್ಟ್ಸ್ ಕಮಿಟಿಯನ್ನು ಮಾಡಿತ್ತು, ದೊಡ್ಡ ಕೈಗಾರಿಕೆಗಳಿಗೆ ಸಹಾಯಕವಾಗಿ ಅದಕ್ಕೆ ಪೋಷಿತವಾಗಿ ಮತ್ತು ಪೋಷಕವಾಗಿ ಯಾವ ರೀತಿ ಸಣ್ಣ ಕೈಗಾರಿಕೆಗಳು ಬೆಳೆಯಬೇಕು ಎಂಬ ದಿಕ್ಕಿನಲ್ಲಿ ೩೫ ವರ್ಷಗಳಿಂದ ಸರ್ಕಾರ ಆಲೋಚನೆ ಮಾಡಿಲ್ಲ. ಇವತ್ತು ಕಾರ್ಖಾನೆ ಮಾಡುವುದಕ್ಕೆ ಬೇರೆಯವರಿಗೆ ಲೈಸೆನ್ಸ್ ಕೊಡುತ್ತಿದ್ದೇವೆ. ಅವರು ಇಲ್ಲಿ ಮೂಲ ಕೆಲಸಗಳನ್ನು ಮಾಡಿದರೂ ಕೂಡ ಅದಕ್ಕೆ ಬೇಕಾದ ancillary industry ಗಳನ್ನು ಮುಂಬಯಿ ಮುಂತಾದ ಬೇರೆ ಕಡೆಗಳಲ್ಲಿ ಇಟ್ಟುಕೊಂಡಿದ್ದಾರೆ. ಸಣ್ಣ ಪುಟ್ಟ ಸಾಮಾನುಗಳನ್ನು ಅಲ್ಲಿಂದ ಮಾಡಿ ಇಲ್ಲಿಗೆ ತರುತ್ತಾರೆ. ನಟ್, ಬೋಲ್ಟ್, ರಾಡ್, ಹುಕ್ಸ್ ಮುಂತಾದವುಗಳನ್ನು ಬೇರೆ ಕಡೆ ಮಾಡಿ ತಂದು ಇಲ್ಲಿ ಜೋಡಿಸುತ್ತಿದ್ದಾರೆ, ಅವರಿಗೆ ಇಲ್ಲಿ ಕಾರ್ಖಾನೆಗೆ ಲೈಸೆನ್ಸ್ ಕೊಟ್ಟಮೇಲೆ ಅದಕ್ಕೆ ಬೇಕಾದ ಸಹಾಯಕ ವಸ್ತುಗಳನ್ನು ಇಲ್ಲೇ ಮಾಡಬೇಕು ಎಂದು ಕಾನೂನು ಮಾಡುವುದಕ್ಕೆ ನಾವು ತಯಾರಾಗಿಲ್ಲ. ಇಲ್ಲೆ ಉತ್ಪನ್ನವಾದ ವಸ್ತುಗಳನ್ನು ಪೋಷಿತವಾಗಿ ಉಪಯೋಗಿಸಿಕೊಳ್ಳುವ ಕಾರ್ಖಾನೆ ರಚನೆಯಾಗಲಿಲ್ಲ. ಉದಾಹರಣೆಗೆ ಕೋಟ್ಯಾಂತರ ರೂಪಾಯಿನ ಸ್ಟೈನ್‌ಲೆಸ್ ಸ್ಟೀಲ್ ಭದ್ರಾವತಿಯಲ್ಲಿ ಉತ್ಪಾದನೆಯಾದರೂ ಅದು ನಮ್ಮ ರಾಜ್ಯದಲ್ಲಿ ಉಳಿಯುವುದಿಲ್ಲ ಬಾಂಬೆ, ಪಂಜಾಬ್ ಮುಂತಾದ ಕಡೆ ಹೋಗುತ್ತದೆ. ಅಲ್ಲಿಂದ ಸಣ್ಣ ಪುಟ್ಟ ವಸ್ತುಗಳಾಗಿ ಕರ್ನಾಟಕಕ್ಕೆ ಬಂದ ಮೇಲೆ ನಾವೇ ೧೦-೧೫ರಷ್ಟು ಬೆಲೆ ಕೊಟ್ಟು ಇಲ್ಲಿ ಕೊಂಡುಕೊಳ್ಳುತ್ತೇವೆ. ಸ್ಟೇನ್‌ಲೆಸ್ ಸ್ಟೀಲ್‌ನ್ನು ತಗಡು ಮಾಡುವ, ರಾಡ್ ಮಾಡುವ, ತಂತಿ ಮಾಡುವ ಯಂತ್ರೋಪಕರಣಗಳನ್ನು ಸ್ಥಾಪನೆ ಮಾಡುವುದಕ್ಕೆ ನಮ್ಮಲ್ಲಿ ತಜ್ಞರು ಇರಲಿಲ್ಲವೇ ? ಆ ರೀತಿ ಇಲ್ಲೇ ಅದನ್ನೆಲ್ಲಾ ಮಾಡುವ ವ್ಯವಸ್ಥೆ ಮಾಡಿದ್ದರೆ ಶಿವಮೊಗ್ಗ, ಚಿತ್ರದುರ್ಗ, ಚಿಕ್ಕಮಗಳೂರು ಮುಂತಾದ ಕಡೆಗಳಲ್ಲಿ ಸಾವಿರಾರು ಗೃಹ ಕೈಗಾರಿಕೆಗಳನ್ನು ಸ್ಥಾಪಿಸಬಹುದಾಗಿತ್ತು. ತಗಡು ಮಾಡಿದ್ದರೆ ಇಲ್ಲೆ ಪಾತ್ರೆ ಮಾಡಲು ಉಪಯೋಗಿಸಬಹುದಾಗಿತ್ತು. ರಾಡ್ ಆಗಿದ್ದರೆ ನಟ್ಟು ಬೋಲ್ಟ್ ಉಪಯೋಗಿಸಬಹುದಾಗಿತ್ತು. ತಂತಿ ಮಾಡಿದ್ದರೆ ಬೇರೆ ಕೆಲಸಗಳಿಗೆ ಉಪಯೋಗಿಸಬಹುದಾಗಿತ್ತು. ಲಕ್ಷಾಂತರ ಜನರನ್ನು ಉದ್ದಿಮೆಗಳಲ್ಲಿ ತೊಡಗಿಸಬಹುದಾಗಿತ್ತು. ಇದರಲ್ಲಿ ರಿಸರ್ಚ್ ಮಾಡತಕ್ಕವರು ಏನು ಮಾಡುತ್ತಿದ್ದಾರೆ ಎಂದು ವಿಷಾದದಿಂದ ಕೇಳಬೇಕಾಗಿದೆ. ಈ ಇಲಾಖೆ ಇರತಕ್ಕದ್ದು ಬರೀ ಲಾಭ ನಷ್ಟ ಲೆಕ್ಕ ಹಾಕುವುದಕ್ಕಲ್ಲ, ನಮ್ಮಲ್ಲಿರತಕ್ಕ ವಸ್ತುಗಳನ್ನು ಉಪಯೋಗ ಮಾಡಿಕೊಂಡು ಎಷ್ಟು ಜನರಿಗೆ ಉದ್ಯೋಗಾವಕಾಶವನ್ನು

ಕಲ್ಪಿಸಿಕೊಡುವುದಕ್ಕೆ ಸಾಧ್ಯ ಮತ್ತು ರಾಷ್ಟ್ರದ ಸಂಪತ್ತನ್ನು ಹೇಗೆ ಉಪಯೋಗಿಸಿಕೊಳ್ಳಬಹುದು ಎಂಬುದನ್ನೂ ನೋಡಬೇಕು. ಇವತ್ತು ನಮ್ಮ ದೇಶದಲ್ಲಿ ಈ ರೀತಿ ಕೆಲಸ ಆಗಿಲ್ಲ. ಇದು ತೀವ್ರವಾಗಿ ಆಗಬೇಕಾಗಿದೆ? ಮುಖ್ಯವಾಗಿ ಇದರ ಬಗ್ಗೆ ಸಂಶೋಧನೆ ನಡೆಯಬೇಕು. ಒಬ್ಬರು ತಜ್ಞರು ಈ ರೀತಿ ಅಭಿಪ್ರಾಯ ಕೊಟ್ಟಿದ್ದಾರೆ. Market trend shows more customers in traditional as well as non-traditional items. ಇದನ್ನು ನಾವು ಮಾಡಿಲ್ಲ. ಸಿಲ್ಕ್ ಹ್ಯಾಂಡ್‌ಲೂಂ ಮಾಡುವುದಕ್ಕೆ ೫೬ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ ಎಂದು ಹೇಳುತ್ತಿದ್ದೀರಿ. ಈಗ ಇರತಕ್ಕ ಹ್ಯಾಂಡ್‌ಲೂಮ್ಸ್ ಸೇಲ್ಸ್‌ಟ್ಯಾಕ್ಸ್ ಕೊಡಲಾರದೆ ದೊಡ್ಡಬಳ್ಳಾಪುರ ಮುಂತಾದ ಕಡೆ ಬಾಗಿಲು ಹಾಕಿವೆ. ಇನ್ನು ಕೆಲವು ಕಡೆ ನೂಲು ಸಿಕ್ಕದೆ ಬಾಗಿಲು ಹಾಕಿವೆ. ಉತ್ತಮವಾದ ರೇಷ್ಮೆ ತಯಾರಾಗತಕ್ಕದ್ದು ನಮ್ಮ ರಾಜ್ಯದಲ್ಲಿ. ನಮ್ಮ ರಾಜ್ಯದಲ್ಲಿ ರೇಷ್ಮೆ ತಯಾರಾದರೂ ಮಾನ್ಯ ರಾಮಕೃಷ್ಣ ಅವರು ತಮ್ಮ ಮಗಳ ಮದುವೆ ಮಾಡಬೇಕಾದರೆ ಧರ್ಮಾವರಂ ಸೀರೆ ತರಬೇಕು.

ಅಧ್ಯಕ್ಷರು.—ಈಗ ಅವರಿಗೆ ಯಾರೂ ಇಲ್ಲ.

(ನಗು)

ಶ್ರೀ ಎಚ್. ಗಂಗಾಧರನ್.—ಇದನ್ನು ಏತಕ್ಕೆ ಹೇಳಿದೆ ಎಂದರೆ ನಮ್ಮಿಂದ ರೇಷ್ಮೆ ಕೊಂಡು ಬೇರೆ ಕಡೆ ನೇಯುವ ಬಟ್ಟೆಗಳಿಗೆ ನಾವು ಒಂದಕ್ಕೆ ಳೆರಷ್ಟು ಬೆಲೆ ಕೊಟ್ಟು ಕೊಳ್ಳುತ್ತೇವೆ. ನಮ್ಮ ರಾಜ್ಯದಲ್ಲೇ ಇದಕ್ಕಿಂತ ಉತ್ತಮವಾದ ಡಿಜೈನ್ಸ್ ಮಾಡಿ ಉತ್ತಮವಾದ ಸೀರೆಯನ್ನು ತಯಾರು ಮಾಡಿ ದೇಶ ದೇಶಗಳಿಗೆ ಕಳಿಸುವ ಪ್ರಯತ್ನ ಮಾಡಲಿಲ್ಲ. ಬನಾರಸ್, ಸೂರತ್ ಮುಂತಾದ ಕಡೆ ಜರಿ ಕೆಲಸ ಮಾಡತಕ್ಕ ಕೈಗಾರಿಕೆಗಳಿವೆ. ಜರಿ ಕೆಲಸದಲ್ಲಿ ಇಲ್ಲೇ ತರಬೇತಿ ಕೊಟ್ಟು ರೇಷ್ಮೆ ಸೀರೆಗಳಿಗೆ ಜರಿ ಹಾಕುವುದನ್ನು ನಾವೇ ಮಾಡಿದ್ದರೆ ಕೋಟ್ಯಾಂತರ ರೂಪಾಯಿಗಳ ವಿದೇಶಿ ವಿನಿಮಯ ಗಳಿಸಬಹುದಾಗಿತ್ತು. ರೇಷ್ಮೆ ಕೈಗಾರಿಕೆಯ ಅಭ್ಯುದಯವನ್ನೂ ಸಾಧಿಸಬಹುದಾಗಿತ್ತು. ಅದಕ್ಕೆ ಮಾರುಕಟ್ಟೆಗಳನ್ನು ಕಂಡು ಹಿಡಿಯತಕ್ಕ ಪ್ರಯತ್ನವನ್ನು ಮಾಡಲಿಲ್ಲ ಈ ದಿಸೆಯಲ್ಲಿ ಆಲೋಚನೆ ಮಾಡಲಿಲ್ಲ. ತೋಟಗಾರಿಕೆ ಮಂತ್ರಿಗಳು ಒಂದು ಮಾತನ್ನು ಹೇಳುತ್ತಿದ್ದರು ಅಧಿಕ ಉತ್ಪಾದನೆಯಾಗುತ್ತಿರುವುದರಿಂದ ಅಡಿಕೆ ಬೆಳೆಯುವುದು ಬೇಡ ಎಂದು ಹೇಳುತ್ತಿದ್ದಾರೆ. ಅಡಿಕೆಯನ್ನು ಬೇರೆ ದೇಶದವರು ಉಪಯೋಗ ಮಾಡುವಂಥ ಮಾರುಕಟ್ಟೆಯನ್ನು ಕಂಡು ಹಿಡಿಯತಕ್ಕ ವಿವೇಚನಾ ಶಕ್ತಿ ನಮಗೆ ಏತಕ್ಕೆ ಬರಲಿಲ್ಲ ? ತುಮಕೂರಿನ ಒಬ್ಬ ವಿಜ್ಞಾನಿ ಸಿಕ್ಕಿಂನಲ್ಲಿದ್ದಾರೆ. ಅಲ್ಲಿ ಬ್ರಿವರೀಸ್ ಇಂಡಸ್ಟ್ರೀಸ್‌ನಲ್ಲಿ ಕೆಲಸ ಮಾಡಿಕೊಂಡಿದ್ದಾರೆ. ಅವರು ಅಡಿಕೆ ಎಲೆ ಮತ್ತು ಏಲಕ್ಕಿ ಇವುಗಳನ್ನು ಉಪಯೋಗ ಮಾಡಿ ಒಂದು ಪಾನಿಯವನ್ನು ತಯಾರು ಮಾಡಿದ್ದಾರೆ. ಅದು ವಿದೇಶಿ ವಿನಿಮಯವನ್ನು ಗಳಿಸುತ್ತದೆ ಆ ರೀತಿ ಉಪಯೋಗಿಸಲು ಅಡಿಕೆ ಹೆಚ್ಚಿಗೆ ಬೆಳೆದರೆ ಬೆಳೆಗಾರರಿಗೂ ಲಾಭವಾಗುತ್ತದೆ ಇತರ ರೀತಿಯಲ್ಲಿ ಅಡಿಕೆಯನ್ನು ಉಪಯೋಗಿಸಲು ಗಲ್ಫ್ ದೇಶಗಳಲ್ಲಿ ಮಾರುಕಟ್ಟೆಯನ್ನು ಕಂಡು ಹಿಡಿಯುವುದಕ್ಕೆ ಸಾಧ್ಯವಾಗುತ್ತಿರಲಿಲ್ಲವೆ ? ಅಧಿಕವಾಗಿ ಉತ್ಪಾದನೆಯಾಗುವ ರೈತನಿಂದ ಉತ್ಪಾದನೆಯಾಗತಕ್ಕ ವಸ್ತುಗಳಿಗೆ ಅನುಕೂಲವಾಗುವಂತೆ ಕೈಗಾರಿಕೆಗಳನ್ನು ಬೆಳೆಸಿ ಹೊರಗಡೆ ಲಾಭ ಗಳಿಸುವುದಕ್ಕೆ ಏತಕ್ಕೆ ಪ್ರಯತ್ನ ಮಾಡಲಿಲ್ಲ ? ಅಧಿಕವಾಗಿ ಉತ್ಪನ್ನ ಮಾಡುವ ಬಗೆ ಹೇಗೆ ಎಂಬ ಬಗ್ಗೆ ವರದಿ ತರಿಸಬೇಕು. ಈ ಕೆಳಕಂಡ ಕೆಲಸಗಳ ಬಗ್ಗೆ ಕ್ರಮ ಕೈಗೊಳ್ಳಬೇಕು. Reduce cost of outlook; Invent new product base; Improve the quality of existing products ; Improve design and packing ; ಡಿಜೈನ್ಸ್ ಅಂಡ್ ಪ್ಯಾಕಿಂಗ್ ಬಗ್ಗೆ ಅಮೆರಿಕಾದಲ್ಲಿ ಸಂಶೋಧನೆ ನಡೆದಿದೆ. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ನಮ್ಮ ರಾಜ್ಯದಲ್ಲಿ ತಯಾರಾದ ಗಂಧದೆಣ್ಣೆ ಸಾಬೂನನ್ನು ರಷ್ಯಾದವರು ಕೊಂಡುಕೊಳ್ಳಬೇಕು ಎಂದು ಅಗ್ರಿಮೆಂಟ್ ಆಗಿತ್ತು. ಕೇರಳದಲ್ಲಿ ಕಮ್ಯೂನಿಸ್ಟ್ ಸರ್ಕಾರ ಬಂದಕೂಡಲೇ ನಮ್ಮನ್ನು ಬಿಟ್ಟು ಕೇರಳ ಸೋಪ್ ಕೊಂಡುಕೊಳ್ಳುತ್ತಿದ್ದಾರೆ. The reason given is that the packet is not conducive to the climate of the country. ಅದು ಕುಂಟು ನೆಪ. ಹೀಗಾಗಿ ನಮ್ಮಲ್ಲಿರತಕ್ಕ ಗಂಧದೆಣ್ಣೆ ಕಾರ್ಖಾನೆಗಳು ನಷ್ಟವನ್ನು ಅನುಭವಿಸುತ್ತಿವೆ. ಕೇರಳದಲ್ಲಿ ಗಂಧದ ಮರ ಇಲ್ಲದಿದ್ದರೂ ಹೊಸದಾಗಿ ಎರಡು ಗಂಧದೆಣ್ಣೆ ಫ್ಯಾಕ್ಟರಿಗೆ ಅಲ್ಲಿ ಲೈಸೆನ್ಸ್ ಕೊಟ್ಟಿದ್ದಾರೆ. ಅಲ್ಲಿ ಗಂಧದ ಮರಗಳನ್ನು ಯಾವ ರೀತಿ ಪಡೆಯುತ್ತಿದ್ದಾರೆ? ಐಯಪ್ಪನ ಭಕ್ತರು ಕಾಡಿನಲ್ಲಿರುವ ಗಂಧದ ಮರಗಳನ್ನು ಕಡಿದು ಹೊತ್ತುಕೊಂಡು ಹೋಗುತ್ತಿದ್ದಾರೆ. ಇದರಿಂದಾಗಿ ಅಲ್ಲಿ ಖಾಸಗಿ ಕಾರ್ಖಾನೆ

ಯವರು ಗಂಧದೆಣ್ಣೆ ಕಾರ್ಖಾನೆ ನಡೆಸುತ್ತಿದ್ದಾರೆ. ನಾವು ನಷ್ಟ ಅನುಭವಿಸುತ್ತಿದ್ದೇವೆ. ಆದ್ದರಿಂದ ಈ ಬಗ್ಗೆಯೂ ತೀವ್ರವಾಗಿ ಗಮನ ಹರಿಸಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ಕೈಗಾರಿಕೆಗಳ ಕಡೆಗೆ ಸಾಕಷ್ಟು ಗಮನ ಕೊಟ್ಟಿಲ್ಲ. ಅದರ ಅಭ್ಯುದಯದ ಕಡೆಗೆ ತೀವ್ರ ಗಮನ ಕೊಡಬೇಕೆಂಬ ಮಾತನ್ನು ಹೇಳುತ್ತೇನೆ.

ಇನ್ನು ಅಬಕಾರಿ ಬಗ್ಗೆ ಒಂದು ಮಾತನ್ನು ಹೇಳುತ್ತಿದ್ದೇನೆ. ಮೊನ್ನೆ ನಾನು ಉಚ್ಚ ನ್ಯಾಯಾಲಯಕ್ಕೆ ಹೋಗಿದ್ದೆ. ಅಲ್ಲಿನ ನ್ಯಾಯಾಧೀಶರು ಸರ್ಕಾರದ ಬಗ್ಗೆ ಅತ್ಯಂತ ವಿಷಾದವನ್ನು ವ್ಯಕ್ತಪಡಿಸಿದರು. ಹೇಗೆ ನಮ್ಮ ಸರ್ಕಾರ ನಷ್ಟ ಅನುಭವಿಸುವುದರಲ್ಲಿ ಪಾಲುಗಾರಿಕೆ ತೆಗೆದುಕೊಳ್ಳುತ್ತಿದೆಯೆಂದು ಹೇಳಿದರು. ಒಂದು ಕೇಸಿಗೆ ಅಡ್ವಕೇಟ್ ಜನರಲ್‌ರವರನ್ನು ಹತ್ತು ಸಾರಿ ಹೇಳಿ ಕಳುಹಿಸಿದರೂ ಬರಲಿಲ್ಲ. ಕೇಸಿಗೆ ಜೂನಿಯರ್ಸ್ ಬರುತ್ತಾರೆ, I am not incharge of that case ಎಂದು ಹೇಳಿ ಹೋಗುತ್ತಾರೆ. ಹೀಗಾದರೆ ಹೇಗೆ ಎಂದರು ? ೨೨-೪-೮೨ರಲ್ಲಿ ಕಾರ್ಕಳ ತಾಲ್ಲೂಕಿನಲ್ಲಿ ಸಾರಾಯಿ ಅಂಗಡಿ ಹರಾಜಾಯಿತು. ಇದು ೧೪,೪೨,೬೦೦ ರೂಪಾಯಿಗಳಿಗೆ ಹರಾಜಾಯಿತು. ಹರಾಜು ಆದಮೇಲೆ ಯಾರು ಇಲ್ಲಿ ಹೈಯೆಸ್ಟ್ ಬಿಡ್ಡರ್ ಇದ್ದರೋ ಅವರ ಪಾರ್ಟನರ್ ಬಂದು ರಿಟ್ ಹಾಕಿದರು. ರಿಟ್ ಹಾಕಿ ಸ್ಟೇ ತೆಗೆದುಕೊಂಡಿದ್ದಾರೆ. ಈ ಸ್ಟೇಯನ್ನು ರದ್ದುಪಡಿಸಲು ನಮ್ಮ ಸರ್ಕಾರವಾಗಲೀ ಸರ್ಕಾರದ ವಕೀಲರಾಗಲಿ ಪ್ರಯತ್ನ ಮಾಡಿಲ್ಲ. ಸರ್ಕಾರಕ್ಕೆ ಇದರಿಂದ ಬಹಳ ನಷ್ಟವಾಗುತ್ತಿದೆ ಎಂದು ಕಳೆದ ವಾರ ನ್ಯಾಯಾಧೀಶರು ವಿಷಾದದಿಂದ ಅಡ್ವಕೇಟ್ ಜನರಲ್‌ರವರು ಎಲ್ಲಿದ್ದರೂ ಕರೆದುಕೊಂಡು ಬನ್ನಿ ಎಂದರು. ಅವರು ಬಂದಮೇಲೆ ಸ್ಟೇ ವೆಕೇಟ್ ಮಾಡಿದರು. ಏತಕ್ಕೆ ಸ್ಟೇ ಕಂಟಿನ್ಯೂ ಆಗಿದೆಯೆಂದರೆ, ೨೨-೪-೮೨ರಿಂದಲೂ ಅವರಿಗೆ ಹಳೇ ರೇಟು ಏನಿತ್ತು ಹಿಂದೆ ಹರಾಜಾಗಿದ್ದ ೯ ಲಕ್ಷ ರೂಪಾಯಿ. ಅದೇ ರೇಟಿನಲ್ಲಿ ಅವರು ಅರ್ರ್ಯಾಕ್ ಷಾಪನ್ನು ನಡೆಸುತ್ತಿದ್ದಾರೆ. ಎಂದರೆ ನಮಗೆ ಒಂದು ತಿಂಗಳಿಗೆ ೬ ಲಕ್ಷ ರೂಪಾಯಿ ನಷ್ಟವಾಯಿತು ಈಗ ಜುಲೈ ಕೊನೆಯಲ್ಲಿ ಇದ್ದೇವೆ. ಈಗಾಗಲೇ ೧೨ ಲಕ್ಷ ರೂಪಾಯಿ ಹೋಗಿದೆ. ಹೀಗೆ ನಷ್ಟ ಉಂಟುಮಾಡುವುದರಲ್ಲಿ ಎಷ್ಟರಮಟ್ಟಿಗೆ ಸರ್ಕಾರ ಆದ್ಯ ಗಮನ ಕೊಟ್ಟಿದೆ ಎಂಬುದನ್ನು, ನಾನು ತಿಳಿಸಬಯಸುತ್ತೇನೆ. ಈಗ ಆ ಸ್ಟೇ ವೆಕೇಟ್ ಆಗಿದೆ. ಅದನ್ನು ಕನ್‌ಫರ್ಮ್ ಮಾಡಿದ್ದೀರಾ ? ಸುಮಾರು ೧೪ ಲಕ್ಷಕ್ಕೆ ಹರಾಜಾಗಿದೆ. ಇದನ್ನು ಕನ್‌ಫರ್ಮ್ ಮಾಡಬೇಕು. ಅವರು ಅದನ್ನು ಒಪ್ಪದಿದ್ದರೆ ನೀವು ತೆಗೆದುಕೊಳ್ಳಿ. ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಯಾರು ಹೈಯೆಸ್ಟ್ ಬಿಡ್ ಮಾಡಿದ್ದಾರೆ ಅವರು ಅದನ್ನು ತೆಗೆದುಕೊಳ್ಳುವುದಕ್ಕೆ ಇಷ್ಟ ಇಲ್ಲವೆಂದು ಹೇಳುತ್ತಿದ್ದಾರೆ. ಈ ಕಾರ್ಕಳ ತಾಲ್ಲೂಕು ಮಾನ್ಯ ಮೊಯಿಲಿಯವರ ಹತ್ತಿರದ ತಾಲ್ಲೂಕು ಎಂದು ಕಾಣುತ್ತದೆ. ಆದುದರಿಂದ, ಸರ್ಕಾರ ಇದರ ಬಗ್ಗೆ ತೀವ್ರ ಗಮನ ಕೊಡಬೇಕು.

ಇನ್ನು ಯೋಜನೆಗಳ ಬಗ್ಗೆ ನಾನು ಬಹಳ ವಿಷಾದದಿಂದ ಹೇಳಬೇಕಾಗುತ್ತದೆ. ನಮ್ಮ ಯೋಜನೆಗಳು they have become more superficial. ಅಂತರಂಗವನ್ನು ಭೇದಿಸಿ, ಜನರ ಶಕ್ತಿಯನ್ನು ಉಪಯೋಗಿಸತಕ್ಕ ಯೋಜನೆಗಳನ್ನು ರೂಪಿಸುವುದರಲ್ಲಿ ನಾವು ಫಲಕಾರಿಯಾಗಿಲ್ಲ. ಈ ದೇಶವನ್ನು ಸಮೃದ್ಧಿಗೊಳಿಸುವುದಕ್ಕೆ 'ಕಾಡಾ' ಮಾಡಿದಿರಿ. ಅದರ ಪರಿಸ್ಥಿತಿ ಏನಾಗಿದೆ ? ಈ ಬಗ್ಗೆ ೧೯೮೦-೮೧ರ ವರದಿ ಬಂದಿದೆ. ಆ ಪ್ರಕಾರ ತಾವು ಕಾವೇರಿ ಬೇಸಿನ್‌ಗೆ ಮಂಜೂರು ಮಾಡಿರತಕ್ಕ ಹಣ ೯೨,೭೪ ೩೫೦ ರೂ. ಅದರಲ್ಲಿ ಖರ್ಚಾಗದೇ ಉಳಿದಿರತಕ್ಕಂತಹ ಹಣ ೧೬,೧೧,೯೫-೨೮ ರೂಪಾಯಿಗಳು. ಇದು ಸಾಮಾನ್ಯ ಜನರ ಅಭ್ಯುದಯಕ್ಕಾಗಿ ಇರತಕ್ಕ ಹಣ. ಇದರಲ್ಲಿ ೧೬ ಲಕ್ಷ ರೂಪಾಯಿ ಉಳಿದಿದೆ. ಇದು ಉಳಿದಿರುವುದು ಎಲ್ಲಿ ? ವಿ.ಸಿ. ಫರ್ಮ್‌ನಲ್ಲಿ ೧ ಲಕ್ಷ ರೂಪಾಯಿ ಕಬಿನಿ ಸೂಪರಿಂಟೆಂಡಿಂಗ್ ಎಂಜಿನಿಯರ್ ಕಚೇರಿಯಲ್ಲಿ ೩ ಲಕ್ಷ ರೂಪಾಯಿಗಳು. ಗೊರೂರು ಅಣೆಕಟ್ಟಿನ ಬಗ್ಗೆ ೪.೧೩ ಲಕ್ಷ ರೂಪಾಯಿ. ಚೆನ್ನರಾಯಪಟ್ಟಣದಲ್ಲಿ ೬.೭೮ ಲಕ್ಷ ರೂಪಾಯಿ. ಹೀಗೆ ಉಳಿಸಿದ್ದಾರೆ. ಈ ೯೨ ಲಕ್ಷ ರೂಪಾಯಿಯನ್ನು ಖರ್ಚು ಮಾಡುವುದಕ್ಕೆ ೬ ಲಕ್ಷ ೫೯ ಸಾವಿರ ರೂಪಾಯಿ ಎಸ್ಟಾಬ್ಲಿಷ್‌ಮೆಂಟ್ ಖರ್ಚು ಆಗಿವೆ ಕೊಟ್ಟಿರುವ ಹಣವನ್ನು ರೈತರ ಅಭಿವೃದ್ಧಿಗೆ ಖರ್ಚು ಮಾಡುವುದಲ್ಲ. ಈ ಬಗ್ಗೆ ಅಪ್ಪರ್ ಕೃಷ್ಣಾಗೆ ಮಂಜೂರು ಆಗಿರತಕ್ಕ ಹಣ ೧೮೩.೪೩ ಲಕ್ಷ ರೂಪಾಯಿಗಳು. ಕೊನೆಗೆ ರಿಲೀಸ್ ಮಾಡಿದ ಹಣ ೧೨೧.೭೨ ಲಕ್ಷ ರೂಪಾಯಿ. ಇದರಲ್ಲಿ ಖರ್ಚಾಗಿರತಕ್ಕದ್ದು ೭೯.೧೨ ಲಕ್ಷ ರೂಪಾಯಿ. ಹಾಗೂ ಉಳಿದಿರತಕ್ಕದ್ದು ೪೨.೬೦ ಲಕ್ಷ ರೂಪಾಯಿಗಳು. ಈ ೭೯.೧೨ ಲಕ್ಷ ರೂಪಾಯಿ ಖರ್ಚು ಮಾಡುವುದಕ್ಕೆ ೧೫,೫೨,೬೭೦ ರೂಪಾಯಿ

ಎಸ್ಟ್ಯಾಬ್ಲಿಷ್‌ಮೆಂಟ್ ಖರ್ಚಾಗಿದೆ, ಇದಕ್ಕಿಂತಾ ಮಹತ್ವದ್ದೆಂದರೆ, ಭದ್ರಾ ಪ್ರಾಜೆಕ್ಟ್. ಇದರಲ್ಲಿ ಖರ್ಚಾಗದೇ ಉಳಿದಿರತಕ್ಕ ಹಣ ೧೨,೬೪,೩೩೬.೯೭ ರೂಪಾಯಿಗಳು. ೧೮ ಲಕ್ಷ ರೂಪಾಯಿ ಕೊಟ್ಟಿದ್ದೀರಿ. ೧೨ ಲಕ್ಷದ ೬೪ ಸಾವಿರ ರೂಪಾಯಿ ಖರ್ಚಾಗದೇ ಉಳಿದಿವೆ. ಅಲ್ಲಿಯು ಎಸ್ಟ್ಯಾಬ್ಲಿಷ್ ಮೆಂಟ್ ಖರ್ಚು ೩,೫೮,೩೪೯.೮೩ ರೂಪಾಯಿ. ೬ ಲಕ್ಷ ರೂಪಾಯಿ ಖರ್ಚು ಮಾಡಲು ೩ ಲಕ್ಷ ರೂಪಾಯಿ ಎಷ್ಟ್ಯಾಬ್ಲಿಷ್‌ಮೆಂಟ್ ಖರ್ಚು. ಇಲ್ಲಿ ೧೨ ಲಕ್ಷ ರೂಪಾಯಿ ಏತಕ್ಕೆ ಖರ್ಚು ಮಾಡಿಲ್ಲ ಎಂದರೆ. ಸರ್ಕಾರ ಕನ್ನಡಿಯಲ್ಲಿ ಗಂಟನ್ನು ತೋರಿಸುತ್ತದೆ. ೧೧-೩-೭೧ರಲ್ಲಿ ೧೨.೪೫ ಲಕ್ಷ ರೂಪಾಯಿಯನ್ನು ರಿಲೀಸ್ ಮಾಡಿದ್ದೀರಿ. ಏಕೆ ಹೀಗೆ ಮಾಡುತ್ತೀರಾ ? ೧೧-೩-೮೧ರಲ್ಲಿ ಏತಕ್ಕೆ ರಿಲೀಸ್ ಮಾಡಿದಿರಿ? ನಾವು ಕೊಟ್ಟೋ ಅಂದಂಗೆ ಆಗಬೇಕು, ನೀವು ಕೆಟ್ರಿ ಎಂದಂಗೂ ಆಗಬೇಕು. ತುಂಗಭದ್ರಾಕ್ಕೆ ತಾವು ಕೊಟ್ಟಿರತಕ್ಕದ್ದು ೮೮.೪೦ ಲಕ್ಷ ರೂಪಾಯಿಗಳು. ಹಾಗೂ ಖರ್ಚಾಗಿರತಕ್ಕ ೭೨,೨೯,೩೭೭ ರೂಪಾಯಿಗಳಾದರೆ, ಖರ್ಚಾಗದೇ ಉಳಿದಿರತಕ್ಕದ್ದು ೧೬.೧೦ ಲಕ್ಷ ರೂಪಾಯಿಗಳು. ಇಲ್ಲಿ ಆಗಿರತಕ್ಕ ಅಡ್ಮಿನಿಸ್ಟ್ರೇಟಿವ್ ಎಕ್ಸ್‌ಪೆಂಡೀಚರ್ ೧೩,೯೩,೯೮೦ ರೂಪಾಯಿಗಳು. ಇದು ನಿಮ್ಮ ವ್ಯವಸ್ಥೆ. ಮಲಪ್ರಭಾ ಹಾಗೂ ಘಟಪ್ರಭಾಗೆ ಕೊಟ್ಟಿರತಕ್ಕ ಹಣ ೧೩೪ ೪೪ ಲಕ್ಷಗಳಾದರೆ, ಅದರಲ್ಲಿ ಖರ್ಚಾಗಿರತಕ್ಕ ಹಣ ೮೪.೯೮ ಲಕ್ಷ ರೂಪಾಯಿಗಳು. ಮತ್ತು ಖರ್ಚಾಗದೇ ಉಳಿದಿರ ತಕ್ಕದ್ದು ೪೯.೪೫ ಲಕ್ಷ ರೂಪಾಯಿಗಳು. ಇಲ್ಲಿನ ಎಸ್ಟ್ಯಾಬ್ಲಿಷ್‌ಮೆಂಟ್ ಖರ್ಚು ೬.೮೮ ಲಕ್ಷ ರೂಪಾಯಿಗಳು. ಇಷ್ಟರವಟ್ಟಿಗೆ ನಾವು ''ಕಾಡಾ'' ಯೋಜನೆಯಲ್ಲಿ ಗಮನ ವಹಿಸಿದ್ದೇವೆ. ಈ ಹಣ ಪೂರಾ ನಮ್ಮ ಸರ್ಕಾರದ್ದು ಅಲ್ಲ. ವಿಶ್ವ ಬ್ಯಾಂಕಿನಿಂದ ಬರುತ್ತದೆ. ಸಾಲ ಕೊಟ್ಟರೂ ಕೂಡಾ ಕೆಲಸ ಆಗದಿರುವುದಕ್ಕೆ ಕಾರಣ ಏನಿರಬಹುದು ? ಇದರ ಸಾಧಕ ಬಾಧಕಗಳನ್ನು ವಿಚಾರಣೆ ಮಾಡಿದ್ದೀರಾ ? ಇದರಿಂದ ರೈತರನ್ನು ಕಷ್ಟಕ್ಕೆ ಗುರಿ ಮಾಡುವುದಕ್ಕೆ ನೀವು ಕಾರಣರಾಗುತ್ತೀರೆಂಬು ದನ್ನು ಈ ಸಂದರ್ಭದಲ್ಲಿ ಗಮನಿಸಬೇಕಾಗಿದೆ. ತಾವು ೭ ಯೋಜನೆಗಳನ್ನು ತೋರಿಸಿದ್ದೀರಿ. ಕುರಿ ಕಾಯುವುದು, ಮೀನು ಅಭಿವೃದ್ಧಿ ಬಗ್ಗೆ ಹೇಳಿದ್ದೀರಿ. ಆದರೆ ಒಂದು ಮಾತು. ನಾನು ಇದುವರೆಗೆ ಕೆಲವು ಅಂಶಗಳನ್ನು ಹೇಳುತ್ತಾ ತಮ್ಮ ಫೈನಾನ್ಸಿಯಲ್ ಅಚೀವ್‌ಮೆಂಟ್ ಬಗ್ಗೆ ಹೇಳಿದೆ. ಆದರೆ ಫಿಸಿಕಲ್ ಅಚೀವ್‌ಮೆಂಟ್ ಬಗ್ಗೆ ಹೇಳಬೇಕೆಂದರೆ, ಆ ಬಗ್ಗೆ ನೀವು ಏನು ಪ್ರಗತಿ ಸಾಧಿಸಿದ್ದೀರಿ ? ನೀವೇನು ಯೋಜನೆಗಳನ್ನು ಹಾಕಿದ್ದೀರಿ, ಈ ಯೋಜನೆಗಳಿಂದ ಜನರನ್ನು ಉದ್ಯೋಗಶೀಲರನ್ನಾಗಿ ಮಾಡಬೇಕು. ಅವರ ಆರ್ಥಿಕ ಸ್ಥಿತಿಯನ್ನು ಉತ್ತಮ ಮಾಡಬೇಕೆಂದು ಈ ಯೋಜನೆಗಳನ್ನು ರೂಪಿ ಸಿದ್ದೀರಿ. ಈ ಯೋಜನೆಯಲ್ಲಿ ನಿರತನಾದ ವ್ಯಕ್ತಿ ಯಾವ ಪ್ರತಿಫಲವನ್ನು ಪಡೆಯುತ್ತಾನೆ ಆ ಪ್ರತಿ ಫಲ ಈ ವಿಧಾನ ಸೌಧದಲ್ಲಿ ಇರುವ ಒಬ್ಬ ಜವಾನನ ಪ್ರತಿಫಲಕ್ಕೆ ಸಮಾನವಾಗಬಲ್ಲದೇ ? ಒಬ್ಬ ಸಾಮಾನ್ಯ ನೌಕರ ಏನು ಪ್ರತಿಫಲ ಪಡೆಯುತ್ತಾನೋ ಅದಕ್ಕೆ ಸಮಾನವಾದ ಪ್ರತಿಫಲವನ್ನು ಪಡೆಯು ತಕ್ಕಂತಹ ಯೋಜನೆಗಳನ್ನು ತಯಾರು ಮಾಡಬೇಕು. ಇಂತಹ ಯೋಜನೆಗಳನ್ನು ಮಾಡದಿದ್ದರೆ ಜನ ಈ ಉದ್ಯಮದಲ್ಲಿ ದುಡಿಯುವುದು ಕಠಿಣ. ಇದರಿಂದ ನಾವು ಕೊಟ್ಟ ಹಣ ಈ ಉದ್ಯೋಗದಲ್ಲಿ ವಿನಿಯೋಗವಾಗುವುದು ಅಪರೂಪವಾಗುತ್ತದೆ. ಆದುದರಿಂದ ಇವತ್ತು ಯಾವ ಒಬ್ಬ ಮಿಲ್ ನೌಕರನಿಗೆ ಒಬ್ಬ ಸರ್ಕಾರಿ ನೌಕರನಿಗೆ ಏನು ಪ್ರತಿಫಲ ಸಿಗುತ್ತಿದೆಯೋ ಅಂತಹ ಸೌಕರ್ಯ, ಸೌಲಭ್ಯ ದೊರೆಯುವಂತಹ ಯೋಜನೆಗಳನ್ನು ರೂಪಿಸಬೇಕಾದ್ದು ಯೋಜನೆ ಇಲಾಖೆಯ ಕರ್ತವ್ಯ. ಇವತ್ತು ಕೂಡಾ ಮನುಷ್ಯನ ಅಂತರಂಗ ಹೊಕ್ಕು, ಆರ್ಥಿಕ ಅಭ್ಯುದಯದ ನಿಜವಾದ ಸಾಧನೆ ಬೆಳೆಸಬೇಕೆಂಬ ದೃಷ್ಟಿಕೋನ ಅವರಲ್ಲಿ ಇದ್ದಹಾಗೆ ಕಾಣುತ್ತಿಲ್ಲ. ಈ ದಿನ ನಮ್ಮಲ್ಲಿ ಇರತಕ್ಕ ವಸ್ತುಗಳನ್ನು ಬಳಕೆ ಮಾಡಿಕೊಂಡು, ರೈತರ ಮನೆ ಮುಂದೆ ಸಿಕ್ಕುವ ವಸ್ತುಗಳನ್ನು ಬಳಕೆ ಮಾಡಿಕೊಂಡು ಅವನನ್ನು ಕೈಗಾರಿಕೋದ್ಯಮಿಯನ್ನಾಗಿ ಮಾಡತಕ್ಕ ವ್ಯವಸ್ಥೆಯನ್ನು ನೀವು ಮಾಡಿಲ್ಲ. ಈ ಒಂದು ದಿಕ್ಕಿನಲ್ಲಿ ಆ ಯೋಜನೆಗಳು ನಡೆಯಬೇಕು ಇವತ್ತು ರೈತ ಉತ್ಪಾದನೆ ಮಾಡತಕ್ಕ ವಸ್ತುಗಳನ್ನು ಕೈಗಾರಿಕಾ ಕರಣಕ್ಕೆ ತಂದು, ಅವನಿಗೆ ಹೆಚ್ಚು ಲಾಭ ಸಿಕ್ಕುವ ರೀತಿಯಲ್ಲಿ ನಾವು ಮಾಡಬೇಕಾಗಿದೆ ಈ ದಿನ ಕಾಟನ್ ಬೆಳೆಯುತ್ತಿದ್ದಾರೆ ಈ ಕಾಟನ್‌ನ್ನು ಜಿನ್ನಿಂಗ್ ಫ್ಯಾಕ್ಟರಿಗೆ ಅಥವಾ ಟೆಕ್ಸ್‌ಟೈಲ್ ಮಿಲ್ಲಿಗೆ ಕೊಟ್ಟರೆ, ಅಲ್ಲಿ ಲಾಭ ಬರಲಿ ಇಲ್ಲದಿರಲಿ ಅಲ್ಲಿ ಕೆಲಸ ಮಾಡತಕ್ಕವರಿಗೆ ನಿರ್ದಿಷ್ಟವಾದ ಬೋನಸ್ ಕೊಡುತ್ತೀರಿ. ಆಯಿಲ್ ಸೀಡ್ಸ್‌ನಲ್ಲಿ ಕೊಡುತ್ತೀರಿ. ರೇಷ್ಮೆ ಫ್ಯಾಕ್ಟರಿಯಲ್ಲಿ ಕೊಡುತ್ತೀರಿ. ಆದರೆ ರೇಷ್ಮೆ ಬೆಳೆಯತಕ್ಕ ರೈತರಿಗೆ ಯಾಕೆ ಬೋನಸ್ ಕೊಡುವುದಿಲ್ಲ ? ಕಾಟನ್ ಬೆಳೆಯುವವನಿಗೆ ಏಕೆ ಬೋನಸ್ ಕೊಡುವುದಿಲ್ಲ ? ಇದನ್ನು ಕೈಗಾರಿಕೋದ್ಯಮಕ್ಕೆ ಬಳಸುತ್ತೀರಿ, ಆತನಿಂದ ರಾ ಮೆಟೀರಿ ಯಲ್ ಪಡೆಯುತ್ತೀರಿ, ಆದರೆ ಆತನಿಗೆ ಬೋನಸ್ ಕೊಡತಕ್ಕ ಕಾರ್ಯಕ್ರಮವನ್ನು ರೂಪಿಸಿಲ್ಲ. ಎಲ್ಲಿ

ಸಾಧ್ಯವಾಗುತ್ತದೆ ಎಂದು ತಾವು ತಮ್ಮ ಉತ್ತರದಲ್ಲಿ ಹೇಳುತ್ತೀರಿ. ೨ನೇ ಮಹಾಯುದ್ಧ ಆಗುವ ಸಮಯದಲ್ಲಿ ರೇಷ್ಮೆ ಬೆಳೆಗಾರರಿಗೆ ಬೋನಸ್ ಕೊಟ್ಟರು. ಈಗ ನೀವು ಏಕೆ ಕೊಡಬಾರದು ? ಈ ವ್ಯವಸ್ಥೆಯನ್ನು ಏಕೆ ಮಾಡಿಲ್ಲ. ಹೀಗೆ ಮಾಡಿದರೆ ಸರಿಯಾದ ಬೆಲೆ ಅವರಿಗೆ ಸಿಗುವುದಕ್ಕೆ ಅನುಕೂಲ ಆಗುತ್ತದೆ ಈ ಒಂದು ವ್ಯವಸ್ಥೆಯನ್ನು ಮಾಡಬೇಕಾಗಿದೆ. ಈ ದೃಷ್ಟಿಯಿಂದ ಕಳೆದ ವರ್ಷ ಮಾತನಾಡಿದಾಗ ಶ್ರೀ ದೇವೇಗೌಡರು ಕೈಗಾರಿಕೆಗಳ ಬಗ್ಗೆ, ಅಲ್ಲಿನ ಸ್ಥಿತಿಗತಿಗಳ ಬಗ್ಗೆ ಒಂದು ಶ್ವೇತ ಪತ್ರವನ್ನು ಪ್ರಕಟ ಮಾಡಬೇಕೆಂದು ಹೇಳಿದರು. ಈ ಬಗ್ಗೆ ನಮಗೆ ಸಮಗ್ರ ಚಿತ್ರ ಗೊತ್ತಾಗ ಬೇಕಾಗಿದೆ, ನೀವು ಇದರಲ್ಲಿ ಅನೇಕ ಯೋಜನೆಗಳನ್ನು ಮಾಡುತ್ತಿದ್ದೀರಿ. ಈ "ಕಾಡಾ" ಯೋಜನೆ ಏನು ಎಂಬುದು ಆ ಏರಿಯಾದ ಜನರಿಗೇ ಗೊತ್ತಿರುವುದಿಲ್ಲ, ನೀವು ಏನು ಯೋಜನೆ ಗಳನ್ನು ಮಾಡಿದ್ದೀರಿ, ಅವು ನಮಗಾಗಿ ಇವೆ, ನಾವು ಭಾಗವಹಿಸಬೇಕು ಎನ್ನುವ ಪ್ರವೃತ್ತಿಯನ್ನು ಅವರಲ್ಲಿ ಬೆಳೆಸುವ ರೀತಿ ನೀತಿಗಳು ಅದರಲ್ಲಿ ಇಲ್ಲ. ನೀವು ಎಷ್ಟು ಯೋಜನೆಗಳನ್ನು ಮಾಡುತ್ತೀರಿ ಎಂಬುದು ಜನರಿಗೆ ಗೊತ್ತಿರುವುದೇ ಇಲ್ಲ.

೧೧. ಎ.ಎಂ.,

ಯೋಜನೆಗಳು ಜನಕ್ಕೆ ಗೊತ್ತಿರುವುದಿಲ್ಲ. ಇದರ ಬಗ್ಗೆ ತೀವ್ರ ಗಮನಕೊಟ್ಟು ಯೋಜನೆಗಳ ಬಗ್ಗೆ ತೀವ್ರ ಪ್ರಚಾರವಾಗಬೇಕು, ಪಾರ್ಥೇನಿಯಂ ಕೀಳುವುದಕ್ಕೆ ಮಾಡಿದಿರಲ್ಲ ಹಾಗೆ ಆಗಬಾರದು. ಎರಡು ಲಕ್ಷ ರೂಪಾಯಿ ಖರ್ಚ ಮಾಡಿದರೂ ಪಾರ್ಥೇನಿಯಂ ಗಿಡಗಳು ಹೋಗಲಿಲ್ಲ.

ಕೊನೆಯದಾಗಿ ವಕ್ಫ ಬಗ್ಗೆ ಒಂದು ಮಾತು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ವಕ್ಫ ಮಂಡಲಿಗೆ ಸರ್ಕಾರದವರು ದುಡ್ಡು ಕೊಡುತ್ತಿದ್ದಾರೆ, ಕೊಟ್ಟಂಥ ಹಣ ಏನಾಗುತ್ತದೆ, ಮೈಸೂರು ಮತ್ತು ಬೆಂಗಳೂರು ನಗರದಲ್ಲಿ ವಾಸ ಮಾಡತಕ್ಕ ಮುಸ್ಲೀಂರು ವಾಸದ ಮನೆಗಳಿಲ್ಲದೆ, ಜಕಾಯಿ ಪೆಟ್ಟಿಗೆ ಗಳನ್ನು ಜೋಡಿಸಿಕೊಂಡು, ಪಾರ್ಟಿಷನ್ ಮಾಡಿಕೊಂಡು ವಾಸ ಮಾಡುತ್ತಿರುವುದನ್ನು ನೋಡುತ್ತಿ ದ್ದೇವೆ. ಅವರು ವಾಸ ಮಾಡುವುದಕ್ಕೆ ಜಾಗಗಳಿಲ್ಲ. ಬೇಕಾದಷ್ಟು ವಕ್ಫ್ ಪ್ರಾಪರ್ಟಿ ರಾಜ್ಯದಲ್ಲಿ ಇದೆ. ಇರತಕ್ಕಂಥ ಫಂಡಿನಿಂದ ಮನೆಗಳನ್ನು ಕಟ್ಟಿಸಿಕೊಟ್ಟು, ಅವರಿಗೆ ಮಳಿಗೆಗಳನ್ನು ಕಟ್ಟಿಸಿಕೊಡುವ ವ್ಯವಸ್ಥೆ ಮಾಡಿದರೆ ಅನುಕೂಲವಾಗುತ್ತದೆ. ನಿರುಪಯುಕ್ತವಾಗಿರುವ ವಕ್ಫ್ ಪ್ರಾಪರ್ಟಿಯನ್ನು ಉಪಯೋಗಿಸಿಕೊಂಡು ಮನೆಗಳನ್ನು ಮತ್ತು ಮಳಿಗೆಗಳನ್ನು ಕಟ್ಟಿ ಮುಸಲ್ಮಾನರಿಗೆ ಕೊಡಿ. ಹುಡ್ಕೋ ಮತ್ತು ಜೀವವಿಮಾ ನಿಗಮದಿಂದಲಾದರೂ ಸಾಲವನ್ನು ತಂದು ಮಳಿಗೆಗಳನ್ನು ಕಟ್ಟಿಸಿಕೊಟ್ಟು ಅವರು ಉದ್ಯಮಶೀಲರಾಗುವುದಕ್ಕೆ ಅವಕಾಶ ಮಾಡಿಕೊಡಿ. ಈ ವಿಚಾರದಲ್ಲಿ ಆಕ್ಷೇಪಣೆ ಕೂಡ ಮಾಡ ಬಹುದು. ಸ್ಮಶಾನಗಳು ಇವೆ, ನೀವು ಬಳಕೆ ಮಾಡಬಹುದೆಂದು ಹೇಳಬಹುದು. ನಾನು ಇದರ ಬಗ್ಗೆ ಆಲೋಚನೆ ಮಾಡಿದ್ದೇನೆ. ಉಸ್ಮಾನಿಯಾ ವಿಶ್ವವಿದ್ಯಾನಿಲಯದ ಅಧ್ಯಾಪಕರೊಬ್ಬರು, ಅಡ್ಮಿನಿಸ್ಟ್ರೇಷನ್ ಆಫ್ ವಕ್ಫ್ ಪ್ರಾಪರ್ಟಿ ಇನ್ ಇಂಡಿಯಾ ಎನ್ನುವ ಪುಸ್ತಕ ಬರೆದು ಅದರಲ್ಲಿ ಖುರಾನ್ ಉದಹರಿಸಿ ಸದಾಕಾಲಕ್ಕೂ ನೂರಾರು ವರ್ಷಗಳ ಕಾಲ ಸ್ಮಶಾನಗಳನ್ನು ಖಾಲಿ ಬಿಡುವುದಕ್ಕೆ ಬದಲು ಉಪಯುಕ್ತ ವಾದ ಕೆಲಸಗಳಿಗೆ ಬಳಸಿಕೊಳ್ಳುವುದಕ್ಕೆ ಖುರಾನಿನಲ್ಲಿ ಅವಕಾಶ ಇದೆ ಎನ್ನುವ ಅಂಶವನ್ನು ಪಿ.ಹೆಚ್.ಡಿ ಥೀಸಿಸ್ ಬರೆದು ತಿಳಿಸಿದ್ದಾರೆ, ವ್ಯರ್ಥವಾಗಿ ಜಾಗವನ್ನು ಬಿಡುವುದರ ಬದಲು ಒಳ್ಳೆಯ ಕೆಲಸಗಳಿಗಾಗಿ ಉಪಯೋಗಿಸಿಕೊಳ್ಳುವುದು ಒಳ್ಳೆಯದು. ಮಹಾನುಭಾವರ, ದೊಡ್ಡ ದೊಡ್ಡ ವ್ಯಕ್ತಿಗಳ, ಪೂಜ್ಯ ವ್ಯಕ್ತಿಗಳ ಗೋರಿಗಳನ್ನು ಉಳಿಸಿಕೊಂಡು ಉಳಿದಂಥ ಜಾಗಗಳನ್ನು ಖಾಲಿ ಇಟ್ಟು ಅಲ್ಲಿ ದನಗಳು, ಕತ್ತೆಗಳು ಇರುವುದನ್ನು ತಪ್ಪಿಸಿ, ಹಣಕಾಸಿನ ಸಂಸ್ಥೆಗಳಿಂದ ಸಾಲ ಪಡೆದು, ಉತ್ತಮವಾದಂಥ ಕೈಗಾರಿಕಾ ಕೇಂದ್ರಗಳನ್ನು ಮಾಡುವುದಕ್ಕೆ ಸಾಧ್ಯವಿದೆ. ಇವುಗಳನ್ನು ಬಡ ಮುಸಲ್ಮಾನರಿಗೆ ಕೊಡು ವಂಥ ವ್ಯವಸ್ಥೆ ಮಾಡಬೇಕೆಂದು ಪ್ರತಿಯೊಬ್ಬ ವಕ್ಫ್ ಮಂತ್ರಿಗಳಿಗೂ ಪತ್ರ ಬರೆದಿದ್ದೇನೆ, ಯಾರೂ ಕೂಡ ಅದರ ಕಡೆ ಗಮನ ಕೊಡಲಿಲ್ಲ, ಈ ವಿಚಾರದಲ್ಲಿ ಯೋಚನೆಯನ್ನೂ ಮಾಡಲಿಲ್ಲ. ಇಂಥ ಒಂದು ಯೋಜನೆಯನ್ನು ಶೀಘ್ರವಾಗಿ ಕೈಗೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಕೈಗಾರಿಕಾ ಘಟಕಗಳ ಬಗ್ಗೆ ಮತ್ತು ಅವುಗಳ ಪ್ರಗತಿಯ ಬಗ್ಗೆ ತೀವ್ರವಾದ ಗಮನ ಕೊಡಬೇಕೆಂದು ಹೇಳುತ್ತೇನೆ, ಕಾರಣ ನಮ್ಮ ದೇಶದಲ್ಲಿ ವ್ಯವಸಾಯ ಕ್ಷೇತ್ರವನ್ನು ಬಿಟ್ಟರೆ, ಹೆಚ್ಚು ಜನರಿಗೆ ಜೀವನದ ಅವಲಂಭನೆ ಇರುವುದು ಕೈಗಾರಿಕಾ ಕ್ಷೇತ್ರದಲ್ಲಿ ಆರ್ಥಿಕ ಅಭಿವೃದ್ಧಿಯ ಸಾಧನೆಯ ಕ್ಷೇತ್ರ ಕೈಗಾರಿಕಾ ಕ್ಷೇತ್ರ. ಈ ವಿಚಾರದಲ್ಲಿ ತಜ್ಞರ ಸಮಿತಿಯನ್ನು ನೇಮಕ ಮಾಡಿ, ನಮಗೆ ಕೈಗಾರಿಕೆ

ಗಳಲ್ಲಿ ಆಗುತ್ತಿರುವ ನಷ್ಟಕ್ಕೆ ಕಾರಣವೇನು? ಅದನ್ನು ಸರಿಪಡಿಸುವುದಕ್ಕೆ ಇರತಕ್ಕ ಮಾರ್ಗಗಳು ಏನು? ಇವತ್ತು ಅನಾವಶ್ಯಕವಾಗಿ ಯಾವ ಯಾವ ವಸ್ತುಗಳನ್ನು ಕೊಂಡಿದ್ದೇವೆ. ಅನಾವಶ್ಯಕವಾಗಿ ನೌಕರರನ್ನು ಸೇರಿಸಿದ್ದೇವೆ. ಇದಕ್ಕೆಲ್ಲಾ ಇರತಕ್ಕ ಮೂಲಭೂತ ಕಾರಣಗಳೇನು ಎಂಬುದನ್ನು ಕಂಡು ಹಿಡಿದು ಸೂಕ್ತ ವ್ಯವಸ್ಥೆ ಮಾಡಬೇಕೆಂದು ಹೇಳಿ. ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಆತ್ಮಾನಂದ (ಮಂಡ್ಯ).– ಮಾನ್ಯ ಅಧ್ಯಕ್ಷರೇ, ಸದನದ ಮುಂದೆ ಕೈಗಾರಿಕಾ ಮತ್ತು ಸಣ್ಣ ಕೈಗಾರಿಕಾ ಹಾಗೂ ರೇಷ್ಮೆ ಇಲಾಖೆಯ ಬೇಡಿಕೆಗಳಿಗೆ ಸಂಬಂಧಪಟ್ಟಂತೆ ಒಂದೆರಡು ಅಂಶಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ರಾಜ್ಯದ ಕೈಗಾರಿಕಾ ಬೆಳವಣಿಗೆ ಶೀಘ್ರಗತಿಯಲ್ಲಿ ಆಗಬೇಕೆಂಬ ಬಗ್ಗೆ ಅನೇಕ ಹಿರಿಯ ಸದಸ್ಯರುಗಳು ಪ್ರಸ್ತಾಪ ಮಾಡಿದ್ದಾರೆ. ನಾನು ಕೂಡ ಅವರ ಜೊತೆಗೆ ಧ್ವನಿಗೂಡಿಸುತ್ತಾ ಸರ್ಕಾರದವರು ೬೩ ತಾಲ್ಲೂಕುಗಳನ್ನು ಕೈಗಾರಿಕೆಗಳಲ್ಲಿ ಹಿಂದುಳಿದ ತಾಲ್ಲೂಕುಗಳೆಂದು ಏನು ಘೋಷಣೆ ಮಾಡಿದ್ದೀರಿ. ಆ ತಾಲ್ಲೂಕುಗಳಲ್ಲಿ ಹೇಳಿಕೊಳ್ಳುವಂತಹ ಮಟ್ಟದಲ್ಲಿ ಉದ್ಯಮಗಳು ಪ್ರಾರಂಭವಾಗಿಲ್ಲ ಅಂದರೆ ತಪ್ಪಾಗಲಾರದು. ಕೈಗಾರಿಕಾ ಇಲಾಖೆಯ ವತಿಯಿಂದ ಹಿಂದುಳಿದ ತಾಲ್ಲೂಕುಗಳಲ್ಲಿ ವ್ಯಾಪಕವಾಗಿ ಕೈಗಾರಿಕೆಗಳ ಬೆಳವಣಿಗೆಯನ್ನು ಮಾಡಲು ಇರತಕ್ಕ ಮಾರ್ಗಗಳನ್ನು ಕಂಡುಹಿಡಿಯಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಇವೊತ್ತು ಪರಿಸ್ಥಿತಿ ಏನಾಗಿದೆ ಅಂದರೆ, ಕೈಗಾರಿಕೆಗಳು ಬೆಂಗಳೂರು ನಗರದಲ್ಲಿಯೇ ಕೇಂದ್ರೀಕೃತವಾಗಿವೆ. ಉದ್ಯಮಗಳನ್ನು ಸ್ಥಾಪನೆ ಮಾಡುವುದಕ್ಕೆ ಬರುವವರು ಕೂಡ ಬೆಂಗಳೂರನ್ನೇ ಆರಿಸಿಕೊಳ್ಳುತ್ತಾರೆ. ಬೇರೆ ಕಡೆ ಹೋಗುವುದೇ ಇಲ್ಲ. ಇತ್ತೀಚಿನ ವರ್ಷಗಳಲ್ಲಿ ಮೈಸೂರು ನಗರ ಕೈಗಾರಿಕೋದ್ಯಮಿಗಳನ್ನು ಆಕರ್ಷಿಸುತ್ತಿವೆ. ಬೇರೆ ತಾಲ್ಲೂಕುಗಳಿಗೂ ಕೈಗಾರಿಕೆಗಳನ್ನು ವಿಸ್ತರಿಸುವಂಥ ವ್ಯವಸ್ಥೆಯನ್ನು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ರಾಜ್ಯದಲ್ಲಿ ಕೈಗಾರಿಕೆಗಳನ್ನು ಪ್ರಾರಂಭ ಮಾಡುವಂಥ ಉದ್ಯಮಿಗಳಿಗೆ ಹಣಕಾಸಿನ ರಿಯಾಯಿತಿ, ಮತ್ತಿತರ ಸೌಲಭ್ಯಗಳನ್ನು ಕೊಡುವುದಾಗಿ ಸರ್ಕಾರ ಘೋಷಿಸಿದೆ. ಆದರೆ, ಆ ಒಂದು ಸೌಲಭ್ಯವನ್ನು ಪಡೆಯಬೇಕಾದರೆ, ಉದ್ಯಮಿಗಳಿಗೆ ಬಹಳ ಕಷ್ಟವಿದೆ. ಹತ್ತು ಪರ್ಸೆಂಟ್ ಸಹಾಯಧನವನ್ನು ಹಿಂದುಳಿದ ತಾಲ್ಲೂಕುಗಳಿಗೆ ಏನು ಕೊಡುತ್ತೀರೋ ಅದನ್ನು ಪಡೆಯಬೇಕಾದರೆ ಬೆಂಗಳೂರು ನಗರಕ್ಕೆ ಸುಮಾರು ಸಾರಿ ಓಡಾಡಬೇಕಾಗುತ್ತದೆ. ಸ್ಥಳೀಯವಾಗಿರತಕ್ಕ ಅಸಿಸ್ಟೆಂಟ್ ಡೈರೆಕ್ಟರ್‌ರವರ ಕಚೇರಿಯಲ್ಲಿ ಬಹಳಷ್ಟು ತೊಂದರೆ ಕೊಡುತ್ತಿದ್ದಾರೆಂದು ಕೇಳಿದ್ದೇನೆ. ಇದನ್ನು ನಿವಾರಿಸುವುದಕ್ಕೆ ತಾವು ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಹಿರಿಯ ಸದಸ್ಯರಾದಂಥ ಮಾನ್ಯ ದೇವೇಗೌಡರು ಹೇಳಿದಹಾಗೆ, ಒಂದೇ ಒಂದು ಸಂಸ್ಥೆಯ ಮೂಲಕ ಉದ್ದಿಮೆದಾರರಿಗೆ ಸಾಲ ಸೌಲಭ್ಯ ವಿದ್ಯುಚ್ಛಕ್ತಿ, ನೀರು ಮುಂತಾದ ಸವಲತ್ತುಗಳನ್ನು ಒದಗಿಸಿ ಕೊಡುವಂಥ ವ್ಯವಸ್ಥೆಯನ್ನು ಮಾಡಿ, ಅದರ ಮೇಲ್ವಿಚಾರಣೆಗೆ ಹಿರಿಯ ಅಧಿಕಾರಿಗಳನ್ನು ಇಟ್ಟು ಉದ್ಯಮಗಳನ್ನು ಸ್ಥಾಪನೆ ಮಾಡುವವರಿಗೆ ಪ್ರೋತ್ಸಾಹ ಕೊಡುವುದು ಒಳ್ಳೆಯದೆಂದು ಹೇಳುತ್ತೇನೆ. ಇವತ್ತು ಉದ್ಯಮಗಳನ್ನು ಸ್ಥಾಪನೆ ಮಾಡಬೇಕೆಂದು ಹೊರಟರೆ, ಹಣಕಾಸಿನ ಸಂಸ್ಥೆಗೆ ಓಡಾಡುವುದರಲ್ಲಿಯೇ ಬೇಜಾರಾಗುತ್ತದೆ. ಇದನ್ನು ನಿವಾರಿಸಬೇಕಾದರೆ ಒಂದೇ ಏಜನ್ಸಿಯ ಮೂಲಕ ವ್ಯವಸ್ಥೆ ಮಾಡಿಸುವುದು ಒಳ್ಳೆಯದು. ಅನೇಕ ಜಿಲ್ಲೆಗಳಲ್ಲಿ ಜಿಲ್ಲಾ ಕೇಂದ್ರಗಳು ಪ್ರಾರಂಭವಾಗಿದ್ದರೂ ನಮ್ಮ ಮಂಡ್ಯ ಜಿಲ್ಲೆಯಲ್ಲಿ ಜಿಲ್ಲಾ ಕೈಗಾರಿಕಾ ಕೇಂದ್ರ ಇದುವರೆವಿಗೂ ಪ್ರಾರಂಭವಾಗಿಲ್ಲ. ಮಂಡ್ಯ ಜಿಲ್ಲೆ ವ್ಯವಸಾಯವನ್ನೇ ನಂಬಿಕೊಂಡಿರತಕ್ಕಂಥ ಜಿಲ್ಲೆ. ಇವತ್ತು ವ್ಯವಸಾಯದ ಉಪಕರಣಗಳ ಬೆಲೆ ಮತ್ತು ಉತ್ಪನ್ನಗಳ ಬೆಲೆ ಜಾಸ್ತಿಯಾಗಿದೆ. ಹಿಂದೆ ಪ್ರಾರಂಭವಾಗಿರುವಂಥ ೨-೩ ಕಾರ್ಖಾನೆಗಳಲ್ಲಿ ಉದ್ಯೋಗಾವಕಾಶಗಳು ಜಾಸ್ತಿ ಇಲ್ಲ. ಇತ್ತೀಚೆಗೆ ಯಾವುದೇ ಒಂದು ಹೊಸ ಕೈಗಾರಿಕೆ ನಮ್ಮ ಜಿಲ್ಲೆಯಲ್ಲಿ ಬಂದಿಲ್ಲ. ನಮ್ಮ ಜಿಲ್ಲೆಯಲ್ಲಿ ಪ್ರಾರಂಭ ಮಾಡತಕ್ಕ ಕೈಗಾರಿಕೆಗಳಲ್ಲಿ ನಮ್ಮ ಜಿಲ್ಲೆಯವರಿಗೆ ಆದ್ಯತೆ ಕೊಡುವಂಥ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಅನ್ಸಿಲರಿ ಇಂಡಿಸ್ಟ್ರೀಸ್‌ಗಳನ್ನು ಪ್ರಾರಂಭ ಮಾಡುವಂಥ ಉದ್ಯಮಿಗಳಿಗೆ ಟೆಕ್ನಿಕಲ್ ಗೈಡೆನ್ಸ್ ಕೊಡುವ ವ್ಯವಸ್ಥೆ ಮಾಡಬೇಕು. ಮಂಡ್ಯದಲ್ಲಿ ಪ್ರಾರಂಭ ಮಾಡುವಂಥ ಉದ್ಯಮಿಗಳಿಗೆ ಸರಿಯಾದ ಮಾರ್ಗದರ್ಶನ ಸಿಗುತ್ತಿಲ್ಲ. ಅಸಿಸ್ಟೆಂಟ್ ಡೈರೆಕ್ಟರ್‌ರಿಂದಲೂ ಸರಿಯಾದ ಮಾರ್ಗದರ್ಶನ ಸಿಗುತ್ತಿಲ್ಲ, ಯಾವರೀತಿಯ ಕೈಗಾರಿಕೆಗಳನ್ನು ಕೈಗಾರಿಕೆಗಳನ್ನು ಮಾಡಬೇಕೆಂಬುದೇ ಗೊತ್ತಿರುವುದಿಲ್ಲ. ಈ ದಿಸೆಯಲ್ಲಿ ವ್ಯಾಪಕವಾಗಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ಹೇಳುತ್ತೇನೆ. ಮಂಡ್ಯ ತಾಲ್ಲೂಕಿನಲ್ಲಿ ಸುಮಾರು ೧ . ವರ್ಷಗಳ ಹಿಂದೆ ಮೈಸೂರು ಸಕ್ಕರೆ ಕಂಪನಿ ಪ್ರಾರಂಭವಾಗಿ, ಇಂದು ಒಂದು ಹಂತಕ್ಕೆ ಬಂದಿದೆ. ಇದರ

ವಿಸ್ತರಣ ಸಾಮರ್ಥ್ಯದ ಬಗ್ಗೆ ಪ್ರಶ್ನೆ ಕೇಳಿದ್ದೆ ೫೬೬ ಲಕ್ಷ ರೂಪಾಯಿಗಳಾಗುತ್ತದೆಂದು ಸನ್ಮಾನ್ಯ ಮುಖ್ಯಮಂತ್ರಿಗಳು ತಿಳಿಸಿದ್ದಾರೆ.

ಈಗ ವಿಸ್ತೀರ್ಣ ಕಾರ್ಯ ಆಗಿದೆ. ಆದರೆ ಒಟ್ಟು ಫಲಿತಾಂಶ ಏನು ಅಂದರೆ ಅದು ಅಷ್ಟು ಹೇಳಿಕೊಳ್ಳುವಂಥ ನಿರೀಕ್ಷಿಸಿದ ಮಟ್ಟದಲ್ಲಿ ಫಲ ಕೊಟ್ಟಿಲ್ಲ. ಒಂದು ಮಿಲ್ಲಿನ ರೀಹೆಬಿಲಿಟೇಷನ್ ಪ್ರೋಗ್ರಾಮ್ ಒಂದು ಕೋಟಿ ರೂಪಾಯಿ ವೆಚ್ಚದಲ್ಲಿ ತೆಗೆದುಕೊಂಡು ಅದನ್ನು ಮಾಡಿ ಮುಗಿಸಿದ್ದಾರೆ. ಮೈಸೂರು ಶುಗರ್ ಕಂಪನಿಯಲ್ಲಿ ನಿರೀಕ್ಷಿಸಿದ ಮಟ್ಟದಲ್ಲಿ ಫಲ ಸಿಕ್ಕಿಲ್ಲ. ಇತ್ತೀಚೆಗೆ ಸರ್ಕಾರ ಈ ಕಬ್ಬಿನ ದರವನ್ನು ನಿಗದಿ ಮಾಡುವ ಸಂದರ್ಭದಲ್ಲಿ ಕಬ್ಬಿನ ಬೆಲೆಯನ್ನು ನಿಗದಿ ಮಾಡಬೇಕಾದರೆ ಆ ಒಂದು ರಿಕವರಿ ಆಧಾರದ ಮೇಲೆ ಫಿಕ್ಸ್ ಮಾಡಬೇಕೆಂದು ಹೇಳಿ ತೀರ್ಮಾನ ತೆಗೆದುಕೊಂಡಿದ್ದಾರೆ. ಅದಕ್ಕೆ ಹೋಲಿಸಿ ನೋಡಿದರೆ ನಮ್ಮ ಫ್ಯಾಕ್ಟರಿಯಲ್ಲಿ ಸುಮಾರು ನಾಲ್ಕೂವರೆ ಸಾವಿರ ಟನ್ ಕ್ರಷ್ ಆಗಬೇಕು ಅದು ಆಗಿಲ್ಲ. ಸುಮಾರು ಎರಡೂವರೆ ಸಾವಿರ ಟನ್ ಹರಿಯುತ್ತಿದೆ ಎಂದು ತಿಳಿದುಕೊಂಡಿದ್ದೇನೆ, ಈ ಒಂದು ಎಕ್ಸ್‌ಪ್ಯಾನ್‌ಷನ್ ಪ್ರೋಗ್ರಾಮ್ ಏನಿದೆ ಅದರ ಬಗ್ಗೆ ಒಂದು ತಜ್ಞರ ಸಮಿತಿ ಮಾಡಿ ಎನ್‌ಕ್ವಯಿರಿ ಮಾಡಬೇಕೆಂದು. ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ. ಹಿಂದೆ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಡುತ್ತಾ ತಾವು ನಮ್ಮ ಗಮನಕ್ಕೆ ತಂದರೆ ತಜ್ಞರ ಸಮಿತಿ ನೇಮಿಸೋಣ ಅಂಥ ಆಶ್ವಾಸನೆ ಕೊಟ್ಟಿದ್ದರು. ಇನ್ನು ಮೈಸೂರು ಅಸಿಟೇಟ್ ಕಂಪನಿ ಅದು ದಿನೇ ದಿನೇ ನಷ್ಟವಾಗುತ್ತಾ ಇದೆ. ಇದು ಲಾಭ ಮಾಡುವ ಒಂದು ಸೂಚನೆಯೂ ಕಾಣುತ್ತಿಲ್ಲ. ಈಗ ಅತೀ ಹೆಚ್ಚು ಜನ ಅಲ್ಲಿ ಕೆಲಸ ಮಾಡುತ್ತಿದ್ದಾರೆಂದು ವಾಲಂಟರಿ ರಿಟೈರ್‌ಮೆಂಟ್ ಮಾಡತಕ್ಕದ್ದು ಮ್ಯಾನೇಜ್‌ಮೆಂಟ್ ಕಡೆಯಿಂದ ನಡೆಯುತ್ತಿದೆ. ಈಗ ಅಲ್ಲಿ ಪರಿಸ್ಥಿತಿ ಏನಾಗಿದೆ ಎಂದರೆ ಒಂದು ವರ್ಷದಿಂದ ನಾಲ್ಕೈದು ಜನ ಅತ್ಯಂತ ಹೆಚ್ಚಿನ ಸಂಬಳವನ್ನು ಕೊಟ್ಟು ನೇಮಿಸಿಕೊಂಡಿದ್ದಾರೆ. ಅವರಿಗೆ ಅನೇಕ ವಿಧವಾದ ಸೌಲಭ್ಯಗಳನ್ನು ಕೊಟ್ಟಿದ್ದಾರೆ. ಅವರಿಗೆ ಸೌಲಭ್ಯಗಳನ್ನು ಕೊಡುವ ಬಗ್ಗೆ ನಾನು ಬೇಡ ಎಂದು ಹೇಳುವುದಿಲ್ಲ. ಅಲ್ಲಿಯ ಕ್ವಾಲಿಟಿ ಮತ್ತು ಪ್ರೊಡಕ್ಷನ್ ಕಡಿಮೆಯಾಗಿ, ಅಲ್ಲಿ ತಯಾರಾಗತಕ್ಕ ಪದಾರ್ಥಗಳಿಗೆ ಬೇಡಿಕೆ ಸಿಕ್ಕವೆ, ಆ ಒಂದು ಮೈಸೂರು ಅಸಿಟೇಟ್ ಕಂಪನಿ ಸರ್ಕಾರದ ಕೈಯಿಂದ ಜಾರಿ ಹೋಗಿ ಬೇರೆ ಯಾರೋ ನಡೆಸಬೇಕೆಂದು ಏರ್ಪಾಟು ಆಗುತ್ತಿದೆ. ಅಲ್ಲಿ ಇರತಕ್ಕಂಥ ಕಂಪನಿ ಸೆಕ್ರೆಟರಿಯನ್ನು ಇತ್ತೀಚೆಗೆ ನೇಮಕ ಮಾಡಿಕೊಂಡಿದ್ದಾರೆಂದು ಕೇಳಿದೆ, ಅನೇಕ ಜನ ಅಭ್ಯರ್ಥಿಗಳು ಆ ಸೆಕ್ರೆಟರಿ ಹುದ್ದೆಗೆ ಅರ್ಹರಾಗಿದ್ದರೂ ಕೂಡ ಅವರನ್ನು ತೆಗೆದುಕೊಳ್ಳದೆ ಅಲ್ಲಿ ಯಾರು ಅಕೌಂಟ್ಸ್ ಆಫೀಸರ್ ಆಗಿ ಕೆಲಸ ಮಾಡುತ್ತಿದ್ದರು. ಅವರಿಗೆ ಅನುಭವ ಇಲ್ಲದೇ ಇದ್ದರೂ ಅವರಿಗೆ ಕ್ವಾಲಿಫಿಕೇಷನ್ ಇಲ್ಲದೇ ಇದ್ದರೂ, ಅವರನ್ನು ನೇಮಕ ಮಾಡಿಕೊಂಡಿದ್ದಾರೆಂದು ಕೇಳಿದೆ. ಇದರ ಬಗ್ಗೆ ವಿಚಾರ ಮಾಡಬೇಕು. ಈ ಎರಡು ಕಂಪನಿಯ ಕೇಂದ್ರ ಕಚೇರಿಗಳು ಬೆಂಗಳೂರಿನಲ್ಲಿದೆ. ಮಾನ್ಯ ಮಂತ್ರಿಗಳು ಈ ಒಂದು ಕೇಂದ್ರ ಕಚೇರಿ ಮಂಡ್ಯ ನಗರಕ್ಕೆ ವರ್ಗ ಮಾಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದರು. ಅದರ ಬಗ್ಗೆಯೂ ಒಂದು ಸರ್ಕಾರದ ಆದೇಶ ಇದೆ ಎಂದು ಕೇಳಿದ್ದೇನೆ. ಎಲ್ಲಿ ಫ್ಯಾಕ್ಟರಿ ಇರುತ್ತದೆ, ಅಲ್ಲಿ ಕೇಂದ್ರ ಕಚೇರಿ ಇರಬೇಕೆಂಬ ಆದೇಶ ಏನಿದೆ ಆ ಕಡೆ ಫ್ಯಾಕ್ಟರಿ ಮ್ಯಾನೇಜ್‌ಮೆಂಟಿನವರು ಗಮನಕೊಟ್ಟಿಲ್ಲ. ಯಾವ ಕಾರಣಕ್ಕೆ ಗಮನಕೊಟ್ಟಿಲ್ಲ ಗೊತ್ತಾಗುತ್ತಿಲ್ಲ. ಅವರ ಉದ್ದೇಶ, ಕೇಂದ್ರ ಕಚೇರಿ ಬೆಂಗಳೂರಿನಲ್ಲಿ ಇದ್ದರೆ ನಮ್ಮ ಫ್ಯಾಕ್ಟರಿ ಕೆಲಸ ಸುಗಮವಾಗಿ ಆಗಲಿಕ್ಕೆ ಅನುಕೂಲವಾಗುತ್ತದೆ. ಸೇಲ್ಸ್ ಮತ್ತು ಪರ್ಚೆಸ್ ಬಹಳ ಚೆನ್ನಾಗಿ ಮಾಡಬಹುದು ಅಂಥ ಇರಬಹುದು. ಇದಕ್ಕೆ ಒಂದು ಉದಾಹರಣೆ ಕೊಡುವುದಾದರೆ ನಮ್ಮ ಪಾಂಡವಪುರ ಶುಗರ್ ಫ್ಯಾಕ್ಟರಿ ಮಂಡ್ಯ ಜಿಲ್ಲೆಯಲ್ಲಿದೆ ಅದು ನಮ್ಮ ದೇಶದ ಒಂದು ಉದ್ಯಮ ಸಹಕಾರ ಸಕ್ಕರೆ ಕಾರ್ಖಾನೆ ಅಂಥ ಹೆಸರು ಪಡೆದಿದೆ. ಅದು ಪಾಂಡವಪುರದಲ್ಲಿಯೇ ಇದ್ದುಕೊಂಡು ಆ ಫ್ಯಾಕ್ಟರಿ ಅಷ್ಟು ಚೆನ್ನಾಗಿ ನಡೆಸಬೇಕಾದರೆ ಈ ಎರಡು ಕಂಪನಿಗಳ ಕೇಂದ್ರ ಕಚೇರಿ ಬೆಂಗಳೂರಿನಲ್ಲಿ ಏತಕ್ಕೆ ಇರಬೇಕು? ಈ ಎರಡು ಫ್ಯಾಕ್ಟರಿಯ ಹಿರಿಯ ಅಧಿಕಾರಿಗಳು ಕೇಂದ್ರ ಕಚೇರಿಯಲ್ಲೇ ಇರುವುದರಿಂದ ಸ್ಥಳೀಯವಾಗಿ ಆ ಫ್ಯಾಕ್ಟರಿಗಳನ್ನು ನೋಡಿಕೊಳ್ಳುವವರು ಯಾರು? ಅಲ್ಲಿ ಯಾರೂ ಹೇಳುವವರೂ ಕೇಳುವವರೂ ಇಲ್ಲದೆ ಇರುವ ಪರಿಸ್ಥಿತಿ ಒದಗಿ ಆ ಫ್ಯಾಕ್ಟರಿ ಎಫಿಷಿಯೆನ್ಸಿ ಕಡಿಮೆಯಾಗುತ್ತಿದೆ ಅಂತ ಹೇಳಿದರೆ ತಪ್ಪಾಗಲಾರದು. ಆದುದರಿಂದ, ಈ ಕಡೆ ಸರ್ಕಾರ ಗಮನಕೊಟ್ಟು ಅತಿ ಶೀಘ್ರವಾಗಿ ಮಾನ್ಯ ಮುಖ್ಯ ಮಂತ್ರಿಗಳು ಏನು ಆಶ್ವಾಸನೆ ಕೊಟ್ಟಿದ್ದಾರೆ ಅಂತೆಯೇ ನಮ್ಮ ಒಂದು ಪ್ರದೇಶದ ರೈತರ ಕೋರಿಕೆ ಏನಿದೆ ಇದು ಅನುಷ್ಠಾನಕ್ಕೆ ಬರಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ ಇನ್ನು ಈ ಎರಡು ಕಾರ್ಖಾನೆಗಳ ವೇಸ್ಟ್ ನೀರು ಮಂಡ್ಯ ನಗರದ ಕೆಬ್ಬಳ್ಳ ಎಂದು ಬೆಂಗಳೂರು

ಮೈಸೂರು ಮಧ್ಯೆ ಇದೆ. ಅಲ್ಲಿ ಈ ನೀರು ಹರಿಯುತ್ತದೆ. ಅದು ಬೇರೆ ನೀರಿನ ಜೊತೆ ಮಿಕ್ಸ್ ಆಗಿ ಮಲಿನಗೊಂಡು ಹರಿಯುವುದರಿಂದ ಜನಗಳಿಗೂ ಮತ್ತು ಪ್ರಾಣಿಗಳಿಗೂ ತೊಂದರೆಯಾಗಿದೆ. ೧೯[illegible]-೭೭ರಲ್ಲಿ ಎಂದು ಕಾಣುತ್ತದೆ. Karnataka State Board for Prevension and Control of Pollution in Bangalore. ಇವರು ಒಂದು ವರದಿಯನ್ನು ಕೊಟ್ಟಿದ್ದಾರೆ. ಈ ಒಂದು ಮೈಸೂರು ಶುಗರ್ ಕಂಪನಿ ಮಂಡ್ಯ, ಇವರಿಗೆ ಎನ್‌ಇಇಆರ್ ಕನ್‌ಸಿಲಿಯೇಷನ್ಸ್ ಕನ್‌ಸಲ್‌ಟೆಂಟ್ ಆಗಿ ತೆಗೆದುಕೊಂಡಿದ್ದಾರೆ. ಇದರ ಬಗ್ಗೆ ೧೯೭೮ನೇ ಇಸವಿಯೊಳಗೆ ಕಂಪ್ಲೀಟ್ ಮಾಡಬೇಕೆಂದು ಅವರು ತೀರ್ಮಾನ ತೆಗೆದುಕೊಂಡಿದ್ದಾರೆ. ಇದುವರೆಗೂ ಕೂಡ ಈ ಮೈಸೂರು ಶುಗರ್ ಕಂಪನಿಯಿಂದ ಅಸಿಟೇಟ್ ಕೆಮಿಕಲ್ಸ್ ಕಂಪನಿಯಿಂದ ಬರತಕ್ಕ ಈ ಒಂದು ಮಲಿನ ನೀರು ಏನಿದೆ ಇದನ್ನು ಬೇರೆ ಕಡೆ ಬಿಡುವುದಕ್ಕೆ ಏನೊಂದು ಕಾರ್ಯಕ್ರಮವನ್ನು ತೆಗೆದುಕೊಂಡಿಲ್ಲ, ಇದರ ಕಡೆ ಸರ್ಕಾರ ಗಮನ ಕೊಡಬೇಕು. ಏಕೆಂದರೆ, ಇದರಿಂದ ನಾವು ಬಹಳಷ್ಟು ತೊಂದರೆ ಅನುಭವಿಸುತ್ತಿದ್ದೇವೆ. ಇನ್ನು ನಮ್ಮ ಮೈಸೂರು ಸಕ್ಕರೆ ಕಂಪನಿ ಚಿಮ್ಮಣಿಯಿಂದ ಬರತಕ್ಕ ಒಂದು ಕಾರ್ಬನ್ ಮೆನ್ಯೂಟ್ ಪಾರ್ಟಿಕಲ್ಸ್‌ನಿಂದ ನಗರದ ಜನರಿಗೆ ತೊಂದರೆಯಾಗಿದೆ ಎಂದು ಹೇಳಿದರೆ ತಪ್ಪಾಗಲಾರದು. ಅದು ಊಟ ಮಾಡುವ ತಟ್ಟೆಯ ಮೇಲೆ ಬಿದ್ದು, ಆ ಪದಾರ್ಥದಲ್ಲಿ ಮಿಕ್ಸ್ ಆಗುತ್ತದೆ. ಇದರ ಬಗ್ಗೆ ಮ್ಯಾನೇಜ್‌ಮೆಂಟ್ ಗಮನಕ್ಕೆ ತಂದರೂ ಇದುವರೆಗೂ ಏನೂ ಆಗಿಲ್ಲ, ಕಳೆದ ಅಧಿವೇಶನದಲ್ಲಿ ಸನ್ಮಾನ್ಯ ವೀರಪ್ಪ ಮೊಯ್ಲಿಯವರು ಉತ್ತರ ಕೊಡುತ್ತಾ ಪ್ರತಿಯೊಂದು ಕ್ಷೇತ್ರದಲ್ಲೂ ಸುಮಾರು ಎರಡು ಲಕ್ಷ ರೂಪಾಯಿಗೆ ಕಡಿಮೆ ಇಲ್ಲದಂತೆ ಬೆಳ್ಳಿ ಹಬ್ಬದ ಕೊಡುಗೆಯಾಗಿ ಕಮ್ಯೂನಿಟಿ ಡೆವಲಪ್‌ಮೆಂಟ್ ಪ್ರಾಜೆಕ್ಟ್ ಮಾಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದರು ಅದು ಕಾರ್ಯ ರೂಪಕ್ಕೆ ಬಂದಿಲ್ಲ ಅದನ್ನು ಯಾವ ಕ್ಷೇತ್ರದಲ್ಲಿ ಮಾಡಿದ್ದಾರೋ ನನಗೆ ಗೊತ್ತಾಗುವುದಿಲ್ಲ, ಈ ವರ್ಷ ಮೈಸೂರು ಸಕ್ಕರೆ ಕಂಪನಿ ಸುವರ್ಣ ಮಹೋತ್ಸವ ಆಚರಿಸುತ್ತಿದ್ದಾರೆ. ಈ ಸಂದರ್ಭದಲ್ಲಿ ಮಂಡ್ಯ ನಗರದ ಜನರಲ್ ಆಸ್ಪತ್ರೆಯ ಒಂದು ಕಟ್ಟಡವನ್ನು ಅವರು ಕೊಡುಗೆಯಾಗಿ ಮಂಡ್ಯ ಜಿಲ್ಲೆ ಜನತೆಗೆ ಕಟ್ಟಿಸಿಕೊಡಲಿಕ್ಕೆ ಆ ಫ್ಯಾಕ್ಟರಿಯ ಮ್ಯಾನೇಜ್‌ಮೆಂಟಿಗೆ ತಾವು ಒಂದು ಆದೇಶವನ್ನು ನೀಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಇತ್ತೀಚಿನ ಸಿಮೆಂಟ್ ವಿತರಣೆ ನೀತಿಯ ಬಗ್ಗೆ ಗ್ರಾಮಾಂತರ ಪ್ರದೇಶದ ಜನರಿಗೆ ತೊಂದರೆಯಾಗಿದೆ ಎಂದು ಹೇಳಿದರೆ ತಪ್ಪಾಗಲಾರದು, ಈಗ ತಾವು ೧೨ ಚದರಕ್ಕೆ ಮಾತ್ರ ಸಿಮೆಂಟ್ ಕೊಡುತ್ತೇವೆಂದು ಹೇಳಿದರೆ ಎಷ್ಟೋ ಮನೆಗಳು ಅರ್ಧಬಂಧರ್ಕ್ಕೆ ನಿಂತು ಹೋಗಿವೆ. ಆದ್ದರಿಂದ, ತಾವು ಕೂಡಲೇ ೧೨ ಚದರಕ್ಕೆ ಆಗುವಷ್ಟು ಸಿಮೆಂಟ್ ಕೊಟ್ಟು, ಅವರಿಗೆ ಬೇಕಾದ ಉಳಿಕೆ ಸಿಮೆಂಟನ್ನು ಓಪನ್ ಮಾರ್ಕೆಟ್‌ನಲ್ಲಿ ತೆಗೆದುಕೊಳ್ಳುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ, ಇನ್ನು ನಮ್ಮ ಮಂಡ್ಯ ನಗರದ ಉಪಯೋಗಕ್ಕೆ ಬರತಕ್ಕ ಅಮ್ಮಸಂದ್ರ ಸಿಮೆಂಟ್ ಸರಿಯಾಗಿ ಬರುತ್ತಿಲ್ಲ. ಈ ಬಗ್ಗೆ ಅನೇಕ ಸಾರಿ ಅಧಿಕಾರಿಗಳ ಗಮನಕ್ಕೆ ತಂದಿದ್ದೇವೆ. ಮೊದಲು ಕಷ್ಟವಾಗಿತ್ತು. ಇತ್ತೀಚೆಗೆ ಅದು ಇಂಪ್ರೂವ್ ಆಗಿದೆ. ಅನೇಕ ಸಂದರ್ಭಗಳಲ್ಲಿ ನಗರದಿಂದ ಲಾರಿಗಳು ಅಲ್ಲಿಗೆ ಹೋಗಿ ವಾಪಸ್ಸು ಬಂದಿರುವ ಸಂಭವವೇ ಹೆಚ್ಚು. ಅವರನ್ನು ಕಂಟ್ರೋಲ್‌ನಲ್ಲಿ ಇಟ್ಟುಕೊಳ್ಳಲಿಕ್ಕೆ ಆಗುವುದಿಲ್ಲ ಎಂದು ನನ್ನ ಪ್ರಶ್ನೆ. ಈಗ ಜುಲೈ ತಿಂಗಳ ಕೋಟಾ ನಮ್ಮ ನಗರಕ್ಕೆ ಬಂದಿಲ್ಲ. ಈ ಸ್ಥಿತಿಯಿಂದಾಗಿ ಅನೇಕ ನಗರಸಭೆಯಲ್ಲಾಗಲಿ ತಾಲ್ಲೂಕು ಬೋರ್ಡ್‌ನಲ್ಲಾಗಲಿ ಡೆವಲಪ್‌ಮೆಂಟ್ ಪ್ರಾಜೆಕ್ಟ್ಸ್ ನಿಂತು ಹೋಗಿ ತೊಂದರೆಯಾಗಿದೆ. ಈ ಕಡೆ ಸರ್ಕಾರ ಗಮನಕೊಡಬೇಕು.

ಇನ್ನು ರೇಷ್ಮೆ ಇಲಾಖೆಯ ಬಗ್ಗೆ ಹೇಳಬೇಕೆಂದರೆ, ಸುಮಾರು ೨-೩ ವರ್ಷದಿಂದ ನಮ್ಮ ಮಂಡ್ಯ ತಾಲ್ಲೂಕಿನಲ್ಲಿ ಮಲ್ಲಿಗೆರೆ ಫಾರಮ್ ಎಂದು ಹೇಳಿ ಸುಮಾರು ೧೨೨ ಎಕರೆ ಪ್ರದೇಶವನ್ನು ರೇಷ್ಮೆ ಇಲಾಖೆಗೆ ವಹಿಸಿಕೊಟ್ಟಿದ್ದಾರೆ. ಅದು ಸುಮಾರು ೫೦-೬೦ ಸಾವಿರ ರೂಪಾಯಿ ಜಮೀನು ಆಗುತ್ತದೆ. ಅಲ್ಲಿ ಒಂದು ಫಾರಂ ಮಾಡುವ ಬಗ್ಗೆ ಕಾರ್ಯಕ್ರಮವನ್ನು ಹಾಕಿಕೊಂಡಿದ್ದನ್ನು ಕೇಳಿದ್ದೆ ಇತ್ತೀಚೆಗೆ ಅದು ಬಿಟ್ಟು ಹೋಗಿದೆ ಎಂದು ಕೇಳಿದ್ದೇನೆ. ಎನ್‌ಆರ್‌ಇಪಿ ಪ್ರೋಗ್ರಾಮ್‌ನಲ್ಲಿ ನಮ್ಮ ಜಿಲ್ಲಾಧಿಕಾರಿಗಳು ಸ್ವಲ್ಪ ಹಣ ಕೊಟ್ಟಿದ್ದಾರೆ ಅದು ಸಾಲುವುದಿಲ್ಲ. ಅಲ್ಲಿ ಉತ್ತಮವಾದಂಥ ಒಂದು ಫಾರಮ್ ಮಾಡಬೇಕು. ಏಕೆಂದರೆ ನಮ್ಮ ಮಂಡ್ಯ ತಾಲ್ಲೂಕಿನಲ್ಲಿ ಜಮೀನು ಸಿಕ್ಕುವುದೇ ಕಷ್ಟ. ಅಂಥಾದ್ದರಲ್ಲಿ ಬಹಳ ಬೆಲೆ ಬಾಳತಕ್ಕ ಜಮೀನನ್ನು ತಮ್ಮ ಇಲಾಖೆ ವಶಕ್ಕೆ ಒಪ್ಪಿಸಿಕೊಂಡಿದ್ದಾರೆ. ಅಲ್ಲಿ ಬೇಗ ಒಂದು ಫಾರಮ್ ಮಾಡಬೇಕು. ಇನ್ನು ಇತ್ತೀಚೆಗೆ ಮಂಡ್ಯ ಜಿಲ್ಲೆಯಲ್ಲಿ ಈ ಒಂದು ಕಬ್ಬು ಹಾಗೂ ಭತ್ತದ ಬೆಲೆಗಳ ಏರುಪೇರುಗಳಿಂದ ರೇಷ್ಮೆ ಬೆಳೆ ಜನಪ್ರಿಯವಾಗುತ್ತಿದೆ. ಆದರೆ ಅಲ್ಲಿ

ಉತ್ಪಾದನೆಯಾಗತಕ್ಕ ರೇಷ್ಮೆಯನ್ನು ರಾಮನಗರ, ಬೇರೆ ಕಡೆಗಳಿಗೆ ತೆಗೆದುಕೊಂಡು ಹೋಗಲಿಕ್ಕೆ ಸಾರಿಗೆ ಸೌಲಭ್ಯವಿಲ್ಲ. ಆದ್ದರಿಂದ, ರಾತ್ರಿಯಲ್ಲಾ ಮಂಡ್ಯ ನಗರದಲ್ಲಿ ಕಾಯ್ದು ಆ ರೇಷ್ಮೆಯನ್ನು ತೆಗೆದುಕೊಂಡು ಹೋಗಬೇಕಾಗಿದೆ. ಅವರಿಗೆ ಸರಿಯಾದಂಥ ಸಾರಿಗೆ ಸೌಲಭ್ಯ ಒದಗಿಸಿಕೊಡಬೇಕೆಂದು ಹೇಳುತ್ತೇನೆ. ಇನ್ನು ಇದರ ಬಗ್ಗೆ ಒಂದು ಮಾರ್ಕೆಟ್ ಮಂಡ್ಯ ನಗರದಲ್ಲಿ ಕಟ್ಟುತ್ತಿದ್ದೀರಿ. ಹಾಗೆ, ಈ ಬೈವೋಲ್ಟೀನ್ ಗ್ರೈನೇಜ್ ಸೆಂಟರ್ ಕೂಡ ಶೀಘ್ರವಾಗಿ ಮಾಡಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಚಾಕಿ ರೇರಿಂಗ್ ಸೆಂಟರ್‌ಗಳು ಏನಿವೆ ಅವು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಒಂದೊಂದು ಪಂಚಾಯಿತಿಗೆ ಒಂದೊಂದು ಚಾಕಿ ರೇರಿಂಗ್ ಸೆಂಟರ್‌ಗಳನ್ನು ಪ್ರಾರಂಭಮಾಡಿ ಈ ರೇಷ್ಮೆ ಕೃಷಿಯನ್ನು ವೈಜ್ಞಾನಿಕ ರೀತಿಯಲ್ಲಿ ಮಾಡುವ ಮಾರ್ಗದರ್ಶನವನ್ನು ರೈತರಿಗೆ ನೀಡಬೇಕೆಂದು ಹೇಳಬಯಸುತ್ತೇನೆ.

ಇನ್ನು ವಕ್ಫ್‌ಗೆ ಸಂಬಂಧಪಟ್ಟಂತೆ ನಮ್ಮ ಮಂಡ್ಯ ನಗರದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ಈ ದಿಸೆಯಲ್ಲಿ ಯಾವುದಾದರೊಂದು ಅಭಿವೃದ್ಧಿ ಕಾರ್ಯಕ್ರಮವನ್ನು ಈ ಮಂಡ್ಯ ನಗರದಲ್ಲಿ ಕೈಗೊಳ್ಳಬೇಕೆಂದು ಮನವಿ ಮಾಡಿಕೊಂಡು ಇಷ್ಟು ಮಾತನಾಡಲು ಅವಕಾಶ ಮಾಡಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಡಿ. ಟಿ. ಮಾಯಣ್ಣ (ಹುಲಿಯೂರು ದುರ್ಗ).— ಮಾನ್ಯ ಅಧ್ಯಕ್ಷರೆ, ರೇಷ್ಮೆ ಕೈಗಾರಿಕೆ, ಮತ್ತು ಸಣ್ಣ ಕೈಗಾರಿಕೆಯ ವಿಚಾರದಲ್ಲಿ ಮಾತನಾಡುತ್ತಾ ಸರ್ಕಾರಕ್ಕೆ ಒಂದೆರಡು ಸಲಹೆಗಳನ್ನು ಕೊಡಲಿಚ್ಛಿಸುತ್ತೇನೆ. ರೇಷ್ಮೆ ಕೈಗಾರಿಕೆ ನಮ್ಮ ದೇಶದಲ್ಲಿ ಸಾಮಾನ್ಯವಾಗಿ ಬಹಳ ಕಾಲದಿಂದ ಅಂದರೆ ಪುರಾತನ ಕಾಲದಿಂದ ಬಂದಿರತಕ್ಕುದು, ಹಿಂದೆ ಟಿಪ್ಪು ಸುಲ್ತಾನ್‌ರವರು ಇದನ್ನು ಭಾರತ ದೇಶಕ್ಕೆ ಮೈಸೂರು, ಮಂಡ್ಯ ಮತ್ತು ತುಮಕೂರು ಜಿಲ್ಲೆಗಳಲ್ಲಿ ಅಭಿವೃದ್ಧಿಪಡಿಸಿದ್ದಾರೆ. ಆಗಿನಿಂದ ಈ ಕೈಗಾರಿಕೆಯಲ್ಲಿ ಹೆಚ್ಚು ಹೆಚ್ಚು ಬೆಳವಣಿಗೆಯಾಗುತ್ತಾ ಬಂದಿದೆ. ಇಲ್ಲಿ ಈ ವಾತಾವರಣಕ್ಕೆ ಹೊಂದಿಕೊಂಡು ಚೆನ್ನಾಗಿ ಬೆಳೆ ಬೆಳೆಯುತ್ತಿದೆ. ಇದುವರೆಗೂ ನಮ್ಮ ಪ್ರದೇಶದಿಂದ ಸೀಡನ್ನು ತೆಗೆದುಕೊಂಡು ಹೋಗಿ ಬೆಳೆದಂಥ ರೈತರು ಅನುಕೂಲಗಳನ್ನು ಪಡೆದುಕೊಳ್ಳುತ್ತಿದ್ದಾರೆ. ಆದರೆ ನಾವು ಈ ಕೈಗಾರಿಕೆಯಿಂದ ಬಹಳ ಕಷ್ಟವನ್ನು ಅನುಭವಿಸುತ್ತಿದ್ದೇವೆ. ನಾನು ಈ ವಿಚಾರವನ್ನು ಈ ಸದನದಲ್ಲಿ ಸಾಮಾನ್ಯವಾಗಿ ಕಳೆದ ೩ ವರ್ಷದಿಂದಲೂ ಹೇಳುತ್ತಲೇ ಬರುತ್ತಿದ್ದರೂ ಸರ್ಕಾರದವರು ಈ ದಿಸೆಯಲ್ಲಿ ಯಾವುದೇ ಕ್ರಮವನ್ನೂ ಕೈಗೊಂಡಿಲ್ಲ. ಇವತ್ತು ಕಾನೂನು ಪ್ರಕಾರ ನಾವು ಮಿಶ್ರ ತಳಿಯನ್ನು ಬೆಳೆಯುವುದಕ್ಕೆ ಅವಕಾಶ ಇಲ್ಲ. ನಾವು ಮೊದಲಿನಿಂದಲೂ ಈ ವಾತಾವರಣಕ್ಕೆ ಹೊಂದಿಕೊಂಡು ಬಂದಿರತಕ್ಕ ಈ ಬೆಳೆಯನ್ನೇ ಮುಂದುವರಿಸಿಕೊಂಡು ಬರುತ್ತಿದ್ದೇವೆ. ನಾನು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಒಂದು ಎಚ್ಚರಿಕೆಯನ್ನು ಕೊಡಬಯಸುತ್ತೇನೆ. ನಮ್ಮಲ್ಲಿ ಈ ಬೆಳೆಯನ್ನು ತಾವು ಹಾಳುಮಾಡಿದರೆ ಈ ಕರ್ನಾಟಕ ರಾಜ್ಯದಲ್ಲಿ ರೇಷ್ಮೆ ಕೈಗಾರಿಕೆಯೇ ಹಾಳಾಗಿ ಹೋಗುತ್ತದೆ. ಈ ಬೆಳೆಯನ್ನು ತಾವು ಅಭಿವೃದ್ಧಿ ಮಾಡಬೇಕು. ಮಿಶ್ರ ತಳಿಯನ್ನು ಅಥವಾ ಬೇರೆ ತಳಿಯನ್ನು ಬೆಳೆಯುವುದಕ್ಕೆ ನಾನು ಅಡ್ಡಿ ಬರುತ್ತಿಲ್ಲ. ಆದರೆ ಇದಕ್ಕೆ ಬೇಕಾದಂಥ ತಾಯಿ ಹುಳು ಏನಿದೆ ಅದು ಮೈಸೂರು ತಳಿಯಿಂದ ಆಗಬೇಕೇ ಹೊರತು ಬೇರೆ ಯಾವುದರಿಂದಲೂ ಆಗುವುದಿಲ್ಲ. ಈ ಗೂಡನ್ನು ನಾವು ಬೆಳೆದರೆ ನಮಗೆ ಬಹಳ ಕಡಿಮೆ ಬೆಲೆ ಬರುತ್ತದೆ. ಅವರು ಹೇಳುತ್ತಾರೆ ನಮಗೆ ಕೇವಲ ೪೦೦ ಗಜ ಮಾತ್ರ ರೇಷ್ಮೆ ಬರುತ್ತದೆ ಎಂದು. ಆದರೆ ಈಗ ತಾವು ಮಿಶ್ರ ತಳಿಯನ್ನು ಅಭಿವೃದ್ಧಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ. ಆದರೆ ಈ ತಳಿಯಲ್ಲಿ ಹೆಣ್ಣು ಹುಳು ಇಲ್ಲದೇ ಹೋದರೆ ನಮ್ಮ ಬೆಳೆ ಹಾಳಾಗುತ್ತದೆ. ಇನ್ನೊಂದು ವಿಚಾರ ಏನೆಂದರೆ ತಾವು ವಿಶ್ವಬ್ಯಾಂಕ್ ನೆರವಿನಿಂದ ಬಹಳ ಉತ್ತಮ ಯೋಜನೆಗಳನ್ನು ಹಾಕಿಕೊಂಡಿದ್ದೀರಿ. ಆದರೆ ಮೊದಲಿನಿಂದಲೂ ನಮ್ಮ ಪ್ರದೇಶಗಳನ್ನು ಕೈಬಿಟ್ಟಿದ್ದೀರಿ. ಇದು ಏಕೆಂದರೆ ನಮ್ಮ ಸಿಲ್ಕ್ ಡಿಪಾರ್ಟ್‌ಮೆಂಟ್‌ನಲ್ಲಿ ಇದನ್ನು ಕಡೆಗಣಿಸುತ್ತಾ ಬಂದಿದ್ದಾರೆ. ಇದರಿಂದಾಗಿ ಯಾವುದೇ ಅಭಿವೃದ್ಧಿ ಯೋಜನೆಯನ್ನೂ ಸರ್ಕಾರ ಹಾಕಿಕೊಂಡಿಲ್ಲ. ಈಗಲಾದರೂ ಇದರ ಬಗ್ಗೆ ಒಂದು ಅಭಿವೃದ್ಧಿ ಯೋಜನೆಯನ್ನು ಇಟ್ಟುಕೊಂಡು ಈ ಬೆಳೆಯನ್ನು ಹೆಚ್ಚು ವೈಜ್ಞಾನಿಕ ರೀತಿಯಲ್ಲಿ ಬೆಳೆಸಬೇಕು. ನಮ್ಮ ರೈತರು ಮೊದಲಿನಿಂದಲೂ ಯಾವ ತಳಿಯನ್ನು ಬೆಳೆಯುತ್ತಿದ್ದರೋ ಅದೇ ತಳಿಯನ್ನೇ ಇವತ್ತೂ ಬೆಳೆಯುತ್ತಾ ಬರುತ್ತಿದ್ದಾರೆ. ಈಗ ಏನಾಗಿದೆ ಗ್ರೈನೇಜ್‌ನಲ್ಲಿ ಒಳ್ಳೆಯ ಮೊಟ್ಟೆಗಳನ್ನು ತಯಾರು ಮಾಡಬೇಕಾಗಿದೆ ಅದಕ್ಕೆ ಬೇಕಾದಂಥ ವಾತಾವರಣವನ್ನು ಉಂಟುಮಾಡಿ ಕೊಟ್ಟು ಎಲ್ಲ ಸಾಮಾನುಗಳನ್ನೂ ಕೊಡಿಸಬೇಕು. ಮೊಟ್ಟೆಗಳು ತಯಾರಾದಮೇಲೆ ಅವುಗಳನ್ನು ಸಾಕಬೇಕು. ಇದಕ್ಕಾಗಿ ಬಹಳಷ್ಟು ಚಾಕಿ ಸಾಕಾಣಿಕೆಯ

ಕೇಂದ್ರಗಳನ್ನು ಮಾಡಿದ್ದೀರಿ. ಒಬ್ಬೊಬ್ಬ ವಲಯಾಧಿಕಾರಿ ಇರುವ ಕಡೆಯಲ್ಲೂ ಒಂದೊಂದು ಚಾಕಿ ಸಾಕಾಣಿಕೆ ಕೇಂದ್ರಗಳನ್ನು ಇಡಬೇಕು. ಈ ಅಧಿಕಾರಿಗೆ ಹತ್ತಿರದಲ್ಲಿ ೧ ಎಕರೆ ತೋಟ ಇರಬೇಕು. ಏಕೆಂದರೆ ಅವರು ಎಲ್ಲಿಂದಲೋ ಸೊಪ್ಪನ್ನು ತಂದು ಹಾಕುವುದಕ್ಕೆ ಬದಲಾಗಿ ಅವನ ತೋಟದಲ್ಲಿಯೇ ಬೆಳೆದು ತಕ್ಷಣ ತಂದು ಹಾಕುವುದಕ್ಕೆ ಅನುಕೂಲ ಮಾಡಿಕೊಡಬೇಕು. ಇವರಿಗೆ ನೀರಾವರಿ ಸೌಕರ್ಯ ವನ್ನು ಮಾಡಿಕೊಟ್ಟರೆ ಇನ್ನೂ ಹೆಚ್ಚಿಗೆ ಮೊಟ್ಟೆಗಳನ್ನು ಉತ್ಪತ್ತಿ ಮಾಡುವುದಕ್ಕೆ ಬಹಳ ಅನುಕೂಲ ವಾಗುತ್ತದೆ. ಇದರ ಜೊತೆಗೆ ಅವನಿಗೆ ಅಗತ್ಯವಾಗಿ ಬೇಕಾದಂಥ ಒಂದು ಸ್ಟೋರ್ ರೂಂನ್ನು ಕೂಡ ಕಟ್ಟಿಕೊಡಬೇಕು. ಆಗ ಆತ ತನಗೆ ಬೇಕಾದಂಥ ಅನುಕೂಲಗಳನ್ನು ಮಾಡಿಕೊಂಡು ಇದನ್ನು ಬೆಳೆಸು ವುದಕ್ಕೆ ಸಹಾಯವಾಗುತ್ತದೆ.

ಇನ್ನು ನಮ್ಮ ರೈತರು ಸೊಪ್ಪಿನ ತೋಟವನ್ನು ಮಾಡುತ್ತಾರೆ. ಆದರೆ ಈ ತೋಟವನ್ನು ಯಾವ ರೀತಿ ಬೆಳೆಯಬೇಕು, ಯಾವ ರೀತಿ ಕಡ್ಡಿಗಳನ್ನು ಹಾಕಬೇಕೆಂಬುದನ್ನು ನಿಮ್ಮ ಅಧಿಕಾರಿಗಳು ಹೇಳಿ ಕೊಡುವುದಿಲ್ಲ. ಈ ತೋಟಗಳಲ್ಲಿ ಕೆಲಸ ಮಾಡುವವರು ಬಹಳ ಬಡವರು ಮತ್ತು ಹರಿಜನರೂ ಕೂಡ. ಅವರ ತೋಟ ಕೂಡ ಅರ್ಧ ಎಕರೆ ಅಥವಾ ೧ ಎಕರೆಗಿಂತ ಹೆಚ್ಚಿಗೆ ಯಾರಿಗೂ ಇರುವುದಿಲ್ಲ. ಆದ್ದರಿಂದ ನೀವು ಈ ತೋಟಗಳಿಗೆ ನೀರಾವರಿ ಸೌಲಭ್ಯವನ್ನು ಒದಗಿಸಿಕೊಡಬೇಕು. ಅವರಿಗೆ ಮನೆಗಳನ್ನು ಕಟ್ಟು ವುದಕ್ಕೆ ಕೂಡ ಹೆಚ್ಚು ಹಣವನ್ನು ಕೊಡಬೇಕು. ತಾವು ಎಷ್ಟೋ ಸ್ಕೀಂಗಳನ್ನು ಹಾಕಿಕೊಂಡಿದ್ದೀರಿ. ಆದರೆ ಯಾವ ಸ್ಕೀಂನಲ್ಲೂ ಅವರಿಗೆ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಹಣವನ್ನು ಕೊಡುತ್ತಿಲ್ಲ. ನಾನು ಹೇಳುವುದೇನೆಂದರೆ ಆ ಜನರಿಗೆ ನೀವು ದುಡ್ಡು ಕೊಡುತ್ತೀರಿ, ಆ ಜನರು ತಾವು ಬೆಳೆದ ಬೆಳೆಯನ್ನು ರೆಗ್ಯುಲೇಟೆಡ್ ಮಾರ್ಕೆಟ್‌ಗೆ ತಂದಾಗ ತಮಗೆ ಬರಬೇಕಾದ ಹಣವನ್ನು ಹಿಡಿದುಕೊಂಡು ಉಳಿದುದನ್ನು ಅವರಿಗೆ ಕೊಡಿ. ಪ್ರತಿಯೊಬ್ಬರಿಗೂ ತಾವು ಮನೆಗಳನ್ನು ಕಟ್ಟಿಸಿಕೊಡಬೇಕು. ಆ ರೀತಿ ಅನುಕೂಲ ಗಳನ್ನು ಮಾಡಿಕೊಟ್ಟರೆ ರೈತರಿಗೆ ಮತ್ತು ರೈತರು ಬೆಳೆಯುತಕ್ಕ ರೇಷ್ಮೆಗೆ ಬಹಳ ಅನುಕೂಲವಾಗುತ್ತ ದೆಂದು ಹೇಳಬಯಸುತ್ತೇನೆ. ಅವನಿಗೆ ಬೇಕಾದಂಥ ಸಲಕರಣೆಗಳನ್ನು ತೆಗೆದುಕೊಳ್ಳುವುದಕ್ಕೆ, ಕಡ್ಡಿ ಹಾಕುವುದಕ್ಕೆ ಮುಂತಾದ್ದಕ್ಕೆ ಸರ್ಕಾರದವರು ಸಬ್ಸಿಡಿ ರೂಪದಲ್ಲಿ ಸಹಾಯ ನೀಡಬೇಕು.

ಇನ್ನು ನಮ್ಮ ರೈತರಿಗೆ ಅನುಕೂಲ ಮಾಡಿಕೊಡಬೇಕೆಂಬ ಉದ್ದೇಶದಿಂದ ಕೆಲವು ರೇರಿಂಗ್ ಸೊಸೈಟಿಗಳನ್ನು ಮಾಡಿಕೊಡಬೇಕೆಂದು ಯೋಚನೆ ಮಾಡುತ್ತಿದ್ದೀರಿ. ಈ ಪ್ರಯತ್ನವನ್ನು ಮಾಡು ವಾಗ ಗುನ್ನಗೆರೆ ಮತ್ತು ಮಾಗಡಿ ತಾಲ್ಲೂಕಿನ ಹೇಗಪಳ್ಳಿಗಳಲ್ಲಿ ಸೊಸೈಟಿಗಳನ್ನು ಮಾಡಿ ಸಹಾಯಕ್ಕಾಗಿ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೀರಿ. ಆದರೆ ಇದುವರೆಗೂ ಸರ್ಕಾರದಿಂದ ಯಾವುದೇ ಸಹಾಯವೂ ಬಂದಿಲ್ಲ. ಇನ್ನೂ ೧೯೭೫ರಲ್ಲಿ ನಮ್ಮ ತಾಲ್ಲೂಕಿನ ಎಲೆಕೋಟಕಲು ಮತ್ತು ಗುನ್ನಾಗರಗಳಲ್ಲಿ ಒಂದೆರಡು ರೇರಿಂಗ್ ಸೆಂಟರ್‌ಗಳನ್ನು ಕಟ್ಟುವುದಕ್ಕೆ ಪ್ರಾರಂಭ ಮಾಡಿರಿ. ಆದರೆ ಈ ಕಟ್ಟಡಗಳು ಅರ್ಧಕ್ಕೇ ನಿಂತಿರು ತ್ತವೆ. ಆದ್ದರಿಂದ ಅವುಗಳನ್ನು ಪೂರ್ತಿ ಮಾಡುವುದಕ್ಕೆ ಹಣವನ್ನೊದಗಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ತಾವು ಕಾಮನ್ ರೇರಿಂಗ್ ಹೌಸನ್ನು ಮಾಡುವುದರಿಂದ ಬಹಳ ಅನುಕೂಲವಿದೆ. ನಮ್ಮಲ್ಲಿ ಕೇವಲ ೪ ಯೋಜನೆಗಳನ್ನು ಮಾತ್ರ ಕೊಟ್ಟಿದ್ದೀರಿ. ಅವುಗಳು ಆಲ ಬ್ಯಾಡರಹಳ್ಳಿ, ಹೊಸಹಳ್ಳಿ, ಮೂಡಬಾಳು ಮತ್ತು ತಟ್ಟೆಕೆರೆಗಳಲ್ಲಿವೆ. ಬಡಜನರು, ಹರಿಜನರು ಎಲ್ಲಿದ್ದಾರೆ ಅಂಥ ಕಡೆಗಳಲ್ಲಿ ಈ ಕಾಮನ್ ರೇರಿಂಗ್ ಸೆಂಟರ್‌ಗಳನ್ನು ಮಾಡಬೇಕು. ತಾವು ಅವುಗಳನ್ನು ಮಾಡಿ ಪ್ರತಿಯೊಂದಕ್ಕೂ ಇಂತಿಷ್ಟು ಎಂದು ಬಾಡಿಗೆಯನ್ನು ನಿಗದಿಮಾಡಿ ? ಈ ಯೋಜನೆ ಬಹಳ ಮುಖ್ಯವಾದುದು. ಕಾಮನ್ ರೇರಿಂಗ್ ಹೌಸ್‌ನಲ್ಲಿ ಪ್ರತಿಯೊಬ್ಬ ರೈತನಿಗೂ ಒಂದೊಂದು ಕಂಪಾರ್ಟ್‌ಮೆಂಟ್‌ಗಳನ್ನು ಕೊಟ್ಟು ಅಲ್ಲಿ ಅವನು ಹುಳುಗಳನ್ನು ಸಾಕಿ ಅದನ್ನು ಮಾರಿದ ಮೇಲೆ ಆ ಜಾಗಕ್ಕೆ ಬಾಡಿಗೆ ತೆಗೆದುಕೊಳ್ಳಿ. ರೈತರು ಅಲ್ಲಿ ತಮ್ಮ ಮನೆಗಳಲ್ಲಿ ದನ, ಕುರಿ, ಕೋಳಿ, ಮುಂತಾದುವನ್ನು ಸಾಕಿಕೊಳ್ಳುತ್ತಾರೆ. ಆದ್ದರಿಂದ ತಾವು ಅವರಿಗೆ ಕಾಮನ್ ರೇರಿಂಗ್ ಹೌಸನ್ನು ಮಾಡಿಕೊಡಬೇಕು. ನಮ್ಮ ರೈತರಿಗೆ ಬಹಳ ಕಡಿಮೆ ತೋಟ ಇರುತ್ತದೆ. ಆದ್ದರಿಂದ ಸರ್ಕಾರದವರೇ ಮುಂದೆ ಬಂದು ಅವರಿಗೆ ಒಂದೊಂದು ಬಾವಿಗಳನ್ನು ತೆಗಿಸಿ ಕೊಡಿ, ಅವನಿಗೆ ಬೇಕಾದಂಥ ನೀರಾವರಿ ಸೌಕರ್ಯವನ್ನು ಮಾಡಿಕೊಟ್ಟು ಅವನಿಂದ ಬರಬೇಕಾದ ಹಣ ವನ್ನು ಕಂತಿನ ಮೂಲಕ ವಸೂಲು ಮಾಡಿಕೊಳ್ಳಿ. ಈ ಬೆಳೆಯನ್ನು ತಾವು ಅಭಿವೃದ್ಧಿ ಮಾಡಿದರೆ ರೈತನಿಗೆ ವರಪ್ರಸಾದವಾಗುತ್ತದೆ. ಆದ್ದರಿಂದ ಈ ಯೋಜನೆಯನ್ನು ನಮ್ಮ ಹಿಂದಿನ ಪ್ರಧಾನಿ ನೆಹರು ರವರು ಭಾರತದ ಎಲ್ಲಾ ಕಡೆಯಲ್ಲೂ ಮಾಡಿಕೊಡಬೇಕೆಂದು ಹೇಳಿರುವುದನ್ನು ನಾನು ಕೇಳಿದ್ದೇನೆ. ಅದೇ ಪ್ರಕಾರ ತಾವು ಇದನ್ನು ಹೆಚ್ಚಿಗೆ ಅಭಿವೃದ್ಧಿ ಮಾಡಿಕೊಡಬೇಕೆಂದು ಹೇಳಬಯಸುತ್ತೇನೆ.

೧೧-೩೦ ಪಿ. ಎಂ.

ಇದರಿಂದ ಫಾರಿನ್ ಎಕ್ಸ್‌ಚೇಂಜ್ ಬರತಕ್ಕಂಥ ಸಾಧ್ಯತೆ ಇರುತ್ತದೆ. ಆದ್ದರಿಂದ ಈ ಮೈಸೂರು ತಳಿಯನ್ನು ಹಾಳುಮಾಡುವುದಕ್ಕೆ ಸಾಧ್ಯವೇ ಇಲ್ಲ. ಇದಕ್ಕೆ ಎಷ್ಟು ಸೌಲಭ್ಯಗಳನ್ನು ಕೊಡಬೇಕೋ ಅಷ್ಟು ಸೌಲಭ್ಯಗಳನ್ನು ಕೊಡಬೇಕೆಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಫಾರಮ್ ಮ್ಯಾನೇಜ್‌ಮೆಂಟ್ ನಮ್ಮ ರೈತರಿಗೆ ಸರಿಯಾಗಿ ಸಾಲಗಳನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು. ಎಲ್ಲ ಕಡೆ ಹೋಗಿ ನೋಡಿಬಂದಿರುತ್ತೇನೆ. ಬಹುಶಃ ಅವರಿಗೆ ಯಾವ ರೀತಿ ಮಾಡಬೇಕು ಎನ್ನುವುದು ಗೊತ್ತಿಲ್ಲ. ನಮ್ಮ ಪ್ರದೇಶದಲ್ಲಿ ಹಿಂದೆ ಮಾನ್ಯ ಅರಸುರವರು ಮುಖ್ಯ ಮಂತ್ರಿಗಳಾಗಿದ್ದಾಗ ಕೆಲವು ಪ್ರಶ್ನೆಗಳನ್ನು ಕೇಳಿದ್ದ. ಅವರು ಬೇಕಾದಷ್ಟು ದುಡ್ಡನ್ನು ಖರ್ಚುಮಾಡು ತ್ತಿದ್ದೇವೆಂದು ಹೇಳಿದರು. ಮತ್ತು ಅವರು ಹೇಳಿದರು ನೀವು ಹೊಸಬರು ಬಂದಿರುತ್ತೀರಿ, ಇದರ ವಿಷಯ ನಿಮಗೆ ಗೊತ್ತಿಲ್ಲ. ಮೈಸೂರು ತಳಿಯನ್ನು ಸೈಂಟಿಫಿಕ್ ಆಗಿ ಅಭಿವೃದ್ಧಿ ಪಡಿಸಲು ಎಷ್ಟು ದುಡ್ಡನ್ನು ಬೇಕಾದರೂ ಖರ್ಚು ಮಾಡುತ್ತೇವೆಂದೂ ಕೂಡ ಆಶ್ವಾಸನೆಯನ್ನು ಕೊಟ್ಟಿದ್ದರು. ಅವರು ಈವತ್ತು ಇಲ್ಲ. ಅನಂತರ ಶ್ರೀಮತಿ ರೇಣುಕಾ ರಾಜೇಂದ್ರನ್ ಬಂದರು. ಅವರು ಬಂದಾಗ ರೈತರಿಗೆ ಬಹಳ ಕಷ್ಟ ಇರುತ್ತದೆ, ಸರಿಯಾದ ಬೆಲೆ ಸಿಗುವಂಥ ಒಂದು ವ್ಯವಸ್ಥೆಯನ್ನು ಮಾಡಬೇಕೆಂದು ರಿಕ್ವೆಸ್ಟ್ ಮಾಡಿಕೊಂಡೆವು. ಆಗ ಅವರು ಒಂದು ಕಾನ್‌ಫರೆನ್ಸ್ ಮಾಡಿ ಸಲಹೆಗಳನ್ನು ಕಳುಹಿಸಿಕೊಡಿ ಎಂದು ಹೇಳಿದ್ದರು. ಸರ್ಕಾರಕ್ಕೆ ನಾವು ಸಲಹೆಗಳನ್ನು ಕಳುಹಿಸಿಕೊಟ್ಟೆವು. ಯಾವ ಸಲಹೆಯೂ ಕಾರ್ಯಗತ ವಾಗಲಿಲ್ಲ. ಸಾಮಾನ್ಯವಾಗಿ ನಮ್ಮಲ್ಲಿ ಸುಮಾರು ೮೧೪ ಹಳ್ಳಿಗಳು ಈ ಕೈಗಾರಿಕೆಯಲ್ಲಿ ತೊಡಗಿವೆ. ಸುಮಾರು ೧೪,೨೭೬ ಕುಟುಂಬಗಳು ಕೆಲಸ ಮಾಡುತ್ತಿದೆ. ಆದರೆ ಜಮೀನು ವಿಸ್ತೀರ್ಣ ಇರುವುದು ೭,೭೬೬ ಎಕರೆ ಮಾತ್ರ ಇದಕ್ಕೆ ೪೫ ಜನ ತಾಂತ್ರಿಕ ಸಹಾಯಕರು ಇರುತ್ತಾರೆ, ಚಾಕಿ ಕೇಂದ್ರಕ್ಕೆ ೫೮ ಜನ ಅಧಿಕಾರಿಗಳನ್ನು ಇಟ್ಟಿದ್ದೀರಿ. ಇದನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಸಹಾಯ ಮಾಡಿಕೊಡ ಬೇಕು. ರಿಸರ್ಚ್ ಸೆಂಟರ್‌ಗಳನ್ನು ಓಪನ್ ಮಾಡಬೇಕು. ಈ ರಿಸರ್ಚ್ ಸೆಂಟರ್ ಮಾಡುವುದರಿಂದ ಏನಾಗುತ್ತದೆ ಎಂದರೆ ಗ್ರಾಮಾಂತರ ಪ್ರದೇಶಗಳಲ್ಲಿರುವ ಜಮೀನುಗಳಲ್ಲಿ ಯಾವರೀತಿ ಸಾಯಿಲ್ ಇದೆ ಎಲ್ಲಿ ಸೊಪ್ಪು ಚೆನ್ನಾಗಿ ಬೆಳೆಯಬಹುದು. ಯಾವ ಯಾವ ಪ್ರದೇಶಗಳಲ್ಲಿ ಪ್ರೊಡಕ್ಷನ್ ಹೆಚ್ಚು ಪ್ರಮಾಣ ದಲ್ಲಿ ಬರುತ್ತದೆ ಎಂಬುದು ಗೊತ್ತಾಗುತ್ತದೆ. ಆದ್ದರಿಂದ ಮೈಸೂರು ತಳಿ ಬೆಳೆಯುತಕ್ಕ ಸ್ಥಳಗಳಲ್ಲಿ ರಿಸರ್ಚ್ ಸೆಂಟರ್‌ಗಳನ್ನು ಓಪನ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತೆ ಈ ಮೈಸೂರು ತಳಿ ಯನ್ನು ಬೆಳೆಯುತಕ್ಕಂಥವರಿಗೆ ಬೋನಸ್ ಕೊಡುತ್ತೇವೆಂದೂ, ಸಪೋರ್ಟ್ ಪ್ರೈಸನ್ನು ಕೊಡುತ್ತೇ ವೆಂದೂ ಕೂಡ ಹೇಳಿದರು. ಈಗ ಕನಿಷ್ಟ ಬೇಲೆ ಏನು ಕೊಡುತ್ತಾರೆಂದರೆ ೬೦ ರೂಪಾಯಿಗಳನ್ನು ಬೈ ಓಲ್ಟಿನ್‌ಗೆ ಒಂದು ಕೆ.ಜಿ.ಗೆ ಕೊಡುತ್ತಿದ್ದರೆ, ಮೈಸೂರು ತಳಿಗೆ ೩೦ ರೂಪಾಯಿಗಳನ್ನು ಕೊಡುತ್ತಿರು ತ್ತಾರೆ. ಇದರಿಂದ ರೈತರಿಗೆ ಬಹಳ ನಷ್ಟವಾಗುತ್ತಿದೆ. ನೀವು ಕೊಡುವುದು ಒಂದು ಕೆ.ಜಿ.ಗೆ ಮೂವತ್ತು ರೂಪಾಯಿಗಳಾದರೆ ಅವನ ಕಾಸ್ಟ್ ಆಫ್ ಪ್ರೊಡಕ್ಷನ್ ೨೭ ರೂಪಾಯಿಗಳಾಗಿರುತ್ತದೆ ಬರತಕ್ಕಂಥ ಮೂರು ರೂಪಾಯಿಗಳಲ್ಲಿ ಆ ರೈತ ಎಷ್ಟು ಮಾತ್ರ ಜೀವನ ಮಾಡುವುದಕ್ಕೆ ಸಾಧ್ಯವಾಗುತ್ತದೆಂದು ತಾವೇ ಯೋಚನೆ ಮಾಡಬೇಕು. ಮಿನಿಮಮ್ ವೇಜಸ್ ಕೂಡ ಜಾಸ್ತಿ ಇರುವುದರಿಂದ ನಮ್ಮ ರೈತರು ಬಹಳ ತೊಂದರೆ ಪಡುತ್ತಿದ್ದಾರೆ. ಆದ್ದರಿಂದ ಇದರ ಬೆಲೆಯನ್ನೂ ಕೂಡ ಹೆಚ್ಚುಮಾಡಬೇಕೆಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಮಾನ್ಯ ಅಧ್ಯಕ್ಷರೇ ಇನ್ನು ರೀಲಿಂಗ್ ಸೆಂಟರ್ಸ್ ಕೆಂಪನಹಳ್ಳಿ, ಹುಲಿಯೂರುದುರ್ಗ ಈ ಭಾಗ ಗಳಲ್ಲಿ ತೆರೆಯಬೇಕು ಎಲ್ಲಿ ಮೈಸೂರು ತಳಿಯನ್ನು ಬೆಳೆಯುತ್ತಾರೋ ಅಂಥಕಡೆ, ಇಂಡಸ್ಟ್ರಿಯಲ್ ಷೆಡ್ಸ್‌ಗಳನ್ನು ಮಾಡಬೇಕು. ೧೯೭೦ನೇ ಇಸವಿಯಲ್ಲಿ ಇಂಡಸ್ಟ್ರಿಯಲ್ ಡಿಪಾರ್ಟ್‌ಮೆಂಟ್‌ನವರನ್ನು ಕರೆದುಕೊಂಡು ಬಂದು ತೋರಿಸಿರುತ್ತೇನೆ ಅದನ್ನು ಕಾರ್ಯರೂಪಕ್ಕೆ ತರಲಿಲ್ಲ. ಇಂಥ ಸೆಂಟರ್ ಗಳನ್ನು ತೆಗೆದು ರೀಲಿಂಗ್ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಏತಕ್ಕೆಂದರೆ ಒಂದು ಮನೆ ಯೊಳಗೆ ೪೦-೫೦ ರಾಟೆಗಳನ್ನು ಇಟ್ಟಿರುತ್ತಾರೆ. ಇದರಿಂದ ಒಂದು ವಿಧವಾದ ವಾಸನೆ ಬರುತ್ತದೆ. ಜನರು ಇದನ್ನು ತಡೆದುಕೊಳ್ಳಲು ಬಹಳ ಕಷ್ಟವಾಗುತ್ತದೆ. ಆದ್ದರಿಂದ ಪ್ರತ್ಯೇಕವಾಗಿ ಷೆಡ್ಸ್‌ಗಳನ್ನು ಕಟ್ಟಿಕೊಳ್ಳಬೇಕು.

ಮತ್ತೊಂದು ವಿಚಾರವೇನೆಂದರೆ ಕೆಲವು ಮಾರ್ಕೆಟಿಂಗ್ ಅನುಕೂಲತೆ. ಇದರ ಬಗ್ಗೆ ಬಹಳಷ್ಟು ಹೇಳಿದ್ದೀರಿ. ಉತ್ತರದಲ್ಲಿಯೂ ಸಹ ಕೊಟ್ಟಿರುತ್ತೀರಿ. ಆದರೆ ಯಾವ ವಿಧವಾದ ಸೌಕರ್ಯ ಸೌಲಭ್ಯಗಳು ಇರುವುದಿಲ್ಲ. ಜನರು ಬಹಳ ಕಷ್ಟಪಟ್ಟು ಬೆಳೆಯನ್ನು ಬೆಳೆಯುತ್ತಾರೆ. ಮಳೆಗಾಲ ಬಂದರೆ ಅವರ ಕಷ್ಟ ಹೇಳತೀರದು. ಕುಣಿಗಲ್ ಮತ್ತು ಮಾಗಡಿ ತಾಲ್ಲೂಕ್ ಈ ಕಡೆ ಮಾರ್ಕೆಟ್ ತೆಗೆಯಲು ಆದಷ್ಟು ಗಮನವನ್ನು ಕೊಡಬೇಕು. ಕೆಲವು ಅಧಿಕಾರಿಗಳು ಈ ವ್ಯವಹಾರದಲ್ಲಿ ಅವ್ಯವಹಾರವನ್ನು ನಡೆಸುತ್ತಿದ್ದಾರೆಂದು ಜನರು ಹೇಳುತ್ತಿದ್ದಾರೆ ಇದನ್ನು ತಪ್ಪಿಸಬೇಕು. ಸಪರೇಟ್ ಫೆಸಿಲಿಟೀಸ್ ಕೊಡಬೇಕು. ಮಾರ್ಕೆಟಿಂಗ್ ಸಪರೇಟ್ ಫೆಸಿಲಿಟೀಸ್ ಇಲ್ಲದೆಹೋದರೆ ವ್ಯವಹಾರ ನಡೆಸುವುದಕ್ಕೆ ಸಾಧ್ಯವಾಗುವುದಿಲ್ಲ. ಹೆಚ್ಚಿನ ರೇಟ್ ಬಂದಾಗ ಅದನ್ನು ನೋಡಿಕೊಂಡು ಅಧಿಕಾರಿಗಳಿಗೆ ಸರಿಯಾದ ರೀತಿಯಲ್ಲಿ ವರ್ತನೆ ಮಾಡುವಂತೆ ನೋಡಿಕೊಳ್ಳಬೇಕೆಂದು ಹೇಳುತ್ತೇನೆ.

ಇನ್ನು ರೇಟ್ ವಿಚಾರದಲ್ಲಿ ನಾವು ಸಾಮಾನ್ಯವಾಗಿ ಗೂಡನ್ನು ಬೆಳೆಯುವ ಕಡೆಗಳಲ್ಲಿ ಅರ್ಧಭಾಗ ಸೀಡ್ಸ್‌ಗೆ ಹೋಗುತ್ತದೆ ಇನ್ನು ಅರ್ಧಭಾಗ ರೀಲರಿಗೆ ಹೋಗುತ್ತದೆ. ಆದ್ದರಿಂದ ತಾವು ಸರಿಯಾದ ಬೋನಸ್ ಕೊಡಬೇಕು. ಜೊತೆಗೆ ಒಳ್ಳೆಯ ರೇಟ್‌ನ್ನು ರೈತರಿಗೆ ಕೊಡಬೇಕೆಂದು ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಇನ್ನು ಮಾನ್ಯ ಅಧ್ಯಕ್ಷರೇ ಸಣ್ಣ ಕೈಗಾರಿಕೆಗಳ ಬಗ್ಗೆ ಕೆಲವು ಮಾತುಗಳನ್ನು ಹೇಳಬಯಸುತ್ತೇನೆ. ಎಲ್ಲಾ ಕೈಗಾರಿಕೆಗಳು ಬೆಂಗಳೂರು ಪ್ರದೇಶದಲ್ಲಿಯೇ ಬರತಕ್ಕಂಥದ್ದು ಇರುತ್ತದೆ. ಈಗಿರತಕ್ಕಂಥ ರೇಷ್ಮೆ ಕೈಗಾರಿಕಾ ಇಲಾಖೆಯಲ್ಲಿ ಜಾಯಿಂಟ್ ಡೈರೆಕ್ಟರ್ಸ್ ಇರುತ್ತಾರೆ, ಯಾವ ಯಾವ ಕ್ಷೇತ್ರಕ್ಕೆ ಯಾರು ಯಾರು ಇರುತ್ತಾರೆಂಬುದೇ ತಿಳಿಯುವುದಿಲ್ಲ. ಉದ್ದಕ್ಕೂ ಬೋರ್ಡ್ ಮಾತ್ರ ಕಾಣಿಸುತ್ತಿರುತ್ತದೆ. ಆಯಾ ಖಾತೆಗೆ ಸಂಬಂಧಪಟ್ಟಂತೆ ಅಂದರೆ ಕೈಗಾರಿಕೆಗೆ ಸಂಬಂಧಪಟ್ಟಂತೆ, ಅಗ್ರಿಕಲ್ಚರ್ ಸಂಬಂಧಪಟ್ಟಂತೆ ಮತ್ತೊಂದಕ್ಕೆ ಈ ರೀತಿ ಆಯಾ ಸ್ಥಳಗಳಲ್ಲಿ ನಮೂದು ಮಾಡಿದ್ದರೆ ಬಹಳ ಅನುಕೂಲವಾಗುತ್ತದೆಂದು ಹೇಳುತ್ತೇನೆ. ಕೈಗಾರಿಕಾ ಇಲಾಖೆಗೆ ಈಗಿರತಕ್ಕಂಥ ಅಧ್ಯಕ್ಷರು ಬಹಳ ದಕ್ಷತೆಯಿಂದ ಕೆಲಸ ಮಾಡುತ್ತಿರುತ್ತಾರೆ. ಅವರು ಕೂಡ ರೈತರಿಗೆ ಅನುಕೂಲ ಮಾಡಬೇಕು ಎನ್ನುವ ರೀತಿಯಲ್ಲಿ ಕೆಲಸ ಮಾಡುತ್ತಿದ್ದಾರೆ ಅವರು ಅಧಿಕಾರವಿದೆ ಎಂದು ಕೆಲಸ ಮಾಡುತ್ತಿಲ್ಲ, ಅಂಥವರನ್ನು ಇಟ್ಟುಕೊಂಡು ಕೆಲಸ ಮಾಡಬೇಕಾಗಿದೆ. ಪೀಣ್ಯದಲ್ಲಿ ಬೇಕಾದಷ್ಟು ಕೈಗಾರಿಕಾ ಎಸ್ಟೇಟ್‌ಗಳನ್ನು ಮಾಡಿರುತ್ತಾರೆ. ನಾವು ಕೂಡ ನೋಡುತ್ತಾ ಇದ್ದೇವೆ. ಅನೇಕ ಷೆಡ್‌ಗಳು ಖಾಲಿ ಬಿದ್ದಿರುತ್ತವೆ. ಆದರೆ ಯಾರು ಯಾರೋ ಹೊರಗಡೆಯಿಂದ ಬಂದಂಥವರಿಗೆ ಎಲ್ಲ ವಿಧವಾದ ಅನುಕೂಲಗಳನ್ನು ಒದಗಿಸುತ್ತೀರಿ ನೀರಿನ ಅನುಕೂಲತೆ ಫೈನಾನ್ಸ್ ಮತ್ತು ಜಮೀನು ಇದೆಲ್ಲ ಸೌಕರ್ಯಗಳನ್ನು ಒದಗಿಸಿಕೊಡುತ್ತೀರಿ. ಅದೇ ರೀತಿ ನಮ್ಮವರೂ ಕೂಡ ಇಂಡಸ್ಟ್ರೀಸ್‌ಗಳನ್ನು ತೆಗೆಯಲು ಬಂದರೆ ಉತ್ತೇಜನ ಕೊಡಬೇಕೆಂದು ಹೇಳುತ್ತೇನೆ

ಇನ್ನು ಸಾಮಾನ್ಯವಾಗಿ ರಾಜಾಜಿನಗರ ಪೀಣ್ಯ ಸೇರಿದಂತೆ ಒಂದು ಕೈಗಾರಿಕಾ ವಲಯವನ್ನು ಕ್ರಿಯೇಟ್ ಮಾಡಬೇಕು. ಬೆಂಗಳೂರು ಒಂದು ದೊಡ್ಡ ಕೈಗಾರಿಕಾ ಎಸ್ಟೇಟ್ ಪ್ರದೇಶವಾಗಿದೆ ಬೆಂಗಳೂರು ಸುತ್ತ ಮುತ್ತ ೫೦ ಮೈಲಿ ಪಟ್ಟಣ ಪ್ರದೇಶಗಳು ಇರುತ್ತವೆ. ಈ ಪ್ರದೇಶಗಳನ್ನೂ ಕೂಡ ಕೈಗಾರಿಕಾ ಪ್ರದೇಶಗಳನ್ನಾಗಿ ಅಭಿವೃದ್ಧಿ ಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ತಾಲ್ಲೂಕಿನಲ್ಲಿ ಕೂಡ ಈ ಒಂದು ಕೈಗಾರಿಕಾ ಎಸ್ಟೇಟನ್ನು ಮಾಡಿಕೊಡಬೇಕೆಂದು ನಾನು ಸರ್ಕಾರದವರಲ್ಲಿ ಕೇಳಿಕೊಂಡಿದ್ದೆ. ಆದರೆ ಇಲ್ಲಿಯವರೆಗೆ ಅದರ ಬಗ್ಗೆ ಸರ್ಕಾರ ಯೋಚಿಸುತ್ತಾ ಇದೆ. ನಮ್ಮ ಈ ಕುಣಿಗಲ್ ಮಂಗಳೂರು ಹೆದ್ದಾರಿಯಲ್ಲಿದೆ. ಆದ್ದರಿಂದ ಅಲ್ಲಿ ಒಂದು ಕೈಗಾರಿಕೆಯನ್ನು ಸ್ಥಾಪನೆ ಮಾಡಿ ಅನುಕೂಲ ಮಾಡಿಕೊಡಬೇಕೆಂದು ಸರ್ಕಾರದವರನ್ನು ಕೇಳಿಕೊಳ್ಳುತ್ತಿದ್ದೇನೆ. ಇನ್ನು ಸಣ್ಣ ಸಣ್ಣ ಹಳ್ಳಿಗಳಲ್ಲಿ ಮತ್ತು ತಾಲ್ಲೂಕು ಅಭಿವೃದ್ಧಿ ಮಂಡಲಿಗಳಲ್ಲಿ ಇನ್ಸ್‌ಪೆಕ್ಟರ್ಸ್ ಎಂದು ಇರುತ್ತಾರೆ. ಅವರಿಗೆ ಸರ್ಕಾರದವರು ಸರಿಯಾಗಿ ಗೈಡ್‌ಲೈನ್ಸ್ ಕೊಡಬೇಕು. ಹಳ್ಳಿಗಳಲ್ಲಿ ಇವತ್ತು ಹೊಸ ಅಗ್ರಿಕಲ್ಚರಲ್ ಇಂಪ್ಲಿಮೆಂಟ್ಸ್ ಬೇಕಾಗಿದೆ. ಪ್ರತಿಯೊಬ್ಬರಿಗೂ ಅದನ್ನು ಒದಗಿಸಿಕೊಡಬೇಕು. ಮೊದಲು ನಮ್ಮ ಕುಣಿಗಲ್‌ನಲ್ಲಿ ಅದನ್ನು ಮಾಡುತ್ತಾ ಇದ್ದರು, ಮಂಡ್ಯದಲ್ಲಿ ಕೂಡ ಮಾಡುತ್ತಾ ಇದ್ದರು. ಈಗ ಕುಣಿಗಲ್‌ನಲ್ಲಿ ಅದನ್ನು ನಿಲ್ಲಿಸಿಬಿಟ್ಟಿದ್ದಾರೆ. ಪ್ರತಿಯೊಂದು ತಾಲ್ಲೂಕಿನಲ್ಲಿ ಕೂಡ ಒಂದೊಂದು ಕೇಂದ್ರಗಳನ್ನು ಮಾಡಿ ಅದಕ್ಕೆ ಸರಿಯಾದ ಅನುಕೂಲತೆಗಳನ್ನು ಒದಗಿಕೊಟ್ಟು ಅಗ್ರಿಕಲ್ಚರಲ್ ಇಂಪ್ಲಿಮೆಂಟ್ಸ್

ಒದಗಿಸಿಕೊಡುವುದಕ್ಕೆ ಮತ್ತ ಅಲ್ಲಿ ಕೈಗಾರಿಕೆಯನ್ನು ಸ್ಥಾಪನೆ ಮಾಡುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ಕೇಳುತ್ತೇನೆ. ಅಲ್ಲದೆ ನಮ್ಮಲ್ಲಿ ಇನ್ಸ್‌ಪೆಕ್ಟರ್ ಏನಿದ್ದಾರೆ ಅವರು ಹಳ್ಳಿಗಳಲ್ಲ ಇರತಕ್ಕಂಥ ಆರ್ಟಿಸಾನ್ಸ್ ಬಗ್ಗೆ ಒಂದು ಲಿಸ್ಟನ್ನು ತೆಗೆದು ಕೊಂಡು ಬಾ ಎಂದರೆ ತೆಗೆದುಕೊಂಡು ಬಂದು ಕೊಡುತ್ತಾರೆ. ಆ ಆರ್ಟಿಸಾನ್ಸ್‌ಗೆ ಸರ್ಕಾರ ಒಳ್ಳೆಯ ಫೆಸಿಲಿಟೀಸನ್ನು ಕೊಡಬೇಕು. ಅವರಿಗೆ ಒಂದು ವರ್ಷಕ್ಕೆ ಈಗ ಒಬ್ಬರಿಗೆ ಅಥವಾ ಇಬ್ಬರಿಗೆ ಅನುಕೂಲ ಮಾಡಿಕೊಡುತ್ತಿದ್ದಾರೆ, ಅವರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಅವರೆಲ್ಲಾ ಬದಲಾವಣೆಯಾಗುವ ರೀತಿಯಲ್ಲಿ ಅನುಕೂಲ ಮಾಡಿಕೊಡಬೇಕೆಂದು ನಾನು ಪ್ರಾರ್ಥಿಸಿಕೊಳ್ಳುತ್ತೇನೆ. ಇನ್ನು ಖಾದಿಬೋರ್ಡ್ ಬಗ್ಗೆ ಒಂದೆರಡು ವಿಚಾರಗಳನ್ನು ಹೇಳಬಯಸುತ್ತೇನೆ. ಇದರಲ್ಲಿ ಏನಾಗಿದೆ ಎಂದರೆ ನಮ್ಮಲ್ಲಿ ಖಾದಿಬೋರ್ಡ್‌ನಲ್ಲಿ ಲೋಕಲ್ ಬಟ್ಟೆ ಸಿಕ್ಕುವುದಿಲ್ಲ, ಅವರು ಏನು ಹೇಳುತ್ತಾರೆ ಎಂದರೆ ಬಿಹಾರಕ್ಕೋ ಮತ್ತೆಲಿಗೋ ಹೋಗಿ ತರಬೇಕು ಎಂದು ಹೇಳುತ್ತಾರೆ. ನಮ್ಮ ಬದನವಾಡ ಮತ್ತು ಮತ್ತಿಕೆರೆಯಲ್ಲಿ ನಮ್ಮದೇ ಒಂದು ಕೇಂದ್ರ ಇತ್ತು. ಅಲ್ಲಿ ಹೆಚ್ಚಿನ ರೀತಿಯಲ್ಲಿ ಖಾದಿ ತಯಾರಾಗುತ್ತಾ ಇತ್ತು. ಈಗ ಏನು ಮಾಡಿದ್ದಾರೆ ಎಂದರೆ ಅದನ್ನು ಪ್ರೈವೇಟ್‌ನವರಿಗೆ ಕೊಡಬೇಕೆಂದು, ಸರ್ಕಾರದವರು ಯೋಚನೆ ಮಾಡುತ್ತಿದ್ದಾರೆ. 'ಅದನ್ನು ನಮ್ಮ ಕೈಯಲ್ಲಿ ನಡೆಸಿಕೊಂಡು ಹೋಗುವುದಕ್ಕಾಗುವುದಿಲ್ಲ' ಎಂದು ಹೇಳಿ ಸರ್ಕಾರದವರು ಖಾದಿಯನ್ನು ತಯಾರು ಮಾಡುವುದಕ್ಕೆ ಅದನ್ನು ಪ್ರೈವೇಟ್‌ನವರ ಕೈಯಲ್ಲಿ ಕೊಟ್ಟರೂ ಕೂಡ ಅಲ್ಲಿ ನಿಮ್ಮ ಅಧಿಕಾರಿಗಳನ್ನೇ ಇಟ್ಟುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ನಾನು ಅವರಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ಈ ಗೋಬರ್‌ಗ್ಯಾಸ್ ಬಗ್ಗೆ ಹೇಳಬೇಕು ಎಂದರೆ, ನಮ್ಮ ಹಳ್ಳಿಗಾಡಿನಲ್ಲಿ ಈ ಗೋಬರ್‌ಗ್ಯಾಸ್ ಬಹಳ ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿಗೆ-ಬರುತ್ತಾ ಇದೆ. ಪ್ರತಿಯೊಬ್ಬ ರೈತರಿಗೂ ಕೂಡ ಆ ಒಂದು ಅನುಕೂಲವನ್ನು ಮಾಡಿಕೊಳ್ಳಬೇಕು ಎನ್ನುವ ಆತುರ ಏದೆ. ಆದರೆ ಅದಕ್ಕೆ ೫೦೦೦–೬೦೦೦ ರೂಪಾಯಿಗಳಾಗುತ್ತದೆ ಎಂದು ಜನರು ಹೆದರುತ್ತಿದ್ದಾರೆ. ಅವರಿಗೆ ಸಬ್ಸಿಡಿಯನ್ನು ಹೆಚ್ಚಾಗಿ ಕೊಟ್ಟು ಅನುಕೂಲ ಮಾಡಿಕೊಡಬೇಕು. ಅಲ್ಲಿ ಕೆಲಸಮಾಡತಕ್ಕಂಥ ಅಧಿಕಾರಿಗಳು ಯಾರಿದ್ದಾರೆ ಅವರು ಸರಿಯಾದ ರೀತಿಯಲ್ಲಿ ಕೆಲಸಮಾಡುವುದಕ್ಕೆ ಸರಿಯಾದ ಅನುಕೂಲಗಳು ಇಲ್ಲ. ಅವರಿಗೆ ಎಲ್ಲಾ ಅನುಕೂಲಗಳನ್ನು ಕೂಡ ಒದಗಿಸಿಕೊಡಬೇಕೆಂದು ನಾನು ಹೇಳುತ್ತೇನೆ. ನನಗೆ ಗೊತ್ತಿರುವಹಾಗೆ ಈಗಿರುವ ಅಧ್ಯಕ್ಷರು ಬೆಂಗಳೂರಿನಲ್ಲಿಯೂ ಕೆಲಸಮಾಡುತ್ತಾರೆ ಮತ್ತು ಹುಬ್ಬಳ್ಳಿಯಲ್ಲಿ ಅವರ ಹೆಂಡತಿಯ ಹೆಸರಿನಲ್ಲಿ ಕೂಡ ಒಂದು ಇದೆಯಂತೆ, ಅವನ್ನು ಅವರು ನೋಡಿಕೊಳ್ಳುತ್ತಿದ್ದಾರೆ. ಅದನ್ನು ಬೇರೆಯವರಿಗೆ ವಹಿಸಿಕೊಟ್ಟು, ಬೆಂಗಳೂರಿನಲ್ಲಿ ಅವರು ಕೆಲಸಮಾಡಿ ಆ ಸಂಸ್ಥೆಯನ್ನು ಅಭಿವೃದ್ಧಿಪಡಿಸಬೇಕು ಎಂದು ಹೇಳುತ್ತೇನೆ. ಈ ಖಾದಿ ಬೋರ್ಡ್ ಏನಿದೆ ಇದು ಹಳ್ಳಿಗಾಡಿನ ಜನರಿಗೆ ಅನುಕೂಲವಾಗುವ ರೀತಿಯಲ್ಲಿ ಕೆಲಸಮಾಡಬೇಕು ಎಂದು ಹೇಳುತ್ತೇನೆ. ಈ ಎಣ್ಣೆ ಬೀಜವನ್ನು ಬೆಳೆದುಕೊಳ್ಳುವುದಕ್ಕೆ ರೈತರಿಗೆ ದುಡ್ಡು ಕೊಡುತ್ತಾರೆ. ಹಾಗೆ ದುಡ್ಡು ತೆಗೆದುಕೊಂಡಂತಹ ರೈತರಿಗೆ ಅವರು ಎಷ್ಟು ಸ್ಟಾಕ್ ಮಾಡುತ್ತಾರೆ, ಎಷ್ಟು ಉತ್ಪತ್ತಿ ಮಾಡುತ್ತಾರೆ ಎನ್ನುವುದು ಅವರಿಗೆ ಗೊತ್ತಾಗುವುದಿಲ್ಲ. ಎಷ್ಟೋ ಕಡೆ ನಾನು ನೋಡಿದಹಾಗೆ ಖಾದಿಬೋರ್ಡ್‌ನಿಂದ ಅವರು ಸಾಲ ತೆಗೆದುಕೊಂಡಿರತಕ್ಕಂಥಾದ್ದು ಗೊತ್ತಿರುತ್ತದೆ. ಅವರು ಆ ಸಾಲವನ್ನು ತೆಗೆದುಕೊಂಡ ಎಷ್ಟು ಚೆನ್ನಾಗಿ ಕೆಲಸಮಾಡಿದ್ದಾರೆ ಅದು ಏನಾಗಿದೆ ಎಂಬುದು ಗೊತ್ತಾಗುವುದಿಲ್ಲ. ಆದ್ದರಿಂದ ಖಾದಿಬೋರ್ಡಿನ ಅಧಿಕಾರಿಗಳನ್ನು ಅಲ್ಲಿಗೆ ಕಳಿಸಿಕೊಟ್ಟು ಆ ಬಗ್ಗೆ ವಿಚಾರ ಮಾಡಿಸಬೇಕು. ಮತ್ತು ಸಣ್ಣ ಕೈಗಾರಿಕೆಗಳು ಹೆಚ್ಚಿನ ರೀತಿಯಲ್ಲಿ ಬೆಳೆಯುವುದಕ್ಕೆ ಅವಕಾಶ ಮಾಡಿಕೊಟ್ಟು ಅವುಗಳ ಅಭಿವೃದ್ಧಿಯನ್ನು ಮಾಡಬೇಕು, ಇದರಿಂದ ಹಳ್ಳಿಗಾಡಿನ ಜನತೆಗೆ ಅನುಕೂಲವಾಗುತ್ತದೆಂದು ಹೇಳುತ್ತೇನೆ. ಈ ಸಂದರ್ಭದಲ್ಲಿ ಒಂದು ವಿಚಾರವನ್ನು ನಾನು ತಮ್ಮ ಮೂಲಕ ಮಾನ್ಯ ಮಂತ್ರಿಯವರ ಗಮನಕ್ಕೆ ತರುವುದಕ್ಕೆ ಬಯಸುತ್ತೇನೆ, ಕುಣಿಗಲ್ ಮತ್ತು ಹುಲಿಯೂರುದುರ್ಗದಲ್ಲಿ ಮಹಮದೀಯರಿಗೆ ಎಂಕ್ವೆ ಸೇರಿದಂತಹ ಪ್ರಾಪರ್ಟಿ ಇದೆ. ಅವರೆಲ್ಲಾ ಬಹಳ ಬಡಜನರು. ಕುಣಿಗಲ್ ಮತ್ತು ಹುಲಿಯೂರುದುರ್ಗದಲ್ಲಿ ಆ ಆಸ್ತಿ (ಮಹಮದೀಯರಿಗೆ ಸೇರಿದಂತಹ ವಾಕ್ಫ್ ಪ್ರಾಪರಿಟಿ ಇದೆ) ಸೆಂಟರ್‌ಪ್ಲೇಸ್‌ನಲ್ಲಿ ಇವೆ. ಅವು ನಾಷನಲ್ ಹೈವೇಸ್‌ನಲ್ಲಿ ಇವೆ. ಹುಲಿಯೂರುದುರ್ಗ ಬಹಳ ಸೆಂಟರ್‌ನಲ್ಲಿರತಕ್ಕಂಥ ಪ್ರದೇಶ ಆದ್ದರಿಂದ ಆ ಪ್ರದೇಶದಲ್ಲಿ ಅವರಿಗಾಗಿ ಅಂಗಡಿಗಳನ್ನು ಕಟ್ಟಿಕೊಡಬೇಕು. ಏಕೆಂದರೆ ಆ ಜನ ಅವರಾಗಿಯೇ ಮುಂದೆ ಬಂದು ಅದನ್ನು ಅಭಿವೃದ್ಧಿ ಮಾಡಿಕೊಳ್ಳುವುದಕ್ಕಾಗುವುದಿಲ್ಲ. ಅಂತಹ ಜನಗಳು ಆ ಪ್ರಾಪರ್ಟಿಯನ್ನು ಹಾಗೆಯೇ ಬಿಟ್ಟುಕೊಂಡಿದ್ದರೆ ಪ್ರಯೋಜನವಾಗುವುದಿಲ್ಲ ಅಲ್ಲಿ ಅದಕ್ಕೆ ಅಂಗಡಿಗಳನ್ನು ಕಟ್ಟಿಕೊಟ್ಟು ಅವರು ಆ ಒಂದು ಕಸಬನ್ನು ಮಾಡಿಕೊಳ್ಳುವುದಕ್ಕೆ ಅನುಕೂಲ ಮಾಡಿಕೊಡಬೇಕೆಂದು ಹೇಳಬಯಸುತ್ತೇನೆ. ಇಷ್ಟು ಮಾತನಾಡಲು ಅವಕಾಶ ಕೊಟ್ಟದ್ದಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ).—ಮಾನ ಅಧ್ಯಕ್ಷರೇ, ಇದು ಈ ಸಭೆಯ ಮುಂದೆ ರೇಷ್ಮೆ ಹಾಗೂ ಕೈಗಾರಿಕೆ ಮತ್ತು ಇನ್ನಿತರ ಇಲಾಖೆಗಳ ಬೇಡಿಕೆಗಳನ್ನು ಈ ಸದನದ ಒಪ್ಪಿಗೆಗಾಗಿ ಮಾನ್ಯ ಸಚಿವರು ಮಂಡಿಸಿದ್ದಾರೆ. ಅದನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತ ಮಾಡುತ್ತಾ ಆ ಬಗ್ಗೆ ನನ್ನ ಕೆಲವು ಸಲಹೆಗಳನ್ನು ಕೊಡುವುದಕ್ಕೆ ಇಚ್ಛಿಪಡುತ್ತೇನೆ. ಇದಕ್ಕೆ ಪೂರ್ವಭಾವಿಯಾಗಿ ನಾನು ಈ ರೇಷ್ಮೆ ಮತ್ತು ಕೈಗಾರಿಕೆ ಇಲಾಖೆಯ ಬಗ್ಗೆ ಸಂಕ್ಷಿಪ್ತವಾಗಿ ಚರ್ಚೆ ಮಾಡುವುದಕ್ಕೆ ಇಷ್ಟ ಪಡುತ್ತೇನೆ. ಇವತ್ತು ಈ ಕೈಗಾರಿಕಾ ಇಲಾಖೆ ಎನ್ನತಕ್ಕಂಥಾದ್ದು ಬಹಳ ಪ್ರಾಮುಖ್ಯವಾದ ಇಲಾಖೆ ಹಾಗೂ ಬಹಳ ಬೃಹತ್ತಾಗಿ ಬೆಳೆದಿರತಕ್ಕಂಥ ಇಲಾಖೆ. ಈ ಕೈಗಾರಿಕೆಗಳ ಪ್ರಾಮುಖ್ಯತೆ ಇನ್ನೂ ಹೆಚ್ಚಾಗ ಬೇಕು ಎನ್ನತಕ್ಕಂಥ ಅಭಿಪ್ರಾಯವನ್ನು ನಾನಾದರೂ ಹೇಳುತ್ತೇನೆ. ಏತಕ್ಕಾಗಿ ನಾನು ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ನಾವು ನಮ್ಮ ಕ್ಷೇತ್ರದ ಯಾವುದೇ ಹಳ್ಳಿಗಳಿಗೆ ಹೋಗಲಿ, ಅಲ್ಲಿ ಯಾವ ವರ್ಗದ ಜನರೇ ಇರಲಿ, ಕೊನೆಯಪಕ್ಷ ಒಂದೊಂದು ಹಳ್ಳಿಯಲ್ಲಿ ೨-೩-೫-೬ ಜನ ವಿದ್ಯಾವಂತರು ನಿರುದ್ಯೋಗಿ ಗಳಾಗಿದ್ದಾರೆ. ಅಲ್ಲಿ ಹಳ್ಳಿಗರು 'ನಮ್ಮ ಗ್ರಾಮಕ್ಕೆ ಇಂತಹ ಸೌಕರ್ಯಗಳು ಆಗಬೇಕು. ಎಂದು ಕೇಳುವುದಕ್ಕಿಂತ ಹೆಚ್ಚಾಗಿ' ನಮ್ಮ ಮಕ್ಕಳಿಗೆ ಕೆಲಸ ಕೊಡಿಸಿ, ನಾವು ಅಷ್ಟು ಕಷ್ಟಪಟ್ಟು ಓದಿಸಿದ್ದೇವೆ, ವಿದ್ಯಾಭ್ಯಾಸ ಮಾಡಿಸಿದ್ದೇವೆ ಅವನು ಕೆಲಸಕ್ಕೆ ಸೇರಿದ್ದರೆ ಇಂತಹ ಅನಾಹುತಗಳು ಆಗುತ್ತವೆ. ಎಂದು ನಾವು ಹೋದಕಡೆಯಲ್ಲೆಲ್ಲಾ ಅವರು ಹೇಳತಕ್ಕಂಥಾದ್ದನ್ನು ಕೇಳಿ ಕೇಳಿ ನಮಗೆ ಸಾಕಾಗಿದೆ. ನಾನು ಕಳಕಳಿಯಿಂದ ಕೇಳುತ್ತಿದ್ದೇನೆ, ಇಂತಹ ಒಂದು ನಿರುದ್ಯೋಗ ಸಮಸ್ಯೆಯನ್ನು ಏನಾದರೂ ಮಾಡಿ ಕೊನೆಗೊಳಿಸುವುದಕ್ಕೆ ಸಾಧ್ಯವಿದೆಯೇ ? ನಾವು ಈ ಬಗ್ಗೆ ಯೋಚನೆ ಮಾಡುವುದಾದರೆ, ಹಳ್ಳಿಯಲ್ಲಿ ರೈತರು ಮಾಡುವುದರಲ್ಲಿ ಯಾವುದೇ ತರಹದ ಲಾಭ ಇಲ್ಲವೆಂದು ಎಲ್ಲರಿಗೂ ಗೊತ್ತಿದೆ. ಇವತ್ತು ರೈತರ ಮಕ್ಕಳೆಲ್ಲಾ ಪಟ್ಟಣವನ್ನು ಸೇರುತ್ತಿದ್ದಾರೆ, ಮತ್ತು ಉದ್ಯೋಗಕ್ಕಾಗಿ ಹುಡುಕಾಡುತ್ತಿದ್ದಾರೆ, ಈ ಮಾತನ್ನು ನಾವೆಲ್ಲರ ಒಪ್ಪಬೇಕಾದ್ದು ಇದೆ. ಇವತ್ತು ರೈತರ ಮಕ್ಕಳಿಗೆ ನಾವು ಉದ್ಯೋಗವನ್ನು ಕೊಡಬೇಕು. ಇವತ್ತು ಇಂಜಿನಿಯರಿಂಗ್‌ನಲ್ಲಿ 100 ಅಲ್ಲ ಲಕ್ಷಾಂತರ ಜನ ವಿದ್ಯಾರ್ಥಿಗಳು ಪದವಿಯನ್ನು ಪಡೆದುಕೊಂಡು ವಿಶ್ವವಿದ್ಯಾನಿಲಯಗಳಿಂದ ಹೊರಬರುತ್ತಿದ್ದಾರೆ. ಅವರಿಗೆ ಇರತಕ್ಕಂಥ ದೊಡ್ಡ ಸಮಸ್ಯೆ ಎಂದರೆ ನಿರುದ್ಯೋಗ ಸಮಸ್ಯೆ, ' ಅದನ್ನು ಯಾವರೀತಿ ಸಾಲ್ವ್ ಮಾಡುತ್ತೇವೆ ಎನ್ನತಕ್ಕಂಥಾದ್ದು ನಮ್ಮ ಮುಂದೆ ಇರತಕ್ಕಂಥ ದೊಡ್ಡ ಪ್ರಶ್ನೆಯಾಗಿದೆ. ನಾನಾದರೂ ಈ ಬಗ್ಗೆ ಅಭಿಪ್ರಾಯ ಪಡತಕ್ಕಂಥಾದ್ದು ಏನೆಂದರೆ ಈ ನಿರುದ್ಯೋಗ ಸಮಸ್ಯೆಯನ್ನು ನಾವು ಏನಾದರೂ ಬಗೆಹರಿಸಬೇಕಾದರೆ ಬಹುತೇಕವಾಗಿ ಈ ಇಲಾಖೆ ಒಂದರಿಂದ ಮಾತ್ರ ಸಾಧ್ಯವೇ ವಿನಹ ಇನ್ನು ಯಾವ ಇಲಾಖೆಯಿಂದಲೂ ಸಾಧ್ಯವಿಲ್ಲ ಎನ್ನತಕ್ಕಂಥ ಮಾತನ್ನು ಹೇಳುತ್ತಿದ್ದೇನೆ. ಇವತ್ತು ನಿಮ್ಮ ಅನುಯಲ್ ರಿಪೋರ್ಟಿನಲ್ಲಿ ಈ ಬಗ್ಗೆ ನಿಮ್ಮ ಉದ್ದೇಶಗಳು ಏನು ಎಂಬುದನ್ನು ಸಂಕ್ಷಿಪ್ತವಾಗಿ ಹೇಳಿದ್ದೀರಿ. ಅದರಲ್ಲಿ ಬಹಳ ಮುಖ್ಯವಾಗಿ ಕ್ರಿಯೇಷನ್ ಆಫ್ ಅಡಿಷನಲ್ ಎಂಪ್ಲಾಯ್‌ಮೆಂಟ್ ಅಪರ್ಚ್ಯುನಿಟೀಸ್ ಎನ್ನತಕ್ಕಂಥ ಮಾತನ್ನು ಹೇಳಿದ್ದೀರಿ. ಈ ಒಂದು ಉದ್ದೇಶವನ್ನು ಸಾಧನೆ ಮಾಡಬೇಕಾದರೆ ಏನೆಲ್ಲಾ ಕಾರ್ಯಕ್ರಮಗಳನ್ನು ನೀವು ಮಾಡಿದ್ದೀರಿ ಎನ್ನತಕ್ಕಂಥ ವಿಚಾರವನ್ನು ತಿಳಿದುಕೊಳ್ಳುವುದಕ್ಕೆ ಇದರಲ್ಲಿ ಯಾವುದೇ ತರಹದ ವಿವರಗಳುಇಲ್ಲ. ನಿಮ್ಮ ಇಲಾಖೆಗೆ ಸಂಬಂಧಪಟ್ಟಹಾಗೆ ಹತ್ತಾರು ಕೈಗಾರಿಕೆಗಳು ಇವೆ, ಹತ್ತಾರು ಕಾರ್ಪೋರೇಷನ್‌ಗಳು ಇವೆ. ಹತ್ತಾರು ಮಂಡಲಿಗಳು ಇವೆ. ಅವುಗಳೆಲ್ಲದರ ಆನ್ಯುಯಲ್ ರಿಪೋರ್ಟ್‌ಗಳನ್ನು ನಮಗೆ ಒದಗಿಸಿಕೊಟ್ಟಿದ್ದೇ ಆಗಿದ್ದರೆ ನಿಮ್ಮ ಉದ್ದೇಶ ಎಷ್ಟರಮಟ್ಟಿಗೆ ಸಾಧನೆಯಾಗಿದೆ ಎಂಬುದನ್ನು ನೋಡಬಹುದಾಗಿತ್ತು ಮತ್ತು ಇನ್ನೂ ಏನೇನು ಕೆಲಸಗಳನ್ನು ನೀವು ಮಾಡಬೇಕು ಎಂಬ ಬಗ್ಗೆ ಸಲಹೆಗಳನ್ನೂ ನಾವು ಕೊಡಬಹುದಾಗಿತ್ತು. ನೀವು ಕೇವಲ ನಾಲ್ಕು ಹಾಳೆಯಲ್ಲಿ ಪ್ರಿಂಟ್‌ಆಗಿರತಕ್ಕಂಥ ರಿಪೋರ್ಟ್‌ನ್ನು ಕೊಟ್ಟಿದ್ದೀರಿ. ಹೋದವರ್ಷ ಕೊಟ್ಟಿರತಕ್ಕಂಥ ವಿಷಯಗಳನ್ನೇ ಹೇಳಿ ಅದನ್ನು ಪ್ರಿಂಟ್ ಮಾಡಿಸಿ ರಿಪೋರ್ಟ್ ಕೊಟ್ಟಿದ್ದೀರಿ. ಇದನ್ನು ನೋಡಿದರೆ ನಮಗೆ ಬದಲಾವಣೆ ಏನಾಗಿದೆ ಎಂಬುದು ಗೊತ್ತಾಗುತ್ತಿಲ್ಲ. ಹೋದವರ್ಷ ಇದ್ದದ್ದೇ ಈ ವರ್ಷ ಇದೆಯೆಂದು ಗೊತ್ತಾಗುತ್ತಿದೆ. ಈ ಸಭೆಯಲ್ಲಿ ಈ ಇಲಾಖೆಯ ಬೇಡಿಕೆಯನ್ನು ಮಂಡನೆ ಮಾಡತಕ್ಕಂಥ ಕಾಲದಲ್ಲಿ ನಿಮ್ಮ ಅಧಿಕಾರಿಗಳು ಒಂದು ಸರಿಯಾದ ರಿಪೋರ್ಟನ್ನು ಕೊಡುವುದಕ್ಕೆ ಏತಕ್ಕೆ ಹಿಂಜರಿಯುತ್ತಿದ್ದಾರೆ ಎಂದು ಈ ಸಂದರ್ಭದಲ್ಲಿ ನಾನು

---

† Indicates that remarks or speeches have not been revised by the member concerned.

ಕೇಳುವುದಕ್ಕೆ ಇಚ್ಛಿಪಡುತ್ತೇನೆ. ಹಿಂದೆ ಆಗಿದ್ದ ಆಗಿಹೋಯಿತು. ಇನ್ನು ಮುಂದೆ ಈ ರೀತಿ ಆಗ ಬಾರದು. ಇನ್ನು ಮುಂದೆ ಸಂಕ್ಷಿಪ್ತವಾಗಿ ಬ್ಯಾಲೆನ್ಸ್ ಷೀಟನ್ನು ಕೊಟ್ಟರೆ ಎಷ್ಟರಮಟ್ಟಿಗೆ ನಿಮ್ಮ ಕೆಲಸ ಕಾರ್ಯಗಳು ನಡೆಯುತ್ತಿವೆ ಎಂಬುದನ್ನು ಹೇಳುವುದಕ್ಕೆ ಸಾಧ್ಯವಾಗುತ್ತದೆ.

ಇನ್ನು ಈ ಕೈಗಾರಿಕಾ ಇಲಾಖೆಗೆ ಸಂಬಂಧಪಟ್ಟಂತೆ ಕೆಲವು ವಿಷಯಗಳನ್ನು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಬೋರ್ಡ್ ಎಂದು ಈ ಇಲಾಖೆಗೆ ಸೇರಿದಂತೆ ಇದೆ. ಈ ಬೋರ್ಡಿನವರ ಕೆಲಸವನ್ನು ನಾನು ಸ್ವಾಗತ ಮಾಡುತ್ತೇನೆ. ಇವರು ಅನೇಕ ಕಡೆಗಳಲ್ಲಿ ಜಾಗಗಳನ್ನು ಸ್ವಾಧೀನಪಡಿಸಿಕೊಂಡು ಸೈಟ್‌ಗಳನ್ನು ಮಾಡಿದ್ದಾರೆ. ಆದರೆ ಎಲ್ಲರಿಗೂ ತೃಪ್ತಿಯಾಗುವ ರೀತಿಯಲ್ಲಿ ಇವರು ಕೆಲಸ ಮಾಡುತ್ತಿಲ್ಲ. ನೆನ್ನೆ ಮಾನ್ಯ ದೇವೇಗೌಡರು ಉದಾಹರಣೆಗೆ ಒಂದು ವಿಷಯ ಪ್ರಸ್ತಾಪ ಮಾಡಿ ಹೇಳಿದರು. ಈಗ ತಮಿಳುನಾಡಿಗೆ ಸೇರಿದ ಹೊಸೂರಿನಲ್ಲಿ ಸಿಪ್-ಕಾಟ್ ಕಾರ್ಪೊರೇಷನ್ ಇದೆ. ಈ ಹೊಸೂರು ನಮ್ಮ ಬೆಂಗಳೂರಿಗೆ ಕೇವಲ ೪೦ ಮೈಲಿಗಳ ದೂರದಲ್ಲಿದೆ. ಈ ಕಾರ್ಪೊರೇಷನ್ ಅವರು ಹೊಸದಾಗಿ ಕೈಗಾರಿಕೆ ಸ್ಥಾಪನೆ ಮಾಡುವವರಿಗೆ ಎಲ್ಲ ರೀತಿಯ ಸೌಲಭ್ಯಗಳನ್ನು ಒದಗಿಸಿ ಕೊಡುತ್ತಿದೆ. ಇದನ್ನು ನಾವು ಸಂಕ್ಷಿಪ್ತವಾಗಿ ಯೋಚನೆ ಮಾಡುವುದಾದರೆ ನಾವು ಈ ದಿಶೆಯಲ್ಲಿ ಬಹಳ ಹಿಂದೆ ಇದ್ದೇವೆಂದು ಹೇಳಬೇಕಾಗಿದೆ. ನಮ್ಮ ರಾಜ್ಯದಲ್ಲಿರುವ ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಬೋರ್ಡಿನವರು ಬೆಂಗಳೂರಿನಲ್ಲಿಯೂ ಸಹ ಸೈಟ್‌ಗಳನ್ನು ಮಾಡಿದ್ದಾರೆ. ಆದರೆ ಅದರ ಬೆಲೆ ಮಾತ್ರ ಕಡಿಮೆಯೇನಿಲ್ಲ. ನಮ್ಮ ತುಮಕೂರಿನ ಹಿರೇಹಳ್ಳಿ ಹತ್ತಿರವೂ ಸಹ ಸೈಟ್‌ಗಳನ್ನು ಮಾಡಿದ್ದಾರೆ. ಆದರೆ ಈ ಸೈಟ್‌ಗಳು ತುಮಕೂರಿಗೆ ಹತ್ತು ಮೈಲಿಗಳ ದೂರದಲ್ಲಿರುವುದರಿಂದ ಅಲ್ಲಿ ಕೈಗಾರಿಕೆ ಸ್ಥಾಪನೆ ಮಾಡಿ ಕೆಲಸ ಕೊಟ್ಟರೆ ಯಾರು ಹೋಗುತ್ತಾರೆ? ಇದಕ್ಕೂ ಮೊದಲು ಸೈಟ್‌ಗಳನ್ನು ಮಾಡಿದ ಮೇಲೆ ಅಲ್ಲಿ ಕುಡಿಯುವ ನೀರಿನ ಸೌಲಭ್ಯವನ್ನು ಸಹ ಒದಗಿಸಬೇಕು. ಆದರೆ ಈ ಸೌಕರ್ಯ ಇಲ್ಲ. ಇದರ ಜೊತೆಗೆ ೨ ವರ್ಷದೊಳಗೆ ಕೈಗಾರಿಕೆ ಪ್ರಾರಂಭ ಮಾಡಿದಿದ್ದರೆ ಕೊಟ್ಟ ಸೈಟ್‌ನ್ನು ರದ್ದು ಮಾಡುತ್ತಾರೆ. ಇಲ್ಲದ ತೊಂದರೆಗಳನ್ನು ಕೊಡುತ್ತಾರೆ. ಇದನ್ನು ನಾನು ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದಿದ್ದೇನೆ. ಬೆಳಗಾಂನಲ್ಲಿ ಒಬ್ಬ ಕೈಗಾರಿಕೋದ್ಯಮಿ ಕೈಗಾರಿಕೆ ಒಂದನ್ನು ಸ್ಥಾಪನೆ ಮಾಡಲು ಮುಂದೆ ಬಂದಾಗ ಸೈಟ್ ಕೊಡಲಾಯಿತು. ಆದರೆ ಕೆಲವೊಂದು ಸೌಲಭ್ಯಗಳನ್ನು ಕಲ್ಪಿಸಿಕೊಡದ ಕಾರಣ ಅವರು ಕೈಗಾರಿಕೆ ಸ್ಥಾಪನೆ ಮಾಡಲು ತಡವಾಯಿತು. ಇದೇ ಕಾರಣದಿಂದ ಅವರಿಗೆ ಕೊಟ್ಟ ಸೈಟನ್ನು ರದ್ದು ಮಾಡುವುದಾಗಿ ನೋಟೀಸ್ ಕೊಟ್ಟಿದ್ದಾರೆ. ಈ ರೀತಿ ತೊಂದರೆ ಕೊಟ್ಟರೆ ಬೇರೆ ರಾಜ್ಯದವರು ನಮ್ಮ ರಾಜ್ಯಕ್ಕೆ ಕೈಗಾರಿಕೆ ಸ್ಥಾಪನೆ ಮಾಡಲು ಮುಂದೆ ಬರುವುದಿಲ್ಲ. ನಮ್ಮ ಕರ್ನಾಟಕ ದವರಿಗೂ ಆದ್ಯತೆ ಕೊಡಬೇಕು, ಆದರೆ ಎಷ್ಟು ಕೊಡಬೇಕೋ ಅಷ್ಟು ಕೊಡಬೇಕು. ಅದೇ ಕಾಲಕ್ಕೆ ಹೊರಗಿನಿಂದ ಬಂದ ವರಿಗೆ ಇಲ್ಲಿ ತೊಂದರೆ ಕೊಟ್ಟರೆ ಯಾರೂ ಇಲ್ಲಿಗೆ ಬರುವುದಿಲ್ಲ. ಅದೇ ಹೊಸೂರಿನಲ್ಲಿ ಯಾವ ಒಂದು ಕಂಡೀಷನ್‌ಗಳನ್ನಾಗಲೀ, ನಿರ್ಬಂಧಗಳನ್ನಾಗಲೀ ಹಾಕದೆ ಎಲ್ಲ ರೀತಿಯ ಸೌಲಭ್ಯಗಳನ್ನು ಒದಗಿಸಿಕೊಡು ತ್ತಾರೆ. ನಮ್ಮಲ್ಲಿಯೂ ಸಹ ಇದೇ ರೀತಿ ಮಾಡಿದರೆ ಸರ್ಕಾರಕ್ಕೆ ನಷ್ಟವಾಗಬಹುದು, ಆದರೆ ಕೈಗಾರಿಕಾ ಬೆಳವಣಿಗೆ ದೃಷ್ಟಿಯಿಂದ ಎಲ್ಲ ಅನುಕೂಲಗಳನ್ನು ಒದಗಿಸಿಕೊಡುವುದು ಒಳ್ಳೆಯದೆಂದು ಹೇಳುತ್ತೇನೆ. ಈ ದಿಶೆಯಲ್ಲಿ ನಮ್ಮ ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಬೋರ್ಡು ಕೆಲಸ ಮಾಡಬೇಕೆಂದು ಹೇಳುವು ದಕ್ಕೆ ಇಷ್ಟಪಡುತ್ತೇನೆ.

ಇನ್ನು ಎಲ್ಲ ಜಿಲ್ಲೆಗಳಲ್ಲಿಯೂ ಕೈಗಾರಿಕಾ ಕೇಂದ್ರಗಳನ್ನು ಸ್ಥಾಪನೆ ಮಾಡಿದ್ದೀರಿ. ಇದನ್ನು ನಾನು ಸ್ವಾಗತ ಮಾಡುತ್ತೇನೆ. ಈ ಕೇಂದ್ರದವರು ಆಯಾ ಜಿಲ್ಲೆಯಲ್ಲಿ ಯಾವ ಯಾವ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬಹುದೆಂಬ ಬಗ್ಗೆ ಒಂದು ಪ್ರಾಜೆಕ್ಟ್ ರಿಪೋರ್ಟನ್ನು ಕೈಗಾರಿಕೆಗಳನ್ನು ಸ್ಥಾಪನೆ ಮಾಡಲು ಮುಂದೆ ಬರುವವರಿಗೆ ಕೊಡುತ್ತಾರೆ. ನಾನು ಒಂದೆರಡು ಜಿಲ್ಲೆಗಳಿಗೆ ಹೋಗಿ ನೋಡಿದಾಗ ಅನೇಕ ಪೋಸ್ಟ್‌ಗಳನ್ನು ಭರ್ತಿ ಮಾಡದಿರುವುದು ಕಂಡುಬಂತು. ಒಂದು ಕಡೆ ಜನರಲ್ ಮೇನೇಜರ್ ಇಲ್ಲ ಎಂದು ಹೇಳಿದರೆ ಮತ್ತೊಂದು ಕಡೆ ಎಕ್ಸ್‌ಟೆನ್‌ಷನ್ ಆಫೀಸರ್ ಇಲ್ಲ ಎಂದು ಹೇಳಿದರು. ಈ ಸ್ಥಾನ ಗಳನ್ನೆಲ್ಲಾ ಭರ್ತಿ ಮಾಡಿದರೆ ಕೈಗಾರಿಕೆ ಸ್ಥಾಪನೆ ಮಾಡುವವರು ಎಲ್ಲ ರೀತಿಯ ನೆರವನ್ನು ಈ ಅಧಿಕಾರಿ ಗಳಿಂದ ಪಡೆಯಲು ಸಾಧ್ಯವಾಗುತ್ತದೆ. ಇದರ ಜೊತೆಗೆ ಈ ಕೇಂದ್ರಗಳಿಗೆ ಎಲ್ಲ ರೀತಿಯ ಅಧಿಕಾರಗಳನ್ನು ಕೊಡಬೇಕು. ತುಮಕೂರಿನಲ್ಲಿ ಕೈಗಾರಿಕೆ ಸ್ಥಾಪನೆ ಮಾಡುವವರು ಯಾವ ಕಾರಣದಿಂದಲೂ ಬೆಂಗಳೂರಿಗೆ ಬರುವುದಕ್ಕೆ ಅವಕಾಶವಿರಬಾರದು. ಎಲ್ಲ ಕೆಲಸಗಳೂ ಆಯಾ ಜಿಲ್ಲೆಗಳಲ್ಲಿಯೇ ಆಗಬೇಕು. ಈಗ ಕೆ.ಎಸ್.ಎಫ್.ಸಿ. ನವರು ೫ ರೀಜನಲ್ ಕಛೇರಿಗಳನ್ನು ತೆರೆದು ಯಾವ ರೀತಿ ಅಧಿಕಾರ ವಿಕೇಂದ್ರೀಕರಣ

ಮಾಡಿದ್ದಾರೋ ಮತ್ತು ಸಾಲಕ್ಕಾಗಿ ಬೆಂಗಳೂರಿಗೆ ಬಗದಂತೆ ಮಾಡಿದ್ದಾರೋ ಅದೇರೀತಿ ಇಲ್ಲಿಯೂ ಸಹ ಅಧಿಕಾರ ವಿಕೇಂದ್ರೀಕರಣ ಮಾಡಬೇಕೆಂದು ನಾನು ಅಭಿಪ್ರಾಯ ಪಡುತ್ತೇನೆ.

ಇನ್ನು ಸಕ್ಕರೆ ಕಾರ್ಖಾನೆಗಳಲ್ಲಿ, ಟೆಕ್ಸ್‌ಟೈಲ್ ಮಿಲ್‌ಗಳಲ್ಲಿ ಹಾಗೂ ಆಯಿಲ್ ಮಿಲ್‌ಗಳಲ್ಲಿ ಸಾಕಷ್ಟು ಅನ್ಯಾಯ ಹಾಗೂ ಅವ್ಯವಹಾರಗಳಾಗುತ್ತಿರುವುದನ್ನು ನಾವು ನೋಡುತ್ತಿದ್ದೇವೆ. ಡ್ಯೂಯಲ್ ಕಂಟ್ರೋಲ್ ಇರುವ ಕಾರಣ ಈ ರೀತಿ ಆಗಬಹುದೆಂದು ಕಾಣುತ್ತದೆ. ಕೋ-ಆಪರೇಟಿವ್ ಇಲಾಖೆಯವರು ಮತ್ತು ಕೈಗಾರಿಕೆ ಇಲಾಖೆಯವರು ಕಂಟ್ರೋಲ್ ಮಾಡುವುದಕ್ಕೆ ಬದಲು ಕೈಗಾರಿಕಾ ಇಲಾಖೆಯ ವ್ಯಾಪ್ತಿ ಒಂದರಲ್ಲಿಯೇ ಇವುಗಳನ್ನು ತಂದರೆ ಪರಿಸ್ಥಿತಿ ಸುಧಾರಣೆಯಾಗಬಹುದು ಮತ್ತು ನಷ್ಟವನ್ನು ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆಂದು ನಾನು ಹೇಳುತ್ತೇನೆ.

ಇನ್ನು ನಮ್ಮ ರಾಜ್ಯದಲ್ಲಿ ಬಹಳ ಜನ ಕುಶಲಕರ್ಮಿಗಳಿದ್ದಾರೆ. ಹಳ್ಳಿಗಾಡಿನಲ್ಲಿಯೇ ಇವರು ಜಾಸ್ತಿ ಇರುವುದು. ಇವರುಗಳ ಹಿತ ಮಾಡಲು ಸರ್ಕಾರ ಅನೇಕ ಸಂಸ್ಥೆಗಳನ್ನು ಮತ್ತು ಮಂಡಲಿಗಳನ್ನು ರಚನೆ ಮಾಡಿದೆ. ಆದರೆ ಈ ಸಂಸ್ಥೆಗಳಿಂದ ಕೇವಲ ಶೇಕಡಾ ೧೦ ರಿಂದ ೨೦ ರ ವರೆಗೆ ಮಾತ್ರ ಈ ಜನರ ಹಿತ ಸಾಧನೆಯಾಗಿದೆ ಎಂದು ಹೇಳಬಹುದು. ಈ ಕುಶಲ ಕೈಗಾರಿಕೆಗಳಿಗೆ ಸಂಬಂಧಪಟ್ಟಂತೆ ಇರುವ ಕಾರ್ಪೊರೇಷನ್‌ಗಳು ಮತ್ತು ಮಂಡಲಿಗಳು ಕುಶಲಕರ್ಮಿಗಳಿಗೆ ಸಹಾಯ ಮಾಡುವುದಕ್ಕೆ ಬದಲು ಮಧ್ಯವರ್ತಿಗಳಿಗೆ ಸಹಾಯ ಮಾಡುತ್ತಿರುವುದರಿಂದ ಈ ಮಧ್ಯವರ್ತಿಗಳು ಹೊರ ರಾಜ್ಯಗಳಿಂದ ಮಾಲನ್ನು ತರಿಸಿ ಕೊಡುತ್ತಿದ್ದಾರೆ. ಇದನ್ನೇ ನಮ್ಮ ಜನರಿಗೆ ಮಾರಾಟ ಮಾಡುತ್ತಾರೆ. ನಮ್ಮ ರಾಜ್ಯದ ಕುಶಲಕರ್ಮಿಗಳ ಹೆಸರಿನಲ್ಲಿ ಈ ರೀತಿ ವ್ಯವಹಾರ ನಡೆಸುವುದನ್ನು ನಿಲ್ಲಿಸಿ ಇವರಿಗೆ ಹೆಚ್ಚಿನ ಸಹಾಯ ಮಾಡಲು ಆಸಕ್ತಿವಹಿಸಬೇಕೆಂದು ಹೇಳುತ್ತೇನೆ ಈಗ ಕೆಲವರು ಮಾಲು ತಯಾರಿಸಿ ಕೊಟ್ಟರೆ ಹಣಕ್ಕಾಗಿ ಆರು ತಿಂಗಳ ಕಾಲ ತಿರುಗಬೇಕಾಗಿದೆ ಎಂದು ಹೇಳುತ್ತಾರೆ. ಹಣದ ತೊಂದರೆಗಾಗಿ ಈ ಕುಶಲಕರ್ಮಿಗಳು ತಾವು ತಯಾರಿಸಿದ ಮಾಲನ್ನು ಮಧ್ಯವರ್ತಿಗಳಿಗೆ ಮಾರಿಬಿಡುತ್ತಾರೆ. ನಂತರ ಇವರಿಂದ ಕಾರ್ಪೊರೇಷನ್ ಅವರು ಖರೀದಿ ಮಾಡುತ್ತಾರೆ. ಈ ರೀತಿಯಾದರೆ ಈ ಜನರ ಸುಧಾರಣೆ ಆಗುವುದಿಲ್ಲವೆಂದು ಹೇಳುತ್ತೇನೆ.

ಇನ್ನು ನಮ್ಮ ರಾಜ್ಯದಲ್ಲಿ ಹ್ಯಾಂಡ್-ಲೂಮ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಇದೆ. ಇದರಿಂದ ನೇಕಾರರಿಗೆ ಎಷ್ಟು ಸಹಾಯವಾಗುತ್ತಿದೆ ಎಂಬುದನ್ನು ನೋಡಬೇಕಾಗಿದೆ. ಇಲ್ಲಿ ತಮ್ಮ ವರದಿಯಲ್ಲಿ ೩.೩ ಸಾವಿರ ಜನ ನೇಕಾರರಿದ್ದಾರೆಂದು ಹೇಳಿದ್ದೀರಿ. ಆದರೆ ಇವರ ಸಂಖ್ಯೆ ಇನ್ನೂ ಜಾಸ್ತಿ ಇದೆ. ಇವರು ನಮ್ಮ ತುಮಕೂರು ಜಿಲ್ಲೆಯಲ್ಲಿಯೂ ಸಹ ಇದ್ದಾರೆ. ಸರ್ಕಾರದ ಲೆಕ್ಕಕ್ಕೆ ಸಿಗದಂತಹ ಸಾವಿರಾರು ಜನ ನೇಕಾರರಿದ್ದಾರೆ. ಆದ್ದರಿಂದ ಸರ್ಕಾರದಿಂದ ಶೇಕಡಾ ೬೦ ರಷ್ಟು ಜನರಿಗೂ ಸಹಾಯವಾಗುತ್ತಿಲ್ಲವೆಂದು ಹೇಳಬಹುದು ಆದ್ದರಿಂದ ಎಲ್ಲ ಕಡೆಯೂ ಇವರನ್ನು ಗುರುತು ಮಾಡಿ ಎಲ್ಲರಿಗೂ ಕೆಲಸ ಕೊಟ್ಟು ಅವರು ತಯಾರು ಮಾಡಿದಂಥ ಮಾಲನ್ನು ಕೊಂಡುಕೊಳ್ಳುವುದರ ಮೂಲಕ ಜನರಿಗೆ ಮಾರಾಟ ಮಾಡಬೇಕೆಂದು ಹೇಳುತ್ತೇನೆ. ನಾವು ಬೆಳಿಗ್ಗೆ ಎದ್ದು ರೇಡಿಯೋ ಹಾಕಿದರೆ ಆಪ್ಕೋ ಬಟ್ಟೆಗಳ ಬಗ್ಗೆ ಮತ್ತು ಕೋಆಪ್ಟೆಕ್ಸ್ ಬಟ್ಟೆಗಳ ಬಗ್ಗೆ ಪ್ರಚಾರ ಮಾಡುವುದನ್ನು ನಾವು ಕೇಳುತ್ತೇವೆ. ಆದರೆ ನಮ್ಮ ರಾಜ್ಯದ ಪ್ರಿಯದರ್ಶಿನಿ ಅಂಗಡಿ ನಮ್ಮ ಹ್ಯಾಂಡ್-ಲೂಮ್ ಡೆವಲಪ್‌ಮೆಂಟ್ ಕಾರ್ಪೊರೇಷನ್‌ಗೆ ಸೇರಿದ್ದು ಎಂಬುದು ಯಾರಿಗೂ ಗೊತ್ತಿಲ್ಲ. ಏಕೆಂದರೆ, ಇದು ಪ್ರಚಾರವಾಗಿಲ್ಲ. ಇದು ಎಷ್ಟೋ ಜನ ಶಾಸಕರಿಗೇ ಗೊತ್ತಿಲ್ಲವೆಂದರೆ ಇನ್ನು ಸಾಮಾನ್ಯ ಜನರಿಗೆ ಏನು ಗೊತ್ತಾಗುತ್ತದೆ. ನಮ್ಮ ಜನರು ತಯಾರು ಮಾಡಿದ ಬಟ್ಟೆಗಳನ್ನು ಕೊಳ್ಳಬೇಕೆಂಬ ಆಸಕ್ತಿ ಎಲ್ಲರಿಗೂ ಇದೆ. ಆದರೆ ಸಾಕಷ್ಟು ಪ್ರಚಾರವಿಲ್ಲ. ಈಗಲಾದರೂ ಈ ಬಗ್ಗೆ ಹೆಚ್ಚಿನ ಜಾಹೀರಾತು ಮಾಡಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಬ್ಯೂರೋ ಆಫ್ ಪಬ್ಲಿಕ್ ಎಂಟರ್‌ಪ್ರೈಜಸ್‌ನ್ನು ಅನೇಕ ಉದ್ದೇಶಗಳನ್ನಿಟ್ಟುಕೊಂಡು ತಾವು ಮಾಡಿದ್ದೀರಿ. ಆದರೆ ನಿಮ್ಮ ಉದ್ದೇಶ ಸಾಧನೆ ಆಗಲಿಲ್ಲ. ಅನೇಕ ಮುಖ್ಯ ಇಲಾಖೆಗಳಲ್ಲಿ ಕೆಲಸ ಮಾಡುವ ತಜ್ಞರು ಏನಿದ್ದಾರೆ, ಫೀಲ್ಡ್ ಎಕ್ಸ್‌ಪರ್ಟ್ಸ್ ಏನಿದ್ದಾರೆ, ಅವರೆನ್ನೆಲ್ಲಾ ಸೇರಿಸಿ ಒಂದು ಉನ್ನತ ಮಟ್ಟದ ಕಮಿಟಿಯನ್ನು ಮಾಡಿ ಅದರ ಮೂಲಕ ಅವರ ಸಲಹೆಗಳನ್ನು ಪಡೆದು ನಮ್ಮ ಕೈಗಾರಿಕೆಗಳನ್ನು ಮುಂದಕೆ ತರಬೇಕೆಂದು ಇದನ್ನು ಮಾಡಿದ್ದೀರಿ. ಆದರೆ ಇದು ನೆಪಮಾತ್ರಕ್ಕೆ ಇದೆ. ಅಲ್ಲಿ ಒಬ್ಬರು ಐ.ಎ.ಎಸ್. ಅಧಿಕಾರಿಯನ್ನಿಟ್ಟಿದ್ದೀರಿ. ಇದರಿಂದ ಏನು ಪ್ರಯೋಜನವಾಯಿತು? ಇದನ್ನು

ವಿಚಾರ ಮಾಡಬೇಕಾದಂಥ ಸಂದರ್ಭ ಬಂದಿದೆ. ನಿಮ್ಮ ಉದ್ದೇಶ ಏನಿತ್ತೋ ಅದನ್ನು ಆಚರಣೆಯಲ್ಲಿ ತಂದರೆ ಈ ಕೆಲವು ಕೈಗಾರಿಕೆಗಳಲ್ಲಿ ಆಗುತ್ತಿರುವ ನಷ್ಟವನ್ನು ಸುಧಾರಿಸಲು ಸಾಧ್ಯವಾಗುತ್ತದೆಂದು ಹೇಳುತ್ತೇನೆ.

ಇನ್ನು ಕೈಗಾರಿಕೆಗಳಲ್ಲಿ ನಷ್ಟವಾಗುತ್ತಿರುವ ಬಗ್ಗೆ ಅನೇಕ ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಏತಕ್ಕೆ ನಷ್ಟವಾಗುತ್ತಿದೆ ಎಂಬುದು ನನಗೆ ಅರ್ಥವಾಗುವುದಿಲ್ಲ. ನಮ್ಮ ಕೈಗಾರಿಕೆಗಳಿಗೆ ಹಣದ ತೊಂದರೆ ಇಲ್ಲ; ಮಾರುಕಟ್ಟೆ ತೊಂದರೆ ಇಲ್ಲ; ಖರ್ಚಾಗದ ಮಾಲು ಇದ್ದರೆ ಅದನ್ನು ಪುಷ್ ಮಾಡಲು ಸರ್ಕಾರಕ್ಕೆ ಅವಕಾಶವಿದ್ದರೂ ಸಹ ಇವು ನಷ್ಟದಲ್ಲಿ ನಡೆಯಲು ಕಾರಣವೇನು? ನಮ್ಮ ಕೈಗಾರಿಕೆಗಳ ಮೇಲೆ ಮಿತಿಮೀರಿದ ಖರ್ಚನ್ನು ಮಾಡುತ್ತಿರುವುದನ್ನು ನಾವು ನೋಡಬಹುದಾಗಿದೆ. ೧೦ ಲಕ್ಷ ರೂಪಾಯಿಗಳಲ್ಲಿ ಒಂದು ಪ್ರಾಜೆಕ್ಟ್ ಪ್ರಾರಂಭ ಮಾಡಲು ಸಾಧ್ಯವಿದ್ದರೂ ಸಹ ಅದರ ಮೇಲೆ ೨೫ ಲಕ್ಷ ರೂಪಾಯಿಗಳವರೆಗೆ ಖರ್ಚು ಮಾಡುತ್ತಿರುವುದನ್ನು ನಾವು ನೋಡಬಹುದಾಗಿದೆ.

೧೨ ಮಧ್ಯಾಹ್ನ

ಇದನ್ನೆಲ್ಲಾ ಸರಿಪಡಿಸಬೇಕಾಗಿದೆ. ಯಾವ ರೀತಿ ಮಾಡಬೇಕು ಎನ್ನುವ ವಿಚಾರವೇ ಇಲ್ಲ. ಆದುದರಿಂದ ಹೆವಿ ಎಕ್ಸ್‌ಪೆಂಡಿಚರ್ ಆಗುತ್ತದೆ. ಮತ್ತು ಲಾಸ್ ಆಗುವುದಕ್ಕೆ ಅವಕಾಶವಾಗುತ್ತದೆ. ಇನ್ನೊಂದು ಅಂಶವೇನೆಂದರೆ, lack of advance technology. ನಾವು ಈವೊತ್ತಿನ ದಿವಸ ನೋಡುತ್ತಾ ಇದ್ದೇವೆ, ನಮ್ಮ ಷಾಪ್ಸ್ ಪಕ್ಕ ಪ್ರೈವೇಟ್‌ನವರು ಅಕ್ಕ ಪಕ್ಕದಲ್ಲಿ ಬಂದು ಕುಳಿತುಕೊಂಡು ಬಿಟ್ಟು ಒಳ್ಳೆಯ ಬೆಲೆ ಬರತಕ್ಕಂಥಾ ನಮ್ಮ ಮಾಲುಗಳಿಗೆ ಬೆಲೆ ಬರದೇ ಇರುವ ಹಾಗೆ ಮಾಡಿ ಒಳ್ಳೆಯ ಟೆಕ್ನಾಲಜಿ ಉಪಯೋಗಿಸಿಕೊಂಡು ವ್ಯಾಪಾರ ಮಾಡುತ್ತಾ ಇರುವುದರಿಂದ ನಮ್ಮ ಮಾಲುಗಳಿಗೆ ಹೆಚ್ಚು ಬೇಡಿಕೆ ಬರುವುದಿಲ್ಲ. ಇದರಿಂದಲೂ ಸಹ ನಮಗೆ ನಷ್ಟವಾಗುತ್ತಾ ಇದೆ. ಕಾಲಕಾಲಕ್ಕೆ ಸರಿಯಾಗಿ ಈ ಬಗ್ಗೆ ತಕ್ಕ ಸೌಲಭ್ಯ ಮತ್ತು ಸೌಕರ್ಯಗಳನ್ನು ಒದಗಿಸಿಕೊಂಡು ಅದರಲ್ಲಿ ಅಳವಡಿಸಿದ್ದೇ ಆದರೆ ಈ ಕೈಗಾರಿಕೆಯಲ್ಲಿ ಗತಕ್ಕಂಥಾ ನಷ್ಟವನ್ನು ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆ ಎಂದು ನಾನಾದರೂ ಅಪೇಕ್ಷೆ ಪಡುತ್ತೇನೆ. ಈವೊತ್ತು ನೀವು ಯಾವ ಒಂದು ಕೈಗಾರಿಕೆಯನ್ನೇ ತೆಗೆದುಕೊಳ್ಳಿ, fully installed Cap city ಯನ್ನು ಹಾಕುವುದಿಲ್ಲ. ಯಾವುದಾದರೂ ಒಂದು ಕಚ್ಚಾ ಮಾಲು ತೆಗೆದುಕೊಂಡರೂ ಕೂಡ ಒಂದು ಸಾವಿರ ಟನ್ ಬೇಕಾಗುತ್ತದೆ. ನೀವೇ ಅವರಿಗೆ ಲೈಸನ್ಸ್ ಕೊಡುತ್ತೀರಿ ಅದರಿಂದ ನೀವೇ ಇದನ್ನು ಸಾಕಷ್ಟು ಪ್ರೊಡಕ್ಷನ್ ಮಾಡಿಕೊಡಬಹುದು. ಹಾಗೆ ಮಾಡುವುದಕ್ಕೆ ಹೋಗುವುದಿಲ್ಲ. ನಿಮ್ಮಲ್ಲಿ ಜಾಸ್ತಿ ಎಸ್ಟಾಬ್ಲಿಷ್‌ಮೆಂಟ್ ಇದ್ದಮೇಲೆ ಜಾಸ್ತಿ ಪ್ರೊಡಕ್ಷನ್ ಮಾಡಬೇಕು. ಹಾಗಾದರೆ ಇದರಲ್ಲಿ ಲಾಸ್ ಆಗುವುದನ್ನು ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆ. ಈವೊತ್ತಿನ ದಿವಸ ಎಲ್ಲಾ ಕೈಗಾರಿಕೆಗಳಲ್ಲೂ ಇನ್‌ಛಾರ್ಜ್ ಇರತಕ್ಕಂಥಾವರು ಬಹುತೇಕವಾಗಿ ಐ.ಎ.ಎಸ್. ಆಫೀಸರ್ಸ್. ಮಾನ್ಯ ಅರ್ಥ ಸಚಿವರಿಗೆ ಈ ಸಂದರ್ಭದಲ್ಲಿ ಹೇಳುವುದೇನೆಂದರೆ ಎಲ್ಲರಲ್ಲೂ ಏನು ಒಂದು ಭಾವನೆ ಬಂದಿದೆ ಎಂದರೆ ಐ.ಎ.ಎಸ್. ಆಫೀಸರ್ಸ್ ಮಾತ್ರ ಬುದ್ಧಿವಂತರು ನಾನ್ ಐ.ಎ.ಎಸ್. ಆಫೀಸರ್ಸ್ ಏನು ಇದ್ದಾರೆ ಅವರು ಬುದ್ಧಿವಂತರಲ್ಲ ಅನ್ನುವ ಎನ್ನುವ ಭಾವನೆ ಬಂದಿದೆ. ಈ ಐ.ಎ.ಎಸ್. ಆಫೀಸರ್ಸ್ ಯಾರು ಅನ್ನುವವರನ್ನು ನಾವು ಮೊದಲು ತಿಳಿದುಕೊಳ್ಳಬೇಕು. ಅವರು ನಮ್ಮ ಮಕ್ಕಳೇ, ಅವರು ರೈತರ ಮಕ್ಕಳೇ. ಐ.ಎ.ಎಸ್. ಆಫೀಸರ್ಸ್ ಈವೊತ್ತು ಏನು ಇದ್ದಾರೆ, ೧೦೦ ಕ್ಕೆ ೫೧ ಭಾಗ ಏನು ಇದ್ದಾರೆ, ಅವರನ್ನು ನಾನು ಸ್ವಾಗತಿಸುತ್ತೇನೆ. ತಮಗೆ ಒಂದು ಉದಾಹರಣೆ ಹೇಳಬೇಕಾದರೆ ನಮ್ಮ ಇಲಾಖೆಯಲ್ಲಿ ಸೆಕ್ರೆಟರಿಯಾಗಿರುವ ಪ್ರಭಾಕರ್‌ರವರನ್ನೇ ತೆಗೆದುಕೊಳ್ಳಿ. ಇವರು ಈ ಇಲಾಖೆಯಲ್ಲಿ ರುವುದು ತುಂಬಾ ಅಗತ್ಯ ಇದೆ. ಆದುದರಿಂದ ಅವರನ್ನು ಇನ್ನೂ ೪–೫ ವರ್ಷ ಇಲ್ಲೇ ಕಾರ್ಯದರ್ಶಿಯನ್ನಾಗಿ ಇಟ್ಟುಕೊಳ್ಳುವುದು ಉತ್ತಮ. ಅವರು ಐ.ಎ.ಎಸ್. ಆಫೀಸರ್ ಆದರೂ ಒಳ್ಳೆಯ ಹೆಸರನ್ನು ಪಡೆದಿದ್ದಾರೆ. ಬೇರೆಯವರ ಹಾಗೆ ಮೂವ್ ಮಾಡುವುದಿಲ್ಲ. ಯಾವ ಆಫೀಸರ್ ಆಗಲಿ ಅವರಲ್ಲಿ ಮುಖ್ಯವಾಗಿ ಇರಬೇಕಾದದು ಕಾಂಟ್ಯಾಕ್ಟ್ ಜನರಲ್ಲಿ ಚೆನ್ನಾಗಿ ಇಟ್ಟುಕೊಂಡಿರಬೇಕು, ಅದೇತರಹ ತಮ್ಮ ಕೆಲಸದಲ್ಲಿ ಇಂಟರ್‌ಸ್ಟ್ ತೋರಿಸಬೇಕು, ಅದಕ್ಕಿಂತಲೂ ಮುಖ್ಯವಾಗಿ ಪಬ್ಲಿಕ್ ರಿಲೇಷನ್ಸ್ ಇರುವುದು ಬಹಳ ಅತಿ ಮುಖ್ಯವಾದುದು ಕೆಲವು ಆಫೀಸರ್ಸ್ ಏನು ತಿಳಿದುಕೊಂಡಿದ್ದಾರೆ ಎಂದರೆ white collared job ಅಂತ ತಿಳಿದುಕೊಂಡಿದ್ದಾರೆ. ಮತ್ತೇನು ತಿಳಿದುಕೊಂಡಿದ್ದಾರೆ ಎಂದರೆ, ಮಂತ್ರಿಗಳು ನಮ್ಮನ್ನು ಏನು ಮಾಡುತ್ತಾರೆ, ಮಾಡಿದರೆ ಟ್ರಾನ್ಸ್‌ಫರ್ ಮಾಡಬಹುದು ಮತ್ತೇನು

ಮಾಡುತ್ತಾರೆ ಎಂದು ಮಂತ್ರಿಗಳ ಮಾತು ಸ್ವಲ್ಪವೂ ಕೇಳುವುದಿಲ್ಲ. ನಾನು ಎಲ್ಲಾ ಐ.ಎ.ಎಸ್. ಆಫೀಸರೂ ಹಾಗೆಯೇ ಇದ್ದಾರೆ ಅಂತ ಹೇಳುವುದಿಲ್ಲ, ಕೆಲವು ಜನರು ಮಾತ್ರ ಆ ರೀತಿಯಾಗಿ ಇದ್ದಾರೆ.

SRI M. VEERAPPA MOILY.—IAS Officers are not like Office Superintendents or Office Managers. They are also a type of professional management experts in their own way. It is not like Office Superintendent or Office Manager. I do not think it is fair. After all, they are all professional managers who are competent to handle things. They are also experts in the management. They are not classified. Absolutely it is not correct.

SRI S.R. BOMMAI.—There is view also that technocrats should be put in certain posts. That is also a view that in certain industrial management technocrats should be given preference. That is another view.

SRI M. VEERAPPA MOILY.—We can understand the difference between the technocrats and the managers. You can say that instead of putting professional manager...

MR. SPEAKER.—Probably he meant that.

SRI M. VEERAPPA MOILY.—If that is said, it is O.K. In what way you can compare the other professional managers and the IAS officers? After all they are also professional managers in their own way. When they are put in the Revenue Department they may be Revenue Collectors managing the affairs of the Department. They are also professional managers in their own term. Of course, there is a distinction between the technocrats and the managers. They are also management experts in their own rights.

SRI A. LAKSHMISAGAR.—The practice has gone to such a ridiculous extent that an Administrative Officer is fit enough to do any job. For ex: You have put an IPS Officer as a Registrar. Mercifully you have not posted them as dentists. This is what you have got to look into. A Judicial officer can be a Magistrate or a Munsiff. But, he cannot be posted as a Revenue Collector. They are trained people. I understand. They belong to administrative service. What is the role of administration in an industry, in a factory, in a business establishment? There is a little portion of administration. But, then he is placed in charge of the entire industry. There are IAS Officers who are certainly capeable of managing the affairs of certain industry, but not all of them are persons who are management experts. Therefore, this is the limitation which you have got to categories and the Bureau of Enterprises which is now talking shape has not been able to came to grips with this issue, as I understand the latest position as I have had a discussion with the officers.

Therefore, the criticism is that you have gone on posting IAS Officers and the IPS Officers to various posts to which they are ill-equipped to handle. This is the general submission. The feeling is that they are good enough to hold any post. This should be avoided. This is the point which I wish to make.

ಶ್ರೀ ಎಸ್.ಆರ್ ಬೊಮ್ಮಾಯಿ.—ಅಧ್ಯಕ್ಷರೇ, ನಾನು ಜಮಖಂಡಿ ಸಂಸ್ಥಾನದಿಂದ ಬರುತ್ತಾ ಇದ್ದೇನೆ. ಮೊದಲು ಕುಂದಗೋಳ್–ಜಮಖಂಡಿ ಅನ್ನುವುದು ಒಂದು ಚಿಕ್ಕ ಸಂಸ್ಥಾನವಾಗಿತ್ತು. ಆ ಚಿಕ್ಕ ಸಂಸ್ಥಾನದಲ್ಲಿ ಆ ಕಾಲದಲ್ಲಿ ಒಬ್ಬರು ಇದ್ದರು, ಅವರು ಹೈಸ್ಕೂಲ್‌ನ ಪ್ರಿನ್ಸಿಪಾಲ್ ಆಗಿದ್ದರು, ಆಮೇಲೆ ಸ್ಕೂಲ್ ಇನ್‌ಸ್ಪೆಕ್ಟರ್ ಆದರು, ಆಮೇಲೆ ಸಿವಿಲ್ ಜಡ್ಜರೂ ಸಹ ಆಗಿದ್ದರು. ಆ ಕಾಲದಲ್ಲಿ ಅವರಿಗೆ ಎಲ್ಲಾ ಸೇರಿದರೂ ಕೂಡ ೩೦೦ ರೂಪಾಯಿ ಸಂಬಳ ಬರುತ್ತಿತ್ತೋ ಏನೋ. ಅಷ್ಟೇ ಅಲ್ಲದೆ ಅವರು ಅಲ್ಲಿ ಆಸ್ಪತ್ರೆಯಲ್ಲಿ ಸರ್ಜನ್ ಇಲ್ಲದೇ ಇದ್ದಾಗ ಆ ಆಸ್ಪತ್ರೆಯ ಕೆಲಸವನ್ನೂ ಸಹ ನೋಡಿ ಕೊಳ್ಳುತ್ತಿದ್ದರು. ಅದು ಒಂದು ಕಾಲ. ಅದರಂತೆ ಈಗ ಆಗಬಾರದು ಎಂದು ಮಾನ್ಯ ಸದಸ್ಯರು ಹೇಳುತ್ತಾ ಇದ್ದಾರೆ.

ಶ್ರೀ ಎಚ್.ಎಲ್. ತಿಮ್ಮೇಗೌಡ.—ಈಗ ಡೈರೆಕ್ಟರ್ ಆಫ್ ಹಾರ್ಟಿಕಲ್‌ಚರ್‌ಸ್‌ನಲ್ಲಿ ಒಬ್ಬ ಐ.ಎ.ಎಸ್ ಆಫೀಸರನ್ನು ಹಾಕಿದ್ದೀರಿ. ಹಿಂದೆ ಅಲ್ಲಿಗೆ ಒಬ್ಬರು ಫಾರೆಸ್ಟ್ ಸರ್ವಿಸಸ್ ಆಗಿರತಕ್ಕಂಥಾ ವರನ್ನು ಹಾಕಿದ್ದೀರಿ. ಐ.ಎಫ್.ಎಸ್ ಹಾಕಿದ್ದೀರಿ. ಮತ್ತೆ ಈಗ ಒಬ್ಬ ಐ.ಎ.ಎಸ್ ಆಫೀಸರನ್ನು ಪೋಸ್ಟ್ ಮಾಡಿದ್ದೀರಿ. ಐಎಎಸ್ ಆಫೀಸರ್‌ಗೂ ಹಾರ್ಟಿಕಲ್‌ಚರ್‌ರೂ ಅದಕ್ಕೂ ಇದಕ್ಕೂ ಸಂಬಂಧ ಏನು ? ಯಾರು ಇದರಲ್ಲಿ ಚೆನ್ನಾಗಿ ತಿಳಿದುಕೊಂಡಿರುತ್ತಾರೋ ಅಂಥಾವರನ್ನು ಹಾಕಬೇಕೇ ವಿನಾ ಹೀಗೆ ಮಾಡಿದರೆ ಅದರ ಪ್ರಯೋಜನವಾದರೂ ಏನಾಗುತ್ತದೆ.

ಶ್ರೀ ಟಿ.ಬಿ. ಜಯಚಂದ್ರ.—ಮಾನ್ಯ ಅಧ್ಯಕ್ಷರ ಮುಖಾಂತರ ಮಾನ್ಯ ಸಚಿವರಲ್ಲಿ ಮನವರಿಕೆ ಮಾಡಿಕೊಳ್ಳುವುದೇನೆಂದರೆ ಈವೊತ್ತು ಐಎಎಸ್ ಆಫೀಸರ್ಸ್ ಏನು ಇದ್ದಾರೆ ಅವರು ಪ್ರಜಾಪ್ರಭುತ್ವದ ಒಂದು ಅಡಿಯಲ್ಲಿ ಕೆಲಸ ಮಾಡುವರು, ನಾವು ರಾಜಕೀಯದಲ್ಲಿರುವುದರಿಂದ ನಮ್ಮ ಕರ್ತವ್ಯ ನಾವು ಮಾಡಬೇಕು. ಅವರ ಒಂದು ಜವಾಬ್ದಾರಿ ಏನು ಇದೆ ಅದನ್ನು ಅರಿತುಕೊಂಡು ಅವರು ಕೆಲಸ ಮಾಡ ಬೇಕಾಗಿದೆ. ಕೆಲವು ಆಫೀಸರ್ಸ್ ನಡೆದುಕೊಳ್ಳುವುದನ್ನು ನೋಡಿದರೆ. ಅವರು ಮಾತನಾಡುವುದನ್ನು ನೋಡಿದರೆ ಗೊತ್ತಾಗುತ್ತದೆ. ಅದನ್ನು ಅವರು ನಿಲ್ಲಿಸಬೇಕು. ಆ ಆಫೀಸರ್ಸ್ ಏನು ತಿಳಿದುಕೊಂಡಿದ್ದಾರೆ ಎಂದರೆ ನಾವು ಎಲ್ಲಿಂದಲೋ ಇಲ್ಲಿಗೆ ಇಳಿದು ಬಂದಿದ್ದೇವೆ ಅನ್ನುವ ರೀತಿಯಲ್ಲಿ ಒಂದು ಇಂಪ್ರೆಷನ್ ಅವರಿಗೆ ಬಂದಿದೆ. ಅವರು ಹಾಗೆ ಮಾಡುವುದನ್ನು ಬಿಟ್ಟು ನಮ್ಮ ಜೊತೆಗೂಡಿ ಕೆಲಸ ಮಾಡಿದರೆ ಎಲ್ಲರಿಗೂ ಅನುಕೂಲವಾಗುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಕೆಲವು ಸದಸ್ಯರು ಸಲಹೆ ಕೊಟ್ಟಿದ್ದಾರೆ. ಏನೆಂದರೆ ಇಂಡಸ್ಟ್ರಿಯಲ್‌ನಲ್ಲಿ ಅಡ್ಮಿನಿಸ್ಟ್ರೇಷನ್ ಪಾಯಿಂಟ್‌ಗೆ ಐಎಎಸ್ ಆಫೀಸರ್ ಅನ್ನು ಹಾಕಿದರೂ ಪರವಾಯಿಲ್ಲಾ, ಅದಕ್ಕೋಸ್ಕರವಾಗಿಯೇ ಅಡ್ಮಿನಿಸ್ಟ್ರೇಷನ್ ನಲ್ಲಿ ಕೆಲವು ಪೋಸ್ಟ್‌ಗಳನ್ನು ಇಟ್ಟಿದ್ದಾರೆ ಅದಕ್ಕೆ ಬೇಕಾದರೆ ತೆಗೆದುಕೊಳ್ಳಲಿ, ಕೆಲವು ಟೆಕ್ನಿಕಲ್ ಬಾಬುಗಳು ಏನು ಇವೆ ಅದಕ್ಕೆ ಇದರಲ್ಲಿ ನುರಿತವರನ್ನೇ ಪೋಸ್ಟ್ ಮಾಡುವುದು ಉತ್ತಮ ಎಂದು ಅವರು ಎಕ್ಸ್‌ಪ್ರೆಸ್ ಮಾಡಿದ್ದಾರೆ. ನಮ್ಮ ರಾಜ್ಯದಲ್ಲಿ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಕಾರ್ಪೋರೇಷನ್ ಏನು ಇದೆ ಅವರು ರಾ ಮೆಟೀರಿಯಲ್ಸ್ ಅನ್ನು ಕೊಂಡುಕೊಳ್ಳಬೇಕಾದರೆ ಬೇರೆ ಕಡೆಯಿಂದ ತರಿಸ ಬೇಕಾದರೆ ಸ್ವಲ್ಪ ಕಷ್ಟ ಇದೆ. ಇನ್ನೊಂದು ವಿಚಾರ ನನಗೆ ತಿಳಿದು ಬಂದಿರುವುದು ಈವೊತ್ತು ಕೆಲವು ಕಡೆಗಳಲ್ಲಿ ಗೋಡೌನ್ ಇಲ್ಲಿ. ಕೆಲವು ಕಡೆಗಳಲ್ಲಿ ಕಚ್ಚಾ ಮಾಲುಗಳು ಏನು ಇದೆ ಅದು ಕೊಳೆಯುತ್ತಾ ಬಂದಿದೆ, ಈ ವಿಚಾರ ತಮಗೂ ಗೊತ್ತಿರಬೇಕು. ನಾವು ಈ ಬಗ್ಗೆ ಏನು ಒಂದು ಅಂದಾಜು ಮಾಡಿದ್ದೇವೋ ಅದು ಬಿಟ್ಟು ಉಳಿದುದನ್ನು ಲೆಕ್ಕ ತೆಗೆದುಕೊಂಡರೂ ಸುಮಾರು ೮–೧೦ ಕೋಟಿ ರೂಪಾಯಿ ಯಷ್ಟು ರಾ ಮೆಟೀರಿಯಲ್ಸ್ ಕೊಳೆಯುತ್ತಾ ಇದೆ ಎಂದು ನನಗೆ ತಿಳಿದು ಬಂದಿದೆ. ಏತಕ್ಕೋಸ್ಕರ ವಾಗಿ ಅವರು ಇದುವರೆಗೂ ಅದನ್ನು ಡಿಸ್‌ಪೋಸಲ್ ಮಾಡಿಲ್ಲಾ. ಕೈಗಾರಿಕೆಗಳನ್ನು ಮಾಡತಕ್ಕಂಥಾ ವರಿಗೆ ಇಷ್ಟು ರಾ ಮೆಟೀರಿಯಲ್ಸ್ ಇದೆ ಅನ್ನುವುದು ಗೊತ್ತಿಲ್ಲವೇ? ಒಂದು ವೇಳೆ ಅಧಿಕಾರಿಗಳಿಗೆ ಇದು ಗೊತ್ತಿಲ್ಲದೇ ಹೋದರೆ ನೀವು ಏನು ಮಾಡುತ್ತಿದ್ದೀರಿ ಅನ್ನುವುದನ್ನು ಕೇಳಬೇಕಾಗುತ್ತದೆ.

ಈವೊತ್ತಿನ ದಿವಸ ಈ ರೀತಿಯಾಗಿ ಅವರು ಸ್ಟಾಕ್ ಮಾಡಿ ಅದು ಕೊಳೆತು ಹೋಗಿದೆ ಅಂತ ಏನಾದರೂ ಹೇಳಿ ಟ್ರೇಡರ್ಸ್‌ಗೆ ಕೊಟ್ಟುಬಿಡುತ್ತಾರೆ ಅದರಿಂದಲೂ ನಮಗೆ ಲಾಸ್ ಆಗುತ್ತದೆ. ನಮಗೆ ಗೊತ್ತಿದ್ದ ಅಂದಾಜುಗಿಂತಲೂ ಹೆಚ್ಚಾಗಿ ಇವರು ಸ್ಟಾಕ್ ಮಾಡುವುದರಿಂದ ಟ್ರೇಡರ್ಸ್‌ಗೆ ಅನುಕೂಲವಾಗಿ ನಮಗೆ ಲಾಸ್ ಆಗುತ್ತದೆ.

ಅಧ್ಯಕ್ಷರು.—ತಾವು ಬೇಗನೆ ಕನ್‌ಕ್ಲೂಡ್ ಮಾಡಿ.

ಶ್ರೀ ಟಿ.ಬಿ. ಜಯಚಂದ್ರ.—ಅಧ್ಯಕ್ಷರೇ, ನಾನು ಇದುವರೆಗೂ ಒಂದು ವಿಷಯದ ಮೇಲೂ ಮಾತನಾಡಿಲ್ಲ, ಇದು ಒಂದರಲ್ಲೇ ಮಾತನಾಡುತ್ತಿದ್ದೇನೆ. ಆದುದರಿಂದ Much of the time has been taken away by the other Members.

MR. SPEAKER.—I will observe the clock.

ಇವತ್ತು ಸರ್ಕಾರಿಕ್ಷೇತ್ರದಲ್ಲಿ ಉದ್ದಿಮೆಗಳು ಯಾವರೀತಿಯಲ್ಲಿ ಲಾಭವನ್ನು ಮಾಡುತ್ತಿವೆ. ನಷ್ಟವನು ಮಾಡುತ್ತಿವೆ ಎನ್ನುವುದನ್ನು ನಾವು ನೋಡಿದಾಗ, ಹೆಚ್ಚು ಕೈಗಾರಿಕೆಗಳು ನಷ್ಟದಲ್ಲಿ ಕೆಲಸ ಮಾಡುತ್ತಿವೆ. ಉದಾಹರಣೆಗೆ ಎನ್‌ಜಿಇಎಫ್‌ನ್ನು ತೆಗೆದು ಕೊಳ್ಳುವುದಾದರೆ, ನಾವು ಇಲ್ಲಿ ಹಾಕಿರತಕ್ಕ ಬಂಡವಾಳ ೬೦೦ ಲಕ್ಷ ರೂಪಾಯಿಗಳು. ಇದರ ಟರ್ನ್ ಓವರ್ ೩೫ ಕೋಟಿ ರೂಪಾಯಿಗಳು. ಆದರೆ ಖಾಸಗಿಯವರ ಕಾರ್ಖಾನೆಯನ್ನು ನಾವು ನೋಡುವುದಾದರೆ, ಉದಾಹರಣೆಗೆ ಕಿರ್ಲೋಸ್ಕರ ಕಂಪನಿಯಲ್ಲಿ ಅವರು ಹಾಕಿರತಕ್ಕ ಬಂಡವಾಳ ೨೦೦ ಲಕ್ಷ ರೂಪಾಯಿಗಳು, ಅವರ ಟರ್ನ್ ಓವರ್ ೭೫ ಕೋಟಿ ರೂಪಾಯಿಗಳು ಕಿರ್ಲೋಸ್ಕರ ಇದು ಹೇಗೆ? ಅವರು ನೀವು ಕೊಡುವ ಸಂಬಳಕ್ಕಿಂತಲೂ ಜಾಸ್ತಿ ಸಂಬಳಗಳನ್ನು ಅವರ ಕೆಲಸಗಾರರಿಗೆ ಕೊಟ್ಟು ಈ ರೀತಿಯ ಲಾಭವನ್ನು ಗಳಿಸುತ್ತಿದ್ದಾರೆ. ಇಷ್ಟೆಲ್ಲಾ ಆದರೂ ಕೂಡ ಖಾಸಗಿಯವರು ಯಾವ ರೀಯಲ್ಲಿ ಸೋಷಿಯಲ್ ಆಬ್ಲಿಗೇಷನ್ಸ್‌ನ್ನು ಮಾಡುತ್ತಿದ್ದಾರೆ ಅಷ್ಟನ್ನು ನಿಮ್ಮ ಕೈಗಾರಿಕೆಗಳವರು ಮಾಡಲಿಕ್ಕೆ ಸಾಧ್ಯವೇ ? ಏನೋ ನಿಮ್ಮ ಮೈಸೂರು ಮಿನರಲ್ಸ್ ಅವರನ್ನು ಬಿಟ್ಟರೆ ಬೇರೆ ಯಾರು ಮಾಡುತ್ತಿದ್ದಾರೆ ? ಏಕೆಂದರೆ ನಿಮ್ಮ ಕೈಗಾರಿಕೆಗಳಲ್ಲಿ ಯಾರೂ ಲಾಭ ಮಾಡುತ್ತಿಲ್ಲ ಹೆಚ್ಚು ಕೈಗಾರಿಕೆಗಳು ನಷ್ಟವನ್ನು ಅನುಭವಿಸುತ್ತೇವೆ ಎನ್ನುವ ಮಾತನ್ನು ನಾನು ಇಲ್ಲಿ ಹೇಳಬೇಕಾಗಿದೆ. ನಿಮ್ಮ ಕೈಗಾರಿಕೆಗಳಲ್ಲಿ ನೀವು ಕೊಟ್ಟಿರತಕ್ಕ ಕ್ಯಾಪಿಟಲ್‌ನ್ನು ಉಪಯೋಗಿಸಿಕೊಂಡು ಕೈಗಾರಿಕೆಯನ್ನು ಬೆಳಸುವುದನ್ನು ಬಿಟ್ಟು ನಿಮ್ಮ ಕ್ಯಾಪಿಟಲ್‌ನ್ನೇ ವ್ಯಯ ಮಾಡುತ್ತಾ ಹೋದರೆ ಇದು ಯಾರ ತಪ್ಪು ? ಸರ್ಕಾರದವರು ಬಡ ರೈತರಿಂದ ದುಡ್ಡು ತಂದು ಈ ರೀತಿಯಾಗಿ ಲಾಸ್ ಮಾಡುತ್ತಾ ಹೋದರೆ ಇದಕ್ಕೆ ಯಾರು ಕಾರಣ ಇಂಥ ಪರಿಸ್ಥಿತಿ ಬರದೆ ಹಾಗೆ ನೋಡಿಕೊಳ್ಳಬೇಕು ಎಂದು ನಾನು ಹೇಳುತ್ತೇನೆ. ಇಂಥ ಪರಿಸ್ಥಿತಿ ಎಲ್ಲಿಯೂ ಇಲ್ಲ ರೈತರು ಒಂದು ರೂಪಾಯಿ ಕಂದಾಯದ ಬಾಕಿಯನ್ನು ಇಟ್ಟುಕೊಂಡಿದ್ದರೆ ಅವನ ಮನೆಯನ್ನು ಅಧಿಕಾರಿಗಳು ಜಫ್ತಿ ಮಾಡತಕ್ಕ ಕೆಲಸವನ್ನು ಮಾಡುತ್ತಾರೆ, ಆದರೆ ಇಷ್ಟೊಂದು ಲಾಸ್ ಆಗುತ್ತಿರುವಾಗ ತಾವು ಏಕೆ ಕ್ರಮ ತೆಗೆದುಕೊಳ್ಳಬಾರದು. ನನಗೆ ತಿಳಿದ ಮಟ್ಟಿಗೆ ನಮ್ಮ ಕೈಗಾರಿಕೆಗಳು ಸರಿಯಾದ ರೀತಿಯಲ್ಲಿ ಕೆಲಸ ಮಾಡಿದರೆ ಸರ್ಕಾರಕ್ಕೆ ರೈತರ ಮೇಲೆ ಟ್ಯಾಕ್ಸ್ ಹಾಕತಕ್ಕ ಪರಿಸ್ಥಿತಿ ಬರುವುದಿಲ್ಲ. ಇನ್ನೊಂದು ಸಲಹೆಯನ್ನು ನಾನು ಈ ಇಲಾಖೆಯವರಿಗೆ ಕೊಡಬಯಸುತ್ತೇನೆ. ಏನೆಂದರೆ ಈ ನಷ್ಟವನ್ನು ಅನುಭವಿಸತಕ್ಕ ಕೈಗಾರಿಕೆಗಳು ಏನು ಇವೆ. ಇವುಗಳಿಗೆ ಬೇರೆಯವರ ಸಹಾಯವನ್ನು ಅಂದರೆ, ಹೊರಗಡೆಯಿಂದ ತಜ್ಞರನ್ನು ಕರೆಯಿಸಿ ಅವರ ಸಹಾಯವನ್ನು ತೆಗೆದುಕೊಂಡು ಏಕೆ ಈ ಕೈಗಾರಿಕೆಗಳನ್ನು ಲಾಭದಾಯಕವಾಗಿ ನಡೆಯುವಂತೆ ಮಾಡಬಾರದು ಎಂದು ನನ್ನ ಪ್ರಶ್ನೆ ? ನಾನು ಈ ವಿಷಯವನ್ನು ಅನೇಕ ಬಾರಿ ಇಲಾಖೆಯ ಮುಖ್ಯ ಕಾರ್ಯದರ್ಶಿಯವರೊಂದಿಗೆ ಪ್ರಸ್ತಾಪ ಮಾಡಿದ್ದೇನೆ. ತಜ್ಞರನ್ನು ಕರೆಯಿಸಿ ಆಗತಕ್ಕ ನಷ್ಟವನ್ನು ತಪ್ಪಿಸುವುದಕ್ಕೆ ಸಾಧ್ಯತೆ ಇದೆ. ಇದನ್ನು ತಾವು ಪರಿಶೀಲನೆ ಮಾಡಬೇಕು ಎಂದು ನಾನು ಹೇಳುತ್ತೇನೆ

ಇನ್ನು ಹ್ಯಾಂಡಿಕ್ರಾಫ್ಟ್ಸ್ ಬಗ್ಗೆ ಕೆಲವು ಮಾತುಗಳನ್ನು ಹೇಳುತ್ತೇನೆ. ಇದು ಎಷ್ಟರ ಮಟ್ಟಿಗೆ ನಮ್ಮ ಜನಗಳಿಗೆ ಉಪಯೋಗವಾಗಬೇಕಾಗಿತ್ತೋ ಅಷ್ಟು ಆಗದೆ ಇದರ ಉದ್ದೇಶವನ್ನೇ ಈಡೇರಿಸಿಲ್ಲ ಎಂದರೆ ತಪ್ಪಾಗಲಾರದು. ನನಗೆ ಸಭೆಯಲ್ಲಿ ಹಾಕಿರುವ ಡಾ॥ ಅಂಬೇಡಕರ್ ಅವರ ಚಿತ್ರದ ಬಗ್ಗೆ ಗಮನ ಬರುತ್ತಿದೆ. ಬಹಳ ಸುಂದರವಾಗಿ ಅವರು ಹೇಗಿದ್ದಾರೋ ಹಾಗೆ ಚಿತ್ರವನ್ನು ಬಿಡಿಸಿದ್ದಾರೆ. ಆದ್ದರಿಂದಲೇ ಇದಕ್ಕೆ ಹೆಚ್ಚಿನ ಬೆಲೆ ಬಂದಿದೆ. ವಿಧಾನ ಸೌಧದ ಹೊರಗಡೆ ಅವರ ಸ್ಟಾಚ್ಯೂ ಇದೆ. ಇದನ್ನು ಮಾಡಿರತಕ್ಕವರು ಯಾರು ? ಇದನ್ನು ಬೊಂಬಾಯಿನಿಂದ ಮಾಡಿಸಿಕೊಂಡು ಬಂದಿದ್ದಾರೆ, ಏಕೆ, ನಮ್ಮ ಕರ್ನಾಟಕ

ದಲ್ಲಿ ಇದಕ್ಕೂ ಚೆನ್ನಾಗಿ ಮಾಡುವವರು ಇರಲಿಲ್ಲವೇ ? ಇದಕ್ಕೂ ಚೆನ್ನಾಗಿ ಮಾಡುವಂಥ ಶಿಲ್ಪಿಗಳು ಮೈಸೂರಿನಲ್ಲಿದ್ದಾರೆ ಬೇಕಾದರೆ ನಾನು ನಿಮ್ಮನ್ನು ಕರೆದುಕೊಂಡು ಹೋಗುತ್ತೇನೆ. ಇದೇ ತರಹ ಮೈಸೂರು ಸಿಟಿಯಲ್ಲಿ, ಕಾರ್ಪೊರೇಷನ್ ಹತ್ತಿರ ಇಟ್ಟಿದ್ದಾರೆ, ಇದಕ್ಕೂ ಹೆಚ್ಚಿನ ಜೀವ ಕಳೆಯನ್ನು ಆ ಸ್ಟ್ಯಾಚ್ಯೂಗೆ ಕೊಟ್ಟು ತಯಾರು ಮಾಡಿದ್ದಾರೆ. ಉತ್ತಮ ಶಿಲ್ಪ ಕಲೆಯುಳ್ಳವರು ನಮ್ಮಲ್ಲಿದ್ದಾರೆ, ಅವರಿಗೆ ನೀವು ಪ್ರೋತ್ಸಾಹ ಕೊಡಬೇಕು. ನೂರಾರು ವರ್ಷಗಳಿಂದ ಇದೇ ಕೆಲಸವನ್ನು ಮಾಡುತ್ತಿದ್ದು ಅವರಿಗೆ ಸರಿಯಾದ ಪ್ರೋತ್ಸಾಹ ಇಲ್ಲದೆ ಮೂಲೆ ಸೇರಿದ್ದಾರೆ. ಮೈಸೂರಿನ ಅರಮನೆಯನ್ನು ಕಟ್ಟಿದಂಥ ಶಿಲ್ಪಿಗಳು ಇವತ್ತು ಹೊಟ್ಟೆಗೆ ಇಲ್ಲದೆ ಇರತಕ್ಕ ಪರಿಸ್ಥಿತಿ ಇದೆ. ಇಂಥವರಿಗೆ ನೀವು ಸೌಕರ್ಯವನ್ನು ಕೊಡುವುದಕ್ಕೆ ಏನಾದರೂ ವ್ಯವಸ್ಥೆ ಮಾಡಿದ್ದೀರಾ ? ಇದಲ್ಲದೆ ಹ್ಯಾಂಡಿ ಕ್ರಾಫ್ಟನವರು ಸುಮಾರು ೭೦ ಪರ್ಸೆಂಟ್ ಪರ್ಚೇಸ್‌ನನ್ನು ಹೊರಗಡೆಯಿಂದ ಮಾಡುತ್ತಿದ್ದಾರೆ. ಆದರೆ ಅಲ್ಲಿ ಆಗುತ್ತಿರುವ ಲಾಸ್‌ನ್ನು ನೋಡಿದರೆ ವರ್ಷೇ ವರ್ಷೇ ಅದು ಹೆಚ್ಚಾಗುತ್ತಿದೆ. ಇದರ ಬಗ್ಗೆ ತಾವು ವಿಶೇಷವಾದ ಆಸಕ್ತಿಯನ್ನು ವಹಿಸಬೇಕು ಎನ್ನುವ ಮಾತನ್ನು ನಾನು ಇಲ್ಲಿ ಹೇಳಹೇಳಬೇಕಾಗಿದೆ. ಇದಲ್ಲದೆ ಈ ಕಾರ್ಪೊರೇಷನ್‌ನಲ್ಲಿ ಅನೇಕ ವ್ಯತ್ಯಾಸಗಳು ಅನ್ಯಾಯಗಳು ಆಗುತ್ತಿವೆ, ಉದಾಹರಣೆಗೆ ಹೇಳುವುದಾರೆ, ತಾವು ಲೇಡಿ ಎಕ್ಸಿಬಿಷನ್ ಮ್ಯಾನೇಜರ್ ಎಂದು ಒಬ್ಬರನ್ನು ಅಪಾಯಿಂಟ್‌ಮೆಂಟ್ ಮಾಡಿಕೊಂಡಿದ್ದೀರಿ, ಇವರಿಗೆ ೪೦ ವರ್ಷ ವಯಸ್ಸಾಗಿದೆ, ಇವರಿಗೆ ೭೫೦ ರೂಪಾಯಿಗಳ ಬೇಸಿಕ್ ಸಂಬಳವನ್ನು ಕೊಟು ನೇಮಕ ಮಾಡಿಕೊಂಡಿದ್ದೀರಿ. ಏಕೆ, ಇಲಾಖೆಯಲ್ಲಿ ಕೆಲಸ ಮಾಡತಕ್ಕವರು ಯಾರೂ ಇರಲಿಲ್ಲವೇ ? ಈ ಕೆಲಸವನ್ನು ಬೇರೆಯವರಿಗೆ ಮಾಡುವುದಕ್ಕೆ ಬರುವುದಿಲ್ಲವೇ ? ಹತ್ತಾರು ವರ್ಷ ಸಂಸ್ಥೆಯಲ್ಲಿ ದುಡಿದವರಿಗೆ ಪ್ರಾತಿನಿಧ್ಯ ಕೊಡದೆ ಇವರನ್ನು ನೇಮಕ ಮಾಡಿಕೊಂಡಿದ್ದರ ಔಚಿತ್ಯವೇನು ? ಇನ್ನೊಬ್ಬ ಲೇಡಿ ಕ್ಲರ್ಕ್ ಇವರನ್ನು ಅಸಿಸ್ಟೆಂಟ್ ಮಾರ್ಕೆಟಿಂಗ್ ಆಫೀಸರ್ ಆಗಿ ಪ್ರಮೋಷನ್ ಕೊಟ್ಟಿದ್ದಾರೆ. ಇವರಿಗೆ ಮೊದಲಿದ್ದ ಸಂಬಳ ೩೪೦ರೂಪಾಯಿಂಗಳು, ಇವರನ್ನು ೭೫೦ರೂಪಾಯಿಗಳ ಸ್ಕೇಲಿಗೆ ಪ್ರಮೋಷನ್ ಕೊಟ್ಟಿದ್ದಾರೆ ಇದರ ಹಿಂದೆ ಇರತಕ್ಕ ಹಿನ್ನೆಲೆ ಯಾದರೂ ಏನು ಎಂದು ನಾನು ಪ್ರಶ್ನೆ ಮಾಡಬೇಕಾಗಿದೆ ಇದರ ಬಗ್ಗೆ ನಾನು ಮಾನ್ಯ ಮಂತ್ರಿಗಳಿಂದ ನಿರ್ದಿಷ್ಟವಾದ ಉತ್ತರವನ್ನು ಬಯಸುತ್ತೇನೆ. ಮತ್ತು ಒಬ್ಬ ಮಾರ್ಕೆಟಿಂಗ್ ಮ್ಯಾನೇಜರ್‌ನ್ನು ಚೀಫ್ ಮಾರ್ಕೆಟಿಂಗ್ ಮ್ಯಾನೇಜರ್ ಪೋಸ್ಟ್‌ಗೆ ಹೈಯರ್ ಸ್ಕೇಲಿಗೆ ಪ್ರಮೋಷನ್ ಕೊಟ್ಟಿದ್ದಾರೆ ಇದರ ಹಿನ್ನೆಲೆ ಏನು ? ಉದ್ದೇಶ ಏನು ? ಇಲ್ಲಿ ಯಾರೂ ಹೇಳುವವರು ಇಲ್ಲ ಕೇಳುವವರು ಇಲ್ಲವಾಗಿದೆ. ಇನ್ನೊಂದು ವಿಷಯವನ್ನು ಇಲ್ಲಿ ಹೇಳಬೇಕಾಗಿದೆ. ಒಂದು ಹುದ್ದೆಗೆ ೩೦೦ ಜನರಿಂದ ಅರ್ಜಿ ಬಂದಾಗ, ಅವರನ್ನು ಇಂಟರವ್ಯೂ ಮಾಡಿ ಒಬ್ಬರನ್ನು ನೇಮಕ ಮಾಡಿಕೊಂಡರು. ಮತ್ತೆ ೨೫ ದಿವಸವಾದನಂತರ ಇವರನ್ನು ಕೆಲಸದಿಂದ ತೆಗೆದು ಬಿಟ್ಟರು ಇದಕ್ಕೇನು ಕಾರಣ ? ಇಲ್ಲಿ ಏನಾದರೂ ರಿಕ್ರೂಟ್‌ಮೆಂಟ್ ರೂಲ್ಸ್ ಇದೆಯೇ, ಇಲ್ಲಿ ನನಗೆ ಗೊತ್ತಿರತಕ್ಕ ಒಬ್ಬ ಸ್ನೇಹಿತ ಇದ್ದಾನೆ. ಅವನ ಹೆಸರು ಗುರುರಾಜ ರಾವ್, ಈತ ಡಿಸೈನ್ ಕಂ ಫೋಟೋಗ್ರಾಫರ್, ಈತನಿಗೆ ಸರಿಯಾದ ಕೆಲಸವನ್ನು ಕೊಡದೆ, ಅವನ್ನು ಜೂನಿಯರ್ ಕ್ಲರ್ಕ ಆಗಿ ಪೋಸ್ಟ್ ಮಾಡಿದ್ದಾರೆ. ಇಂಥ ತಾರತಮ್ಯಗಳು ಇಲ್ಲಿ ಅನೇಕ ನಡೆಯುತ್ತಿವೆ. ಇದನ್ನು ತಗ್ಗಿಸಿ, ಇದರ ಬಗ್ಗೆ ಹೆಚ್ಚಿನ ಆಸಕ್ತಿಯನ್ನು ತಾವು ಕೊಡದೇ ಹೋದರೆ ನಿಜವಾಗಿಯೂ ಈ ಸಂಸ್ಥೆ ಬಹಳ ನಷ್ಟಕ್ಕೆ ಗುರಿಯಾಗುತ್ತದೆ. ಮತ್ತು ಇದು ಅದೋಗತಿಗೆ ಬರುತ್ತಿದೆ ಎನ್ನುವ ಎಚ್ಚರಿಕೆಯನ್ನು ನಾನು ಕೊಡುವುದಕ್ಕೆ ಬಯಸುತ್ತೇನೆ.

ಆಮೇಲೆ ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್ ಬಗ್ಗೆ ಎರಡುಮಾತುಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಅನೇಕ ಇಂಡಸ್ಟ್ರಿಯಲ್ ಷೆಡ್ಡುಗಳನ್ನು ನೀವು ಕೊಡುತ್ತಿದ್ದೀರಿ, ಇವುಗಳನ್ನು ಕೊಡುವಂಥ ಕಾಲದಲ್ಲಿ ಕನ್ನಡಿಗರಿಗೆ ಹೊಸದಾಗಿ ಕೈಗಾರಿಕೆಗಳನ್ನು ಪ್ರಾರಂಭ ಮಾಡುವವರಿಗೆ ಆದ್ಯತೆ ಕೊಡಬೇಕು, ಮತ್ತು ಈ ಸ್ಕೀಂನಲ್ಲಿ ಬಹಳ ವಿಳಂಬದಿಂದ ಕೆಲಸಗಳು ನಡೆಯುತ್ತಿವೆ. ಆದಷ್ಟು ಬೇಗ ಷೆಡ್ಡುಗಳನ್ನು ಕೊಡಿಸತಕ್ಕ ವ್ಯವಸ್ಥೆ ಮಾಡಬೇಕು ಎಂದು ಹೇಳುತ್ತೇನೆ.

ಕೊನೆಯದಾಗಿ, ಸಿರಿಕಲ್ಚರ್ ಬಗ್ಗೆ — ಅನೇಕ ಸದಸ್ಯರು ಮಾತನಾಡಿದ್ದಾರೆ. ನಮ್ಮಲ್ಲಿರುವ ಕೈಗಾರಿಕೆಗಳು ಕೋಟ್ಯಾಂತರ ರೂಪಾಯಿಗಳ ನಷ್ಟವನ್ನು ಮಾಡುತ್ತಿವೆಂದು ಒಂದು ವರ್ಷದಲ್ಲಿ ಇವುಗಳಲ್ಲಿ ಸುಮಾರು ನಾಲ್ಕೂವರೆಕೋಟಿ ರೂಪಾಯಿಗಳ ನಷ್ಟವಾಗಿದೆ ಎಂದು ಅಧ್ಯಕ್ಷರು ಹಿಂದೆ ಈ ವಿಷಯವನ್ನು ಪಿ ಎ ಸಿ ಕಮಿಟಿಗೆ ರೆಫರ್ ಮಾಡಿದರು. ನನಗಾದರೂ ಅನ್ನಿಸುತ್ತದೆ, ಈ ರೀತಿಯಾಗಿ ರೆಫರ್ ಮಾಡತಕ್ಕ ಅವಶ್ಯಕತೆ ಇರಲಿಲ್ಲ ಎಂದು. ಏತಕ್ಕೋಸ್ಕರ ಲಾಸ್ ಆಗುತ್ತಿದೆ ಎಂದು ನಾವು ನೋಡುವುದಾದರೆ, ಈ ಎಲ್ಲಾ ಕಾರ್ಖಾನೆಗಳಲ್ಲಿ ಕೆಲಸ ಮಾಡತಕ್ಕವರು ಸುಮಾರು ೭೦–೮೦ ಪರ್ಸೆಂಟ್ ಜನ ಹರಿ

ಜನರು ಇದ್ದಾರೆ. ಇವರು ರಾ ಮೇಟಿರಿಯಲ್ಸ್ ಕೊಳ್ಳಬೇಕಾದರೆ ಬೇರೆಯವರಂತೆ ಓಪನ್ ಮಾರ್ಕೆಟ್ಟಿನಲ್ಲಿಯೇ ಕೊಳ್ಳಬೇಕು, ಇವರ ರೈತರಿಗೆ ತಲೆಯ ಮೇಲೆ ಹೊಡೆದು ಇದನ್ನು ಕೊಳ್ಳುವುದಕ್ಕಾಗುವುದಿಲ್ಲ. ರೀಲರ್ಸ್‌ಗೆ ಬೆಳೆದಂಥ ರೈತರಿಗೆ ಸರಿಯಾದ ಬೆಲೆಯನ್ನು ಕೊಟ್ಟು ಕಕೂನನ್ನು ಕೊಂಡುಕೊಳ್ಳಬೇಕು. ಒಳ್ಳೆಯ ಬೆಲೆ ಇದಕ್ಕೆ ಕೊಟ್ಟರೆ ಇವತ್ತು ಕೈಗಾರಿಕೆಗಳು ನಡೆಯುವುದಕ್ಕೆ ಸಾಧ್ಯ. ಒಳ್ಳೆಯ ಬೆಲೆಯ ಕೊಡುವುದಕ್ಕೆ ಹೋಗಿ ಈ ಕೈಗಾರಿಕೆಗಳು ಲಾಸ್‌ನಲ್ಲಿ ನಡೆಯುತ್ತಿವೆ. ಇಲ್ಲಿ ಕೆಲಸ ಮಾಡುವವರು ನಾನು ಮೊದಲೇ ಹೇಳಿದಂತೆ ಹರಿಜನರು ಇದ್ದಾರೆ. ಅಲ್ಲಿ ಯಾರು ಮಂತ್ರಿಗಳು ಮಕ್ಕಳು ಕೆಲಸ ಮಾಡುತ್ತಿಲ್ಲ. ಅಧಿಕಾರಿಗಳ ಮಕ್ಕಳು ಕೆಲಸ ಮಾಡುತ್ತಿಲ್ಲ ತಜ್ಞರು ಇಲ್ಲ. ಆದ್ದರಿಂದಲೇ ಸ್ವಲ್ಪ ಕಷ್ಟವಾಗಿದೆ. ಅದಕ್ಕೋಸ್ಕರವೇ ಎಲ್ಲಾ ಕೆಲಸಗಳು ಈ ರೀತಿಯಾಗಿದೆ. ಇಷ್ಟು ಹೇಳಿ, ನನಗೆ ಹೆಚ್ಚು ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶವಿಲ್ಲದಿದ್ದರಿಂದ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಬಿ.ವಿ. ಕಕ್ಕಿಲಯ್ಯ (ವಿಟ್ಲ) —ಸನ್ಮಾನ್ಯ ಅಧ್ಯಕ್ಷರೇ, ಈ ನಮ್ಮ ಕೈಗಾರಿಕಾ ಇಲಾಖೆಯ ಬಗ್ಗೆ ಚರ್ಚೆ ಮಾಡತಕ್ಕಂಥ ಸಂದರ್ಭದಲ್ಲಿ, ನಮ್ಮ ರಾಜ್ಯದಲ್ಲಿ ಈ ಇಲಾಖೆಯಿಂದ ಯಾವ ರೀತಿಯಲ್ಲಿ ಕೈಗಾರಿಕಾ ಬೆಳವಣಿಗೆಯಾಗಿದೆ ಎನ್ನತಕ್ಕಂಥ ವಿಷಯಕ್ಕೆ ಬರುವುದಕ್ಕೆ ಮೊದಲು, ನಮ್ಮ ರಾಜ್ಯದಲ್ಲಿ ಈ ಕೈಗಾರಿಕಾ ಇಲಾಖೆ ಮತ್ತು ಇತರ ಕೈಗಾರಿಕೆಗಳು, ಅವುಗಳ ಲಾಭ ನಷ್ಟ ಮತ್ತು ಬೆಳವಣಿಗೆ ಇವೆಲ್ಲವೂ ಕೂಡ ಇಡೀ ದೇಶದ ಆರ್ಥಿಕ ಪರಿಸ್ಥಿತಿಯನ್ನು ಕೈಗಾರಿಕಾ ಬೆಳವಣಿಗೆಯನ್ನು ಮತ್ತು ರಾಷ್ಟ್ರೀಯ ಯೋಜನೆಗಳನ್ನು ಬಹಳಮಟ್ಟಿಗೆ ಅವಲಂಬಿಸಿಕೊಂಡಿದೆ ಎಂದು ನಾನು ಮೊಟ್ಟಮೊದಲಿಗೆ ಪ್ರಸ್ತಾಪ ಮಾಡುವುದಕ್ಕೆ ಅಪೇಕ್ಷೆ ಪಡುತ್ತೇನೆ. ಈ ಕೆಲವು ಅಂಶಗಳನ್ನು ಬಹಳ ಮುಖ್ಯವಾಗಿ ಈ ಆರನೇ ಪಂಚವಾರ್ಷಿಕ ಯೋಜನೆಯಲ್ಲಿ ಈ ಯೋಜನೆಯನ್ನು ತಯಾರು ಮಾಡಿದವರು ಪ್ರಸ್ತಾಪ ಮಾಡಿದ್ದಾರೆ. ಅವರು ಹೇಳುವ ರೀತಿಯಲ್ಲಿ ನಾವು ಯಾವ ಉದ್ದೇಶದಿಂದ, ಕೈಗಾರಿಕಾ ಬೆಳವಣಿಗೆಯನ್ನು ಮಾಡಬೇಕು, ಅದರಿಂದ ನಮ್ಮ ರಾಷ್ಟ್ರದ ಆರ್ಥಿಕ ಪರಿಸ್ಥಿತಿಯನ್ನು ಯಾವ ರೀತಿಯಲ್ಲಿ ರೂಪಿಸಬೇಕು ಎಂದು ಅಪೇಕ್ಷೆ ಪಟ್ಟಿದ್ದರೋ ಆ ರೀತಿಯಲ್ಲಿ ಆಗಲಿಲ್ಲ ಎನ್ನುವ ವಿಚಾರವನ್ನು ೬ನೇ ಪಂಚವಾರ್ಷಿಕ ಯೋಜನೆಯ ಕರಡಿನಲ್ಲಿ ಸ್ಪಷ್ಟವಾಗಿ ಅವರು ನಮೂದು ಮಾಡಿದ್ದಾರೆ.

Reviewing the "growth performance" of the industrial sector, the Sixth Five Year Plan (1980-85) has remarked:

> "The five fold expansion in industrial production over the planning period is very substantial. However, there is a distinct decline in the pace of industrial expansion in the second half of the period. The pattern of income distribution and the rate of economic growth was such that domestic market for manufacture consumer goods could not grow very rapidly".

Further it is said;

> "The pattern of industrial development that is envisaged obviously reflects the structure of effective demand which is determined by the distribution of income. This means that the further expansion of industry is limited by narrowness of the market".

ಹೀಗೆ ಅವರು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಇವತ್ತು ನಮ್ಮ ದೇಶದ ಪರಿಸ್ಥಿತಿಯನ್ನು ನೋಡಿದರೆ, ಕಳೆದ ೩೦ ವರ್ಷಗಳ ಅವಧಿಯಲ್ಲಿ ಮತ್ತು ಕಳೆದ ೨ ವರ್ಷಗಳಲ್ಲಿ ವಿಶೇಷವಾಗಿ ಟಾಟಾ ಮತ್ತು ಬಿರ್ಲಾ–ಈ ಎರಡು ಗುತ್ತಿಗೆದಾರರ ಮನೆತನಗಳ ಬೆಳವಣಿಗೆಯನ್ನು ನೋಡಿದರೆ ಬಹುಶಃ ನಮ್ಮ ಸರ್ಕಾರದ ಅಧೀನದಲ್ಲಿರತಕ್ಕಂಥ ಎಲ್ಲಾ ಕೈಗಾರಿಕೆಗಳಲ್ಲಿ ತೊಡಗಿಸಿದಷ್ಟು ಹಣ ಆ ಎರಡು

ಗುತ್ತಿಗೆದಾರ ಮನೆತನದವರ ಕೈಯಲ್ಲಿ ಶೇಖರಣೆಯಾಗಿದೆ. ಈ ದೇಶದಲ್ಲಿ ನಾವು ಯಾವ ರೀತಿಯ ಆರ್ಥಿಕ ವ್ಯವಸ್ಥೆಯನ್ನು ಕಟ್ಟುತ್ತಿದ್ದೇವೆ ಎಂದರೆ ಈ ಗುತ್ತಿಗೆದಾರ ಮನೆತನದವರು ಇಡೀ ದೇಶದ ಸಂಪತ್ತಿನಲ್ಲಿ ಸುಮಾರು ೭೦ ಭಾಗವನ್ನು ಅವರ ಕೈಯಲ್ಲಿ ಅಡಗಿಸಿಟ್ಟುಕೊಂಡ ರೀತಿಯಲ್ಲಿ ಇದೆ. ಹೀಗಿರುವಾಗ ನಮಗೆ ಬಂಡವಾಳ ಸಿಕ್ಕುವುದಕ್ಕೆ ಸಾಧ್ಯವಾಗಿಲ್ಲ ಮತ್ತು ಯಾವ ಕೈಗಾರಿಕೆಯನ್ನಾಗಲೀ ನಿಮಗೆ ಬೇಕಾದ ರೀತಿಯಲ್ಲಿ ರೂಪಿಸುವುದಕ್ಕೂ ಕೂಡ ಸಾಧ್ಯವಾಗಿಲ್ಲ: ಇದೊಂದಾದರೆ, ಇನ್ನೊಂದು ಕಡೆ ನೋಡಿದರೆ ಹಿಂದೆ ವಾಂಚ್ಯೂ ಸಮಿತಿಯವರು ಹೇಳಿದ ಹಾಗೆ ಒಂದು ವರ್ಷಕ್ಕೆ ೧೪೦೦ ಕೋಟಿ ಯಷ್ಟು ಕಪ್ಪು ಹಣ ಈ ದೇಶದಲ್ಲಿ ಉತ್ಪತ್ತಿಯಾಗುತ್ತಿದೆ ಎಂದು ಅವರು ತೋರಿಸಿಕೊಟ್ಟಿದ್ದಾರೆ. ೧೯೬೮ರಲ್ಲಿ ಶ್ರೀ ವಾಲ್ಕಿವಾಲರವರ ಅಂದಾಜಿನ ಪ್ರಕಾರ ೧೪ ಸಾವಿರ ಕೋಟಿ ರೂಪಾಯಿಗಳ ಕಪ್ಪು ಹಣ ಈ ದೇಶದಲ್ಲಿ ನಿರ್ಮಾಣವಾಗಿದೆ ಎಂಬುದನ್ನು ಅವರು ತೋರಿಸಿಕೊಟ್ಟಿದ್ದಾರೆ. ಇದರ ಪರಿಣಾಮ ವೇನು? ಒಂದು ಕಡೆಯಲ್ಲಿ ಬಂಡವಾಳಗಾರ ಗುತ್ತಿಗೆದಾರ ಮನೆತನದವರು ನಿಮಗೆ ಬರಬೇಕಾದ ಹಣ ವನ್ನು ಶೇಖರಿಸುತ್ತಿದ್ದಾರೆ, ಇನ್ನೊಂದುಕಡೆ ಕಪ್ಪು ಹಣ ಸೃಷ್ಟಿಯಾಗುತ್ತಿದೆ. ಈ ಹಣ ನಿಮ್ಮ ನಿಯಂತ್ರಣಕ್ಕಾಗಲೀ, ಅಥವಾ ಅಧೀನಕ್ಕಾಗಲೀ ಬರುವುದಿಲ್ಲ. ಈ ದೇಶದಲ್ಲಿ ನಿಜವಾಗಿಯೂ ಕೂಡ ಜನರ ಶ್ರಮದಿಂದ, ಸರ್ಕಾರ ತೊಡಗಿಸಿರುವ ಹಣದಿಂದ ಉತ್ಪತ್ತಿಯಾಗುವಂತಹ ಸಾಧನ ಸಂಪನ್ಮೂಲ ಗಳು ಏನಿದೆ ಅದನ್ನು ಮುಂದಿನ ಕೈಗಾರಿಕಾ ಬೆಳವಣಿಗೆಗೆ ಉಪಯೋಗಿಸುವುದಕ್ಕೆ ಸಾಧ್ಯವಾಗುವುದಿಲ್ಲ ಎನ್ನುವುದೂ ಕೂಡ ಸ್ಪಷ್ಟವಾಗಿ ಅಂಕಿಅಂಶಗಳಿಂದ ಕಂಡು ಬರುತ್ತಿದೆ. ನಾನು ಇದನ್ನು ತಮ್ಮ ಗಮನಕ್ಕೆ ಏತಕ್ಕೆ ತರುತ್ತಿದ್ದೇನೆ ಎಂದರೆ, ನಮ್ಮ ದೇಶದ ಅಭಿವೃದ್ಧಿಯನ್ನು ತಡೆಹಿಡಿಯುತ್ತಾ ಇರತಕ್ಕಂಥ ನಮ್ಮ ದೇಶದ ಅಭಿವೃದ್ಧಿಗೆ ಕೊಡಲಿಯ ಪೆಟ್ಟನ್ನು ಹಾಕುತ್ತಾ ಇರತಕ್ಕಂಥ ಈ ಎರಡು ದೊಡ್ಡ ಶಕ್ತಿಗಳ ಮೇಲೆ ಕೇಂದ್ರ ಸರ್ಕಾರ ಮತ್ತು ನಮ್ಮ ಸರ್ಕಾರ ತೀವ್ರ ಕ್ರಮ ಕೈಗೊಳ್ಳುತ್ತದೆ ಎಂಬುದು ನಮಗಿನ್ನೂ ಸ್ಪಷ್ಟವಾಗಿಲ್ಲ, ಅದನ್ನು ಅವರು ಸ್ಪಷ್ಟಪಡಿಸಿದರೆ, ಮತ್ತು ಆ ಬಗ್ಗೆ ಯೋಗ್ಯ ವಾದ ಕ್ರಮವನ್ನು ಕೈಕೊಂಡರೆ ಇವತ್ತು ಇರುವಂತಹ ಪರಿಸ್ಥಿತಿಯನ್ನು ಸ್ವಲ್ಪ ಮಟ್ಟಿಗಾದರೂ ಸುಧಾರಿಸುವುದಕ್ಕೆ ಸಾಧ್ಯವಾಗುತ್ತದೆಂದು ಎಂದು ನಾನು ಇವತ್ತು ಪ್ರಾಸ್ತಾವಿಕವಾಗಿ ಇಲ್ಲಿ ಹೇಳು ವುದಕ್ಕೆ ಅಪೇಕ್ಷೆಪಡುತ್ತೇನೆ. ಇನ್ನೊಂದು ವಿಚಾರ ಇದೆ. ಇವತ್ತು ಕೈಗಾರಿಕಾ ಬೆಳವಣಿಗೆಯ ಬಗ್ಗೆ ತಾವು ಕೊಟ್ಟಿರತಕ್ಕಂಥ ಅಂಕಿಸಂಖ್ಯೆಗಳನ್ನು ನೋಡಿದರೆ, ನಮ್ಮ ರಾಜ್ಯದಲ್ಲಿ ಈ ಕೈಗಾರಿಕೆಗಳಲ್ಲಿ ಉದ್ಯೋಗ ಒದಗಿಸಬೇಕಾಗಿರತಕ್ಕಂಥ ನಿರುದ್ಯೋಗಿಗಳ ಸಂಖ್ಯೆ ತಾವು ಹೇಳಿದಹಾಗೆ ೬.೬೪ ಲಕ್ಷದಷ್ಟು ನಿರುದ್ಯೋಗಿಗಳು ನಮ್ಮ ಕರ್ನಾಟಕ ರಾಜ್ಯದಲ್ಲಿದ್ದಾರೆಂದು ತಿಳಿದುಬರುತ್ತಿದೆ. ಇವರಿಗೆಲ್ಲಾ ಆರ್ಗನೈಸ್ಡ್ ಸೆಕ್ಟಾರ್‌ನಲ್ಲಿ ಉದ್ಯೋಗಗಳನ್ನು ಒದಗಿಸಬೇಕಾಗಿದೆ. ಆರ್ಗನೈಸ್ಡ್ ಎಂಪ್ಲಾಯ್‌ಮೆಂಟ್ ಇನ್ ಕರ್ನಾಟಕ ಡ್ಯುರಿಂಗ್ ಮಾರ್ಚ್ ೧೯೮೦-೮೧ ಇದರಲ್ಲಿ ತಾವು ಕೊಟ್ಟಿರುವ ಅಂಕಿಸಂಖ್ಯೆಗಳ ಪ್ರಕಾರ ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳಲ್ಲಿ ಸ್ವಲ್ಪ ಮಟ್ಟಿಗಾದರೂ ಇವರಿಗೆ ಉದ್ಯೋಗಾವಕಾಶಗಳು ಜಾಸ್ತಿಯಾಗಿದೆ, ಆದರೆ ಖಾಸಗೀ ಸಂಸ್ಥೆಗಳವರು ನಡೆಸುವಂತಹ ಕೈಗಾರಿಕೆಗಳಲ್ಲಿ ಆಗಲೀ, ಈ ಪ್ಲಾಂಟೇಷನ್, ಮೈನಿಂಗ್ ಮ್ಯಾನುಫ್ಯಾಕ್ಚರಿಂಗ್ ಎಲೆಕ್ಟ್ರಿಸಿಟಿ, ಗ್ಯಾಸ್ ಅಂಡ್ ವಾಟರ್ ಕನ್‌ಸ್ಟ್ರಕ್ಷನ್, ಹೋಲ್‌ಸೇಲ್, ರೀಟೈಲ್‌ಸೇಲ್, ಟ್ರೇಡ್ ಟ್ರಾನ್ಸ್‌ಪೋರ್ಟ್-ಇಂತಹ ಯಾವುದೇ ಅಂಶಗಳನ್ನು ತೆಗೆದು ಕೊಂಡರೂ ಕೂಡ ಪ್ರತಿಯೊಂದು ಕಡೆಗಳಲ್ಲಿ ಖಾಸಗೀಯವರು ಅವರ ಕೈಯಲ್ಲಿ ಯಾವ್ಯಾವ ಉದ್ಯಮ ಗಳನ್ನು ಕೈಕೊಂಡಿದ್ದಾರೆಯೋ ಆ ಎಲ್ಲಾ ಕಡೆಯಲ್ಲೂ ಕೂಡ ನಿರುದ್ಯೋಗಿಗಳಿಗೆ ಉದ್ಯೋಗಾವಕಾಶ ಗಳನ್ನು ಒದಗಿಸಿ ಕೊಡುವುದರಲ್ಲಿ ಅವರು ಹಿಂದೇಟು ಹಾಕುತ್ತಿದ್ದಾರೆ, ಅಲ್ಲೆಲ್ಲಾ ಅವರಿಗೆ ಉದ್ಯೋ ಗಾವಕಾಶಗಳು ಸಿಕ್ಕುತ್ತಾ ಇಲ್ಲ ಎನ್ನುವ ವಿಚಾರದ ಕಡೆಗೆ ನಾನು ತಮ್ಮ ಗಮನವನ್ನು ಸೆಳೆಯ ಬಯಸುತ್ತೇನೆ, ಸರ್ಕಾರದವರು ನಡೆಸುವಂತಹ ಸಾರ್ವಜನಿಕ ಕ್ಷೇತ್ರದ ಕೈಗಾರಿಕೆಗಳಲ್ಲಿ ಸಾಕಷ್ಟು ಉದ್ಯೋಗಾವಕಾಶಗಳನ್ನು ಒದಗಿಸುವುದಕ್ಕೆ ಸಾಧ್ಯವಾಗಿದೆ ಅಂತ ಅಲ್ಲ, ಅಲ್ಲಿ ಕೂಡ ತನ್ನ ಮಟ್ಟದಲ್ಲಿ ಬಂಡವಾಳವನ್ನು ಹೂಡುವಾಗ ಹೆಚ್ಚು ಉದ್ಯೋಗಾವಕಾಶಗಳಿಗೆ ಅವಕಾಶವನ್ನು ಮಾಡಿಕೊಂಡಂತಹ ಕಾರ್ಯದಿಂದ ಅವರು ದೂರ ಹೋಗುತ್ತಿದ್ದಾರೆ ಎನ್ನತಕ್ಕಂಥ ಅಂಶವನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇವತ್ತು ಪ್ರತಿಯೊಂದು ಕೈಗಾರಿಕೆಯಲ್ಲಿ ಕೂಡ ಹೆಚ್ಚು ಬಂಡವಾಳವನ್ನು ಹೂಡಿ ಆಧುನಿಕ ಯಂತ್ರೋಪಕರಣಗಳ ಮೂಲಕ ಉತ್ಪಾದನೆಯನ್ನು ಮಾಡುವುದರ ಕಡೆಗೆ ಸರ್ಕಾರ ಗಮನ ಹರಿಸುತ್ತಾ ಇದೆ ಹಾಗೆಯೇ ಖಾಸಗೀಯವರೂ ಕೂಡ ಅದಕ್ಕಿಂತ ಹೆಚ್ಚಿನ ಗಮನ ಹರಿಸುತ್ತಿದ್ದಾರೆ. ಇವತ್ತು ನಾನು ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುವುದೇನೆಂದರೆ ನಮ್ಮ ದೇಶದಲ್ಲಿ ಕೈಗಾರಿಕೆ

ಗಳಿಗೆ ಬಂಡವಾಳವನ್ನು ಹೂಡುವಂತಹ ಕಾಲದಲ್ಲಿ ಆ ಬಂಡವಾಳಕ್ಕೆ ಸರಿಸಮಾನವಾಗಿ ಉದ್ಯೋಗಾವಕಾಶಗಳನ್ನು ಒದಗಿಸುವಂತಹ ಕೈಗಾರಿಕೆಗಳಿಗೆ ಅವಕಾಶ ಮಾಡಿಕೊಡಬೇಕು ಎನ್ನುವುದರ ಕಡೆಗೂ ಕೂಡ ಸರ್ಕಾರ ಗಮನ ಕೊಡಬೇಕಾಗಿರುವುದು ಅಗತ್ಯ ಎನ್ನತಕ್ಕಂಥ ಮಾತನ್ನು ತನ್ನ ಗಮನಕ್ಕೆ ತರುತ್ತಿದ್ದೇನೆ. ಇಲ್ಲಿ ತಾವು ಎಲ್ಲಾ ಅಂಕಿಸಂಖ್ಯೆಗಳನ್ನೂ ಕೊಟ್ಟಿದ್ದೀರಿ. ಅದನ್ನೆಲ್ಲಾ ಓದಿ ಈ ಸಭೆಯ ಕಾಲವನ್ನು ನಾನು ತೆಗೆದುಕೊಳ್ಳುವುದಿಲ್ಲ. ಆದರೆ ಕೆಲವು ಮುಖ್ಯವಾದ ವಿಚಾರಗಳನ್ನು ಹೇಳಲು ನಾನು ಅಪೇಕ್ಷೆ ಪಡುತ್ತೇನೆ. ಈ ಮಾರ್ಕೆಟ್ ಫೆಸಿಲಿಟೀಸ್ ಬಗ್ಗೆ ತಮ್ಮ ವರದಿಯಲ್ಲಿ ಹೇಳಿರುವುದನ್ನು ನೋಡಿದರೆ, ಇವತ್ತು ನಮ್ಮ ದೇಶದಲ್ಲಿ ಕೈಗಾರಿಕೋದ್ಯಮಗಳು ನಮ್ಮ ರಾಷ್ಟ್ರದ ಆರ್ಥಿಕ ಜೀವನದಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸತಕ್ಕಂಥ ದಿಸೆಯಲ್ಲಿ ಹಿಂಜರಿದಿವೆ ಮತ್ತು ಇವತ್ತು ಮಾರ್ಕೆಟ್‌ಗಳೂ ಸಂಕುಚಿತವಾಗುತ್ತಿವೆ. ನೀವು ಉತ್ಪಾದನೆ ಮಾಡಿದ್ದನ್ನು ಮಾರಾಟ ಮಾಡುವುದಕ್ಕೆ ಬೇಕಾದಂತಹ ವ್ಯವಸ್ಥೆಯಲ್ಲಿ ಸಾಕಷ್ಟು ಬೆಳವಣಿಗೆಯಾಗುತ್ತಾ ಇಲ್ಲ ಅದು ಬೆಳವಣಿಗೆಯಾಗಬೇಕಾಗಿದ್ದರೆ ಜನರ ಜೀವನಮಟ್ಟ ಸುಧಾರಿಸಬೇಕು. ಅವರ ಜೀವನಮಟ್ಟ ಸುಧಾರಿಸದಿದ್ದರೆ ನೀವು ಉತ್ಪಾದನೆ ಮಾಡುವಂತಹ ವಸ್ತುಗಳನ್ನು ಅವರು ಕೊಂಡುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ, ಇದರಿಂದ ಮಾರ್ಕೆಟ್ ವ್ಯವಸ್ಥೆ ಸಂಕುಚಿತವಾಗುತ್ತಿದೆ. ಇವತ್ತು ಕೇಂದ್ರ ಸರ್ಕಾರದವರು ಎಕ್ಸ್‌ಪೋರ್ಟ್ ಓರಿಯಂಟೆಡ್ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವಂಥ ಹೊಸ ಧೋರಣೆಯನ್ನು ತಳೆದಿದ್ದಾರೆ ಎನ್ನತಕ್ಕಂಥ ವಿಚಾರ ಅವರ ಯೋಜನೆಗಳನ್ನು ನೋಡಿದರೆ ಅದು ಸ್ಪಷ್ಟವಾಗುತ್ತಿದೆ, ಆದರೆ ನಮ್ಮ ರಾಜ್ಯದ ಮಟ್ಟದಲ್ಲಿ ಜನರಿಗೆ ಬೇಕಾದ ಅವಶ್ಯಕ ವಸ್ತುಗಳನ್ನು ಉತ್ಪಾದನೆ ಮಾಡಿ ಅವರು ಅದನ್ನು ಮಾರ್ಕೆಟ್‌ಗಳ ಮೂಲಕ ಕೊಂಡುಕೊಳ್ಳುವಂತಹ ಶಕ್ತಿಯನ್ನು ಒದಗಿಸುವಂತಹ ರೀತಿಯಲ್ಲಿ ತಮ್ಮ ಆರ್ಥಿಕ ನೀತಿಯನ್ನು ರೂಪಿಸಬೇಕಾಗುತ್ತದೆ. ಈ ದಿಶೆಯಲ್ಲಿ ನೀವು ಹಿಂಜರಿದಿದ್ದೀರಿ. ಅದು ಯಾವುದೇ ಕೈಗಾರಿಕೆ ಇರಲಿ ಅವು ಉತ್ಪತ್ತಿ ಮಾಡುವಂತಹ ವಸ್ತುಗಳಿಗೆ ಒಂದು ಒಳ್ಳೆಯ ಮಾರ್ಕೆಟ್ ಇಲ್ಲದಿದ್ದರೆ ಆ ಎಲ್ಲಾ ಕೈಗಾರಿಕೆಗಳೂ ಕುಂಠಿತವಾಗುತ್ತವೆ ಎಂಬುದನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

೧೨-೩೦ ಪಿ. ಎಂ.

ಈಗ ಈ ವರದಿಯಲ್ಲಿ ಕೊಟ್ಟಿರತಕ್ಕಂತಹ ವರದಿಯ ಪ್ರಕಾರ ಸುಮಾರು ೨೯ ಕಂಪನಿಗಳಲ್ಲಿ ಯಾವ ರೀತಿಯ ಕೆಲಸ ಕಾರ್ಯಗಳು ನಡೆಯುತ್ತಿವೆ ಎನ್ನುವುದರ ಬಗ್ಗೆ ಮಾನ್ಯ ಸದಸ್ಯರು ಕೆಲವರು ಪ್ರಸ್ತಾಪ ಮಾಡಿದ್ದಾರೆ. ಎಲ್ಲಾ ಕೈಗಾರಿಕೆಗಳಲ್ಲಿ ನಷ್ಟವಾಗುತ್ತಿದೆ ಎನ್ನುವುದನ್ನು ಸಹ ನಾವು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ ಮತ್ತು ಅದೇ ರೀತಿಯಲ್ಲಿ ಎಲ್ಲಾ ಐ.ಎ.ಎಸ್. ಅಧಿಕಾರಿಗಳ ಆಡಳಿತವನ್ನು ನಡೆಸುತ್ತಿರುವ ಕೈಗಾರಿಕೆಗಳು ನಷ್ಟದಲ್ಲಿ ಮುನ್ನಡೆಯುತ್ತಿವೆ ಎನ್ನುವ ವಾದವನ್ನು ಸಹ ನಾವು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಕಾರಣವಾದರು ಏನೆಂದರೆ ಐ.ಎ.ಎಸ್. ಅಧಿಕಾರಿಗಳು ಇರುವಂತಹ ಕೈಗಾರಿಕೆಗಳು ಸಹ ಬಹಳ ಚೆನ್ನಾಗಿ ನಡೆಯುತ್ತಿವೆ. ಮತ್ತೆ ಇದೇ ಸಂದರ್ಭದಲ್ಲಿ ನಾನು ಇನ್ನೊಂದು ಮಾತನ್ನು ಹೇಳಬೇಕಾಗುತ್ತದೆ. ಅದೇನೆಂದರೆ ನಮ್ಮ ರಾಜ್ಯದಲ್ಲಿರುವಂತಹ ೨೯ ಕಂಪನಿಗಳ ಪೈಕಿ ಸುಮಾರು ೧೨ ಕಂಪನಿಗಳು ಮಾತ್ರ ಲಾಭದಲ್ಲಿ ನಡೆಯುತ್ತಿವೆ ಇನ್ನು ಉಳಿದ ಕಂಪನಿಗಳು ನಷ್ಟದಲ್ಲಿ ನಡೆಯುತ್ತಿವೆ ಎನ್ನುವುದು ತಾವು ಕೊಟ್ಟಿರುವ ವರದಿಯಿಂದ ಗೊತ್ತಾಗುತ್ತದೆ. ಆದ್ದರಿಂದ ನಾನು ಹೇಳುವುದೇನೆಂದರೆ ಎಲ್ಲಾ ಟೆಕ್ನೀಷಿಯನ್ಸ್ ಸಹ ಪರಿಣತರಾಗಿರುತ್ತಾರೆಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ ಮತ್ತೆ ಎಲ್ಲಾ ಐ.ಎ.ಎಸ್. ಅಧಿಕಾರಿಗಳು ಸಹ ಪರಿಣತರಾಗಿರುತ್ತಾರೆಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಇದರಲ್ಲಿ ಎರಡು ತರಹದ ಜನರೂ ಇದ್ದಾರೆ. ಆದ್ದರಿಂದ ಸರ್ಕಾರದವರು ಏನು ಮಾಡಬೇಕೆಂದರೆ ಎಲ್ಲಾ ಅಧಿಕಾರಿಗಳಿಗೂ ಸರಿಯಾದ ಮಾರ್ಗದರ್ಶನವನ್ನು ಕೊಟ್ಟು ಉತ್ಪಾದನೆ ಹೆಚ್ಚು ಮಾಡುವಂತೆ ಮಾಡಬೇಕು. ಮುಖ್ಯವಾಗಿ ಕೈಗಾರಿಕೆಗಳಲ್ಲಿ ಇರುವಂತಹ ಟೆಕ್ನೀಷಿಯನ್ಸ್ ಚೆನ್ನಾಗಿ ಕೆಲಸ ಮಾಡಬೇಕಾಗುತ್ತದೆ. ತಾವು ಹೋದ ಸಾರಿಯು ಕೂಡ ಈ ನಷ್ಟದ ವಿಷಯವನ್ನು ತಮ್ಮ ವರದಿಯಲ್ಲಿ ಪ್ರಕಟಿಸಿದ್ದೀರಿ. ಮತ್ತು ಸರ್ಕಾರಿ ವಿದ್ಯುಚ್ಛಕ್ತಿ ಕಾರ್ಖಾನೆಯಲ್ಲಿ ಸುಮಾರು ೯೩ ಲಕ್ಷ ರೂಪಾಯಿಗಳು ನಷ್ಟವಾಗಿದೆ. ಮತ್ತೆ ಒಂದು ವರ್ಷ ೧೩ ಲಕ್ಷ ರೂಪಾಯಿಗಳ ನಷ್ಟವಾಗಿದೆ. ಮತ್ತೆ ಒಂದು ವರ್ಷ ೩೬ ಲಕ್ಷ ರೂಪಾಯಿಗಳ ನಷ್ಟವಾಗಿತ್ತು. ಆದರೆ ಅದೇ ಎನ್.ಜಿ.ಇ.ಎಫ್. ಫ್ಯಾಕ್ಟರಿ ಮಾತ್ರ ಲಾಭದಲ್ಲಿ ನಡೆಯುತ್ತಿದೆ. ಇದಕ್ಕೆ ನಾನು ಹೇಳುವುದೇನೆಂದರೆ ಒಂದೇ ವರ್ಗಕ್ಕೆ ಸಂಬಂಧಪಟ್ಟಂತಹ ಫ್ಯಾಕ್ಟರಿಗಳನ್ನು ಬೇರೆ ಬೇರೆಯಾಗಿ ನಡೆಸುವುದಕ್ಕೆ ಬದಲಾಗಿ ಈ ಎರಡೂ ಫ್ಯಾಕ್ಟರಿಗಳನ್ನು ಸೇರಿಸಿ ಎನ್‌ಜಿಇಎಫ್

ಎಂದು ಮಾಡುವುದು ಒಳ್ಳೆಯದು. ಇದೇ ರೀತಿಯಾಗಿ ರೆವ್ಕೊ ಫ್ಯಾಕ್ಟರಿಯು ಸಹ ನಷ್ಟದಲ್ಲಿ ನಡೆಯುತ್ತಿತ್ತು. ಆನಂತರ ಈ ರೆವ್ಕೊ ಫ್ಯಾಕ್ಟರಿಯನ್ನು ಬಿ.ಹೆಚ್.ಇ.ಎಲ್.ನವರಿಗೆ ವಹಿಸಿಕೊಟ್ಟ ಮೇಲೆ ಆ ರೆವ್ಕೊ ಫ್ಯಾಕ್ಟರಿ ಇವತ್ತು ಲಾಭದಲ್ಲಿ ನಡೆಯುತ್ತಿದೆ. ಆದ್ದರಿಂದ ಈ ಎಲ್ಲಾ ಫ್ಯಾಕ್ಟರಿಗಳನ್ನು ಅಭಿವೃದ್ಧಿ ಪಡಿಸುವುದಕ್ಕಾಗಿ ಸರ್ಕಾರದವರು ಹೆಚ್ಚು ಆಸಕ್ತಿಯನ್ನು ವಹಿಸಿ ಲಾಭ ಸಂಪಾದನೆ ಮಾಡುವಂತೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನಮ್ಮ ರಾಜ್ಯ ಸರ್ಕಾರದವರು ನಡೆಸುತ್ತಿರುವ ಕಂಪನಿಗಳಲ್ಲಿ ಒಂದು ವರ್ಷ ೬೧ ಲಕ್ಷ ರೂಪಾಯಿಗಳ ನಷ್ಟ. ಇನ್ನೊಂದು ವರ್ಷ ೫೫ ಲಕ್ಷ ರೂಪಾಯಿಗಳ ನಷ್ಟ. ಇನ್ನೊಂದು ವರ್ಷ ೫೦ ಲಕ್ಷ ರೂಪಾಯಿಗಳ ನಷ್ಟ. ಆದ್ದರಿಂದ ನಾನು ಹೇಳುವುದೇನೆಂದರೆ ಈ ಸರ್ಕಾರೀ ಕೈಗಾರಿಕೆಗಳ ಬಗ್ಗೆ ಪುನರ್ ಪರಿಶೀಲನೆ ಮಾಡುವುದು ಒಳ್ಳೆಯದು ಇನ್ನು ನಾನು ಐ.ಎ.ಎಸ್. ಅಧಿಕಾರಿಗಳ ವಾದಕ್ಕೆ ಹೋಗುವುದಿಲ್ಲ. ಆದರೆ ನಾನು ಹೇಳುವುದೇನೆಂದರೆ ಸರ್ಕಾರದವರು ಎಲ್ಲಿ ತಪ್ಪು ಮಾಡುತ್ತಿದ್ದಾರೆ ಅದನ್ನು ಸರಿಪಡಿಸಬೇಕು ಎಂದು ಹೇಳುತ್ತಿದ್ದೇನೆ. ಟೆಕ್ನೀಷಿಯನ್ಸ್‌ಗಳನ್ನು ಹಾಕಿರುವುದರಿಂದ ಆ ಫ್ಯಾಕ್ಟರಿಯಲ್ಲಿ ೫೦ ಲಕ್ಷ ರೂಪಾಯಿಗಳ ನಷ್ಟವಾಗಿದೆ ಎಂದು ನಾನು ಹೇಳುತ್ತಿಲ್ಲ ಮತ್ತೇ ಐ.ಎ.ಎಸ್. ಅಧಿಕಾರಿಗಳು ಆಡಳಿತವನ್ನು ನಡೆಸುತ್ತಿರುವುದರಿಂದ ೫೦ ಲಕ್ಷ ರೂಪಾಯಿಗಳು ನಷ್ಟವಾಗಿದೆ ಎಂದೂ ನಾನು ಹೇಳುವುದಿಲ್ಲ. ಆದರೆ ಪರ್‌ಫಾರ್ಮನ್ಸ್ ಅನ್ನು ತಾವು ಮರ್ಜ್ ಮಾಡಿ ಒಳ್ಳೆಯ ರೀತಿಯಲ್ಲಿ ಈ ಫ್ಯಾಕ್ಟರಿಗಳನ್ನು ನಡೆಸಬೇಕು ಎಂದು ನಾನು ಸರ್ಕಾರಕ್ಕೆ ಸಲಹೆ ಕೊಡುತ್ತೇನೆ. ಮತ್ತು ಸರ್ಕಾರದವರು ಇದರ ಬಗ್ಗೆ ಪುನರ್ ಪರಿಶೀಲನೆ ಮಾಡಬೇಕು. ಈಗ ಇರುವಂತಹ ಕೈಗಾರಿಕೆಗಳಲ್ಲಿ ತಾವು ಖರ್ಚು ಮಾಡಿರುವುದು ಮತ್ತು ಈ ಕೈಗಾರಿಕೆಗಳಿಂದ ಎಷ್ಟು ನಷ್ಟವಾಗಿದೆ ಎನ್ನುವುದು ತಮ್ಮ ವರದಿಯ ಪುಟ ೨ರಲ್ಲಿ ಕೊಟ್ಟಿದ್ದೀರಿ. ಅದು ಈ ರೀತಿ ಇದೆ. ೧೯೭೯-೮೦ನೇ ಸಾಲಿನಲ್ಲಿ ಬಡ್ಜೆಟ್ ಪ್ರಾವಿಜನ್ ಇದ್ದದ್ದು ೫೪೮ ಲಕ್ಷ ರೂಪಾಯಿಗಳು ಇದರಲ್ಲಿ ತಾವು ಖರ್ಚು ಮಾಡಿರುವುದು ವಿ.ಎಸ್.ಎಂ.ಐ.ಗೆ ಸುಮಾರು ೪೬೨.೮೭ ಲಕ್ಷ ರೂಪಾಯಿಗಳು. ಇನ್ನು ಉಳಿತಾಯವಾಗಿರುವ ಹಣ ೮೫.೧೨ ಲಕ್ಷ ರೂಪಾಯಿಗಳು. ಮತ್ತೆ ೧೯೮೦-೮೧ನೇ ಇಸವಿಯಲ್ಲಿ ಬಡ್ಜೆಟ್ ಪ್ರಾವಿಜನ್ ಇದ್ದದ್ದು ೫೨೮ ಲಕ್ಷ ರೂಪಾಯಿಗಳು ಇದರಲ್ಲಿ ಖರ್ಚು ಮಾಡಿರುವ ಹಣ ಕೇವಲ ೫೦೪.೯೫ ಲಕ್ಷ ರೂಪಾಯಿಗಳು ಇದರಲ್ಲಿ ಉಳಿತಾಯವಾಗಿದ್ದು ೨೩.೩ ಲಕ್ಷ ರೂಪಾಯಿಗಳು. ಮತ್ತೆ ೧೯೮೧-೮೨ನೇ ಸಾಲಿನಲ್ಲಿ ಬಡ್ಜೆಟ್ ಪ್ರಾವಿಜನ್ ಇದ್ದದ್ದು ೭೫೬.೭೮ ಲಕ್ಷ ರೂಪಾಯಿಗಳು ಆದರೆ ಖರ್ಚು ಮಾಡಿದ್ದು ಸುಮಾರು ೭೪೧.೬೦ ಲಕ್ಷ ರೂಪಾಯಿಗಳು ಇಲ್ಲಿ ಮಾತ್ರ ಸ್ವಲ್ಪ ಜಾಸ್ತಿ ಖರ್ಚು ಮಾಡಿದ್ದೀರಿ. ಮತ್ತೆ ಉಳಿದ ಎಲ್ಲಾ ವರ್ಷಗಳಲ್ಲಿ ಬಡ್ಜೆಟ್ ಪ್ರಾವಿಜನ್‌ಗಿಂತ ಕಡಿಮೆ ಹಣವನ್ನು ಖರ್ಚು ಮಾಡಿದ್ದೀರಿ. ಮತ್ತು ನಮ್ಮ ರಾಜ್ಯದಲ್ಲಿ ಕೈಗಾರಿಗಳ ಸಂಖ್ಯೆ ಜಾಸ್ತಿಯಾಗುತ್ತಿದೆ. ಆದರೆ ಅದಕ್ಕೆ ತಕ್ಕಂತೆ ವಿದ್ಯುತ್‌ಚ್ಛಕ್ತಿಯ ಅವಶ್ಯಕತೆ ಬೇಕಾಗಿದೆ. ನಮ್ಮ ರಾಜ್ಯದಲ್ಲಿ ವಿದ್ಯುತ್‌ಚ್ಛಕ್ತಿಯ ಉತ್ಪಾದನೆ ಬಹಳ ಕಡಿಮೆಯಾದ್ದರಿಂದ ಹೆಚ್ಚಿನ ವಿದ್ಯುತ್‌ಚ್ಛಕ್ತಿಯನ್ನು ಉತ್ಪಾದನೆ ಮಾಡಬೇಕು. ಒಂದು ವೇಳೆ ದೊಡ್ಡ ದೊಡ್ಡ ಕೈಗಾರಿಕೆಗಳಿಗೆ ವಿದ್ಯುತ್‌ಚ್ಛಕ್ತಿ ಸಾಕಾಗುವುದಿಲ್ಲ. ಆಗ ಆ ಕೈಗಾರಿಕೆಯಲ್ಲಿ ಉತ್ಪಾದನೆ ಕಡಿಮೆಯಾಗುತ್ತದೆ. ಆದ್ದರಿಂದ ಸರ್ಕಾರದವರು ಹೆಚ್ಚಿನ ವಿದ್ಯುತ್‌ಚ್ಛಕ್ತಿಯನ್ನು ಉತ್ಪಾದನೆ ಮಾಡಲು ಅವಶ್ಯಕತೆ ಇರುವಂತಹ ಎಲ್ಲಾ ಕೆಲಸಗಳನ್ನು ಕೈಗೊಳ್ಳಬೇಕೆಂದು ನಾನು ಸಲಹೆ ಮಾಡುತ್ತೇನೆ.

ಹಾಗೆಯೇ ಈಗ ಕೂಡ ೨,೦೯೬ ಲಕ್ಷ ರೂಪಾಯಿ ಇದ್ದರೆ, ೨,೪೯೨.೪ ಲಕ್ಷ ರೂಪಾಯಿ ಖರ್ಚಾಗಿದೆ. ಅಂದರೆ ೪೪೬.೪ ಲಕ್ಷ ರೂಪಾಯಿ ಹೆಚ್ಚು ಖರ್ಚಾಗಿದೆ. ಹಣ ಕೊಟ್ಟಿದ್ದಕ್ಕಿಂತಲೂ ಹೆಚ್ಚು ಹಣ ಖರ್ಚು ಮಾಡಿದ್ದಾರೆ. ಅಲ್ಲಿ ಕೊಡುವುದೇ ಕಡಿಮೆಯಾಗಿರುವಾಗ ವಿಲೇಜ್ ಎಂಡ್ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಬೆಳವಣಿಗೆಗೆ ಬಂಡವಾಳ ಜಾಸ್ತಿ ಬೇಕಾಗುತ್ತದೆ. ಹೊಸ ಉದ್ಯೋಗಗಳನ್ನು ಕಲ್ಪಿಸಿ ಹೊಸ ಆರ್ಥಿಕ ವ್ಯವಸ್ಥೆಗೆ ಬುನಾದಿ ಹಾಕುವ ದೃಷ್ಟಿಯಿಂದ ಇದಕ್ಕೆ ಹೆಚ್ಚಿನ ಪ್ರಾಮುಖ್ಯತೆ ನೀಡಬೇಕೆಂದು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ.

ಇನ್ನು, ಸ್ಥಳೀಯವಾಗಿ ಸಂಬಂಧಪಟ್ಟ ಎರಡು-ಮೂರು ವಿಷಯಗಳನ್ನು ತಮ್ಮ ಗಮನಕ್ಕೆ ತಂದು ನನ್ನ ಮಾತು ಮುಗಿಸುತ್ತೇನೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶದ ನವ ಮಂಗಳೂರಿನಲ್ಲಿ ಆಯಿಲ್ ರಿಫೈನರಿ ರಿಫೈನರಿ ಬೆಳವಣಿಗೆ ಮಾಡಬೇಕೆಂದು ಅಭಿಪ್ರಾಯವನ್ನು ಸರ್ಕಾರ ಹೊಂದಿದೆ. ಈಗಾಗಲೇ ಅಲ್ಲಿ ಜಮೀನನ್ನು ವಶಪಡಿಸಿಕೊಂಡು ಬೇಕಾದ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಈ ಸಂಬಂಧದಲ್ಲಿ ಎರಡು ವಿಷಯಗಳನ್ನು ಮುಖ್ಯವಾಗಿ ಹೇಳಬೇಕಾಗುತ್ತದೆ.

ಕುಳೂರು ಸೇತುವೆ ಬಳಿ ಮುಂದೆ ಹೋದರೆ ಸುರತ್ಕಲ್ ಹತ್ತಿರ ಇರುವ ಪ್ರದೇಶ ಬರೇ ಕೈಗಾರಿಕೆಗಳಿಗೆ ಮಾತ್ರ ಸೀಮಿತವಾದಂತಹ ಪ್ರದೇಶ. ಅಲ್ಲಿ ಇರತಕ್ಕಂಥ ಲಕ್ಷಾಂತರ ಎಕರೆ ಜಾಗದಲ್ಲಿ ಬೆಲೆ ಬಾಳುವ ಮರಗಳು ಬೆಳೆಯುವ ಕಾಡು ಪ್ರದೇಶದಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವ ಯೋಜನೆ ಹಾಕಿಕೊಂಡಿದ್ದಾರೆ. ಬಂದರಿಗೆ ಸಮೀಪಕ್ಕೆ ಇದನ್ನು ಮಾಡಿ ಆಯಿಲ್ ರಿಫೈನರಿ ಮಾಡುವುದರಿಂದ ಜಿಯಾಲಾಜಿಕಲ್ ಎನ್‌ವಿರಿನೋಮೆಂಟ್‌ನಲ್ಲಿ ಬದಲಾವಣೆಯಾಗಿ ಅಲ್ಲಿ ಪರಿಸರ ಮಾಲಿನ್ಯಕ್ಕೆ ಕಾರಣವಾಗುತ್ತದೆ. ಇದರ ಬಗ್ಗೆ ಸರ್ಕಾರದವರು ಎಚ್ಚರಿಕೆ ವಹಿಸಬೇಕೆಂದು ಅವರ ಗಮನಕ್ಕೆ ಈ ವಿಚಾರವನ್ನು ತಮ್ಮ ಮುಖಾಂತರ ತರುತ್ತಿದ್ದೇನೆ. ನಮಗೆ ಕೈಗಾರಿಕೆಗಳು ಬೇಕು. ಆದರೆ ನಮ್ಮ ಜಿಲ್ಲೆಯಲ್ಲಿ ಮರಮಟ್ಟುಗಳು ಸಿಗತಕ್ಕಂಥ ಬೇರೆ ಪ್ರದೇಶಗಳು ಬೇಕಾದಷ್ಟು ಇರುವಾಗ ಸಮುದ್ರದ ಬದಿಯಲ್ಲಿ ಜನನಿಬಿಡವಾದಂತಹ ಪ್ರದೇಶದಲ್ಲಿ ಇದನ್ನು ಮಾಡುವುದರಿಂದ ವ್ಯವಸಾಯಕ್ಕೆ ಯೋಗ್ಯವಾದ ಭೂಮಿ ಹೊರಟು ಹೋಗಿ ಆ ಪ್ರದೇಶದ ಜನರನ್ನು ಬೇರೆ ಕಡೆಗೆ ಸಾಗಿಸುವಾಗ ಅವರಿಗೆ ಪುನರ್ ನಿವೇಶನಕ್ಕೆ ಬೇಕಾದಂತಹ ವ್ಯವಸ್ಥೆ ಬಗ್ಗೆ ಕೇಂದ್ರ ಸರ್ಕಾರದ ಜೊತೆಯಲ್ಲಿ ನಮ್ಮ ರಾಜ್ಯ ಸರ್ಕಾರ ಒತ್ತಾಯ ಪೂರ್ವಕವಾಗಿ ಕೇಳಬೇಕೆಂದು ಅಪೇಕ್ಷೆಪಡುತ್ತೇನೆ.

ಇನ್ನು, ಗುಲ್ಬರ್ಗಾದಲ್ಲಿ ಸೇಡಮ್ ತಾಲೂಕಿನಲ್ಲಿ ಮೂರು ಸಿಮೆಂಟ್ ಕಾರ್ಖಾನೆಗಳನ್ನು ತೆರೆಯಲಿಕ್ಕೆ ಬಿರ್ಲಾ ಕಂಪನಿಯವರಿಗೆ ಕೇಂದ್ರ ಸರ್ಕಾರದವರು ಲೈಸೆನ್ಸ್ ಕೊಟ್ಟಿದ್ದಾರೆ ಅದಕ್ಕಾಗಿ ಲ್ಯಾಂಡ್ ಅಕ್ವಿಸೇಶನ್‌ಗೆ ಸೇಡಂ ಪ್ರದೇಶದಲ್ಲಿ ಒಂದು ಎಕರೆ ಜಮೀನಿಗೆ ೧೦ ರಿಂದ ೧೨ ಸಾವಿರದವರೆಗೆ ದರಖಾಸ್ತಿನಲ್ಲಿ ಮಾರಾಟವಾಗುವಾಗ ಬರೇ ಎರಡು ಸಾವಿರ ರೂಪಾಯಿಗೆ ಬಿರ್ಲಾರವರಿಗೆ ಕೊಟ್ಟು ರೈತರನ್ನು ನಷ್ಟಕ್ಕೆ ಗುರಿಪಡಿಸುವ ಅವಶ್ಯಕತೆಯಾದರೂ ಏನು ? ಸಿಮೆಂಟ್ ಫ್ಯಾಕ್ಟರಿ ಬರಲಿ, ನಾವು ಬೇಡವೆಂದು ಹೇಳುವುದಿಲ್ಲ. ಆದರೆ ಬಿರ್ಲಾ ಕಂಪೆನಿಯವರಿಗೆ ಇದನ್ನು ಕೊಡುವುದರ ಬದಲು ಸಾರ್ವಜನಿಕ ಕ್ಷೇತ್ರದಲ್ಲಿ ಸರ್ಕಾರದವರೇ ನಡೆಸಲು ಸಾಧ್ಯವಿರಲಿಲ್ಲವೆ. ಆದರೆ ಸರ್ಕಾರವನ್ನು ನಡುಗಿಸತಕ್ಕಂಥ ಶಕ್ತಿ ಬಿರ್ಲಾ ಕಂಪೆನಿಯವರಿಗಿದೆ. ಆದ್ದರಿಂದ ನಾವು ಮಾಡುತ್ತೇವೆ ಎಂದು ಹೋದರೂ ಕೂಡ ಅಲ್ಲಿರತಕ್ಕಂಥ ಜಮೀನನ್ನು ಅವರೇ ತೆಗೆದುಕೊಳ್ಳುವಷ್ಟು ಪ್ರಬಲರಾಗಿದ್ದಾರೆ ಅವರು. ಇಂತಹ ಪರಿಸ್ಥಿತಿಯಲ್ಲಿ ಅಲ್ಲಿರತಕ್ಕಂಥ ರೈತರಿಗೆ ಪುನರ್ ನಿವೇಶನ ಆಗಬೇಕು. ಇಲ್ಲಿ ಎಲ್ಲಾ ಭಾರವನ್ನೂ ರೈತ ಹೊತ್ತುಕೊಳ್ಳುತ್ತಾನೆ. ಬಿರ್ಲಾರವರಿಗೆ ಹೋಗುವುದು ಲಾಭ ಮಾತ್ರ. ಆದರೆ ಹೊರೆಯನ್ನು ಬಡ ರೈತ ಹೊತ್ತುಕೊಳ್ಳಬೇಕಾದರೆ ಇದು ಬೆಳವಣಿಗೆಯೊಡನೆ ಸರಿಯಾದ ಆರ್ಥಿಕ ದೃಷ್ಟಿಕೋನ ಆಗುವುದಿಲ್ಲ. ಆದ್ದರಿಂದ ರೈತರಿಗೆ ನ್ಯಾಯವಾದ ಪರಿಹಾರ, ಪುನರ್ ವಸತಿ ವ್ಯವಸ್ಥೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಈ ಸಂದರ್ಭದಲ್ಲಿ ಒಂದು ವಿಷಯವನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಸಿಮೆಂಟ್ ಫ್ಯಾಕ್ಟರಿಯಿಂದಾಗಿ ಶಹಬಾದ್ ಟೌನ್‌ನಲ್ಲಿ ಈಗಾಗಲೇ ಪರಿಸರ ಮಾಲಿನ್ಯ ಉಂಟಾಗಿ ಜನರು ಸೈಲಿಕೋಸಿಸ್ ಮೊದಲಾದ ರೋಗಗಳಿಂದ ನರಳುತ್ತಿದ್ದಾರೆ. ಇದನ್ನು ತಡೆಯಲಿಕ್ಕೆ ಬೇಕಾದಂತಹ ಕಾರ್ಯಕ್ರಮಗಳನ್ನು ಕಾರ್ಖಾನೆಯನ್ನು ನಡೆಸತಕ್ಕಂಥವರು ಮಾಡುತ್ತಿಲ್ಲ. ಹರಿಹರ ಪಾಲಿಫೈಬರ್ಸ್‌ನವರು ನೀರನ್ನು ತುಂಗಾಭದ್ರಾ ನದಿಗೆ ಬಿಡುತ್ತಿದ್ದಾರೆ. ಹರಿಹರ ಪಾಲಿಫೈಬರ್ಸ್ ಮತ್ತು ಬಿರ್ಲಾರವರು ಸಾರ್ವಜನಿಕರ ಆರೋಗ್ಯವನ್ನು ಕಡೆಗಣಿಸುತ್ತಿದ್ದಾರೆ. ಸರ್ಕಾರ ಕೂಡ ಈ ಬಗ್ಗೆ ಗಮನಕೊಡುತ್ತಿಲ್ಲ. ಆದರೆ ಇಂತಹ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವ ಸಂದರ್ಭದಲ್ಲಿ ಅವರು ಜನರ ಆರೋಗ್ಯ ಮತ್ತು ಎಕಾಲಜಿ ಸಮತೋಲನ ರಕ್ಷಣೆ ಮಾಡುವ ಜವಾಬ್ದಾರಿಯನ್ನು ವಹಿಸಿಕೊಂಡು ಈ ಬಗ್ಗೆ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡಲು ತಮ್ಮನ್ನು ಕೇಳುತ್ತೇನೆ.

ಕೊನೆಯದಾಗಿ ಹ್ಯಾಂಡಲೂಮ್ ಕೈಗಾರಿಕೆಯನ್ನು ಸಹಕಾರ ರೀತಿಯಲ್ಲಿ ಸಂಘಟನೆ ಮಾಡುತ್ತಿದ್ದಾರೆ. ಆದರೆ ಸಹಕಾರ ರೀತಿಯಲ್ಲಿ ಹ್ಯಾಂಡಲೂಮ್ ಕೈಮಗ್ಗದ ಸಹಕಾರ ಸಂಘಗಳನ್ನು ಸ್ಥಾಪನೆ ಮಾಡುವಾಗ ಅವರಿಗೆ ಬಣ್ಣ ಹಾಕಲಿಕ್ಕೆ ಬೇಕಾದ ವ್ಯವಸ್ಥೆ, ನೂಲನ್ನು ಶುದ್ಧಪಡಿಸಲಿಕ್ಕೆ ಬೇಕಾದಂತಹ ವ್ಯವಸ್ಥೆ, ಕಲಾತ್ಮಕವಾಗಿ ಹೊಸ ಹೊಸ ಡಿಸೈನ್‌ಗಳನ್ನು ದೊರಕಿಸಬೇಕಾದ ವ್ಯವಸ್ಥೆ ಒಂದೊಂದು ಸಹಕಾರ ಸಂಸ್ಥೆಯಲ್ಲಿ ಇದನ್ನು ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ನಾನು ಸರ್ಕಾರವನ್ನು ಕೇಳುವುದೇನೆಂದರೆ ಈ ಕೈಗಾರಿಕೆಗೆ ಬೇಕಾದಂತಹ ಸೌಲಭ್ಯ ಮತ್ತು ತಜ್ಞರ ಸೇವೆಯನ್ನು ಕೊನೆಪಕ್ಷ ಸರ್ಕಾರದ ವತಿಯಿಂದ ಬಣ್ಣ ಹಾಕುವುದು, ಹಾಸುಮಾಡುವುದು, ತಜ್ಞರ ಸೇವೆಯನ್ನು ಒದಗಿಸಿಕೊಡುವುದು, ಇದನ್ನು ಒದಗಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಕೊನೆಯದಾಗಿ ಹೇಳಬೇಕೆಂದರೆ ಎಂ.ಇ.ಐ. ಫ್ಯಾಕ್ಟರಿಗೆ ಕಾಯಿಲೆ ಬಂದು ಸರ್ಕಾರವೇ ಅದನ್ನು ತೆಗೆದುಕೊಂಡಿತು. ಬಹಳ ಸಂತೋಷ. ಈ ಕಾಯಿಲೆ ವಾಸಿಯಾಗಿದೆ. ಈಗ ಲಾಭದಲ್ಲಿ ಈ ಕಾರ್ಖಾನೆ ನಡೆಯುತ್ತಿದೆ. ಆದರೆ ಸರ್ಕಾರದವರು ಅಲ್ಲಿರತಕ್ಕಂಥ ಕಾರ್ಮಿಕರಿಗೆ ಹರಡಿದಂತಹ ಕಾಯಿಲೆಯನ್ನು ವಾಸಿ ಮಾಡಲಿಕ್ಕೆ ಹೋಗಿಲ್ಲ. ಅಲ್ಲಿ ಅಧಿಕೃತ ಭಾಷೆ ಕನ್ನಡ ಆಗಿಲ್ಲ, ಇಂಗ್ಲೀಷ್ ಆಗಿದೆ. ಅಲ್ಲಿ ಮ್ಯಾನೆಜಿಂಗ್ ಡೈರೆಕ್ಟರ್ ಅವರು ಟ್ರೇಡ್ ಯೂನಿಯನ್‌ಗೆ ಇಂಗ್ಲೀಷ್‌ನಲ್ಲಿ ಪತ್ರ ಬರೆದಿದ್ದಾರೆ. ಕನ್ನಡದಲ್ಲಿ ಬರೆದರೆ ಉತ್ತರವನ್ನು ಕೊಡುವುದಿಲ್ಲ. ಕಾರ್ಮಿಕರಿಗೆ ಕೊಡುವ ಶೋಕಾಸ್ ನೋಟೀಸನ್ನು ಇಂಗ್ಲೀಷ್‌ನಲ್ಲೇ ಕೊಡಲಾಗುತ್ತಿದೆ. ಮಾನ್ಯ ಸಚಿವರು ಅವರಿಗೆ ಸ್ವಲ್ಪ ಕನ್ನಡ ಕಲಿಯಲು ಹೇಳಬೇಕು.

ಅವರು ಇಂಗ್ಲೀಷಿನಲ್ಲಿ ಕೊಡಬೇಕು ಎಂದು ಹೇಳುತ್ತಾರ, ನಾವು ಯಾವ ವಕೀಲರ ಹತ್ತಿರ ನಾವು ಹೋಗಬೇಕು ಸ್ವಾಮಿ ? ಅವರನ್ನು ಸ್ವಲ್ಪ ಕನ್ನಡ ಕಲಿಯಲಿಕ್ಕೆ ಹೇಳಿ, ಇಲ್ಲದೇ ಹೋದರೆ ಕನ್ನಡ ಗೊತ್ತಿದ್ದವರನ್ನು ಅಲ್ಲಿ ಹಾಕಿ ; ಅದನ್ನು ನಡೆಸಿ. ಅವರಿಗೆ ಮಾತ್ರ ಕನ್ನಡ ಗೊತ್ತಿದ್ದರೆ ಸಾಕೇ. ಕಾರ್ಮಿಕರಿಗೆ ಕನ್ನಡ ಗೊತ್ತಿಲ್ಲ ಎಂದು ಅವರು ಹೇಳಬಾರದಾಗಿತ್ತು. ಸರ್ಕಾರ ನೇರವಾಗಿ ಮಾಡಬೇಕಾಗಿರುವುದು ಏನೆಂದರೆ, ಹಾಗೂ ಈ ಕಾರ್ಖಾನೆಯನ್ನು ತೆಗೆದುಕೊಂಡಾಗ ಕಾರ್ಮಿಕರೂ ಕೂಡ ಒಪ್ಪಿಕೊಂಡಿದ್ದರು. ಏನೆಂದರೆ, ಈ ಕಾರ್ಖಾನೆ ಲಾಭದಾಯಕವಾಗಿ ನಡೆಯುವರೆಗೆ ನಾವು ಯಾವುದೇ ಕೇಳಿಕೆಗಳನ್ನು ಕೇಳುವುದಿಲ್ಲ, ಅವರಿಗೆ ಸಹಕರಿಸಿ ನಾವು ಕೆಲಸ ಮಾಡುತ್ತೇವೆ ಎಂದು ಕೇಳಿಕೊಂಡಿದ್ದರು, ಅದಕ್ಕೆ ಅವರು ಒಪ್ಪಿಕೊಂಡಿದ್ದರು. ಸಿಕ್ ಇಂಡಸ್ಟ್ರೀಸನ್ನು ಸರ್ಕಾರ ತೆಗೆದುಕೊಳ್ಳುವುದಕ್ಕೆ ತಮಗೆ ಅಧಿಕಾರವಿದೆ. ಇಂಡಸ್ಟ್ರಿಯಲ್ ಡಿಸ್ಪ್ಯೂಟ್ ಆಕ್ಟ್ ಅಪರೇಷನ್‌ನ್ನು ಜಾರಿ ಮಾಡುವುದನ್ನು ತಾತ್ಕಾಲಿಕವಾಗಿ ಸರ್ಕಾರ ಮನ್ನಾ ಮಾಡಿತ್ತು, ಅದನ್ನು ತಡೆ ಹಿಡಿದಿತ್ತು. ಆದರೆ ಇಷ್ಟು ವರ್ಷಗಳಾದರೂ ಕೂಡ ಇಷ್ಟು ಲಾಭದಾಯಕವಾಗಿ ಕಂಪೆನಿಯನ್ನು ನಡೆಸಿದಾಗ ಇನ್ನೂ ಕೂಡ ಇಂಡಸ್ಟ್ರಿಯಲ್ ಡಿಸ್ಪ್ಯೂಟ್ ಆಕ್ಟ್ ನಮಗೆ ಅಪ್ಲೈ ಆಗುವುದಿಲ್ಲ, ಅದನ್ನು ತಡೆ ಹಿಡಿದಿದ್ದೇವೆ ಎನ್ನುವ ರೀತಿಯಲ್ಲಿ ಮಾಡಬೇಡಿ. ದಯವಿಟ್ಟು ಕಾನೂನಿನ ಅವಕಾಶವಿದೆ. ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ ಆಕ್ಟೇ ನಮಗೆ ಅಪ್ಲೈ ಆಗುವುದಿಲ್ಲ ಎಂದು ತಾವು ಹೇಳಿಬಿಟ್ಟರೆ ಅಲ್ಲಿ ಆಡಳಿತ ನಡೆಸುವವರಿಗೆ ಯಾರೂ ಹೇಳುವವರಿಲ್ಲ, ಕೇಳುವವರಿಲ್ಲ ಎಂದು ಆಗುತ್ತದೆ. ಆದ್ದರಿಂದ ಈ ಒಂದು ಸರ್ವಾಧಿಕಾರವನ್ನು ನಿರ್ಮಾಣ ಮಾಡಬೇಡಿ. ದಯಮಾಡಿ ಆ ಕಾರ್ಖಾನೆಯಲ್ಲಿ ಇಂಡಸ್ಟ್ರಿಯಲ್ ಡಿಸ್ಪ್ಯೂಟ್ ಆಕ್ಟ್ ಅನ್ವಯವಾಗುವ ಹಾಗೆ ತಾವು ಮಾಡಬೇಕು, ತಡೆಹಿಡಿದಿರುವುದನ್ನು ವಾಪಸ್ ತೆಗೆದುಕೊಳ್ಳಬೇಕು. ಕಾರ್ಮಿಕರು ಯಾವಾಗಲೂ ತಮ್ಮ ಜೊತೆಯಲ್ಲಿ ಸಹಕರಿಸಲಿಕ್ಕೆ ತಯಾರಿದ್ದಾರೆ, ಅನಾವಶ್ಯಕವಾಗಿ ಗಲಾಟೆ ಯಾವುದೂ ನಡೆದೂ ಇಲ್ಲ. ಆದುದರಿಂದ ಅದನ್ನು ತಾವು ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ತಮ್ಮ ಈ ಕೈಗಾರಿಕೆಗಳ ಬೆಳವಣಿಗೆಗೆ ಕೇಂದ್ರ ಸರ್ಕಾರದ ಜೊತೆಯಲ್ಲಿ ವ್ಯವಹಾರಗಳನ್ನು ನಡೆಸಿ ಕೇಂದ್ರ ಸರ್ಕಾರದಿಂದ ಇದಕ್ಕೆ ಸಾಕಷ್ಟು ಹೆಚ್ಚಿನ ನೆರವು ಪಡೆದುಕೊಳ್ಳಬೇಕು. ಬರೀ ಬೆಂಗಳೂರಿನ ಸುತ್ತ ಕೇಂದ್ರ ಸರ್ಕಾರದ್ದು ೪ ಪಬ್ಲಿಕ್ ಸೆಕ್ಟರ್ ಇಂಡಸ್ಟ್ರೀಸ್ ಬಂದ ಮಾತ್ರಕ್ಕೆ ಕರ್ನಾಟಕದಲ್ಲಿ ಕೈಗಾರಿಕಾಭಿವೃದ್ಧಿಯಾಯಿತು ಎಂದು ಅರ್ಥವಲ್ಲ. ನಮ್ಮ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ, ಎಲ್ಲಾ ತಾಲ್ಲೂಕುಗಳಲ್ಲಿ, ಹಳ್ಳಿ ಪ್ರದೇಶದಲ್ಲೂ ಕೂಡ ಕೈಗಾರಿಕೆ ಬೆಳವಣಿಗೆಯಾಗಲಿಕ್ಕೆ ತಾವು ಯೋಜನೆಯನ್ನು ಮಾಡಿ, ಆ ಯೋಜನೆಯಂತೆ ಕೈಗಾರಿಕಾ ಬೆಳವಣಿಗೆಗೆ ತಾವು ಶ್ರಮಿಸಬೇಕು ಎಂದು ಕೇಳಿಕೊಂಡು ನನಗೆ ಮಾತನಾಡಲು ಅವಕಾಶಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಮಧ್ಯಾಹ್ನ ತಮಗೆ ಎಷ್ಟು ಹೊತ್ತು ಬೇಕಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಉತ್ತರ ಎಂದು ಹೇಳಿದರೆ ೨ ಗಂಟೆ ಬೇಕಾಗುತ್ತದೆ, ಒಟ್ಟು ೩ ಗಂಟೆ ಬೇಕಾಗುತ್ತದೆ.

MR. SPEAKER.—We have only 4 hours in the afternoon. Even if we sit by 2.30 P.M.

ಶ್ರೀ ಎಂ. ವೀರಪ್ಪ ಮೊಯ್ಲಿ.—ಈ ಒಂದೂವರೆ ಗಂಟೆ ಉತ್ತರ ಕೊಡಲಿಕ್ಕೆ ಬೇಕಾಗುತ್ತದೆ, ಅರ್ಧ ಗಂಟೆ ಕ್ಲಾರಿಫಿಕೇಷನ್‌ಗೆ ಸದಸ್ಯರು ತೆಗೆದುಕೊಂಡೇ ತೆಗೆದುಕೊಳ್ಳುತ್ತಾರೆ, ಇದು ವ್ಯಾವಹಾರಿಕವಾಗಿ ನಡೆಯುತ್ತಾ ಇದೆ.

ಶ್ರೀ ಪಿ. ರಾಮದೇವ್.—ತಾವು ಸರಿಯಾಗಿ ಉತ್ತರ ಕೊಟ್ಟ ಮೇಲೆ ಕ್ಲಾರಿಫಿಕೇಷನ್ ಬೇಕಾಗುವುದಿಲ್ಲ.

SRI M. VEERAPPA MOILY.—I will be very concise in my speech.

ಅಧ್ಯಕ್ಷರು.—ತಾವು ೬ ಗಂಟೆವರೆಗೆ ಕೂತು ೬ ಗಂಟೆಯಿಂದ ಉತ್ತರ ಪ್ರಾರಂಭ ಮಾಡಬೇಕಾಗುತ್ತದೆ. ಏಕೆಂದರೆ ಬಹಳ ಜನ ಸದಸ್ಯರು ಮಾತನಾಡುವವರಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಇವತ್ತೇ ಉತ್ತರ ಕೊಡಲಿಕ್ಕೆ ನಾವು ತಯಾರಿದ್ದೇವೆ.

ಅಧ್ಯಕ್ಷರು.—ಇವತ್ತು ಆಗಬೇಕು.

ಶ್ರೀ ಶ್ರೀ ಹೆಚ್. ಗಂಗಾಧರನ್.—೪ ಜನ ಇದ್ದರೆ ಒಂದು ಗಂಟೆ ತೆಗೆದುಕೊಳ್ಳುತ್ತಾರೆ.

ಅಧ್ಯಕ್ಷರು.—ಮಾತನಾಡುವವರೆಲ್ಲರೂ ಕೂಡ ಗಡಿಯಾರದ ಕಡೆ ನೋಡುವುದಿಲ್ಲ. ನಾನೂ ಗಡಿಯಾರದ ಕಡೆ ನೋಡುತ್ತಾ ಇರುತ್ತೇನೆ, ನನ್ನ ಏಕೆ ಬೆಲ್ ಹೊಡೆಯುತ್ತೀರಿ ಎಂದು ಕೇಳುತ್ತೀರಿ. ಒಂದು ದಿವಸ ಒಬ್ಬ ಸದಸ್ಯರು ಏಕೆ ಬೆಲ್ ಹೊಡೆಯುವುದು ಎಂದು ಕೇಳಿದರು. ಸಾಮಾನ್ಯವಾಗಿ ೫ ನಿಮಿಷ ಇದ್ದಾಗ ಮೊದಲನೇ ಸಾರಿ ಬೆಲ್ ಹೊಡೆಯುತ್ತೇವೆ, ಇನ್ನು ೫ ನಿಮಿಷ ಇದೆಯೆಂದು ತಾವು ತಿಳಿದುಕೊಳ್ಳಬೇಕು ಇಲ್ಲದೇಹೋದರೆ ಹೇಗೆ ಆಗುತ್ತದೆ. The house now stands adjourned to reassemble again at 2.30 P.M.

The House adjourned at Fifty-five minutes past twelve of the Clock to reassemble again at Thirty minutes past Two of the Clock.

(ಸಭೆಯು ಮಧ್ಯಾಹ್ನ ೨-೪೮ ಸಮಾವೇಶಗೊಂಡಿತು)

(ಉಪಾಧ್ಯಕ್ಷರು ಅವರು ಅಧ್ಯಕ್ಷತೆ ವಹಿಸಿದ್ದರು)

† ಶ್ರೀ ಆರ್. ಎಸ್. ಪಾಟೀಲ್ (ರಾಮದುರ್ಗ).—ಸನ್ಮಾನ್ಯ ಉಪಾಧ್ಯಕ್ಷರೇ, ಸಭೆಯ ಮುಂದಿರತಕ್ಕ ಎಲ್ಲ ಬೇಡಿಕೆಗಳನ್ನು ನಾನು ಅನುಮೋದಿಸುತ್ತಾ, ಎಲ್ಲ ಬೇಡಿಕೆಗಳ ಮೇಲೆ ಮಾತನಾಡಲು ಹೋಗದೆ ಕೈಗಾರಿಕೆ ಮೇಲೆ ಮಾತ್ರ ಒಂದೆರಡು ಮಾತುಗಳನ್ನಾಡುವುದಕ್ಕೆ ಇಷ್ಟಪಡುತ್ತೇನೆ. ಕೈಗಾರಿಕೆ ಅಂದಾಗ ಬೃಹತ್ ಮತ್ತು ಮಧ್ಯಮ ಕೈಗಾರಿಕೆಗಳ ತಂಟೆಗೆ ಹೋಗುವುದಿಲ್ಲ. ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಗೆ ಸಂಬಂಧಪಟ್ಟ ವಾರ್ಷಿಕ ವರದಿಯನ್ನೇನು ಕೊಟ್ಟಿದ್ದಾರೆ ಅದನ್ನು ಓದುವಾಗ ಮೊದಲನೆ ಎರಡು ವಿಷಯಗಳ ಮೇಲೆ ಪ್ರಭಾವಿತನಾಗಿ ಆ ಬಗ್ಗೆ ಒಂದೆರಡು ಮಾತುಗಳನ್ನಾಡಬೇಕೆಂಬ ಇಚ್ಛೆಯಿಂದ ನಿಂತಿದ್ದೇನೆ, ಇವತ್ತಿನ ದಿವಸ, ಗುಡಿ ಕೈಗಾರಿಕೆಗಳ ಮೂಲಕ ಹೆಚ್ಚಿನ ಉದ್ಯೋಗವಕಾಶಗಳನ್ನು ಒದಗಿಸಲು ಅವಕಾಶ ಇದೆ. ಈ ದಿಸೆಯಲ್ಲಿ ಜನಶಕ್ತಿಗಳ ಬಳಕೆ ಹೇಗಾಗಿದೆ ಎಂಬುದನ್ನು ನಾವು ನೋಡಬೇಕಾಗಿದೆ. ಈ ಸಂದರ್ಭದಲ್ಲಿ, ಗ್ರಾಮಾಂತರ ಪ್ರದೇಶಗಳಲ್ಲಿ ಭಾರಿ ಉದ್ಯಮಗಳಿಂದ ಆಗಿರತಕ್ಕ ಆಘಾತ ಏನು. ಹಾನಿ ಏನು ಎಂಬ ವಿಷಯವಾಗಿ ನನ್ನ ಒಂದೆರಡು ಅನಿಸಿಕೆಗಳನ್ನು—ಆತಂಕಗಳನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.

ನಾನು ಗ್ರಾಮಾಂತರ ಪ್ರದೇಶದಿಂದ ಬಂದವನು. ಮೂಲತಃ ವ್ಯವಸಾಯವನ್ನು ಅವಲಂಭಿಸಿರುವವನು. ಆದ್ದರಿಂದ ಈ ಇಲಾಖೆಯ ಕಡೆಗೆ ನನಗೆ ಹೆಚ್ಚು ಆಸಕ್ತಿ ಇದೆ. ಗ್ರಾಮಾಂತರ ಪ್ರದೇಶದಲ್ಲಿ ವ್ಯವಸಾಯವನ್ನು ಅವಲಂಬಿಸಿರತಕ್ಕ ಜನರು ಹೆಚ್ಚು. ಕೃಷಿ ಕಾರ್ಮಿಕರು ಹೆಚ್ಚು. ೮೦ ಪರ್ಸೆಂಟ್ ಜನರು ಗ್ರಾಮಾಂತರ ಪ್ರದೇಶದಲ್ಲಿದ್ದು ಅಲ್ಲಿರುವ ವ್ಯವಸಾಯಗಾರ ಕುಶಲಕರ್ಮಿಗಳಾದ ಬಡಿಗ, ಕುಂಬಾರ, ಗಾಣಿಗ, ಅಕ್ಕಸಾಲಿಗ, ಕಮ್ಮಾರ ಮುಂತಾದವರ ಜೊತೆ ಹಾಸುಹೊಕ್ಕಾಗಿ ಬಾಳುತ್ತಿರುತ್ತಾನೆ ಗ್ರಾಮಾಂತರ ಪ್ರದೇಶದಲ್ಲಿ ವ್ಯವಸಾಯದ ಅನಿಶ್ಚಿತತೆಯಿಂದ ಯುವಕರು ಪಟ್ಟಣದ ಆಕರ್ಷಣೆಗೆ ಒಳಗಾಗಿ ಪಟ್ಟಣಗಳಲ್ಲಿ ಉದ್ಯಮಗಳಲ್ಲಿರುವ ಜಾಬ್ ಸೆಕ್ಯೂರಿಟಿಯನ್ನು ಮನಗಂಡು ಇಲ್ಲಿಗೆ ವಲಸೆ ಬರುತ್ತಿದ್ದಾರೆ. ಗ್ರಾಮಾಂತರ ಪ್ರದೇಶದಲ್ಲಿನ ಯುವಶಕ್ತಿ ಬೇರೆ ಕಡೆಗೆ ಪಲಾಯನವಾಗುತ್ತಿದೆ. ಗ್ರಾಮಾಂತರ ಪ್ರದೇಶದಲ್ಲಿ ಮಕ್ಕಳೇ ಆಸ್ತಿ, ವಯಸ್ಸಾದ ಮೇಲೆ ತಂದೆತಾಯಿಗಳಿಗೆ ಮಕ್ಕಳು ದುಡಿದು ಹಾಕುತ್ತಾರೆ ಎಂಬ ಭಾವನೆ ಕುಟುಂಬದ ಹಿರಿಯರಲ್ಲಿ ತಂದೆ ತಾಯಿಗಳಲ್ಲಿ ಇರುತ್ತದೆ. ವಯಸ್ಸಿಗೆ ಬಂದ ಮೇಲೆ ಹುಡುಗ ಮದುವೆಯಾಗುತ್ತಾನೆ. ಹಳ್ಳಿಯಲ್ಲಿರತಕ್ಕ ಅನಿಶ್ಚಿತತೆಯಿಂದಾಗಿ ಪಟ್ಟಣಕ್ಕೆ ಹೋಗುತ್ತಾನೆ, ಅಲ್ಲಿ ೨೦೦, ೩೦೦ ರೂಪಾಯಿಗಳ ಒಂದು ನೌಕರಿಯನ್ನು ಸೇರುತ್ತಾನೆ. ಈ ಹಣದಲ್ಲಿ ಅವನ ಉಪಜೀವನವನ್ನೂ ಸಾಗಿಸುವುದಕ್ಕಾಗುವುದಿಲ್ಲ. ಹೀಗಿರುವಾಗ ತಾನು ಸಂಪಾಸಿದ ಹಣವನ್ನು ತನ್ನ ಮುದಿ ತಂದೆತಾಯಿಗಳಿಗೆ ಕಳುಹಿಸುವುದಕ್ಕಾಗುವುದಿಲ್ಲ, ಹೀಗಾಗಿ ತನ್ನ ಜೀವನವನ್ನೇ ಯುವಕ ಹಾಳು ಮಾಡಿಕೊಳ್ಳುತ್ತಿದ್ದಾನೆ. ಜೊತೆಗೆ ಹಳ್ಳಿಯಲ್ಲಿ ತಂದೆತಾಯಿಗಳನ್ನೂ ನಿರ್ಗತಿಕರನ್ನಾಗಿ ಮಾಡುತ್ತಿದ್ದಾನೆ. ಗ್ರಾಮಾಂತರ ಪ್ರದೇಶದಲ್ಲಿರತಕ್ಕ ತರುಣನಿಗೆ ಅವನು ಇರತಕ್ಕ ಸ್ಥಳದಲ್ಲೇ ಉದ್ಯೋಗಾವಕಾಶವನ್ನು ಕಲ್ಪಿಸಿಕೊಡತಕ್ಕ ಜವಾಬ್ದಾರಿ ಸರ್ಕಾರದ್ದು ಎಂದು ನಾನು ತಿಳಿದುಕೊಂಡಿದ್ದೇನೆ. ಭಾರಿ ಕೈಗಾರಿಕೆಯಿಂದಾಗಿ ಹಳ್ಳಿಗಾಡಿನಲ್ಲಿರುವ ಜನರ ಮೇಲೆ ಹೊಡೆತ ಬಿದ್ದಿದೆ. ಅಲ್ಯೂಮಿನಿಯಂ ಬಳಕೆಗೆ ಬಂದಿದ್ದರಿಂದ ಕುಂಬಾರನಿಗೆ ಉದ್ಯೋಗ ಹೋಯಿತು. ಮಾನ್ಯ ದೇವೇಗೌಡರು ಒಕ್ಕಲುತನಕ್ಕೆ ಬೇಕಾದ ಸಾಮಾನುಗಳನ್ನು ಇಲ್ಲಿ ಮಾಡಿ ಕೋಟ್ಯಾಂತರ ರೂಪಾಯಿ ಸಂಪಾದಿಸಬಹುದು ಎಂದು ಹೇಳಿದರು. ಪಟ್ಟಣದಲ್ಲಿ ಅವುಗಳನ್ನು ಮಾಡುವ ಕಾರ್ಖಾನೆಗಳು ಬಂದಿದ್ದರಿಂದ ಒಕ್ಕಲಿಗನಿಗೆ ಬೇಕಾದ ಗುದ್ದಲಿ, ಸನಿಕೆ ಮುಂತಾದವುಗಳನ್ನು ಮಾಡಿ ಉಪಜೀವನ ಸಾಗಿಸುತ್ತಿದ್ದ ಕಮ್ಮಾರನಿಗೆ ಹಳ್ಳಿಯಲ್ಲಿ ಉದ್ಯೋಗವಿಲ್ಲದೆ ಹಾಳಾದ. ಅದೆ ರೀತಿ ಬಡಗಿ ಹಾಳಾದ. ಪ್ರಚಲಿತ ಶಿಕ್ಷಣ ಪದ್ಧತಿಯಿಂದ ಕುಂಬಾರನ ಮಗ ಕುಂಬಾರನಾಗುವುದನ್ನು ಬಿಟ್ಟು, ಕಮ್ಮಾರನ ಮಗ ಕಮ್ಮಾರನಾಗುವುದನ್ನು ಬಿಟ್ಟು, ನೌಕರಿಯ ಆಸೆಯಿಂದ ಗ್ರಾಮಾಂತರ ಪ್ರದೇಶದ ಕೈಗಾರಿಕೆಗಳು ನಾಶವಾಗುತ್ತಿರುವುದನ್ನು ನಾವು ಮನಗಾಣಬಹುದು. ಗಾಣಿಗ ಎಣ್ಣೆಯನ್ನು ಗ್ರಾಮಾಂತರ ಪ್ರದೇಶದಲ್ಲಿ ಉತ್ಪಾದನೆ ಮಾಡಿ ಜೀವನ ಸಾಗಿಸುತ್ತಿದ್ದ. ಆಯಿಲ್ ಎಕ್ಸ್‌ಪೆಲ್ಲರ್ಸ್‌ಗೆ ಇಲ್ಲಿ ಪ್ರೋತ್ಸಾಹ ಕೊಟ್ಟಿದ್ದರಿಂದ ಗ್ರಾಮಾಂತರ ಪ್ರದೇಶದಲ್ಲಿ ಗಾಣಿಗ ಹಾಳಾದ. ಪಟ್ಟಣಗಳಲ್ಲಿ ನೂಲಿನ ಗಿರಣಿಗಳು ಹೆಚ್ಚು ಅಸ್ತಿತ್ವದಲ್ಲಿ ಬಂದಿದ್ದರಿಂದ ನೂಲಿನ ಉದ್ಯೋಗ ಗ್ರಾಮಾಂತರ

ಪ್ರದೇಶದಲ್ಲಿಲ್ಲ. ಉದ್ದಿಮೆಯು ಪ್ರಭಾವ ಒಂದಲ್ಲ ಒಂದು ದೃಷ್ಟಿಯಿಂದ ಗ್ರಾಮಾಂತರ ಪ್ರದೇಶಗಳಲ್ಲಿ ದಾಳಿ ಮಾಡಿರುವುದರಿಂದ ಗ್ರಾಮಾಂತರ ಪ್ರದೇಶದಲ್ಲಿ ಇರತಕ್ಕ ಗೃಹ ಕೈಗಾರಿಕೆಗಳು ನಶಿಸಿ ಹೋಗಿವೆ. ಆದ್ದರಿಂದ ನಾನು ಹೇಳುತ್ತಿದ್ದೇನೆ, ನೀವು ಗ್ರಾಮ ನವೀಕರಣ ಮಾಡದೇ ಹೋದರೆ ಗ್ರಾಮವನ್ನು ಕೈಗಾರೀಕರಣಗೊಳಿಸದೇ ಹೋದರೆ ಭಾರಿ ಅನಾಹುತಕ್ಕೆ ಎಡೆಯಾಗಬೇಕಾಗುತ್ತದೆ. ಸರ್ಕಾರದವರು ಗ್ರಾಮಾಂತರ ಪ್ರದೇಶದ ಜನರಿಗೆ ಸಾಲವನ್ನು ಒದಗಿಸುವ ಏರ್ಪಾಡು ಮಾಡಿದ್ದೀರಿ. ಆದರೆ ಅದರ ಪೂರ್ಣ ಸೌಲಭ್ಯ ಆ ಜನರಿಗೆ ಸಿಗುವಂತೆ ಕಾರ್ಯಕ್ರಮ ಹಾಕಿಕೊಳ್ಳಬೇಕು. ಬ್ಯಾಂಕಿನವರು ಸರಿಯಾಗಿ ಸಹಕರಿಸದಿದ್ದರೆ ಸರ್ಕಾರದ ಯೋಜನೆಗಳಿಂದ ಏನೂ ಪ್ರಯೋಜನವಾಗುವುದಿಲ್ಲ. ಬ್ಯಾಂಕಿನವರ ನಡೆವಳಿಕೆ ಇನ್ನೂ ಬದಲಾವಣೆಯಾಗಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ ಗ್ರಾಮೀಣ ಬ್ಯಾಂಕುಗಳನ್ನು ತೆರೆದಿದ್ದೀರಿ. ರಾಮದುರ್ಗದಲ್ಲಿ ಇರುವ ಗ್ರಾಮೀಣ ಬ್ಯಾಂಕಿನವರು ಅಷ್ಟೇನೂ ಆಸಕ್ತಿ ತೋರಿಸುತ್ತಿಲ್ಲವೆಂಬ ಅಂಶ ೨೦ ಅಂಶದ ಕಾರ್ಯಕ್ರಮದ ಸಭೆಗಳಲ್ಲಿ ಕಂಡುಬಂತು. ಅವರು ಬರೀ ಡಿಪಾಸಿಟ್ಟನ್ನು ಕಲೆಕ್ಟ್ ಮಾಡತಕ್ಕ ಕೇಂದ್ರಗಳಾಗಿವೆ. ಕೇವಲ ಡಿಪಾಸಿಟ್‌ಗಳನ್ನು ವಸೂಲು ಮಾಡುವ ಕೇಂದ್ರಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ತೆರೆದಿದ್ದಾರೆಂದರೆ ತಪ್ಪಾಗಲಾರದು. ಅವರು ತಮ್ಮ ಪ್ರವೃತ್ತಿಯನ್ನು ಬದಲಾಯಿಸಿಕೊಳ್ಳಬೇಕು. ಜನರ ಬಗ್ಗೆ ಅನುಕಂಪ, ಹೃದಯವಂತಿಕೆ ಅವರಲ್ಲಿ ಬರಬೇಕು. ಆಗ ಮಾತ್ರ ಆರ್ಥಿಕ ಭದ್ರತೆಯನ್ನು ಹಳ್ಳಿಗಳಲ್ಲಿ ಕಾಣಬಹುದು. ಇಲ್ಲದಿದ್ದರೆ ಅದು ಕನಸಿನ ಗಂಟಾಗಿಯೇ ಉಳಿಯಬಹುದು, ಹಳ್ಳಿಗಳ ಪರಿಸ್ಥಿತಿ ವಿಕೋಪಕ್ಕೆ ಹೋಗಬಹುದು ಎಂಬ ಅಂಶವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಸ್ವಾವಲಂಬನೆಯನ್ನು ಬೋಧಿಸತಕ್ಕ ಉದ್ಯೋಗ ಎಂದರೆ ನೇಕಾರಿಕೆ. ನಮ್ಮಲ್ಲಿ ೧,೨೦,೦೦೦ ಮಗ್ಗಗಳಿವೆ ಎಂಬುದನ್ನು ಹೇಳಿದ್ದಾರೆ. ಇದು ಯಾವಾಗಲೋ ಸರ್ವೆ ಮಾಡಿದ್ದಿರಬೇಕು. ಈ ಸಂಖ್ಯೆಯಲ್ಲಿ ಪ್ರತಿವರ್ಷ ಕಡಿತವಾಗುತ್ತಿದೆ. ಉದಾಹರಣೆಗೆ ನನ್ನ ಜಿಲ್ಲೆಯಾದ ಬೆಳಗಾವಿಯಲ್ಲಿ ಒಂದು ಕಾಲಕ್ಕೆ ಹತ್ತಿ ಕೈಮಗ್ಗಗಳು ಬೇಕಾದಷ್ಟಿದ್ದವು. ಬೆಳಗಾಂ ಮತ್ತು ಷಹಪುರ ಸೀರೆ ಪ್ರಸಿದ್ಧಿಯನ್ನು ಪಡೆದಿದೆ. ಷಹಪುರದ ಸೀರೆಗೆ ಹೆಚ್ಚಿನ ಬೇಡಿಕೆಯೂ ಇದೆ. ಪವರ್ ಲೂಂಗಳು ಹೆಚ್ಚಿಗೆ ಬಂದಿರುವುದರಿಂದ ಕೈಮಗ್ಗಗಳು ಹಿಂದಕ್ಕೆ ಹೋಗುತ್ತಿವೆ. ರಾಮದುರ್ಗ, ಸವದತ್ತಿ ತಾಲ್ಲೂಕಿನಲ್ಲಿ ಹುಕ್ಕೇರಿ ತಾಲ್ಲೂಕಿನಲ್ಲಿ ಮತ್ತೆ ಕೆಲವು ಕಡೆ ಮಾತ್ರ ನಾವು ಕೈಮಗ್ಗಗಳನ್ನು ಕಾಣುತ್ತಿದ್ದೇವೆ, ಕೈಮಗ್ಗಗಳ ಮೇಲೆ ಅವಲಂಬಿಸಿರುವ ಜನ ವಿಶೇಷವಾಗಿ ನಮ್ಮ ತಾಲ್ಲೂಕಿನಲ್ಲಿ ೨೦ ಸಾವಿರ ಜನರಿದ್ದಾರೆ. ಶತಶತಮಾನಗಳಿಂದ ಈ ಉದ್ಯೋಗವನ್ನು ಹಲವಾರು ಮಂದಿ ಅವಲಂಬಿಸಿರುವುದರಿಂದ ಅವರಿಗೆ ಮತ್ತೊಂದು ಉದ್ದಿಮೆಗೆ ಹೋಗಲು ಆಸಕ್ತಿ ಇಲ್ಲ. ಬೇರೆ ಉದ್ದಿಮೆಗೆ ಅವರು ಹೊಂದಿಕೊಳ್ಳುವುದಿಲ್ಲ. ಬರಗಾಲ ಪರಿಹಾರ ಕಾಮಗಾರಿಗಳಿಗೆ ಆ ಜನರು ಬಂದಾಗ ಅವರ ಕೈಯಲ್ಲಿ ದುಡಿಯುವುದಕ್ಕೆ ಆಗಲಿಲ್ಲ. ಅವರನ್ನು ಸುಮ್ಮನೆ ಕೂಡಿಸಿ ಪಗಾರವನ್ನು ಕೊಡಬೇಕಾಯಿತು. ಅವರ ಕೈಯಲ್ಲಿ ಬೇರೆ ಉದ್ಯಮದಲ್ಲಿ ದುಡಿಯುವುದಕ್ಕಾಗುವುದಿಲ್ಲ. ಅವರ ಆರ್ಥಿಕ ಉನ್ನತಿ ವಿಶೇಷವಾಗಿ ಸಹಕಾರ ಸಂಘಗಳ ಮೇಲೆ ಅವಲಂಬಿಸಿದೆ. ಮಾಸ್ಟರ್ ವೀವರ್ಸ್ ಮುಖಾಂತರ ಮತ್ತು ಹ್ಯಾಂಡ್‌ಲೂಂ ಪ್ರಾಜೆಕ್ಟ್ ಮುಖಾಂತರ ಅವರು ನೆಮ್ಮದಿಯಿಂದಿದ್ದಾರೆ. ಪಟ್ಟಭದ್ರ ಹಿತಾಶಕ್ತಿಗಳ ಹಿಡಿತದಿಂದ ತಪ್ಪಿಸುವ ಸಲುವಾಗಿ ಇಂಟೆನ್ಸೀವ್ ಡೆವಲಪ್ಮೆಂಟ್ ಪ್ರಾಜೆಕ್ಟನ್ನು ಅಸ್ತಿತ್ವದಲ್ಲಿ ತಂದಿದ್ದೀರಿ. ಅಂಥ ಒಂದು ಪ್ರಾಜೆಕ್ಟ್ ನಮ್ಮ ರಾಮದುರ್ಗದಲ್ಲಿದೆ. ಆದರೆ ರಾಮದುರ್ಗದ ಹೆಸರು ಈ ಹೊತ್ತಿಗೆಯಲ್ಲಿಲ್ಲ. ರಾಮದುರ್ಗವನ್ನು ವೈಂಡ್ ಅಪ್ ಮಾಡುವ ಯೋಚನೆ ಸರ್ಕಾರಕ್ಕೇನಾದರೂ ಇದೆಯೋ ಏನೋ ಎಂಬ ಸಂಶಯ ನನಗೆ ಬಂತು. ಬನಹಟ್ಟಿ, ರಬಕವಿ, ಇಳಕಲ್ ಎಲ್ಲಾ ಇದೆ, ಆದರೆ ರಾಮದುರ್ಗ ಮಾತ್ರ ಇಲ್ಲ. ರಾಮದುರ್ಗದಲ್ಲಿ ೧,೦೦೦ ಬೆನಿಫಿಷರೀಸ್ ಇದ್ದಾರೆ. ಅಂಥ ಆದರ್ಶವಾಗಿ ನಡೆಯುತಕ್ಕ ಸಂಸ್ಥೆಯ ಹೆಸರು ಕಾಣುವುದೇ ಇಲ್ಲ. ಏತಕ್ಕೆ ಬಿಟ್ಟುಹೋಗಿದೆ ಎಂಬುದನ್ನು ಸನ್ಮಾನ್ಯ ಸಚಿವರು ತಿಳಿಸಬೇಕು. ನೇಕಾರರ ಸೊಸೈಟಿಗಳು ಬೆಳಗಾಂನಲ್ಲಿ ಸುಸ್ಥಿತಿಯಲ್ಲಿಲ್ಲ. ಸಹಕಾರ ಸಂಘಗಳಿಗೆ ಮೊದಲು ಹಣಕಾಸಿನ ವ್ಯವಸ್ಥೆಯನ್ನು ಪೂರೈಸತಕ್ಕ ಏಜೆನ್ಸಿ ಎಂದರೆ ಜಿಲ್ಲಾ ಕೈಗಾರಿಕಾ ಸಹಕಾರ ಬ್ಯಾಂಕು ಆಗಿತ್ತು, ಅವರ ಮುಖಾಂತರ ಸಹಕಾರ ಸಂಘಗಳು ಹಣವನ್ನು ಪಡೆಯುತ್ತಿತ್ತು. ಈಗ ಡಿಸ್ಟ್ರಿಕ್ಟ್ ಸೆಂಟ್ರಲ್ ಕೋ-ಆಪರೇಟಿವ್ ಬ್ಯಾಂಕಿಗೆ ಆ ಜವಾಬ್ದಾರಿಯನ್ನು ವಹಿಸಿರುವುದರಿಂದ ಅದಕ್ಕೆ ತನ್ನದೇ ಆದ ಹೊಣೆ ಇರುವುದರಿಂದ ನೇಕಾರರ ಸಹಕಾರ ಸಂಘಗಳಿಗೆ ಅಷ್ಟು ಅಷ್ಟೇನೂ ಗಮನ ಕೊಡುತ್ತಿಲ್ಲ ಇದರಿಂದಾಗಿ ಸಹಕಾರ ಸಂಘಗಳಿಗೆ ಆರ್ಥಿಕ ಭದ್ರತೆ ಇರುವುದಿಲ್ಲ ವ್ಯವಸಾಯವನ್ನು ಅವಲಂಬಿಸಿರುವ ಜನರಿಗೆ ಭೂಮಿ ಇರುವುದರಿಂದ ಮತ್ತು ಮರುಪಾವತಿಯಾಗುವ ಭರವಸೆ ಇರುವುದರಿಂದ ಅವರ ಕಡೆ ಬ್ಯಾಂಕಿನವರು ಹೆಚ್ಚು ಗಮನ ಕೊಡುತ್ತಾರೆಯೇ ಹೊರತು

ನೇಕಾರರಿಗೆ ಹೆಚ್ಚು ಗಮನ ಕೊಡುವುದಿಲ್ಲ. ಹೀಗಾಗಿ ಡಿ.ಸಿ.ಸಿ. ಬ್ಯಾಂಕಿನಿಂದ ಅವರಿಗೆ ಹಣದ ವ್ಯವಸ್ಥೆ ಸಿಗುತ್ತಿಲ್ಲ. ನೇಕಾರರ ಸಹಕಾರ ಸಂಘಗಳು ಹಣಕಾಸಿನ ಮುಗ್ಗಟ್ಟನ್ನು ಎದುರಿಸುತ್ತಿವೆ. ಆದ್ದರಿಂದ ಬೇರೆ ಏಜೆನ್ಸಿ ಮುಖಾಂತರ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಹಿಂದೆ ಬೆಳಗಾಂ, ಬಿಜಾಪುರ ಮತ್ತು ಧಾರವಾಡ ಈ ಮೂರು ಕಡೆಗಳಲ್ಲಿರುವ ಅರ್ಬನ್ ಕೋ-ಆಪರೇಟೀವ್ ಬ್ಯಾಂಕುಗಳನ್ನು ಉಳಿಸಿಕೊಡಬೇಕೆಂದು ಮುಖ್ಯ ಮಂತ್ರಿಗಳನ್ನು ಕೇಳಿಕೊಂಡಿದ್ದೆವು ಅದಕ್ಕೆ ಅವರು ಒಪ್ಪಿದ್ದರು. ಒಬ್ಬರ ಅಧಿಕಾರಿಗಳಿದ್ದು ಅವರಿಗೇಕೋ ಬೆಳಗಾಂ ಜಿಲ್ಲೆಯ ಮೇಲೆ ಮುನಿಸು. ಅವರು ಬೆಳಗಾಂ ಒಂದನ್ನು ಬಿಟ್ಟು ಧಾರವಾಡ ಮತ್ತು ಬಿಜಾಪುರ ಬ್ಯಾಂಕುಗಳಿಗೆ ಜೀವದಾನ ಕೊಟ್ಟರು.

೩.೦೦ ಪಿ.ಎಂ.

ಅದನ್ನು ಅರ್ಬನ್ ಕೋ ಆಪರೇಟಿವ್ ಸೊಸೈಟಿ ಎಂದು ಕನ್ವರ್ಟ್ ಮಾಡಿದರು. ಹಾಗೆ ಮಾಡಿ ಜಿಲ್ಲೆಯ ಎಲ್ಲಾ ಸೊತ್ತನ್ನು ಅರ್ಬನ್ ಸೊಸೈಟಿಯವರಿಗೆ ಎತ್ತಿಹಾಕಿದರು. ಹೀಗೆ ಮಾಡಿ ಇಡೀ ಜಿಲ್ಲೆಯ ನೇಕಾರರನ್ನು ದುರ್ಗತಿಗೆ ಈಡುಮಾಡಿದರು. ಅದನ್ನು ನೀವು ಪುನರುತ್ಥಾನ ಗೊಳಿಸಿದರೆ, ಚೈತನ್ಯ ಗೊಳಿಸಿದರೆ ನೇಕಾರರಿಗೆ ಲಾಭ ಮಾಡಿದಹಾಗೆ ಆಗುತ್ತದೆಂದು ಹೇಳುತ್ತೇನೆ ಇವರಿಗೆ ಸಿಗಬೇಕಾದ, ಮೇನೇಜೀರಿಯಲ್ ಕಾಸ್ಟ್ ಆಗಿರಲಿ, ಅಥವಾ ಶೇರ್ ಕ್ಯಾಪಿಟಲ್ ಆಗಲಿ, ಅಥವಾ ವರ್ಕಿಂಗ್ ಕ್ಯಾಪಿಟಲ್ ಆಗಲೀ, ಯಾವ ಸಮಯಕ್ಕೆ ಸಿಗಬೇಕೋ, ಆ ಸಮಯಕ್ಕೆ ಅದನ್ನು ಅವರು ಪಡೆದು ಕೊಂಡಿದ್ದನ್ನು ನಾನು ಎಂದೂ ನೋಡಿಲ್ಲ. ತಾವು ನೇಕಾರರ ಸಂಸ್ಥೆಯನ್ನು ಬಲಪಡಿಸಿದರೆ, ನಾನು ಮತ್ತೊಂದು ಯಾವುದನ್ನೂ ಬೇಡುವುದಿಲ್ಲ ಎಂದು ನಾನು ಹೇಳುತ್ತೇನೆ. ನಾನು ೧೯೬೨ ರಿಂದ ವಿಧಾನಸಭಾ ಸದಸ್ಯನಾದಾಗಿನಿಂದಲೂ ಅವರ ಜೀವನವನ್ನು ನೋಡಿದ್ದೇನೆ. ಅವರ ಮನೆಯಲ್ಲಿ ಇವತ್ತು ಚಹಾ ಕುಡಿಯಲು ಮಣ್ಣಿನ ಪಾತ್ರೆ ಉಪಯೋಗಿಸುತ್ತಿದ್ದಾರೆ. ಅವರಲ್ಲಿ ಒಂದು ಅಲ್ಯುಮಿನಿಯಂ ಪಾತ್ರೆ ಇಲ್ಲ. ಅವರನ್ನು ಅವರ ಕಾಲಮೇಲೆ ನಿಲ್ಲಿಸುವ ಜವಾಬ್ದಾರಿ ನಿಮ್ಮ ಮೇಲೆ ಇದೆ. ತಾವು ಇದನ್ನು ಪೂರೈಸಿ ಕೊಡುತ್ತೀರಿ ಎನ್ನುವ ಭರವಸೆಯಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಈ ದಿನ ಇನ್‌ಟೆನ್ಸಿವ್ ಡೆವಲಪ್‌ಮೆಂಟ್ ಪ್ರಾಜೆಕ್ಟ್ ಇದೆ. ಇದರಲ್ಲಿ ೧,೦೦೦ ಜನ ನೇಕಾರರು ದುಡಿಯುತ್ತಿದ್ದಾರೆ. ಅವರಿಗೆ ನೂಲು ತರುವ ಚಿಂತೆ ಇಲ್ಲ. ಅದನ್ನು ಮಾರುವ ಚಿಂತೆ ಇಲ್ಲ. ಅವರು ಸುಖವಾಗಿದ್ದಾರೆ. ಆದರೆ ಅಲ್ಲಿ ತಾವು ಡೈ ಹೌಸನ್ನು ಮಾಡಿಲ್ಲ, ಇವರು ನೂಲನ್ನು ಡೈ ಮಾಡಲು ಖಾಸಗೀ ಏಜೆನ್ಸಿಯವರಿಗೆ ಕೊಡುತ್ತಿದ್ದಾರೆ, ಇವರು ಕೊಟ್ಟ ಒಳ್ಳೆಯ ನೂಲು ಆ ಖಾಸಗೀ ಡೈ ಹೌಸ್‌ನಲ್ಲಿ ಮಾಯವಾಗಿ ಕೆಟ್ಟ ನೂಲು ಅಲ್ಲಿ ಬರುವ ಸಾಧ್ಯತೆ ಉಂಟು. ಖಾಸಗೀ ಜನರು ಬಣ್ಣ ಮಾಡುವುದರಿಂದ ಬಣ್ಣದಲ್ಲಿ ಗ್ಯಾರಂಟಿ ಇರುವುದಿಲ್ಲ. ಇದರಿಂದ ಪ್ರಾಜೆಕ್ಟ್‌ಗೇ ಕೆಟ್ಟ ಹೆಸರು ಬರುತ್ತದೆ ಆದುದರಿಂದ ಪ್ರತಿಯೊಂದು ಪ್ರಾಜೆಕ್ಟಿಗೂ ಕಂಪಲ್ಸರಿ ಡೈಹೌಸ್ ಮಾಡಬೇಕೆಂದು ಹೇಳುತ್ತೇನೆ. ಇಲ್ಲಿ ನಡೆಯುವ ಇನ್ನೊಂದು ಅವ್ಯವಹಾರ ಎಂದರೆ, ಒಂದು ಇಂಚಿನಲ್ಲಿ ೭೨ ರಿಂದ ೭೪ ಎಳೆಗಳು ಇರಬೇಕೆಂದು ನಿಯಮ. ಆದರೆ ಸುಮಾರು ೧೪ ರಿಂದ ೨೦ ಎಳೆಗಳನ್ನು ಆ ನೇಕಾರ ಉಳಿಸಿಕೊಂಡರೆ ಅವನು ಕೊಡತಕ್ಕ ಸೀರೆಯಲ್ಲಿ ಅವನಿಗೆ ಒಂದು ಸೀರೆ ಉಳಿಯುತ್ತದೆ. ಅದನ್ನು ತಪ್ಪಿಸುವುದಕ್ಕೆ ಕಡ್ಡಾಯವಾಗಿ ಒಂದು ಇಂಚಿನಲ್ಲಿ ಇಷ್ಟೇ ಎಳೆ ಇರಬೇಕೆಂದು ಕಡ್ಡಾಯಗೊಳಿಸಬೇಕು. ಅದು ಕಡಿಮೆ ಬಂದರೆ ಮಾಲನ್ನು ರಿಜೆಕ್ಟ್ ಮಾಡುತ್ತೇವೆಂದು ತಿಳುವಳಿಕೆ ಕೊಟ್ಟರೆ ಕ್ವಾಲಿಟಿಯ ಗ್ಯಾರಂಟಿಯೂ ಸಿಗುತ್ತದೆ.

ಇನ್ನು ರಿಬೇಟ್ ಅನಾಹುತದ ಬಗ್ಗೆ ಹೇಳಬೇಕೆಂದರೆ, ಪ್ರಾಜೆಕ್ಟ್‌ನಿಂದ ತಾವು ಮಾಲನ್ನು ತೆಗೆದು ಕೊಳ್ಳುತ್ತೀರಿ; ಅದರ ಮೇಲೆ ಸುಂಕ ಇರುವುದಿಲ್ಲ ಪ್ರಿಯದರ್ಶಿನಿ ಸೆಂಟರ್ಸ್ ನಿಂದ ತಾವು ಇದನ್ನು ಮಾರುತ್ತೀರಿ. ಮಾರಾಟ ಮಾಡುವಾಗ ಖಾಸಗಿಯವರಿಗೂ ಮಾರಾಟ ಮಾಡುತ್ತೀರಿ. ಜನತಾ ಸೀರೆಯನ್ನು ತಾವು ಉತ್ಪಾದನೆ ಮಾಡುತ್ತೀರಿ. ಧಾರವಾಡದಲ್ಲಿ ಇರುವ ಕೊ-ಆಪರೇಟಿವ್ ಇನ್ಸ್ಟಿಟ್ಯೂಷನ್‌ಗೂ ಜನತಾ ಸೀರೆಗಳನ್ನು ಉತ್ಪಾದನೆ ಮಾಡಲು ಕೊಟ್ಟಿದ್ದೀರಿ. ರಾಮದುರ್ಗದಲ್ಲಿರುವ ಬನಹಟ್ಟಿಯಲ್ಲಿರುವ ನಿಮ್ಮ ಪ್ರಾಜೆಕ್ಟ್‌ನಿಂದ ಜನತಾ ಸೀರೆಗಳನ್ನು ತೆಗೆದುಕೊಂಡು ೨ ಸಲ, ೩ ಸಲ ಮಾರಾಟ ಮಾಡತಕ್ಕಂತಹದ್ದು ಉದ್ಭವಿಸುವುದಿಲ್ಲವೇ? ನಾನು ಹೇಳುವುದು ಏನೆಂದರೆ, ಎಲ್ಲಾದರೂ ಒಂದು ಮೂಲೆಯಲ್ಲಿ, ಪ್ರಿಯದರ್ಶಿನಿ ಅಥವಾ ಹ್ಯಾಂಡ್‌ಲೂಂ ಎನ್ನುವ ಒಂದು ಸೆಕ್ಷನ್ ನೀವು ಹಾಕಿದರೆ ಸೆಕೆಂಡ್ ಸೇಲಿಗೆ ಅವಕಾಶವಾಗುವುದಿಲ್ಲ. ಅದೊಂದನ್ನು ಮಾತ್ರ ಅವಶ್ಯಕವಾಗಿ ಮಾಡಬೇಕೆಂದು

ನಾನು ಹೇಳುತ್ತೇನೆ. ಬೆಳಗಾಂನಲ್ಲಿ ಇರುವ ಸಹಕಾರಿ ಸಂಘಗಳಿಗೆ ತುಂಬಾ ಅನ್ಯಾಯವಾಗಿದೆ. ಅದನ್ನು ಸರಿಪಡಿಸಬೇಕು. ಯಾವುದೇ ಸಂಘ ಸಂಸ್ಥೆ ರಿಬೇಟ್ ಹಾವಳಿಯಿಂದ ಅಪ್ರಮಾಣಿತನಕ್ಕೆ, ತುಡುಗ ಮಾಡುವುದಕ್ಕೆ ಅವಕಾಶ ಕಲ್ಪಿಸಿದಂತಾಗಿದೆ. ಮನುಷ್ಯನ ಒಲವು ಆ ಕಡೆ ಹೋಗುತ್ತದೆ. ಆದರಿಂದ ನಾವು ಅವನಿಗೆ ಬೈಯ್ಯುವುದಕ್ಕಾಗುವುದಿಲ್ಲ. ಇದು ತಪ್ಪು ಎಂದು ನಾನು ಹೇಳುವುದಿಲ್ಲ, ಅವಕಾಶ ಆದರಲ್ಲಿ ಬಹಳ ಇದೆ. ಬಹಳ ಜನರ ಕೈವಾಡ ಇದರಲ್ಲಿ ಇದೆ. ಅಂತಹ ಒಂದು ಪರಿಸ್ಥಿತಿಯಿಂದ ನಮ್ಮ ಜಿಲ್ಲೆಯ ೩೨ ಸೊಸೈಟಿಗಳನ್ನು ಸೆಕ್ಷನ್ ೬೪ರ ಕೆಳಗೆ ಎನ್‌ಕ್ವಯರಿ ಮಾಡುವ ಪರಿಸ್ಥಿತಿ ಬಂದಿದೆ. ಸರ್ಕಾರದವರು ೩ ವರ್ಷದ ರಿಬೇಟ್ ಕೊಡಬೇಕೆಂದು ಕೊಟ್ಟರೂ ಕೂಡ ಇನ್ನೂ ವರೆಗೆ ಅದನ್ನು ಅವರಿಗೆ ಕೊಡಲಾಗಿಲ್ಲ. ಸಂಬಂಧಪಟ್ಟ ಕೆಳಗಿನಿಂದ ಹಿಡಿದು ಮೇಲಿನ ಅಧಿಕಾರಿಗಳಿಗೆಲ್ಲಾ ನಾನು ಕೇಳಿದ್ದೇನೆ. ಅವರ್ಯಾಕೋ ಈ ಬಗ್ಗೆ ಅನುಕಂಪ, ಹೃದಯವಂತಿಕೆಯನ್ನು ತೋರಿಸಿಲ್ಲ. ಈ ಬಗ್ಗೆ ನಾವು ೨೦ ಅಂಶಗಳ ಕಾರ್ಯಕ್ರಮದ ಅನುಷ್ಠಾನಕ್ಕೆ ತರುವ ಸಭೆಯಲ್ಲಿ ಜಿಲ್ಲಾ ಮಟ್ಟದಲ್ಲಿ ಚರ್ಚೆ ಮಾಡಿದ್ದೇವೆ. ಕೂಲಂಕಷ ಚರ್ಚೆ ಮಾಡಿದ ನಂತರ ಎಲ್ಲರೂ ಒಪ್ಪಿಕೊಂಡರೂ ಕೂಡಾ, ಅದಾದನಂತರ ಬೆಳಗಾಂನ ಎಲ್ಲಾ ೩೨ ಸೊಸೈಟಿಗಳನ್ನು ರಾತ್ರೋರಾತ್ರಿ ೧೧ ಗಂಟೆಗೆ, ಬೆಂಗಳೂರಿನಿಂದ ಒಬ್ಬರು, ಧಾರವಾಡದಿಂದ ಒಬ್ಬರು, ಬಿಜಾಪುರದಿಂದ ಒಬ್ಬರು, ಬೆಳಗಾಂನ ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರು ನಾಲ್ಕೈದು ಜೀಪುಗಳನ್ನು ತೆಗೆದುಕೊಂಡು ಬಂದು ನಿಮಗೆ ಎನ್‌ಕ್ವಯರಿ ಮಾಡಿ ಸರ್ಕಾರದವರು ದುಡ್ಡು ಕೊಡಿ ಎಂದು ಹೇಳಿದ್ದಾರೆ ಆದಕ್ಕೆ ಫೈಲ್ ಕೊಡಿ ಎಂದು ಹೇಳಿದರು, ಅವರು ಕೊಟ್ಟರು. ಇವರು ಕಟ್ಟಿಕೊಂಡು ಬಂದುಬಿಟ್ಟರು. ಆ ಸಂಘಸಂಸ್ಥೆಗಳು ಆಡಿಟ್ ಆಗಿವೆ. ಎ ಮತ್ತು ಬಿ ಕ್ಲಾಸ್‌ನಲ್ಲಿ ಇವೆ. ಅಸಿಸ್ಟೆಂಟ್ ರಿಜಿಸ್ಟ್ರಾರ್‌ರವರೂ ಸಹಾ ಮೇಲಿಂದ ಮೇಲೆ ಭೇಟಿ ಕೊಟ್ಟು ಒಳ್ಳೆಯ ರಿಮಾರ್ಕ್ ಕೂಡಾ ಬರೆದಿರುತ್ತಾರೆ. ಅವರೂ ಇಲ್ಲಿಂದ ಸ್ಕ್ವಾಡ್ ಹೋಗಿ ಚೆಕ್ ಮಾಡಿದೆ. ಅದ್ಯಾವ ರೀತಿ ಮಾಡಿದರೋ ಗೊತ್ತಿಲ್ಲ ರಾತ್ರೋರಾತ್ರಿ ಸೊಸೈಟಿಗಳನ್ನು ಸೆಕ್ಷನ್ ೬೪ ರ ಕೆಳಗೆ ಎನ್‌ಕ್ವಯರಿ ಮಾಡಿ ಕಾಗದ ಪತ್ರಗಳನ್ನು ತಂದು ತಮ್ಮ ಕಸ್ಟಡಿಯಲ್ಲಿ ಇಟ್ಟುಕೊಂಡರೆ ಈ ಸೊಸೈಟಿಗಳು ಯಾವ ರೀತಿ ಕೆಲಸ ಮಾಡಬೇಕು ಇವನ್ನು ಸ್ವಲ್ಪವಾದರೂ ಮಾನವೀಯತೆಯ ದೃಷ್ಟಿಯಿಂದ ನೋಡಿ. ಹೃದಯವಂತಿಕೆ ಇರಲಿ, ಅನುಕಂಪ ಇರಲಿ. ಅನ್ನಕ್ಕೆ ಗತಿ ಇಲ್ಲದ ಜನರ ಹೊಟ್ಟೆಯ ಮೇಲೆ ಹೊಡೆಯಬಾರದು. ಈ ಬಗ್ಗೆ ಅರ್ಥ ಮಂತ್ರಿ, ಕಂಡೆ. ಮಾನ್ಯ ಮುಖ್ಯಮಂತ್ರಿಯವರನ್ನು ಕಂಡೆ. ಸಂಬಂಧಿಸಿದ ಎಲ್ಲಾ ಕಾರ್ಯದರ್ಶಿಯವರನ್ನು ಕಂಡೆ, ಕೊನೆಯ ಮಾತನ್ನು ನಾನು ಹೇಳುತ್ತಿದ್ದೇನೆ. ನೀವು ಸಂಘಸಂಸ್ಥೆಗಳನ್ನು ಅವರಿಗೇ ಬಿಡಿ. ಅವರ ಕಡೆ ನೋಡಬೇಡಿ. ೨ ವರ್ಷ ಅದನ್ನು ಆರ್.ಎನ್. ಪಾಟೀಲರಿಗೆ, ಆ ತಾಲ್ಲೂಕಿನ ಪ್ರತಿನಿಧಿಗೆ ಭಿಕ್ಷೆ ಕೊಟ್ಟಿದ್ದೇನೆ ಎಂದು ಬಿಡಿ. ಈ ವರ್ಷ ಏನಿದೆ ಅದನ್ನು ನೀವು ಚೆಕ್ ಮಾಡಿ. ಅವರನ್ನು ವಿಧಾನ ಸೌಧದ ಮುಂದೆ ಕಂಬ ಹಾಕಿ ಹ್ಯಾಂಗ್ ಮಾಡಿ. ನಾನು ಆ ದಾರಿಗೆ ಅಡ್ಡ ಬರುವುದಿಲ್ಲ. ಹಿಂದಿನ ೨ ವರ್ಷದ್ದು ಅವರಿಗೆ ಕೊಡಿ. ಡಿಸ್ಟ್ರಿಕ್ಟ್ ಕೋ-ಆಪರೇಟಿವ್ ಬ್ಯಾಂಕಿನ ಬಾಕಿಯನ್ನು ತೀರಿಸಿ ಅವರು ತಿರುಗಾ ಸಾಲ ತೆಗೆದುಕೊಳ್ಳಲು ಅರ್ಹರನ್ನಾಗಿ ಮಾಡಿ. ಅವರಿಗೆ ಜೀವನ ಕೊಡಿ ಎಂದು ಕೇಳಿಕೊಳ್ಳುತ್ತೇನೆ. ಏತಕ್ಕೆ ಕರುಣೆ ಬರಲಿಲ್ಲವೋ, ನನ್ನ ಮೇಲಿನ ಕೋಪವೋ, ಸರ್ಕಾರ ಇಷ್ಟೊಂದು ಕಠೋರವಾಗಿ ವರ್ತಿಸಿದ್ದನ್ನು ನೋಡಿದರೆ ನನಗೆ ಬಹಳ ವಿಷಾದವಾಗುತ್ತದೆ. ತಮ್ಮನ್ನು ಟೀಕೆ ಮಾಡಬೇಕು ಮತ್ತೊಬ್ಬರ ಮೇಲೆ ಅಪವಾದ ಹಾಕಬೇಕೆಂದು ನಾನು ಹೇಳುತ್ತಾ ಇಲ್ಲ. ಸರ್ಕಾರದಲ್ಲಿ ನುರಿತ ಅಧಿಕಾರಿಗಳು ಇದ್ದಾರೆ. ಅಕೌಂಟೆಂಟ್ ಜನರಲ್‌ರವರಿಂದ ಲೆಕ್ಕವನ್ನು ಚೆಕ್ ಮಾಡಿಸುತ್ತೀರಿ. ಎಷ್ಟೋ ಒಮಿಷನ್ಸ್ ಅಂಡ್ ಕಮಿಷನ್ಸ್‌ನ್ನು ಅವರು ಎತ್ತಿ ತೋರಿಸುತ್ತಾರೆ. ಅವರು ಬಂದು ಅವನ್ನೆಲ್ಲಾ ಕಟ್ಟಿಕೊಂಡು ಹೋದರೆ ಏನು ಸ್ವಾಮಿ ಆದ್ದರಿಂದ ಇದನ್ನು ಸರಿಪಡಿಸಿ, ಅವರ ಜೀವನೋಪಾಯಕ್ಕೆ ಹಾದಿ ಮಾಡಿಕೊಡಿ ಎಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ ಈ ಒಂದು ಉದ್ದೇಶಕ್ಕಾಗಿಯೇ ಮೂಲಭೂತವಾಗಿ ಈ ಮನವಿಯನ್ನು ಅಧ್ಯಕ್ಷರ ಮುಖಾಂತರ ಮಾಡಿಕೊಳ್ಳಲು ಎದ್ದು ನಿಂತಿದ್ದೇನೆ. ನಾನು ಗ್ರಾಮಾಂತರ ಪ್ರದೇಶದಿಂದ ಬಂದವನಾಗಿದ್ದೇನೆ. ಸಾಮಾನ್ಯವಾಗಿ ಉದ್ದಿಮೆ ಹಾಗೂ ಕೈಗಾರಿಕೆಯಲ್ಲಿ ಹೆಚ್ಚು ಆಸಕ್ತಿ ಇಲ್ಲದವನು. ಆದರೆ ಇವರಿಗೆ ಆಗುತ್ತಿರುವ ಹಿಂಸೆ ತಪ್ಪಿಸುವ ಸಲುವಾಗಿ ಸರ್ಕಾರದ ಗಮನಕ್ಕೆ ಇದನ್ನು ತರುವ ಸಲುವಾಗಿ ಮಾತನಾಡಲು ಮಾತ್ರ ನಾನು ಅಧ್ಯಕ್ಷರ ಅಪ್ಪಣೆಯನ್ನು ಪಡೆದು ನಿಂತಿದ್ದೇನೆ. ತಾವು ಭಾರಿ ಕೈಗಾರಿಕೆಗಳಲ್ಲಿ ೧ ಕೋಟಿ ರೂಪಾಯಿ ನಷ್ಟವಾದರೆ, ಮತ್ತೊಂದು ಕೋಟಿಯನ್ನು ಕೊಡುತ್ತೀರಿ. ಅದಕ್ಕೆ ಬೇಕಾದ ಎಲ್ಲಾ ಶುಶ್ರೂಷೆಯನ್ನು ಮಾಡುತ್ತೀರಿ. ಇದನ್ನೆಲ್ಲಾ ಏಕೆ ಈ ಸಂಘಸಂಸ್ಥೆಗಳಿಗೆ ಮಾಡಬಾರದು? ಇದನ್ನು ಅವಲಂಭಿಸಿರುವವರು

ನಿರ್ಗತಿಕರಾಗಿದ್ದಾರೆ. ಯಾರನ್ನು ಉದ್ಧಾರ ಮಾಡುತ್ತೇವೆಂದು ಹಗಲಿರುಳೂ ಹೇಳುತ್ತೀರೋ, ಅಂತಹ ಜನರಿಗೆ ಸಹಾಯ ಮಾಡದೇ ಹೋದರೆ ಹೇಗೆ ನಮ್ಮ ಜಿಲ್ಲೆಯಲ್ಲಿ ಉತ್ಪಾದನೆಯಾದ ಮಾಲಿನ ಮಾರ್ಕೆಟಿಂಗ್ ಸಲುವಾಗಿ ೯ ಡಿಪೋಗಳು ಇದ್ದವು. ಆದರೆ ಇವತ್ತು ಒಂದು ಡಿಪೋ ಇಲ್ಲ. ಆತ ಸೀರೆಗಳನ್ನೆಲ್ಲಾ ಗಂಟುಕಟ್ಟಿಕೊಂಡು ಧಾರವಾಡಕ್ಕೆ ಹೋಗಬೇಕು. ಅಲ್ಲಿ ರಿಜೆಕ್ಟ್ ಮಾಡಿದ ಸೀರೆಗಳನ್ನು ಮತ್ತೆ ವಾಪಸ್ ಕಟ್ಟಿಕೊಂಡು ಹೋಗಬೇಕು. ಇಂತಹ ಪರಿಸ್ಥಿತಿ ನಮಗ್ಯಾಕೆ ನಾವು ಬೆಳಗಾಂನವರು ಪಾಪಿ ಮನೆಗೆ ದೀಪ ಹಚ್ಚಿದ್ದೀವೇನು ಇವರನ್ನು ಇಷ್ಟೊಂದು ಕೆಳಮಟ್ಟಕ್ಕೆ ತರುವುದಕ್ಕೆ ಜವಾಬ್ದಾರರು ಯಾರು ಹೊಣೆಗಾರರು ಯಾರು ಇವರನ್ನು ನೋಡುವ ದೃಷ್ಟಿಯಲ್ಲೂ ಕೂಡಾ ದೋಷ ಇದೆ ಎಂದು ನಾನು ಹೇಳುತ್ತೇನೆ. ಇದನ್ನು ತಾವು ಸರಿಪಡಿಸಬೇಕು. ಕುಮಾರಿ ಪ್ರಮೀಳಾ ಅವರಿಗೆ ಬಹಳ ಖುಷಿಯಾಗುತ್ತದೆ. ನಮ್ಮ ಪ್ರಧಾನ ಮಂತ್ರಿಯವರು ಒಂದು ಮಾತನ್ನು ಹೇಳಿದ್ದಾರೆ, ಮಹಿಳೆಯರು ಸಣ್ಣ ಕೈಗಾರಿಕೆಗಳನ್ನು ಪ್ರಾರಂಭ ಮಾಡುವುದಕ್ಕೆ ಮುಂದೆ ಬಂದರೆ, ಅಂಥವರಿಗೆ ಪ್ರೋತ್ಸಾಹ ಕೊಡಬೇಕೆಂಬ ಮಾತನ್ನು ಹೇಳಿದ್ದಾರೆ. ೫೦ ಭಾಗ ಇರತಕ್ಕಂಥ ಮಹಿಳೆಯರಿಗೂ ಸೂಕ್ತ ಅವಕಾಶಗಳನ್ನು ಇಂದು ಕಲ್ಪಿಸಿಕೊಡಬೇಕಾಗಿದೆ. ನಮ್ಮ ಶಾಸನ ಸಭೆಯಲ್ಲಿ ಪ್ರಭಾವಿಯುತವಾಗಿ ಮಾಡತಕ್ಕವರು ಪ್ರಮೀಳಾರವರು, ನಾನು ಮಹಿಳೆಯರಿಗೆ ಪ್ರತ್ಯೇಕ ಉದ್ಯೋಗಗಳನ್ನು ಮಾಡಿ ಎಂದು ಹೇಳುವುದಿಲ್ಲ. ಇರತಕ್ಕಂಥ ಕೈಗಾರಿಕೆಗಳಲ್ಲಿ ಕೆಲವೊಂದು ಮಹಿಳೆಯರಿಗೆ ರಿಸರ್ವೇಷನ್ ಇಡಿ ಎಂದು ಹೇಳುತ್ತೇನೆ. ಗ್ರಾಮೀಣ ಪ್ರದೇಶಗಳಲ್ಲಿ ಪ್ರತಿಯೊಂದು ಮನೆಯನ್ನೂ ಗ್ರಾಮ ಕೈಗಾರಿಕೆಗಳನ್ನಾಗಿ ಪರಿವರ್ತಿಸಬೇಕು. ಮದ್ರಾಸಿನಲ್ಲಿರತಕ್ಕ ಶಿವಕಾಶಿಯಲ್ಲಿ ಪ್ರತಿಯೊಂದು ಕುಟುಂಬವೂ ಕೂಡ ಗ್ರಾಮ ಕೈಗಾರಿಕೆಯಲ್ಲಿ ದುಡಿಯುತ್ತಿದೆ, ಉತ್ತರ ಪ್ರದೇಶದಲ್ಲಿ ಕೂಡ ಪ್ರತಿಯೊಂದು ಕುಟುಂಬವೂ ಪಾನ ಅಂಗಡಿಗಳನ್ನು ಇಟ್ಟುಕೊಂಡಿರುತ್ತವೆ. ಗ್ರಾಮದಲ್ಲಿರತಕ್ಕ ಕುಶಲ ಕರ್ಮಿಗಳನ್ನು ಗುರುತಿಸಿ, ಅವರ ಜೀವನಕ್ಕೆ ಆಧಾರ ಮಾಡುವಂಥ ಕಾರ್ಯಕ್ರಮಗಳನ್ನು ಜಾರಿಗೆ ತರಬೇಕೆಂದು ಹೇಳುತ್ತೇನೆ.

ಇನ್ನು ಸ್ಮಾಲ್ಲ್ಯಾಂಡ್‌ಲೂಂ ಡವಲಪ್‌ಮೆಂಟ್ ಪ್ರಾಜೆಕ್ಟ್‌ನಲ್ಲಿ, ಬೆನಿಫಿಷಿಯರಿಸ್ ಹೆಸರನ್ನು ಬ್ಯಾಂಕಿಗೆ ಕಳುಹಿಸುತ್ತಾರೆ. ಬ್ಯಾಂಕಿನವರು ಇನ್‌ಕಂ ಸರ್ಟಿಫಿಕೇಟ್ ಕೇಳುತ್ತಾರೆ. ೪ ಪರ್ಸೆಂಟ್ ಬಡ್ಡಿ ಮೇಲೆ ಕೊಡತಕ್ಕಂಥ ಹಣಕ್ಕೆ ಸರ್ಕಾರ ಕೂಡ ಗ್ರಾಂಟ್ ಕೊಡುತ್ತದೆ. ಸ್ವಾಮಿ, ನೇಕಾರ ತನ್ನ ವರಮಾನದ ಸರ್ಟಿಫಿಕೇಟ್‌ನ್ನು ಎಲ್ಲಿಂದ ತಂದುಕೊಡುತ್ತಾನೆ; ಸಾಲ ಕೊಡಬಾರದು ಎನ್ನುವುದಕ್ಕೆ ಇಂಥ ಕಾರಣಗಳನ್ನು ಅಧಿಕಾರಿಗಳು ಹುಡುಕುತ್ತಾರೆ. ೨೦ ಅಂಶಗಳ ಕಾರ್ಯಕ್ರಮದ ಸಭೆಯಲ್ಲಿ ಕೂಡ ನಾನು ಈ ವಿಷಯವನ್ನು ಪ್ರಸ್ತಾಪ ಮಾಡಿದ್ದೇನೆ. ಮಾನ್ಯ ಮಂತ್ರಿಯವರು ಬ್ಯಾಂಕ್ ಅಧಿಕಾರಿಗಳನ್ನು ಕರೆಸಿ ಈ ವಿಚಾರದಲ್ಲಿ ಅವರ ಮನಸ್ಸನ್ನು ಬದಲಾಯಿಸಿಕೊಳ್ಳುವಂತೆ ಹೇಳಬೇಕು. ಇಲ್ಲದೇ ಹೋದರೆ, ನಿಮ್ಮ ಎನ್.ಆರ್.ಇ.ಪಿ. ಮತ್ತು ಡಿ.ಆರ್.ಡಿ.ಪಿ. ಯೋಜನೆಗಳು ಉಪಯೋಗವಾಗುವುದಿಲ್ಲ. ಬಡವ ಎಲ್ಲಿದ್ದಾನೋ ಅಲ್ಲಿಯೇ ಇದ್ದಾನೆ ಕೊಡುಸುವ, ಕೊಡುವ ಸಬ್ಸಿಡಿ ಹಣ ಹಂಚಿಕೊಂಡು ತಿಂದು ಹಾಕುತ್ತಾರೆ. ನಾನು ವ್ಯಕ್ತಗೊಳಿಸಿದಂಥ ಅಂಶಗಳಲ್ಲಿ ಕೆಲವನ್ನು ಮಾಡುತ್ತೀರೆನ್ನುವ ಭರವಸೆ ಹೊಂದಿದ್ದೇನೆ ಮುಖ್ಯವಾಗಿ ನೇಕಾರರ ಬಗ್ಗೆ ನಾನು ಹೇಳಿರುವಂಥ ಅಂಶಗಳನ್ನು ಮಾನ್ಯ ಮಂತ್ರಿಯವರು ಮನಸ್ಸಿನಲ್ಲಿಟ್ಟುಕೊಂಡು ಅನುಕೂಲ ಮಾಡಬೇಕೆಂದು ಹೇಳುತ್ತೇನೆ. ಖಾಲಿ ಕೈಯಲ್ಲಿ ನನ್ನನ್ನು ಕಳುಹಿಸಬೇಡಿ ಎಂದು ಕೇಳಿಕೊಂಡು ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಮಾತುಗಳನು ಮುಗಿಸುತ್ತೇನೆ.

† ಶ್ರೀಮತಿ ಅನುಸೂಯ ಗಜಾನನ ಶರ್ಮ (ಅಂಕೋಲ).—ಮಾನ್ಯ ಅಧ್ಯಕ್ಷರೇ, ಉತ್ತರ ಕನ್ನಡ ಜಿಲ್ಲೆ ಅಂದರೆ ತೀರಾ ಅಲಕ್ಷಿಸಲ್ಪಟ್ಟ ಜಿಲ್ಲೆ. ಯಾವ ಕ್ಷೇತ್ರದಲ್ಲಿಯೋ ಆಗಲೀ, ಯಾವ ಇಲಾಖೆಯನ್ನು ತೆಗೆದುಕೊಂಡರೂ ನಮ್ಮ ಜಿಲ್ಲೆಯನ್ನು ಅಲಕ್ಷ್ಯ ಮಾಡಿದ್ದಾರೆ. ಪ್ರಾತಿನಿಧ್ಯವಂತೂ ಮೊದಲೇ ಇಲ್ಲ. ಈ ವಿಚಾರದಲ್ಲಿ ಒಂದು ಉದಾಹರಣೆ ಕೊಡುವುದಕ್ಕೆ ಇಷ್ಟಪಡುತ್ತೇನೆ. ಪಶ್ಚಿಮ-ಘಟ್ಟದ ಅಭಿವೃದ್ಧಿ ಯೋಜನೆಯಲ್ಲಿ ರೇಷ್ಮೆ ವ್ಯವಸಾಯಕ್ಕಾಗಿ ೩೦ ಲಕ್ಷ ರೂಪಾಯಿಗಳನ್ನು ತಂದಿದ್ದು ಅದರಲ್ಲಿ ಕೇವಲ ೨೩.೧೦ ಲಕ್ಷ ರೂಪಾಯಿಗಳನ್ನು ಮಾತ್ರ ಬಳಸಿದ್ದಾರೆ. ಬಾಕಿ ಹಣವನ್ನು ಬಳಸಿಲ್ಲ. ಏತಕ್ಕೆ ಹೀಗೆ ಮಾಡಿದ್ದಾರೆಂಬುದು ನನಗೆ ಅರ್ಥವಾಗುತ್ತಿಲ್ಲ. ನಮ್ಮ ಜಿಲ್ಲೆಗೆ ರೇಷ್ಮೆ ಕೃಷಿ ತೀರಾ ಹೊಸದು, ಹೊಸದಾಗಿ ಇದನ್ನು ಅಳವಡಿಸಿಕೊಂಡಿದ್ದು ಈ ಉದ್ಯಮದಲ್ಲಿ ಕೈ ಹಾಕಿದ್ದಾರೆ. ಅವರ ಅನುಭವದಂತೆ ಹೇಳುವುದಾದರೆ, ನಮ್ಮ ಜಿಲ್ಲೆ ಮಟ್ಟಿಗೆ ಇದು ಹೊನ್ನಿನ ಬೆಳೆ ಎನಿಸಿಕೊಂಡಿದೆ. ಇದರಿಂದ ನಮ್ಮ ರೈತರಿಗೆ ಬಹಳ ಉಪಯುಕ್ತವಾಗಿದೆ. ಕೃಷಿ ಪ್ರಧಾನವಾದ ಹಾಗೂ ಅರಣ್ಯದಿಂದ ಕೂಡಿರತಕ್ಕಂಥ

ನಮ್ಮ ಜಿಲ್ಲೆಯಲ್ಲಿ ರೈತರ ಆರ್ಥಿಕ ಪರಿಸ್ಥಿತಿಯನ್ನು ಅಭಿವೃದ್ಧಿ ಮಾಡುವುದಕ್ಕೆ, ರೈತಾಪಿ ಜನರ ಜೀವನಕ್ಕೆ ಹೊಂದುವಂಥ ಈ ರೇಷ್ಮೆ ಉದ್ಯಮದಿಂದ ತುಂಬಾ ಅನಾನುಕೂಲವಾಗಿದೆ. ತೋಟ ಗದ್ದೆಗಳಲ್ಲಿ ಇಡೀ ಕುಟುಂಬ ಕೆಲಸ ಮಾಡುವುದಕ್ಕಾಗುವುದಿಲ್ಲ. ಆದರೆ, ರೇಷ್ಮೆ ಕೃಷಿಯಲ್ಲಿ ಇಡೀ ಕುಟುಂಬದವರೆಲ್ಲರಿಗೂ, ಅಬಾಲವೃದ್ಧರಾದಿಯಾಗಿ ಕೆಲಸ ಒದಗಿಸುತ್ತದೆ. ನಮ್ಮ ಜಿಲ್ಲೆಯ ಹವಾಮಾನ, ನಿಸರ್ಗ ಕೂಡ ರೇಷ್ಮೆ ಬೆಳೆಗೆ ಅನುಕೂಲವಾಗಿದೆ. ಮಾನ್ಯ ಆರೋಗ್ಯ ಮಂತ್ರಿಯವರಾದ ಅಬ್ದುಲ್ ಸಮದ್‌ರವರು ನಮ್ಮ ಜಿಲ್ಲೆಗೆ ಬಂದಾಗ, ರಸ್ತೆ ಪಕ್ಕದ ಅಜುಬಾಜಿನ ಜಮೀನು ನೋಡಿ ತುಂಬ ವಿಷಾದ ವ್ಯಕ್ತಪಡಿಸಿ, ಈ ಜಾಗದಲ್ಲಿ ನೀವು ಏತಕ್ಕೆ ಹಿಪ್ಪನೇರಳೆ ಸೊಪ್ಪನ್ನು ಬೆಳೆದು, ರೇಷ್ಮೆ ಕೈಗಾರಿಕೆಯನ್ನು ಅಭಿವೃದ್ಧಿ ಪಡಿಸಿಕೊಳ್ಳಬಾರದು ಎಂದು ಹೇಳಿದರು. ಇವತ್ತು ಎಷ್ಟೋ ಜನರು ಅದೇ ರೀತಿ ರೇಷ್ಮೆ ಕೃಷಿಯನ್ನು ಅಭಿವೃದ್ಧಿ ಪಡಿಸಿಕೊಳ್ಳುತ್ತಿದ್ದಾರೆ. ವಿಶ್ವಬ್ಯಾಂಕಿನ ಸಹಾಯದಿಂದ ಎಷ್ಟೋ ಜಿಲ್ಲೆಗಳಲ್ಲಿ ರೇಷ್ಮೆ ಅಭಿವೃದ್ಧಿಯನ್ನು ಮಾಡಿದ್ದಾರೆ. ನಮ್ಮ ಜಿಲ್ಲೆಗೆ ಮಾತ್ರ ವಿಶ್ವ ಬ್ಯಾಂಕಿನ ಸಹಾಯ ಯೋಜನೆಯನ್ನು ಅಳವಡಿಸಿಲ್ಲ. ಇದು ನಮ್ಮ ದುರಾದೃಷ್ಟವೆಂದು ಕಾಣುತ್ತದೆ. ನಮ್ಮಲ್ಲಿ ಒತ್ತಿ ಹೇಳುವಂಥ ಜನ, ಸರ್ಕಾರದ ಕಿವಿ ಮುಟ್ಟಿಸುವಂಥ ಜನ ಇಲ್ಲದೇ ಇರುವುದರಿಂದ ಹೀಗೆ ಮಾಡಿದ್ದಾರೆಂದು ಕಾಣುತ್ತದೆ. ನಮ್ಮ ಜಿಲ್ಲೆ ತುಂಬ ಬಡ ರೈತರು ಬಡವರು ಇರತಕ್ಕ ಜಿಲ್ಲೆ. ಇಂಥ ಜಿಲ್ಲೆಗೆ ವಿಶ್ವ ಬ್ಯಾಂಕಿನ ಹಣವನ್ನು ಏತಕ್ಕೆ ಒಳಪಡಿಸಲಿಲ್ಲ ಎನ್ನುವುದೇ ಅರ್ಥವಾಗುತ್ತಿಲ್ಲ. ಈಗಲಾದರೂ ವಿಶ್ವ ಬ್ಯಾಂಕಿನ ಸಹಾಯವನ್ನು ನಮ್ಮ ಜಿಲ್ಲೆಗೆ ಒಳಪಡಿಸಬೇಕೆಂದು ಒತ್ತಾಯ ಮಾಡುತ್ತೇನೆ. ರೇಷ್ಮೆ ಅಭಿವೃದ್ಧಿಗೆ ಸಂಬಂಧಪಟ್ಟಂತೆ ಇಡೀ ಜಿಲ್ಲೆಯನ್ನು ಸರ್ವೆ ಮಾಡಿಸಬೇಕು. ಪ್ರಾಯೋಗಿಕವಾಗಿ ಹಿಪ್ಪನೇರಳೆ ಸೊಪ್ಪನ್ನು ಎಲ್ಲೆಲ್ಲಿ ಬೆಳೆಯುವುದಕ್ಕೆ ಸಾಧ್ಯ ಎಂಬುದನ್ನು ಕಂಡುಹಿಡಿಯಬೇಕು. ಕೆಲವು ಭಾಗಗಳಲ್ಲಿ ಬೆಳೆಯುವಂಥ ರೇಷ್ಮೆಯನ್ನು ಮಾರಾಟ ಮಾಡುವುದಕ್ಕೆ ನಮ್ಮಲ್ಲಿ ಸರಿಯಾದ ವ್ಯವಸ್ಥೆ ಇಲ್ಲ. ಹುಬ್ಬಳ್ಳಿಯಲ್ಲಿರತಕ್ಕ ಮಾರುಕಟ್ಟೆಗೆ ಹೋದರೆ ಅಲ್ಲಿ ಸರಿಯಾದ ಬೆಲೆ ಸಿಗುವುದಿಲ್ಲ. ಬೇರೆ ಕಡೆ ೭೦ ರೂಪಾಯಿ ಇದ್ದರೆ, ಅಲ್ಲಿ ೩೫-೪೦ ರೂಪಾಯಿಗಳಿಗೆ ತೆಗೆದುಕೊಳ್ಳುತ್ತಾರೆ. ಸರಿಯಾದ ಬೆಲೆಯನ್ನು ಪಡೆಯಬೇಕಾದರೆ ರಾಮನಗರಕ್ಕೆ ಅಥವಾ ಬೆಂಗಳೂರಿಗೆ ಬರಬೇಕು. ಇದರಿಂದ ತುಂಬಾ ಖರ್ಚು ಬರುವುದಲ್ಲದೆ, ರೈತನಿಗೆ ಕಷ್ಟ ಕೂಡ ಆಗುತ್ತದೆ. ಆದಕ್ಕೋಸ್ಕರ ನಾನು ಸರ್ಕಾರದಲ್ಲಿ ಒತ್ತಾಯ ಮಾಡುವುದೇನೆಂದರೆ, ಮೊಟ್ಟ ಮೊದಲಿಗೆ ಸರ್ಕಾರದ ವತಿಯಿಂದಲೇ ಒಂದು ಮಾರುಕಟ್ಟೆಯನ್ನು ಮಾಡಿಕೊಡಬೇಕೆಂದು ಹೇಳುತ್ತೇನೆ. ನಮ್ಮ ಭಾಗದಲ್ಲಿ ಸಿರಸಿ ಬಹಳ ಪ್ರಮುಖವಾದ ಸ್ಥಳವಾಗಿದೆ.

ಇನ್ನು ಈ ರೇಷ್ಮೆ ಕೃಷಿಯಲ್ಲಿ ಬಹಳ ಜನ ಬಡವರು ಆಸಕ್ತರಾಗಿದ್ದಾರೆ. ನಮ್ಮ ಭಾಗದಲ್ಲಿ ಒಂದು ರೇರಿಂಗ್ ಪ್ರಾಜೆಕ್ಟ್ ಸೆಂಟರ್ ಕೂಡ ಮಾಡಿ ರೈತನಿಗೆ ಅನುಕೂಲ ಮಾಡಬೇಕೆಂದು ಹೇಳುತ್ತೇನೆ. ಎಲ್ಲಕ್ಕಿಂಥ ಮುಖ್ಯವಾಗಿ ಈ ಯೋಜನೆ ಬಗ್ಗೆ ಪ್ರಚಾರ ಮಾಡುವ ಕಾರ್ಯವನ್ನು ಪ್ರಾರಂಭ ಮಾಡಬೇಕು. ನಾನು ಈಗಾಗಲೇ ಹೇಳಿದಂತೆ ಆಧುನಿಕವಾಗಿ ವೈಜ್ಞಾನಿಕವಾಗಿ ಹಾಗೂ ತಾಂತ್ರಿಕವಾಗಿ ಮತ್ತು ದೊಡ್ಡ ಪ್ರಮಾಣದಲ್ಲಿ ರೇಷ್ಮೆ ಬೆಳೆ ಬೆಳೆಯುವಂತೆ ಸರ್ವೆ ಮಾಡಿಸುವುದರ ಜೊತೆಗೆ ರೈತರಿಗೆ ಸಬ್ಸಿಡಿ ಮತ್ತು ಸಹಾಯ ಕೊಡುವುದರ ಮೂಲಕ ರೈತರಿಗೆ ಹೆಚ್ಚು ಹೆಚ್ಚು ಆಸಕ್ತಿ ಹುಟ್ಟಿಸುವಂತೆ ಮಾಡಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಇವೊತ್ತು ಈ ಒಂದು ರೇಷ್ಮೆ ಅಭಿವೃದ್ಧಿ ಒಳ್ಳೆಯ ಪ್ರಗತಿಯಾಗಬೇಕೆಂದರೆ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕ್ ಹೇಗೆ ಇದೆ. ಅದೇ ತರಹ ಈ ರೇಷ್ಮೆ ಅಭಿವೃದ್ಧಿಗೂ ಕೂಡ ಬ್ಯಾಂಕ್ ಸೌಲಭ್ಯ ಮಾಡಿಕೊಟ್ಟರೆ ಬಡ ಜನರಿಗೆ ಹೆಚ್ಚಿನ ಅನುಕೂಲ ಆಗಲಿಕ್ಕೆ ಸಾಧ್ಯತೆ ಇದೆ. ಮಲೆನಾಡಿನಲ್ಲಿ ರಿಸರ್ಚ್ ಸೆಂಟರ್ ಮಾಡಿ ಅದರ ಮುಖಾಂತರ ಹೆಚ್ಚಿನ ಸಂಶೋಧನೆ ನಡೆಸಿ ಬಡ ಜನರಿಗೆ ತೊಂದರೆಯಿಲ್ಲದಂತೆ ಹೆಚ್ಚಿನ ಸಹಾಯವಾಗುವಂತೆ ಮಾಡಿದರೆ ಒಳ್ಳೆಯದಾಗುತ್ತದೆ, ಇನ್ನು ನಮ್ಮ ಜಿಲ್ಲೆಯನ್ನು ಇಂಡಸ್ಟ್ರಿಯಲ್ ಬ್ಯಾಕ್‌ವರ್ಡ್ ಅಂಥ ಏತಕ್ಕೆ ಸೇರಿಸಿಲ್ಲ ಈ ಬಗ್ಗೆ ನನಗೆ ಎಷ್ಟೋ ಕಾಲದಿಂದಲೂ ಬಿಡಿಸಲಾರದ ಸಮಸ್ಯೆಯಾಗಿದೆ. ಈಗ ನಮ್ಮ ಜಿಲ್ಲೆಯಲ್ಲಿ ಒಟ್ಟು ಎರಡು ಮೂರು ಉದ್ದಿಮೆಗಳು ಇರಬಹುದು. ಒಂದು ದಾಂಡೇಲಿಯಲ್ಲಿ ಇದೆ. ಮತ್ತೊಂದು ಕಾಸ್ಟಿಕ್ ಸೋಡಾ ಫ್ಯಾಕ್ಟರಿ ಇದೆ. ನಮ್ಮ ಜಿಲ್ಲೆಯಲ್ಲಿ ಹೊರಗಿನವರು ಬಂದು ಉದ್ದಿಮೆ ಮಾಡುತ್ತಿದ್ದಾರೆ. ಇದು ಯಾವ ರೀತಿ ಆಗಿದೆ ಎಂದರೆ ನಮ್ಮ ಜಿಲ್ಲೆಯವರಿಗೆ ಕಟ್ಟಿಗೆ, ಗಳ ಸಿಕ್ಕಬಾರದು ಎನ್ನುವ ದೃಷ್ಟಿಯಿಂದ ಮಾಡಿದ ಹಾಗೆ ಇದೆ, ಅವರು ಅಗ್ಗದ ಬೆಲೆಯಲ್ಲಿ ಕಟ್ಟಿಗೆ ಗಳವನ್ನು ತೆಗೆದುಕೊಂಡು ಉದ್ದಿಮೆ ಮಾಡಿ ಅದರ ಲಾಭವನ್ನು ನಮ್ಮ ಸರ್ಕಾರಕ್ಕೆ ಅವರು ಕೊಡುವುದಿಲ್ಲ, ರಾಜಾಸ್ಥಾನಕ್ಕೋ, ಬೊಂಬಾಯಿಗೋ ತೆಗೆದುಕೊಂಡು ಹೋಗು

ತ್ತಿದ್ದಾರೆ. ನಮ್ಮ ಜಿಲ್ಲೆಯವರಿಗೆ ಯಾವುದೇ ಉದ್ದಿಮೆ ಇಲ್ಲ, ಸರ್ಕಾರದಿಂದಲೂ ಕೂಡ ನಮ್ಮ ಕಡೆ ದೊಡ್ಡ ದೊಡ್ಡ ಉದ್ದಿಮೆಗಳನ್ನು ಮಾಡುವುದಿಲ್ಲ. ಈ ರೀತಿ ಇರುವಾಗ ನಮ್ಮ ಜಿಲ್ಲೆಯನ್ನು ಏತಕ್ಕೆ ಇಂಡಸ್ಟ್ರಿಯಲ್ ಬ್ಯಾಕ್‌ವರ್ಡ್ ಏರಿಯಾ ಅಂಥ ಮಾಡಲಿಲ್ಲ. ಇಂಡಸ್ಟ್ರಿಯಲ್ ಬ್ಯಾಕ್‌ವರ್ಡ್ ಏರಿಯಾ ಅಂಥ ಮಾಡಿದ್ದರೆ ನಮ್ಮ ಜಿಲ್ಲೆಯಲ್ಲಿರತಕ್ಕವರಿಗೆ ಎಲ್ಲಾ ತರಹದ ಅವಕಾಶಗಳು ಸಿಕ್ಕುತ್ತಿತ್ತು, ಆ ಅವಕಾಶಗಳನ್ನು ನಮ್ಮ ಜಿಲ್ಲೆಯಿಂದ ಏತಕ್ಕೆ ಹೊರತುಪಡಿಸಿದ್ದೀರಾ? ಇವೊತ್ತು ಉತ್ತರ ಕನ್ನಡ ಜಿಲ್ಲೆಯಲ್ಲಿ ಎಷ್ಟು ಇಂಡಸ್ಟ್ರಿಗಳು ಇವೆ ಅದರ ಬಗ್ಗೆ ಮಾನ್ಯ ಮಂತ್ರಿಗಳು ವಿಚಾರ ಮಾಡಬೇಕು. ನಮ್ಮ ಜಿಲ್ಲೆಯನ್ನು ಇಂಡಸ್ಟ್ರಿಯಲ್ ಬ್ಯಾಕ್‌ವರ್ಡ್ ಅಂಥ ಮಾಡಿ ನಮ್ಮ ಜಿಲ್ಲೆಯಲ್ಲಿ ಇಂಡಸ್ಟ್ರಿ ಮಾಡುವವರಿಗೆ ಸ್ವಲ್ಪ ಪ್ರೋತ್ಸಾಹವನ್ನು ಕೊಡಬೇಕು. ನಮ್ಮ ಜಿಲ್ಲೆಯಲ್ಲಿ ಈ ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್‌ನಲ್ಲಿ ಏನು ಬರುತ್ತವೆ ರೈತರಿಗೆ ಹೊಂದಿಕೊಳ್ಳುವಂತಾದ್ದು ಅವನ್ನು ಮಾಡಬೇಕು ರೈತರಿಗೆ ಅನುಕೂಲವಾಗುವಂಥ ರಾ ಮೆಟೀರಿಯಲ್ಸ್ ನಮ್ಮಲ್ಲಿ ಬೇಕಾದಷ್ಟು ಸಿಕ್ಕುತ್ತದೆ ಅವರ ಬಿಡುವಿನ ವೇಳೆಯಲ್ಲಿ ಸದುಪಯೋಗ ಮಾಡಿಕೊಳ್ಳಲಿಕ್ಕೆ ಅವರಿಗೆ ಹೊಂದಿಕೊಳ್ಳುವಂಥ ಇಂಡಸ್ಟ್ರಿಗಳನ್ನು ಮಾಡಬೇಕು ಇಂಡಸ್ಟ್ರಿಗಳನ್ನು ಯಾವ ರೀತಿ ಮಾಡಬೇಕೆಂಬ ಬಗ್ಗೆ ಒಂದು ಸರ್ವೆ ಮಾಡಿಸಿ ಆ ದೃಷ್ಟಿಯಿಂದಲಾದರೂ ನಮ್ಮ ಜಿಲ್ಲೆಯ ಬಡ ಜನರಿಗೆ ಸಹಾಯ ಸಿಕ್ಕುವಂತೆ ಮಾಡಬೇಕು. ಇನ್ನು ನಮ್ಮ ಜಿಲ್ಲೆಯಲ್ಲಿ ಶಿಲೆ ಕಲ್ಲಿನಲ್ಲಿ ಕೆಲಸ ಮಾಡತಕ್ಕ ಶಿಲ್ಪಿಗಳಿದ್ದಾರೆ. ಕಟ್ಟಿಗೆಯ ಮೇಲೆ ಕೆತ್ತನೆ ಕೆಲಸ ಮಾಡತಕ್ಕಂಥವರು ಇದ್ದಾರೆ. ಬೆತ್ತ ಮತ್ತು ಬಿದಿರಿನ ಕೆಲಸ ಮಾಡತಕ್ಕಂಥವರು ಇದ್ದಾರೆ ಅವರುಗಳೆಲ್ಲಾ ಅವರವರ ವಂಶದ ಕಸುಬನ್ನು ಮಾಡಿಕೊಂಡು ಬರುತ್ತಿದ್ದಾರೆ. ಆದುದರಿಂದ ಅವರ ಬಗ್ಗೆ ಎಲ್ಲಾ ಸರ್ವೆ ನಡಸಿ ಅವರಿಗೆ ಬೇಕಾದಂಥ ಗಂಧದ ಕಟ್ಟಿಗೆ, ಬಿದಿರು ಇತ್ಯಾದಿಗಳನ್ನು ಒದಗಿಸಬೇಕು. ಅದೇ ರೀತಿ ಬೆತ್ತದ ಕೆಲಸ ಇವರುಗಳಿಗೆಲ್ಲಾ ಅನುಕೂಲ ಮಾಡಿಕೊಡಬೇಕು. ಇದಕ್ಕೆಲ್ಲಾ ಕ್ರಾಫ್ಟ್ ಕಾಂಪ್ಲೆಕ್ಸ್ ಮಾಡಿದರೆ ಅನುಕೂಲವಾಗುತ್ತದೆ ಇನ್ನು ನಮ್ಮ ಅಡವಿಯಲ್ಲಿ ಬೇಕಾದಷ್ಟು ಜೇನು ಇರುವುದರಿಂದ, ಎಷ್ಟೋ ಜನರು ಈ ಜೇನಿನ ಉದ್ಯೋಗದಲ್ಲಿ ತೊಡಗುತ್ತಾರೆ. ಈ ಕೆಲಸದಲ್ಲಿ ನಮ್ಮ ಜನರಿಗೆ ಸ್ವಲ್ಪ ಪ್ರೋತ್ಸಾಹ ಕೊಟ್ಟು ಹಣದ ಸಹಾಯ ಕೊಟ್ಟು. ಈ ಒಂದು ಉದ್ಯೋಗ ಬೆಳದು ಬರಲಿಕ್ಕೆ ಅವಕಾಶ ಮಾಡಿಕೊಡಬೇಕು. ಇನ್ನು ನಮ್ಮ ಜಿಲ್ಲೆಯಲ್ಲಿ ತೆಂಗಿನ ನಾರು, ಅಡಿಕೆ ಸಿಪ್ಪೆ ಬೇಕಾದಷ್ಟು ಸಿಕ್ಕುತ್ತದೆ. ಆದರಿಂದ ನಮ್ಮಲ್ಲಿ ಒಂದು ಕಾಯರ್ ಕಾಂಪ್ಲೆಕ್ಸ್ ಮಾಡಬೇಕು. ಇನ್ನು ಪಶ್ಚಿಮ ಘಟ್ಟದ ಅಭಿವೃದ್ಧಿಯಲ್ಲಿ ಹೈನುಗಾರಿಕೆ ಬಗ್ಗೆ ಹೇಳಿದ್ದಾರೆ, ನಮ್ಮ ಜಿಲ್ಲೆಯಲ್ಲಿ ಸರಿಯಾದಂಥ ಹುಲ್ಲುಗಾವಲಿಗೆ ಅನುಕೂಲ ಮಾಡಿಕೊಟ್ಟು ಹೈನುಗಾರಿಕೆ ಮಾಡುವುದಕ್ಕೆ ಅವಕಾಶ ಇದೆ ಅದನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ನಮ್ಮಲ್ಲಿ ಚರ್ಮದ ಉದ್ಯೋಗದಲ್ಲಿ ತರಬೇತಿಯಾದವರು ಇದ್ದಾರೆ. ಅವರಿಗೂ ಕೂಡ ಹೆಚ್ಚಿನ ಅವಕಾಶ ಸಿಕ್ಕುವಂತೆ ಮಾಡಬೇಕೆಂದು ಅಧ್ಯಕ್ಷರ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ನಮ್ಮ ಜಿಲ್ಲೆಯಲ್ಲಿ ಆಲಕ್ಕಿ ವಕ್ಕಲು ಸಮಾಜ ಅಂಥ ಬಡ ಜಾತಿ ಇದೆ. ಆ ಜಾತಿಯಲ್ಲಿ ವಿದ್ಯಾವಂತರು ಬಹಳ ಕಡಿಮೆ ಪದವೀಧರ ಹೆಣ್ಣು ಮಕ್ಕಳು ಅಂದರೆ ಒಬ್ಬಿಬ್ಬರು ಇರಬಹುದು. ಅದು ಗೊತ್ತಿಲ್ಲ. ಇದು ಎರಡು ಮೂರು ತಾಲ್ಲೂಕಿನಲ್ಲೇ ಸೀಮಿತವಾಗಿರತಕ್ಕ ಜಾತಿ. ಇವರನ್ನು ತೀರಾ ದಡ್ಡ ಜನ ಅಂದರೆ ತಪ್ಪಾಗಲಾರದು ಮೊದಲಾಗಿ ನಾವು ಆದಿವಾಸಿಗಳು, ಮೂಲ ನಿವಾಸಿಗಳು ಎಂದು ಏನು ಹೇಳುತ್ತೇವೆ ಆ ರೀತಿಯಲ್ಲಿ ಈ ಜನ ಜೀವನ ನಡೆಸಿಕೊಂಡಿರುತ್ತಾರೆ. ಅವರನ್ನು ಷೆಡ್ಯೂಲ್ ಟ್ರೈಬ್ಸ್‌ನಲ್ಲಿ ಸೇರಿಸಿ ಆ ಜನರ ಉದ್ಧಾರಕ್ಕೆ ಸಹಾಯ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಯಲ್ಲಾಪುರ, ಹಳಿಯಾಳ ತಾಲ್ಲೂಕಿನಲ್ಲಿ ಕುಣಬಿ, ಸಿದ್ದಿ, ಜನರಿದ್ದಾರೆ ಇವರು ಒಂದು ರೀತಿಯ ಮರಾಠಿ ಜನ ಇವರು ಒಂದು ತರಹ ಮಾತನ್ನು ಮಾತನಾಡುತ್ತಾರೆ. ಇವರಿಗೆ ಉದ್ಯೋಗ ಮಾಡಿಕೊಂಡು ಜೀವನ ಮಾಡಲಿಕ್ಕೆ ತಿಳಿಯುವುದಿಲ್ಲ. ತೀರಾ ಮೂಲ ನಿವಾಸಿಗಳಂತೆ ಇದ್ದಾರೆ. ಅವರನ್ನು ಷೆಡ್ಯೂಲ್ ಟ್ರೈಬ್‌ನಲ್ಲಿ ಸೇರಿಸಿ, ಅವರು ಮುಂದೆ ಬರಲಿಕ್ಕೆ ಹೆಚ್ಚಿನ ಅವಕಾಶ ಮಾಡಿಕೊಡಬೇಕು. ಆ ಜಾತಿಯನ್ನು ಉದ್ಧಾರ ಮಾಡಲಿಕ್ಕೆ ಸರ್ಕಾರ ಹೆಚ್ಚಿನ ಸಹಾಯ ಕೊಡಬೇಕೆಂದು ಈ ಪ್ರಸಂಗದಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ಉತ್ತರ ಕನ್ನಡ ಜಿಲ್ಲೆಯನ್ನು ಇಂಡಸ್ಟ್ರಿಯಲ್ ಬ್ಯಾಕ್‌ವರ್ಡ್ ಜಿಲ್ಲೆ ಅಂಥ ಆದಷ್ಟು ಬೇಗ ಮಾಡಿಕೊಡಬೇಕು. ಇನ್ನು ರೇಷ್ಮೆ ಅಭಿವೃದ್ಧಿ ಅಥವಾ ರೇಷ್ಮೆ ವ್ಯವಸಾಯಕ್ಕೆ ನಮ್ಮ ಜಿಲ್ಲೆಯಲ್ಲಿ ಹೆಚ್ಚಿನ ಅವಕಾಶವನ್ನು ಮಾಡಿಕೊಡಬೇಕು, ಹಣ ಲ್ಯಾಪ್ಸ್ ಆಗದಂತೆ ಇನ್ನು ಮುಂದೆ ನೋಡಿಕೊಳ್ಳಬೇಕು. ಇನ್ನು ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆಯಲ್ಲಿ ನಮ್ಮ ಜಿಲ್ಲೆಗೆ ಹೆಚ್ಚಿನ ಲಾಭವಾಗುವಂಥ

ಪರಿಸ್ಥಿತಿ ಇದೆ. ಅದನ್ನು ಕಳೆದುಕೊಳ್ಳಬಾರದು. ಅದರ ಸದುಪಯೋಗ ನಮ್ಮ ಜಿಲ್ಲೆಗೆ ಆಗುವಂಥ ಮಾಡಿಕೊಡಬೇಕೆಂದು ಮಾನ್ಯ ಸಚಿವರಲ್ಲಿ, ಅಧ್ಯಕ್ಷರ ಮುಖಾಂತರ ಕೇಳಿಕೊಳ್ಳುತ್ತಾ ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

೩–೩೦ ಪಿ.ಎಂ.

† ಶ್ರೀ ಎಸ್.ಎಂ. ಶಿರಾಳಿ ಚಂದ್ರಶೇಖರ್ (ಹೊಸನಗರ).—ಸನ್ಮಾನ್ಯ ಅಧ್ಯಕ್ಷರೆ, ಸರ್ಕಾರ ಸಭೆಯ ಮುಂದೆ ತಂದಿರತಕ್ಕ ಎಲ್ಲ ಬೇಡಿಕೆಗಳನ್ನೂ ನಾನು ಸಂಪೂರ್ಣವಾಗಿ ಬೆಂಬಲಿಸಿ ಕೆಲವು ಸಲಹೆಗಳನ್ನು ಕೊಡುವುದಕ್ಕೆ ಬಯಸುತ್ತೇನೆ.

ಕಳೆದ ಶಾಸನ ಸಭೆಯಲ್ಲಿ ಮಾತನಾಡುತ್ತಾ ಹೇಳಿದೆ, ಕೈಗಾರಿಕೆಗಳು ತಮ್ಮ ವಾರ್ಷಿಕ ವರದಿಯನ್ನು ಏನು ಕೊಡಬೇಕಾಗಿತ್ತು ಅದರಲ್ಲಿ ಕೆಲವು ಕೈಗಾರಿಕೆಗಳು ಕೊಡಲಿಲ್ಲ. ೯ ಅಥವಾ ೧೦ ವರದಿಗಳನ್ನು ಕೊಟ್ಟಿದ್ದರೂ ಅವರು ಇದುವರೆಗೂ ಕೊಟ್ಟಿಲ್ಲ. ಸ್ವಾಮಿ, ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ, ಅವರ ದೃಷ್ಟಿಯಲ್ಲಿ ನಾವು ಬಹಳ ಕೆಳಮಟ್ಟದಲ್ಲಿದ್ದೇವೆ. ಅವರು ಈ ಶಾಸನ ಸಭೆಯನ್ನು ಇಷ್ಟು ತುಚ್ಛವಾಗಿ ಕಾಣುವುದಾದರೆ ನನಗೆ ಬಹಳ ಖೇದವಾಗುತ್ತದೆ. ಸಾರ್ವಜನಿಕ ಸ್ವಾಯತ್ತತೆಗೆ ಒಳಪಟ್ಟ ಕೈಗಾರಿಕೆಗಳಿಗೆ ನಿಮ್ಮ ಅಧಿಕಾರಿಗಳನ್ನು ಎಲ್ಲಿಯವರೆಗೆ ನೇಮಕ ಮಾಡುತ್ತೀರಿ ಅಲ್ಲಿಯವರೆಗೂ ಅವು ಏಳಿಗೆಯಾಗುವುದಿಲ್ಲ. Not even one report. How to contribute? I really fail to understand. This should be stopped. Put an end to the assault of the Legislature. They have to submit the report. ಕಳೆದ ಸಾರಿ ನಾವು ಜೂನ್ ತಿಂಗಳಲ್ಲಿ ಶಾಸನ ಸಭೆಯನ್ನು ಕರೆದಿದ್ದೆವು. ಆಗ ಈ ಕೈಗಾರಿಕಾ ಬೇಡಿಕೆ ಬಂದಿತ್ತು. ಆದರೆ ಈ ಸಾರಿ ಜುಲೈ ತಿಂಗಳಲ್ಲಿ ಶಾಸನ ಸಭೆಯನ್ನು ಕರೆದಿದ್ದೇವೆ. ಆದರೂ ಏತಕ್ಕೆ ಅವರು ವಾರ್ಷಿಕ ವರದಿಗಳನ್ನು ಕಳುಹಿಸಿಕೊಡುವುದಕ್ಕೆ ಸಾಧ್ಯವಾಗಿಲ್ಲ? ಕೈಗಾರಿಕಾ ಕಾರ್ಯದರ್ಶಿಯವರ ಜೊತೆ ಮಾತನಾಡಿ ವರದಿಗಳನ್ನು ತರಿಸಿಕೊಡಬೇಕೆಂದು ನಾವು ಹೇಳಿದ್ದರೂ ಇದುವರೆಗೂ ಅದು ಬಂದಿಲ್ಲ. ಅವತ್ತಿನ ದಿವಸ ಅವರು ಏನು ಹೇಳಿದರು ಎಂದರೆ ಇನ್ನು ಕೆಲವೇ ದಿವಸಗಳಲ್ಲಿ ಈ ವರದಿಯನ್ನು ಖಂಡಿತವಾಗಿಯೂ ಕಳುಹಿಸಿಕೊಡುವ ವ್ಯವಸ್ಥೆ ಮಾಡುತ್ತೇನೆಂದು ಹೇಳಿದ್ದರು. ಆದರೆ ಕಳುಹಿಸಿಕೊಡಲಿಲ್ಲ. ಇವರು ಏತಕ್ಕೆ ಹೀಗೆ ಮಾಡುತ್ತಾರೆಂದು ನಾನು ಊಹಿಸಿಕೊಳ್ಳುವುದಾದರೆ, ನಾವು ಮಾಡಿರತಕ್ಕ ಲೋಪದೋಷಗಳನ್ನು ಶಾಸನಸಭೆಯಲ್ಲಿ ಎಲ್ಲಿ ಎತ್ತಿ ತೋರಿಸಿಬಿಡುತ್ತಾರೋ ಎಂಬ ಭಯದಿಂದ ಅವರು ಈ ರೀತಿ ಮಾಡುತ್ತಿರಬಹುದೆಂದು ಅನಿಸುತ್ತದೆ. ಸರ್ಕಾರದವರು ಕೈಗಾರಿಕಾ ಕ್ಷೇತ್ರದಲ್ಲಿ ಮಾಡಿರತಕ್ಕ ಸಾಧನೆಗಳನ್ನು, ಅದರ ವಿಹಂಗಮ ನೋಟವನ್ನು ನಮಗೆ ಕೊಟ್ಟಿರತಕ್ಕ ಪುಸ್ತಕದಲ್ಲಿ ತೋರಿಸಿದ್ದಾರೆ. ನಾನು ಇದಕ್ಕೆ ಶಹಭಾಸ್‌ಗಿರಿಯನ್ನು ಕೊಡುತ್ತೇನೆ. ಸರ್ಕಾರದ ಸಾಧನೆ ಬಹಳಷ್ಟು ಆಗಿದೆ ಎಂಬುದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಹಂತಹಂತವಾಗಿ ಕೋಟ್ಯಾಂತರ ರೂ.ಗಳ ಯೋಜನೆಗಳನ್ನು ಒಂದೊಂದು ಸಂಸ್ಥೆಯಲ್ಲಿ ಹಾಕಿರುತ್ತಾರೆ. ಅವರ ಕಾರ್ಯಸಾಧನೆ ಏನು ಎಂಬುದನ್ನು ನಾವು ತಿಳಿದುಕೊಳ್ಳುವುದಕ್ಕೆ ಸಾಧ್ಯವಿಲ್ಲ ಎಂಬುದನ್ನು ನಾನು ಇವತ್ತು ಹೇಳಬೇಕಾಗುತ್ತದೆ. ಇದರಲ್ಲಿ ಅಖಿಲ ಭಾರತ ಮಟ್ಟದಲ್ಲಿ ಒಂದು ಕೈಗಾರಿಕಾ ನೀತಿ ಇರಬೇಕಾಗುತ್ತದೆ. ಆ ನೀತಿ ಇದ್ದರೆ ಮಾತ್ರ ನಾವು ಮುಂದುವರಿಯುವುದಕ್ಕೆ ಸಾಧ್ಯ. ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ೨ ವರ್ಷದ ಜನತಾ ಸರ್ಕಾರ ಇದ್ದಾಗ ಈ ಕೈಗಾರಿಕಾ ನೀತಿಯನ್ನು ಬುಡಮೇಲು ಮಾಡಿತು. ಪಂಡಿತ್ ಜವಾಹರ್‌ಲಾಲ್ ನೆಹರೂರವರು ಬೃಹತ್ ಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕೆಂದು ಒಂದು ನೀತಿಯನ್ನು ಹಾಕಿಕೊಂಡಿದ್ದರು. ಆದರೆ ಅವರು ಅದನ್ನು ಕೈಬಿಟ್ಟು ಗ್ರಾಮ ಕೈಗಾರಿಕೆಗಳಿಗೆ ಹಣ ಕೊಡಬೇಕೆಂಬ ನೀತಿಯನ್ನು ಹಾಕಿಕೊಂಡು ಅನೇಕ ದೇಶ ವಿದೇಶಗಳಿಂದ ಬರುತ್ತಿದ್ದ ಬಂಡವಾಳವನ್ನು ಅವರು ಸ್ಥಗಿತ ಮಾಡಿದರು. ಇದರಿಂದಾಗಿ ಇಡೀ ದೇಶದ ಕೈಗಾರಿಕಾ ನೀತಿ ಕುಂಠಿತವಾಯಿತು. ನಾನಾದರೂ ಹೇಳುತ್ತೇನೆ, ಯಾವುದೇ ಪಕ್ಷದ ಸರ್ಕಾರವೇ ಬರಲಿ ಕೈಗಾರಿಕಾ ನೀತಿ ಏನಿದೆ ಅದು ಬೈಬಲ್, ಖುರಾನ್, ಭಗವದ್ಗೀತೆ ಇತ್ಯಾದಿಗಳ ರೀತಿಯಲ್ಲಿ ಇರಬೇಕು. ಅದು ಬದಲಾವಣೆ ಆಗಬಾರದು. ಹಾಗಿದ್ದರೆ ಮಾತ್ರ ರಾಜ್ಯದ, ರಾಷ್ಟ್ರದ ಕೈಗಾರಿಕಾ ಬೆಳವಣಿಗೆ ಹಂತ ಹಂತವಾಗಿ ಆಗುವುದಕ್ಕೆ ಸಾಧ್ಯವಿದೆ.

ಮಾನ್ಯ ಅಧ್ಯಕ್ಷರೆ, ನಾನು ಇವತ್ತು ಒಂದೆರಡು ಗುರುತರವಾದ ಆಪಾದನೆಗಳನ್ನು ಮಾಡಬಯಸುತ್ತೇನೆ. ಕರ್ನಾಟಕ ಸ್ಟೇಟ್ ಫೈನಾನ್ಸ್ ಕಾರ್ಪೊರೇಷನ್ ಎಂದು ಒಂದು ಸಂಸ್ಥೆ ಇದೆ. ಈ

ಕಾರ್ಪೊರೇಷನ್‌ನವರು ಸುಮಾರು ೬೦ ಲಕ್ಷ ದೇಣಿಗೆಯನ್ನು ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಯವರಿಗೆ ಕೊಟ್ಟಿದ್ದಾರೆ. ಈ ರೀತಿ ಕೊಡುವುದನ್ನು ಬೇಡವೆಂದು ನಾನು ಹೇಳುವುದಿಲ್ಲ. ನಮ್ಮ ಸರ್ಕಾರದಿಂದ ೬೦ ಲಕ್ಷ ರೂ.ಗಳ ದೇಣಿಗೆಯನ್ನು ತೆಗೆದುಕೊಂಡ ಮೇಲೆ ಈ ಪತ್ರಿಕೆಯವರು ಸರ್ಕಾರದ ಪರವಾಗಿ ಒಂದು ಒಳ್ಳೆಯ ಮಾತನ್ನೂ ಬರೆಯಬೇಡವೇ ? ನನಗೆ ಪ್ರಜಾವಾಣಿ ಪತ್ರಿಕೆಯ ಮೇಲೆ ತುಂಬಾ ಅಭಿಮಾನ ಇದೆ. ಏಕೆಂದರೆ ಹಿಂದೆ ತಾಯಿನಾಡು ಎಂದು ಒಂದು ಪತ್ರಿಕೆ ಬರುತ್ತಿತ್ತು. ಅದು ನಿಂತುಹೋದ ಮೇಲೆ ನಾನು ಈ ಪ್ರಜಾವಾಣಿ ಪತ್ರಿಕೆಯನ್ನು ಕೊಂಡುಕೊಳ್ಳು ವುದಕ್ಕೆ ಪ್ರಾರಂಭ ಮಾಡಿದೆ. ಬೆಳಿಗ್ಗೆ ಎದ್ದರೆ ಮೊದಲು ನಾನು ಓದುವುದೇ ಪ್ರಜಾವಾಣಿ ಪತ್ರಿಕೆ. ಇವತ್ತಿಗೂ ನಾನು ಅದನ್ನೇ ಓದುವುದು. ಒಂದಾನೊಂದು ಕಾಲದಲ್ಲಿ ಜನತಾ ಪತ್ರಿಕೆಯಾಗಿದ್ದ ಪ್ರಜಾವಾಣಿಯು ಇವತ್ತು ಒಬ್ಬ ವ್ಯಕ್ತಿಯ ಪತ್ರಿಕೆಯಾಗಿರುವುದನ್ನು ನೋಡಿದರೆ ನಿಜವಾಗಿ ನನಗೆ ದುಃಖ ಬರುತ್ತದೆ. ಸ್ವಾಮಿ, ನಾವು ಮಾನ್ಯ ಬಂಗಾರಪ್ಪನವರ ಮೇಲೆ ಗುರುತರವಾದ ಅಪಾದನೆ ಗಳನ್ನು ಮಾಡಿದಾಗ ಅವರು ಏನು ಹೇಳಬೇಕಾಗಿತ್ತು, ಯಾರು ಗುರುತರವಾದ ಅಪಾದನೆಗಳನ್ನು ಮಾಡಿದ್ದಾರೋ ಅವರ ಹೆಸರನ್ನು ಹೆಡ್ ಲೈನ್‌ನಲ್ಲಿ ಹಾಕಬೇಕಾಗಿತ್ತು. ಆದರೆ ಅವರು ಹಾಗೆ ಮಾಡ ಲಿಲ್ಲ. ''ಎಲ್ಲ ಅಪಾದನೆಗಳೂ ತಿರಸ್ಕೃತ ಬಂಗಾರಪ್ಪ'' ಎಂದು ಹಾಕಿದ್ದಾರೆ. ಈ ರೀತಿ ಒಬ್ಬ ವ್ಯಕ್ತಿಯ ಪತ್ರಿಕೆಯಾಗುವುದಾದರೆ ಇದಕ್ಕಿಂತ ಶೋಚನೀಯ ವಿಚಾರ ಬೇರೊಂದಿಲ್ಲ. ಪತ್ರಿಕಾ ವೃತ್ತಿ ಯಾವಾಗಲೂ ಮೇಲ್ಮಟ್ಟದ್ದಾಗಿರಬೇಕು. ಒಬ್ಬರನ್ನು ಕಂಡರೆ ಆಗುತ್ತದೆ, ಇನ್ನೊಬ್ಬರನ್ನು ಕಂಡರೆ ಆಗುವುದಿಲ್ಲ ಎನ್ನುವ ಭಾವನೆ....

ಶ್ರೀ ಜೆ.ಎಚ್. ಪಟೇಲ್. —ಸ್ವಾಮಿ. ಅಧ್ಯಕ್ಷರೆ, ಮಾನ್ಯ ಸದಸ್ಯರು ಮಾತನಾಡುತ್ತಿರುವುದು ಯಾವ ಇಲಾಖೆಯ ಬೇಡಿಕೆ ಎಂಬುದು ಗೊತ್ತಾಗುತ್ತಿಲ್ಲ.

ಶ್ರೀ ಎಸ್.ಎಂ. ಶೀರ್‍ನಾಳಿ ಚಂದ್ರಶೇಖರ್. —ಇದು ಇಂಡಸ್ಟ್ರೀಸ್‌ಗೆ ಸಂಬಂಧಪಟ್ಟ ಡಿಮ್ಯಾಂಡ್ ೬೦ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರೂ ಪತ್ರಿಕೆಯವರು ಸರ್ಕಾರದ ನೀತಿ ನಿಯಮಾವಳಿಗಳನ್ನು ಎತ್ತಿ ಹೇಳುವುದನ್ನಾದರೂ ಕಲಿಯಬೇಡವೆ ? ಸರ್ಕಾರವನ್ನು ಟೀಕೆ ಮಾಡುವುದನ್ನು ಬಿಟ್ಟರೆ ಇದರಲ್ಲಿ ಬೇರೆ ವಿಷಯವೇ ಇಲ್ಲವಲ್ಲಾ. ಸ್ವಾಮಿ, ದುಡ್ಡು ಕೊಟ್ಟು ಬೈಸಿಕೊಳ್ಳುವ ಗ್ರಹಚಾರ ಸರ್ಕಾರಕೆ ಏಕೆ ಬೇಕು ?

ಶ್ರೀ ಎಸ್.ಆರ್. ಬೊಮ್ಮಾಯಿ. —ನೀವು ಹೇಳಿದ್ದನ್ನು ಈಗಾಗಲೇ ಸರ್ಕಾರದವರು ಜಾರಿಗೆ ತಂದಿದ್ದಾರೆ......

ಶ್ರೀ ಎಸ್.ಎಂ. ಶೀರ್‍ನಾಳಿ ಚಂದ್ರಶೇಖರ್. —ಏನು ತಂದಿದ್ದಾರೆ ?

ಶ್ರೀ ಎಸ್.ಆರ್. ಬೊಮ್ಮಾಯಿ. —ಪ್ರಜಾವಾಣಿ ಪತ್ರಿಕೆಯನ್ನು ನೀವು ತೆಗೆದುಕೊಳ್ಳಕೂಡದೆಂದು ಈಗಾಗಲೇ ಸರ್ಕಾರದಿಂದ ಆಜ್ಞೆ ಹೋಗಿದೆ. ಅದು ಪತ್ರಿಕೆಯಲ್ಲೇ ಬಂದಿದೆ. ನೀವು ಹೇಳುವುದಕ್ಕಿಂತ ಮುಂಚಿತವಾಗಿ ಸರ್ಕಾರ ಕ್ರಮ ಕೈಗೊಂಡಿದೆ.

ಶ್ರೀ ಬಿ.ವಿ. ಕಕ್ಕಿಲಾಯ. —೬೦ ಲಕ್ಷ ರೂ. ಕೊಟ್ಟಿದ್ದಾರೆಂದು ಇದು ಯಾವುದೇ ಒಂದು ಪಕ್ಷದ ಹಣ ಅಲ್ಲ. ಅದು ರಾಜ್ಯದ ಹಣ. ಪತ್ರಿಕೆಯವರು ಅವರ ಸ್ವಾತಂತ್ರ್ಯವನ್ನು ಕಳೆದುಕೊಂಡು ನಿಮ್ಮಿಂದ ಜಾಹೀರಾತನ್ನು ತೆಗೆದುಕೊಳ್ಳಬೇಕೆಂದು ಏನೂ ಇಲ್ಲ. ಅದು ರಾಜ್ಯದ ಹಣ. ಪತ್ರಿಕೆಯವ ರಿಗೆ ಸ್ವಾತಂತ್ರ್ಯ ಇದೆ. ಆದ್ದರಿಂದ ಅವರು ಬರೆಯುತ್ತಿದ್ದಾರೆ.

(ಗೊಂದಲ)

SRI SHEERNALY M. CHANDRASHEKHAR.—I have not yielded. Under what rule he has got a right to talk ?

ಸ್ವಾಮಿ, ನಮ್ಮ ಕಾರ್ಪೊರೇಷನ್‌ನವರು ೬೦ ಲಕ್ಷ ರೂ.ಗಳನ್ನು ಕೊಟ್ಟಿರುವುದರಿಂದ ನಾನು ಹೇಳುತ್ತಿದ್ದೇನೆ. ''ಕರ್ನಾಟಕ ಸ್ಟೇಟ್ ಹ್ಯಾಂಡಿ ಕ್ರಾಫ್ಟ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಲಿ.,'' ಎನಿದೆ ಇದರಲ್ಲಿ ಒಬ್ಬರು ಮ್ಯಾನೇಜಿಂಗ್ ಡೈರೆಕ್ಟರ್ ಇದ್ದಾರೆ. ಮಹಾಭಾರತದಲ್ಲಿ ಇದ್ದಂಥ ಕೃಷ್ಣ ಅಪರಾವತಾರ ಈ ಕಲಿಯುಗದಲ್ಲಿ ಆಗಿದೆ ಎಂದು ಕಾಣುತ್ತಿದೆ. ಸ್ವಾಮಿ ಈ ಮ್ಯಾನೇಜಿಂಗ್ ಡೈರೆಕ್ಟರ್

ರವರ ಕಾಮ ಪಿಪಾಸೆಗೆ ಎಷ್ಟು ಜನ ಹೆಣ್ಣು ಮಕ್ಕಳು ಬಲಿಯಾಗಬೇಕು ? ನಮ್ಮ ಶಿವಮೊಗ್ಗ ಊರಿನ ಒಂದು ಹುಡುಗಿ ಅಲ್ಲಿ ಕೆಲಸ ಮಾಡುತ್ತಿದ್ದಾಳೆ. ಆಕೆ ಎಷ್ಟು ಹೇಳಿದರೂ ಕೇಳದೆ ಆಕೆಯನ್ನು ತನ್ನ ವಶ ಮಾಡಿಕೊಳ್ಳಬೇಕೆಂದು ಪದೇ ಪದೇ ಆಕೆಗೆ ಹಿಂಸೆ ಕೊಡುತ್ತಿದ್ದಾನೆ. ಅಲ್ಲೇ ಕೆಲಸ ಮಾಡತಕ್ಕಂಥ ಗುರುರಾಜಾರಾವ್ ಎನ್ನುವರು. ಅವರು ಆರ್ಟಿಸ್ಟ್ ಕಂ ಫೋಟೋಗ್ರಾಫರ್ ಆಗಿದ್ದಾರೆ. ಇವರನ್ನು ಮದುವೆ ಮಾಡಿಕೊಳ್ಳಬೇಕೆಂದು ಆ ಹುಡುಗಿ ನಿಶ್ಚಯ ಮಾಡಿಕೊಂಡಿದ್ದಾಳೆ. ಗುರುರಾಜಾರಾಯರೂ ಕೂಡ ನಮ್ಮ ಶಿವಮೊಗ್ಗದಲ್ಲಿ ಕೆಲಸ ಮಾಡತಕ್ಕ ಈ ಹುಡುಗಿಯನ್ನೇ ಮದುವೆ ಆಗಬೇಕೆಂದಿದ್ದಾರೆ. ಈ ವಿಚಾರವನ್ನು ಅನೇಕ ಸಾರಿ ಮ್ಯಾನೇಜಿಂಗ್ ಡೈರೆಕ್ಟರ್‌ರವರಿಗೆ ಗುರುರಾಜಾರಾಯರೇ ಸ್ವತಃ ಹೋಗಿ ಹೇಳಿದರೂ ಆತ ಕೇಳಿಲ್ಲ, ಅಷ್ಟೇ ಅಲ್ಲ, ಸ್ವಾಮಿ. ಈ ರೀತಿ ನೀವು ನಡೆದುಕೊಳ್ಳುವುದು ಸರಿಯಲ್ಲ, ನಿಮ್ಮ ಸ್ಥಾನಕ್ಕೆ ಭೂಷಣವಲ್ಲ ಎಂದು ಬುದ್ಧಿವಾದವನ್ನೂ ಕೂಡ ಹೇಳಿದ್ದಾರೆ. ಈ ರೀತಿ ಹೇಳಿದಾಗ, ನಾನು ಹೇಗಾದರೂ ಮಾಡಿ ಆ ಹುಡುಗಿಯನ್ನು ಕೆಡಿಸಿಯೇ ಕೆಡಿಸುತ್ತೇನೆ ಎಂದ ಹಟ ಹಿಡಿದಿದ್ದಾರಂತೆ. ಹೈಲಿ ಕ್ವಾಲಿಫೈಡ್ ಮತ್ತು ಪ್ರೊಮೋಷನ್ ಆಗಬೇಕಾಗಿದ್ದಂಥ ಗುರುರಾಜಾರಾವ್ ಎನ್ನುವವರನ್ನು ಈ ಡೈರೆಕ್ಟರ್ ಏನು ಮಾಡಿದ್ದಾನೆ ಎಂದರೆ

"So and so is hereby transferred and posted as Junior Clerk on his own pay and grade".

ಆಕೆ ತಮ್ಮ ಕಾಮದ ಪಿಪಾಸೆಗೆ ಬಲಿಯಾಗದೇ ಹೋದುದರಿಂದ ಆ ಹುಡುಗಿಯನ್ನು ಮದುವೆ ಆಗಬೇಕಾದಂಥ ವ್ಯಕ್ತಿಯನ್ನು ಡಿ ಪ್ರೊಮೋಟ್ ಮಾಡಿ ಆತನ ಸಂಬಳವನ್ನು ಸ್ಥಗಿತಗೊಳಿಸುವ ಕೆಲಸ ಮಾಡಿದ್ದಾನೆ.

ಮಾನ್ಯ ಅಧ್ಯಕ್ಷರೆ, ಅವರಿಬ್ಬರೂ ಒಪ್ಪಿಕೊಂಡರೆ ಏನಾದರೂ ಮಾಡಿಕೊಳ್ಳಲಿ. ಅದು ಅವರವರ ವ್ಯವಹಾರ. ಅದರ ಬಗ್ಗೆ ಯಾರೂ ಯೋಚನೆ ಮಾಡುವುದಿಲ್ಲ. ಆದರೆ ಇಚ್ಛೆ ಇಲ್ಲದಿರತಕ್ಕ ಮುಗ್ಧ ಹೆಣ್ಣುಮಗಳನ್ನು ಆ ಮ್ಯಾನೇಜಿಂಗ್ ಡೈರೆಕ್ಟರ್ ಕೆಡಿಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾನೆ. ಆ ಹುಡುಗಿ ಮತ್ತು ಗುರುರಾಜಾರಾವ್ ಇಬ್ಬರೂ ಹೋಗಿ ಕೇಳಿಕೊಂಡರೂ ಆತ ಒಪ್ಪದೆ ಗುರುರಾಜಾರಾವ್‌ನನ್ನು ಬೇರೆ ಕಡೆ ವರ್ಗ ಮಾಡಿ, ಆತನಿಗೆ ಬರಬೇಕಾಗಿದ್ದ ಪ್ರೊಮೋಷನ್‌ನ್ನು ತಡೆಹಿಡಿದಿದ್ದಾನೆ......

ಕುಮಾರಿ ಪ್ರಮೀಳಾ.—ಆ ಹುಡುಗಿಯ ಹೆಸರು ಏನು ಎಂಬುದನ್ನು ಹೇಳುತ್ತೀರಾ ?

ಶ್ರೀ ಎಸ್.ಎಂ. ಶೀರ್ನಾಳಿ ಚಂದ್ರಶೇಖರ್.—ನಾನು ಆ ಹುಡುಗಿಯ ಹೆಸರನ್ನು ಹೇಳುವುದಿಲ್ಲ.

ಕುಮಾರಿ ಪ್ರಮೀಳಾ —ಮಾನ್ಯ ಅಧ್ಯಕ್ಷರೆ, ಅದು ರೆಕಾರ್ಡ್‌ನಲ್ಲಿ ಹೋಗಿದೆ. ದಯಮಾಡಿ ತೆಗೆಸಬೇಕು.

ಶ್ರೀ ಎಸ್.ಎಂ. ಶ್ರೀರ್ನಾಳಿ ಚಂದ್ರಶೇಖರ್.—ನಾನು ಹುಡುಗಿಯ ಹೆಸರನ್ನು ಹೇಳಿಲ್ಲ.

ಕುಮಾರಿ ಪ್ರಮೀಳಾ.—ತಾವು ಹೇಳಿದ್ದೀರಿ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ನಾನು ಹುಡುಗಿಯ ಹೆಸರನ್ನು ಹೇಳಿಲ್ಲ. ಗುರುರಾಜಾರಾವ್ ಹೆಸರನ್ನು ಮಾತ್ರ ಹೇಳಿದ್ದೇನೆ. ಮದುವೆಗೆ ಬಂದಿರತಕ್ಕ ಒಬ್ಬ ಮಗಳು ನನಗೂ ಇರುವುದರಿಂದ ನಾನು ಆಕೆಯ ಹೆಸರನ್ನು ಹೇಳುವುದಿಲ್ಲ......

SRI A. LAKSHMISAGAR.—Sir, I rise to a point of order. Yesterday only, when a similar situation arose while the hon. Member Sri S. Bangarappa in his submission made a reference to a person who is not a Member of this House, the Hon. Speaker directed that his name should be taken out of the record. Here the hon. Member Sri Sheernaly M. Chandrashekhar is mentioning the names of certain persons who are not Members of this Hou e.

ಶ್ರೀ ಎಸ್.ಎಂ. ಶೀರ್ನಾಳಿ ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಏತಕ್ಕೆ ಈ ರೀತಿ ಮಾತನಾಡುತ್ತಿದ್ದಾರೋ ಅರ್ಥವಾಗುತ್ತಿಲ್ಲ. ನಾನು ಯಾರ ಹೆಸರನ್ನೂ ಹೇಳಿಲ್ಲ. ಗುರುರಾಜಾರಾವ್‌ರವರ ಹೆಸರನ್ನು ಮಾತ್ರ ಹೇಳಿದ್ದೇನೆ.

SRI A. LAKSHMISAGAR.— Secondly Sir, the hon. Member Sri Sheernally M. Chandrashekhar may be well within his right in making allegations against persons. He may be justified in making allegations against those persons. I am in entire agreement with him. But, of names of persons to whom the reference is made by the hon. Member Sri Sheernaly M. Chandrashekhar should not go on record.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ನಾನು ಯಾರನ್ನೂ ಮೆನ್‌ಷನ್ ಮಾಡಲಿಲ್ಲ. ಗುರುರಾಜ್ ರವರಿಗೆ ಪ್ರಮೋಷನ್ ಮಾಡುವ ಬದಲು ಡಿ ಪ್ರಮೋಷನ್ ಮಾಡಿದರು ಎಂದು ಹೇಳಿದೆ. ಅಷ್ಟು ಹೇಳಿದನೇ ಹೊರತು ಅವರಮೇಲೆ ನನಗೆ ಯಾವ ವಿಧವಾದ ದ್ವೇಷವಿಲ್ಲ. ಅವರಮೇಲೆ ನಾನು ಏನು ಆಪಾದನೆ ಮಾಡಲಿಲ್ಲ. ಸ್ವಾಮಿ ಇಂಥ ಅನ್ಯಾಯ ಕಾರ್ಪೊರೇಷನ್‌ನಲ್ಲಿ ಆಗುವುದಾದರೆ ದೇವರೇ ಗತಿ. ಇದನ್ನು ಸಂಬಾಧಪಟ್ಟ ಇಲಾಖೆಯವರು ಮಂತ್ರಿಯವರು ಪರಿಶೀಲನೆ ಮಾಡಿ ನ್ಯಾಯ ದೊರಕಿಸಿ ಕೊಡಬೇಕು ಎನ್ನುವ ಮಾತನ್ನು ಹೇಳುತ್ತಿದ್ದೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಕೈಗಾರಿಕೆಗೂ ಇದಕ್ಕೂ ಏನು ಸಂಬಂಧ ?

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್—ರೆಫರೆನ್ಸ್ ಆಫ್ ಆರ್ಡರ್ಸ್ ನಿಮ್ಮ ಕೈಗೆ ಕೊಡುತ್ತೇನೆ. ಸ್ವಾಮಿ ತಾವು ಏನು ಮಾತನಾಡುತ್ತೀರಿ. ಸ್ವಾಮಿ ನಮ್ಮ ರಾಜ್ಯದಲ್ಲಿ ಸುಮಾರು ೩೦೦ ಕೋಟಿ ರೂಪಾಯಿ ಮೇಲ್ಪಟ್ಟು ಕೈಗಾರಿಕೆಗಳನ್ನು ಸಾರ್ವಜನಿಕ ಸಂಸ್ಥೆಗಳನ್ನು ಸ್ಥಾಪನೆ ಮಾಡಿ ಈವತ್ತು ನಮ್ಮ ರಾಜ್ಯ ಸರ್ಕಾರದವರು ನಡೆಸುತ್ತಿದ್ದಾರೆ. 'ಸಂತೋಷ' ಆದರೆ ಇದರಲ್ಲಿ ಎಷ್ಟೊಂದು ಕೈಗಾರಿಕೆಗಳು ಲುಕ್ಸಾನಿಗೆ ಒಳಪಟ್ಟಿವೆ ಎನ್ನುವುದನ್ನು ಲೆಕ್ಕ ತೆಗೆದುಕೊಳ್ಳಬೇಕು. ಸಾರ್ವಜನಿಕ ದುಡ್ಡು ಈ ರೀತಿಯಾಗಿ ಪೋಲಾಗುವುದು ಸರಿಯಾದುದಲ್ಲ ಇದನ್ನು ತಾವು ಗಮನಿಸಬೇಕು. ಏತಕ್ಕೆ ಹೀಗಾಗುತ್ತವೆ. ಸ್ವಾಮಿ ಈವತ್ತು ಇನ್‌ಸ್ಟಾಲ್ಡ್ ಲೈಸೆನ್ಸ್ ಕ್ಯಾಪಾಸಿಟಿ ಅದರ ವರದಿಯನ್ನು ತೆಗೆದುಕೊಂಡು ತಾವು ನೋಡಬೇಕು. ಇನ್‌ಸ್ಟಾಲ್ಡ್ ಕ್ಯಾಪಾಸಿಟಿ ಎಷ್ಟು ಇರಬೇಕು. ಲೈಸೆನ್ಸ್‌ನ್ನು ಕೊಡುವಾಗ ಎಷ್ಟು ಇತ್ತು. ಯಾರು ಶಿಫಾರಸು ಮೇಲೆ ಕೊಟ್ಟಿದ್ದೀರಿ, ಇದು ಏನಾದರೂ ಪೂರ್ತಿಯಾಗಿದಿಯೇ. ಎಲ್ಲಿ ಲೋಪದೋಷವಿದೆ ಎನ್ನುವುದನ್ನು ಸರಿಪಡಿಸುವುದಕ್ಕೆ ಸಾಧ್ಯವಾಗುತ್ತದೆಯೇ ಎನ್ನುವುದನ್ನು ನೋಡಬೇಕು. ಮೂಲಭೂತವಾಗಿ ಬಹಳಷ್ಟು ಮ್ಯಾನೇಜ್‌ಮೆಂಟ್ ಕೈಗಾರಿಕೆಗಳನ್ನು ನಡೆಸುತ್ತಾ ಇದೆ, ಇದಕ್ಕೆ ಬ್ರೇಕ್ ಈವನ್ ಪಾಯಿಂಟ್ ಇಲ್ಲ. ಇದಕ್ಕೆ ಇನ್‌ವೆಸ್ಟ್‌ಮೆಂಟ್ ಎಷ್ಟು ಮಾಡಿದ್ದಾರೆ, ಖರ್ಚು ಎಷ್ಟಾಗಿದೆ, ಸಂಬಳಸಾರಿಗೆಗಳಿಗೆ ವರ್ಷಕ್ಕೆ ಎಷ್ಟು ಖರ್ಚು ಬರುತ್ತದೆ, ಇದಕ್ಕೆ ಮುಂದೆ ಏನು ಮಾಡಬೇಕು ಎನ್ನುವ ಚಿಂತನೆ ಮಾಡದೆಹೋದರೆ ನಮ್ಮಲ್ಲಿ ಒಂದು ಗಾದೆ ಹೇಳುತ್ತಾರೆ, ಹಾಲು ಕರೆದು ಊಟ ಮಾಡಬೇಕು. ಹಾಲನ್ನು ಕರೆಯುವ ಕೆಚ್ಚಲನ್ನೇ ಕೊಯ್ದು ಊಟ ಮಾಡಬಾರದು. ಬಂಡವಾಳವನ್ನೇ ತಿನ್ನತಕ್ಕಂಥ ಕೈಗಾರಿಕೆಗಳು ಆಗಿಬಿಟ್ಟರೆ ಎಷ್ಟುಕಾಲ ನಮ್ಮ ಸರ್ಕಾರ ಸಾರ್ವಜನಿಕ ಸೆಕ್ಟರ್ ಕೈಗಾರಿಕೆಗಳನ್ನು ನಡೆಸುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಪ್ರಶ್ನೆಯನ್ನು ಈ ಸಂದರ್ಭದಲ್ಲಿ ಹಾಕಬೇಕಾಗುತ್ತದೆ. ಮತ್ತೆ ಕೆಲವು ಕೈಗಾರಿಕೆಗಳನ್ನು ತೆಗೆದುಕೊಂಡರೆ, ಕೆಲವು ಕೈಗಾರಿಕೆಗಳು ಬಹಳ ಬೃಹದಾಕಾರವಾಗಿ ಚೆನ್ನಾಗಿ ಕೆಲಸ ಮಾಡುತ್ತಿದೆ. ಭದ್ರಾವತಿ ಐರನ್ ಅಂಡ್ ಸ್ಟೀಲ್ ಬಹಳ ಚೆನ್ನಾಗಿ ಕೆಲಸ ಮಾಡುತ್ತಾ ಇದೆ. ಪೇಪರ್ ಮಿಲ್ ಕೂಡ ಇತ್ತೀಚೆಗೆ ಬಹಳ ಚೆನ್ನಾಗಿ ಕೆಲಸ ಮಾಡುತ್ತಾ ಇದೆ. ಉಳಿದವು ಏತಕ್ಕೆ ಚೆನ್ನಾಗಿ ಕೆಲಸ ಮಾಡುತ್ತಿಲ್ಲ. ನಾನು ಕಳೆದ ಅಧಿವೇಶನದಲ್ಲಿ ಹೇಳಿದೆ. ಕವಿಕಾ ಕೈಗಾರಿಕೆ ತಯಾರು ಮಾಡತಕ್ಕಂಥ ಮಾಲು ಉಪಯೋಗವಾಗುತ್ತಿಲ್ಲ, ಆದರೆ ಕಿರ್ಲೋಸ್ಕರ್ ತಯಾರು ಮಾಡತಕ್ಕಂಥ ಮಾಲು ಉಪಯೋಗವಾಗುತ್ತದೆ. ನಾವು ಸಾರ್ವಜನಿಕ ಕೈಗಾರಿಕಗಳಿಗೆ ಒಳಪಡುವಂಥ ಕೈಗಾರಿಕೆಗಳನ್ನು ಬೆಳೆಸುವುದಾದರೂ ಹೇಗೆ. ಸರ್ಕಾರಿ ಆರ್ಡರ್ಸ್ ಎಲ್ಲ ಪೂರಾ ಕಿರ್ಲೋಸ್ಕರ್ ಕಂಪೆನಿಗೆ ಹೋಗುತ್ತದೆ. ಕಿರ್ಲೋಸ್ಕರ್‌ನಲ್ಲಿ ತಯಾರು ಮಾಡತಕ್ಕಂಥ ಮಾಲು ಬಹಳ ಚೆನ್ನಾಗಿರುತ್ತೆ. ನೀವೇ ಒಪ್ಪಿಕೊಂಡಿದ್ದೀರಿ

ಗೌರ್ನಮೆಂಟ್ ನಲ್ಲಿ ರಾ ಮೆಟೀರಿಯಲ್ಸ್, ಕಚ್ಚಾ ಪದಾರ್ಥಗಳು ಎಷ್ಟು ಇದೆ ಎನ್ನುವುದನ್ನು ಲೆಕ್ಕ ಹಾಕಿದ್ದೀರಾ ಸ್ವಾಮಿ ? ಹೋದವರ್ಷದ ವರದಿ ಓದಿದರೆ ಸುಮಾರು ಒಂದು ಕೋಟಿ ರೂಪಾಯಿಗಳಿಗೂ ಮೇಲ್ಪಟ್ಟು ಕಚ್ಚಾ ಪದಾರ್ಥಗಳ ಸ್ಟಾಕ್ ಕೊಳೆಯುತ್ತಾ ಇದೆ. ಅದರ ಉಪಯೋಗವನ್ನು ಪಡೆದುಕೊಳ್ಳದೆ ಹೋದರೆ ರಾಜ್ಯದ ಬೊಕ್ಕಸಕ್ಕೆ ಎಷ್ಟು ಲುಕ್ಸಾನಾಗುತ್ತದೆ ಎನ್ನುವುದಕ್ಕೆ ವಿವರಣೆ ಕೊಡಬೇಕಾದ್ದು ಏನೂ ಇಲ್ಲ. ಇದಕ್ಕೆ ಕಾರಣವೇನು ? ಏತಕ್ಕೆ ಹೀಗಾಗುತ್ತದೆ ಎನ್ನುವುದನ್ನು ತಾವು ಯೋಚನೆ ಮಾಡಬೇಕು. ಪರಿಣತರನ್ನು ನೀವು ಅಲ್ಲಿಗೆ ನೇಮಕ ಮಾಡಬೇಕು. ನನಗೆ ಐ.ಎ.ಎಸ್. ಅಧಿಕಾರಿಗಳ ಮೇಲೆ ದ್ವೇಷವಿಲ್ಲ. ಐ.ಎ.ಎಸ್. ಅಧಿಕಾರಿಗಳು ಅವರವರ ಕ್ಷೇತ್ರದಲ್ಲಿ ಅವರವರ, ಕಾರ್ಯದಲ್ಲಿ, ಹುದ್ದೆಯಲ್ಲಿ, ಪಂಡಿತರು, ಇರಬಹುದು ಕೈಗಾರಿಕೆಯಲ್ಲಿ ಬೇಕಾದಂಥ ನುರಿತ ಚಾಣಾಕ್ಷತನದ ಐ.ಎ.ಎಸ್. ಅಧಿಕಾರಿಗಳು ಇರುತ್ತಾರೆ ಎನ್ನುವ ವಾದವನ್ನು ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ. ಐ.ಎ.ಎಸ್. ಅಧಿಕಾರಿಗಳು ಸ್ಪೆಷಲ್ ಆಗಿ ಓದಿ ಅಧ್ಯಾಯನ ಮಾಡಿ ಕೈಗಾರಿಕಾ ಹಂತದಲ್ಲಿ ತಿಳಿದುಕೊಂಡಿರತಕ್ಕಂಥವರನ್ನು ಮಾಡಿ. ಅಡ್ಡಿಯಿಲ್ಲ. ನಮ್ಮಲ್ಲಿ ಚಿಕ್ಕಂದಿನಲ್ಲಿ ಕುಪ್ಪಿಮಾತ್ರೆ ಎಂದು ಕರೆಯುತ್ತಾರೆ. ನಮ್ಮ ಅಜ್ಜ ಅವರು ಕೊಡುತ್ತಿದ್ದರು. ಒಂದು ಡಬ್ಬಿ, ಅದರ ಮುಚ್ಚಳವನ್ನು ಒಂದು ರೌಂಡ್ ತಿರಿಗಿಸಿದರೆ ಒಂದಕ್ಕೆ ಔಷಧ. ಎರಡು ರೌಂಡ್ ತಿರುಗಿಸಿದರೆ ಇನ್ನೊಂದಕ್ಕೆ ಔಷಧ, ಮೂರು ರೌಂಡ್ ತಿರುಗಿಸಿದರೆ ಮತ್ತೊಂದಕ್ಕೆ ಔಷಧ ಹೀಗಿ ಎಲ್ಲದಕ್ಕೂ ಕೂಡ ಐ.ಎ.ಎಸ್. ಅಧಿಕಾರಿಗಳು ಔಷಧವಾಗುತ್ತಾರೆಯೇ ಎನ್ನುವ ಪ್ರಶ್ನೆಯನ್ನು ಕೇಳುತ್ತಾ ಇದ್ದೇನೆ. ಪ್ರತಿಯೊಂದಕ್ಕೂ ಐ.ಎ.ಎಸ್. ಅಧಿಕಾರಿಗಳು ಪರಿಣತರು ಇರುತ್ತಾರೆಯೇ ? ಒಬ್ಬ ಸೆಕ್ರೆಟರಿ ಡೆಪ್ಯುಟಿ ಸೆಕ್ರೆಟರಿ ಆಗಿರತಕ್ಕಂಥವರು ಎಷ್ಟೊಂದು ಕೈಗಾರಿಕೆಗೆ ಚೇರ್‌ಮನ್ ಆಗಿರುತ್ತಾರೆ. ಯಾವಾಗ ಘೋಷಣೆ ಮಾಡಿದರೂ ಆ ಬೋರ್ಡ್ ಮೀಟಿಂಗ್‌ಗೆ ಹೋಗಿರುತ್ತಾರೆ, ಈ ಬೋರ್ಡ್ ಮೀಟಿಂಗ್‌ಗೆ ಹೋಗಿರುತ್ತಾರೆಂದು ಹೇಳುತ್ತಾರೆ. ಅವರಿಗೆ ಪುರಸತ್ತೇ ಇರುವುದಿಲ್ಲ. ಪುರಸತ್ತಾಗಿರುವ ಜನರು ಬೇಕಾದಷ್ಟು ಇದ್ದಾರೆ. ಅವರನ್ನು ಏತಕ್ಕೆ ಮಾಡಬಾರದು. ಏನು ಮಾನ್ಯ ಕಕ್ಕಿಲಾಯರವರೇ ? ಏತಕ್ಕೆ ಬೇಕು. ಸೆಕ್ರೆಟರಿಯವರಿಗೆ ಇರುವ ಕೆಲಸವೇ ಜಾಸ್ತಿ, ಹೀಗಿರುವಾಗ ಒಂದೊಂದು ಸಲ ಹೋಗಿ ನೋಡಲಿಕ್ಕೆ ಸಾಧ್ಯವಾಗುತ್ತದೆಯೋ, ಕೆಲಸ ಮಾಡಲಿಕ್ಕೆ ಸಾಧ್ಯವಾಗುತ್ತದೆಯೋ ಎನ್ನುವ ಪ್ರಶ್ನೆಯನ್ನು ನಾನು ಕೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಮುಳ್ಳೂರು ಆನಂದರಾವ್.—ಕಾರ್ಪೊರೇಷನ್‌ಗಳಲ್ಲಿ ಇರಬೇಕೆಂದು ತಾನೇ ನಿಮ್ಮ ಬಯಕೆ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಹೌದು ಸ್ವಾಮಿ ನನಗೆ ಬಯಕೆ.

ಶ್ರೀ ಮುಳ್ಳೂರು ಆನಂದರಾವ್.—ನಮ್ಮನ್ನು ನಿಮ್ಮನ್ನು ಚೇರ್‌ಮನ್ ಮಾಡಲಿ ಎಂದು ಹೇಳುತ್ತೀರಾ ?

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ನನ್ನ ಹೆಸರನ್ನು ಹೇಳಿದರೆ ತಪ್ಪಾಗುವುದೆಂದು ನೀವು ಸೇರಿಕೊಂಡಿರಾ ? ಸ್ವಾಮಿ ಯಾರಾದರು ಪರಿಣತರನ್ನು, ನಿಯಂತ್ರಣ ಮಾಡತಕ್ಕಂಥವರನ್ನು ಅಧ್ಯಕ್ಷರನ್ನಾಗಿ ಮಾಡದೆ ಹೋದರೆ ಸಾರ್ವಜನಿಕ ಕ್ಷೇತ್ರದಲ್ಲಿರತಕ್ಕಂಥ ಕೈಗಾರಿಕೆಗಳು ಬೆಳೆಯುವುದಕ್ಕೆ ಸಾಧ್ಯವಾಗುವುದೇ ಇಲ್ಲ. ಕುಂಠಿತವಾಗಿ ಹೋಗುತ್ತದೆ. ಇದನ್ನು ಎಷ್ಟು ದಿವಸ ತಡೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ? ಏನಾದರೂ ಒಂದು ಮುಕ್ತಾಯ ಹಾಕೋಣವೆನ್ನುವ ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಅನಂತರ ಕೈಗಾರಿಕಾ ಹಿಂದುಳಿದ ಪ್ರದೇಶಗಳೆಂದು ಕೆಲವೊಂದು ಪ್ರದೇಶಗಳನ್ನು ಡಿಕ್ಲೇರ್ ಮಾಡಿದ್ದಾರೆ. ಈ ನೀತಿ ನನಗಂತೂ ಅರ್ಥವಾಗುತ್ತಿಲ್ಲ. ನನ್ನ ತಾಲ್ಲೂಕು ಹೊಸನಗರ. ಇಲ್ಲಿ ಕಾಣುತ್ತಾ ಇರುವ ಬೆಳಕು, ನಮ್ಮ ಜೋಗ ಮುಳುಗಡೆಯಾಗಿ ಬಂದಿರತಕ್ಕಂಥದ್ದಾಗಿರುತ್ತದೆ. ಈವತ್ತು ಅದು ಫಾರ್‌ವರ್ಡ್, ಒಂದೇ ಒಂದು ಕೈಗಾರಿಕೆಯೂ ಅಲ್ಲ, ಆದರೆ ಸುತ್ತಮುತ್ತಲೂ ನೂರಾರು ಕೈಗಾರಿಕೆಗಳು ಇದ್ದರೂ ಅದು ಬ್ಯಾಕ್‌ವರ್ಡ್. ಈ ನೀತಿ ನನಗಂತೂ ಅರ್ಥವಾಗುತ್ತಿಲ್ಲ. ಇದನ್ನು ಪುನರ್ ಪರಿಶೀಲನೆ ಮಾಡಬೇಕು ಎಂದು ಒತ್ತಾಯ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಬೆಂಗಳೂರಿಗೆ ಈವತ್ತಿನ ದಿವಸ ಅನೇಕಜನ ಹೊರಪ್ರಾಂತ್ಯಗಳಿಂದ ಕೈಗಾರಿಕೋದ್ಯಮಿಗಳು ಬರುತ್ತಿದ್ದಾರೆ. ಬರಲಿ ಸಂತೋಷ, ಆದರೆ ಕೆಲಸ ಕೊಡುವಾಗ ಕನ್ನಡಿಗರಿಗೆ ಏತಕ್ಕೆ ಆದ್ಯತೆ ಇಲ್ಲ ? ಕೈಗಾರಿಕೆ ಪಟ್ಟಿಯನ್ನು ತೆಗೆದುನೋಡಿ, ಯಾವುದರಲ್ಲಿಯೂ ಪ್ರಾಶಸ್ತ್ಯವಿಲ್ಲ. ಅಂಥ ಪರಿಣತರು ಬೆಂಗಳೂರಿನಲ್ಲಿ ಇಲ್ಲವೇ ಎಂದು ಆಶ್ಚರ್ಯವಾಗುತ್ತದೆ. ಸನ್ಮಾನ್ಯ ಅಧ್ಯಕ್ಷರೇ ಇನ್ನು ೧೦ ೨೦ ವರ್ಷಗಳು ಕರ್ನಾಟಕ ರಾಜಧಾನಿ ಬೆಂಗಳೂರು

ಎಂದು ಹೇಳುವುದಕ್ಕೆ ಕಷ್ಟಪರಿಸ್ಥಿತಿಯಾಗುತ್ತದೆ. ನಮ್ಮ ರಾಜ್ಯದಲ್ಲಿ ಕೈಗಾರಿಕೆಗಳನ್ನು ತೆರೆಯಲು ಬಂದ ಉದ್ಯಮಿಗಳಿಗೆ ಲೈಸೆನ್ಸನ್ನು ಕೊಡುವಾಗ ಒಂದು ಕಂಡೀಷನ್ ಹಾಕಬೇಕು.

ಸ್ವಾಮಿ ಪೇಪರ್ ಮಿಲ್ ಇದೆ. ಹಿಂದೆ ಒಬ್ಬರು ಮ್ಯಾನೇಜಿಂಗ್ ಡೈರೆಕ್ಟರ್ ಆಗಿದ್ದರು, ಈಗ ಅವರು ಇಲ್ಲ. ಚೇರ್‌ಮನ್ ಆಗಿ ಮ್ಯಾನೇಜಿಂಗ್ ಡೈರೆಕ್ಟರಾಗಿ ಇದ್ದರು. ಅವರ ಮೇಲೆ ಆಪಾದನೆಗಳನ್ನು ಹೊರಿಸಲಾಯಿತು. ಎನ್‌ಕ್ವಯರಿ ಕೂಡ ನಡೆದಿದೆ ಅವರು ಜರ್ಮನ್, ಅಮೇರಿಕಾಕ್ಕೆ ಹೋಗಿದ್ದರು ಸ್ಪೇರ್ ಪಾರ್ಟ್ಸ್ ತರುವುದಕ್ಕೆ ಎಷ್ಟು ಸ್ಪೇರ್‌ಪಾರ್ಟ್ಸ್ ತಂದರೋ ಎಂಥ ಸ್ಪೇರ್‌ಪಾರ್ಟ್ಸ್ ತಂದರೋ ಗೊತ್ತಿಲ್ಲ.

ಇಂಡಸ್ಟ್ರೀಯಲ್ ಸೆಕ್ಟಾರ್‌ನಲ್ಲಿ ಶುಗರ್ ಫ್ಯಾಕ್ಟರಿ ಮಾಡಬೇಕೆಂದು ಡೆಪ್ಯುಟಿ ಕಮಿಷನರ್, ಚೇರ್‌ಮನ್, ನಾವು ಇನ್ನೇನು ಪ್ರಾರಂಭ ಮಾಡಬೇಕೆಂದು ಎನ್ನುವ ಹಂತದಲ್ಲಿ ಪೇಪರ್ ಮಿಲ್‌ನವರ ಕೋರಿಕೆ ಬಂದಿತು. ಪೇಪರ್ ಮಿಲ್‌ನವರೇ ನಾವೇ ಕೊಡುತ್ತೇವೆಂದು ಹೇಳಿದರು. ತಾವು ಲೈಸೆನ್ಸ್ ಕೂಡ ಕೊಡುತ್ತೇವೆಂದು ಹೇಳಿರುತ್ತೀರಿ. ಸಕ್ಕರೆ ಕಾರ್ಖಾನೆ ಬರೆ ಪೇಪರ್ ಮೇಲೆ ಇದಿಯೇ ಹೊರತು ಕಾರ್ಯಗತವಾಗಲಿಲ್ಲ. ನಮ್ಮ ಶಿವಮೊಗ್ಗದಲ್ಲಿ ಕ್ಯಾಬಿನೇಟ್ ಮೀಟಿಂಗ್ ಕರೆದಾಗ ಪೇಪರ್ ಮಿಲ್‌ನವರೇ ನಡೆಸುತ್ತಾರೆಂದೂ ಹೇಳಿದ್ದೂ ಈವತ್ತಿನವರೆಗೂ ಕಾರ್ಯಗತವಾಗಿಲ್ಲ.
ಇದು ಏನೆಂದು ನಮಗೆ ಬೇಕು, ನಡೆಸುತ್ತಾರೋ ಇಲ್ಲವೋ ಏನೂ ಗೊತ್ತಿಲ್ಲ. ನಮ್ಮಲ್ಲಿ ಒಂದು ಗಾದೆ 'ಗಂಡ ಹೊಸ ಸೀರೆ ತರುತ್ತಾನೆಂದು, ಇದ್ದ ಹಳೆಯ ಸೀರೆಯನ್ನು ಸುಟ್ಟುಕೊಂಡಳು ಹೆಂಡತಿ' ಎಂದು. ಗಂಡ ಸಂತೆಯಿಂದ ಬರಿ ಕೈಯ್ಯಲ್ಲಿ ಬಂದರೆ ಹೆಂಡತಿಯ ಗತಿ ಏನಾಗುತ್ತವೆ? ಅವಳು ಇದ್ದ ಸೀರೆಯನ್ನು ಸುಟ್ಟುಕೊಂಡು ಒಳಗಡೆ ಕುಳಿತಿದ್ದಾಳೆ. ಹಾಗೆ ಆಗಿದೆ ನಮ್ಮ ಪರಿಸ್ಥಿತಿ ಇವತ್ತು. ನಾವು ಪೇಪರ್ ಮಿಲ್‌ನವರು ನಡೆಸುತ್ತಾರೆಂದು ಕಷ್ಟಪಟ್ಟು ಸಿಗತಕ್ಕ ಲೈಸೆನ್ಸನ್ನು ಅವರಿಗೆ ಬಿಟ್ಟುಕೊಟ್ಟಿದ್ದೇವೆ. ಅವರು ನಡೆಸುತ್ತಾನೂ ಇಲ್ಲ, ನಡೆಸುವ ಹಾಗೆ ಇಲ್ಲ. ಸರ್ಕಾರ ಇದರ ಬಗ್ಗೆ ಗಮನ ಹರಿಸಿ ಕೂಡಲೇ ಕಾರಣ ಪ್ರವೃತ್ತರಾಗಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಸೇಲ್ಸ್ ಇಂಟರ್‌ನ್ಯಾಷನಲ್‌ನವರು ಏನು ಕೆಲಸ ಮಾಡುತ್ತಿದ್ದಾರೆ? ಯಾವ್ಯಾವ ದೇಶಗಳಲ್ಲಿ ಮಾರಾಟ ಮಾಡುತ್ತಿದ್ದಾರೆಂದು ಅಲ್ಲಿ ಏನು ವ್ಯವಸ್ಥೆ ಇದೆ ಎನ್ನತಕ್ಕ ವರದಿ ನಮ್ಮ ಹತ್ತಿರ ಈಗ ಇಲ್ಲ. ಅವರು ಏನೇನು ಪ್ರಚಾರ ಮಾಡುತ್ತಿದ್ದಾರೆ. ಎಷ್ಟು ಮಾರಾಟ ಮಾಡಿದ್ದಾರೆ, ಏನು ಮಾಡಿದ್ದಾರೆ ಎನ್ನುವ ಸಂಪೂರ್ಣ ವರದಿಯನ್ನು ಸದನಕ್ಕೆ ಇಡಬೇಕಾಗುತ್ತದೆ. ಯಾಕೆಂದರೆ ಇವತ್ತು ಮನಸ್ಸೆ ಮಾಡಿದರೆ ಸೇಲ್ಸ್ ಇಂಟರ್ ನ್ಯಾಷನಲ್ ಬಹಳಷ್ಟು ಕೆಲಸ ಮಾಡಲಿಕ್ಕೆ ಸಾಧ್ಯ, ಕರ್ನಾಟಕ ರಾಜ್ಯದ ಹಳೇ ಮೈಸೂರು ಭಾಗದಲ್ಲಿ ಬಹಳ ಕಲಾತ್ಮಕವಾದ ವಸ್ತುಗಳು ಸಿಗತಕ್ಕ ರಾಜ್ಯ. ನಮ್ಮ ಶಿವಮೊಗ್ಗ ಜಿಲ್ಲೆಯ ಸೊರಬ ಸಾಗರ ಈ ಪ್ರಾಂತ್ಯಗಳಲ್ಲಿ ಗಂಧದ ಮರಗಳಿಂದ ಗುಡಿಕಾರರು ಅನೇಕ ಚೆಂದವಾದಂತಹ ಬೊಂಬೆಗಳನ್ನು ತಯಾರು ಮಾಡುತ್ತಾರೆ. ಅವುಗಳನ್ನು ವಿದೇಶಗಳಿಗೆ ಕಳುಹಿಸಿದರೆ ಬೇಕಾದಷ್ಟು ಮಾರ್ಕೆಟ್ ಇದೆ. ಅವರು ಯಾಂತ್ರಿಕ ಯುಗದವರು. ಅವರ ಕೈಯ್ಯಲ್ಲಿ ಕೆಲಸ ಮಾಡಿ ಗೊತ್ತಿಲ್ಲ. ಸೇಲ್ಸ್ ಇಂಟರ್ ನ್ಯಾಷನಲ್ ರವರು ಏತಕ್ಕೆ ಇದನ್ನು ಪ್ರಚಾರ ಮಾಡಬಾರದು. ಇದನ್ನೆ ಅವಲಂಬಿಸಿರತಕ್ಕ ಗುಡಿಕಾರರಿಗೆ ಜೀವನ ಮಾಡಲು ಅನುಕೂಲವಾಗುತ್ತದೆ, ಅವರಿಗೆ ಹೆಚ್ಚಿನ ರೀತಿಯಲ್ಲಿ ಪ್ರೋತ್ಸಾಹ ಕೊಟ್ಟ ಹಾಗೆ ಆಗುತ್ತದೆ. ಈ ರೀತಿಯ ಕೆಲವೊಂದು ಕೆಲಸಗಳನ್ನು ಏತಕ್ಕೆ ಮಾಡಬಾರದೆಂದು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಇದುವರೆಗೆ ಮಾತನಾಡಲು ಸಮಯ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ರಾಮಭಟ್ (ಪುತ್ತೂರು).— ಮಾನ್ಯ ಅಧ್ಯಕ್ಷರೇ ನಾನು ಕೈಗಾರಿಕಾ ಬೇಡಿಕೆಯ ಬಗ್ಗೆ ಮಾತ್ರ ೫ ನಿಮಿಷ ಮಾತನಾಡುತ್ತೇನೆ. ಈಗ ನಮ್ಮಲ್ಲಿ ಕೈಗಾರಿಕಾ ಅಭಿವೃದ್ಧಿಯ ಬಗ್ಗೆ ಯಾವುದೇ ಒಂದು ಸಂಶೋಧನೆ, ಅದರ ಬಗ್ಗೆ ಪ್ರತ್ಯೇಕವಾದಂತಹ ಇಲಾಖೆ ಇದೆಯೇ? ಅದರ ಬಗ್ಗೆ ಹೆಚ್ಚು ಗಮನಕೊಡಬೇಕೆಂದು ವಿಶೇಷವಾಗಿ ಈ ಸಂದರ್ಭದಲ್ಲಿ ಕೇಳುತ್ತೇನೆ. ಏಕೆಂದರೆ ಇಡೀ ಜಗತ್ತಿಗೆ ಒಂದು ಹೊಸ ದಿಕ್ಕನ್ನು ತೋರಿಸತಕ್ಕಂತಹ ವಿಶೇಷವಾದಂತಹ ಸಂಶೋಧನೆಯನ್ನು ಶಿವಮೊಗ್ಗದ ಎಸ್. ಕುಮಾರ್ ಎಂದು ಹೇಳುವಂತಹವರು ಇತ್ತೀಚೆಗೆ ಮಾಡಿ ತೋರಿಸಿದ್ದಾರೆ. ನಾವು ಇವತ್ತು ಇಂಧನವನ್ನು ಉಪಯೋಗ ಮಾಡುತ್ತಿದ್ದೇವೆ. ಅಂದರೆ ಡೀಸಲ್, ಸೀಮೆ ಎಣ್ಣೆ ಮತ್ತು ಪೆಟ್ರೋಲ್. ಸಾಧಾರಣವಾಗಿ ಕೇವಲ ಗಾಳಿಯಿಂದ ಒಂದು ಯಂತ್ರವನ್ನು ನಡೆಸಬಹುದೆಂದು ಹೇಳುವಂತಹ ಒಂದು

ಪ್ರಯೋಗವನ್ನು ಧರ್ಮಸ್ಥಳದ ಧರ್ಮಾಧಿಕಾರಿಗಳಾದ ಶ್ರೀ ಡಿ. ವಿರೇಂದ್ರ ಹೆಗ್ಗಡೆಯವರ ಎದುರಿನಲ್ಲಿ ಮಾಡಿ ತೋರಿಸಿದ್ದಾರೆ. ಅದು ಪತ್ರಿಕೆಗಳಲ್ಲಿ ಪ್ರಕಟವಾದದನ್ನು ತಮಗೆ ಕೊಡುತ್ತೇನೆ.

ಉಪಾಧ್ಯಕ್ಷರು.— ತಾವು ಓದುವ ಅವಶ್ಯಕತೆ ಇಲ್ಲ ಹಾಗೆಯೇ ಹೇಳಿ.

ಶ್ರೀ ಕೆ. ರಾಮಭಟ್.— ದಿನಾಂಕ ೧-೬-೧೯೮೨ ರಂದು ಮಾಡಿ ತೋರಿಸಿದ್ದು. ಇಂದು ಶ್ರೀ ಕುಮಾರ್ ಎನ್ನುವರು ಜೀಪಿನ ಇಂಜನ್‌ನನ್ನು ಕಳಚಿ ಅದರ ಸ್ಥಾನದಲ್ಲಿ ಗಾಳಿಯಿಂದಲೇ ಚಲಿಸುವಂತೆ ಮಾಡುವ ತನ್ನ ನೂತನ ಯಂತ್ರವನ್ನು ಅಳವಡಿಸಿ ಅದನ್ನು ಓಡಿಸಿದರು. ಸಧ್ಯಕ್ಕೆ ೫-೧೦ ಮೈಲಿ ಓಡುವ ಜೀಪನ್ನು ಓಡಿಸಿದ್ದು ಅಲ್ಲದೆ ಹಿಂದಕ್ಕೂ ಮುಂದಕ್ಕೂ ಓಡಿಸಿ ತೋರಿಸಿದರು. ಸುಮಾರು ಒಂದೂವರೆ ಫರ್ಲಾಂಗ್ ದೂರ ಈ ಪ್ರಯೋಗ ಜರುಗಿತು, ಅದನ್ನು ಅವರು ಪಂಪಿಗೆ ಅಳವಡಿಸಿ ಸ್ಟ್ಯಾಂಡರ್ಡ್-೨೦ ವ್ಯಾನಿಗೆ ಅದನ್ನು ಚಲಾವಣೆ ಮಾಡಿ ತೋರಿಸಿದ್ದಾರೆ ಇಷ್ಟೊಂದು ಪ್ರಮುಖವಾದಂತಹ ಸಂಶೋಧನೆ ನಮ್ಮ ರಾಜ್ಯದಲ್ಲಿ ಆಗಿರುವಾಗ ಇಡೀ ರಾಜ್ಯವೇ ಹೆಮ್ಮೆಪಟ್ಟು ಕೊಂಡು ನೋಡಬೇಕಾಗಿದೆ. ನಮ್ಮಲ್ಲಿ ಮಾಸ್ತಿ ಎಂದು ನಡೆಯುತ್ತವೆ. ಅಲ್ಲಿಗೆ ಒಂದು ತಂಡವನ್ನು ಕಳುಹಿಸಿದ್ದಾರೆ. ಅದರ ಬಗ್ಗೆ ಸಂಶೋಧನೆ ಮಾಡಲಾಗಿದೆ. ಇಷ್ಟೊಂದು ಪ್ರಾಮುಖ್ಯವಾದಂತಹ ಕ್ರಾಂತಿ ಕಾರಕವಾದಂತಹ ಇಡೀ ಜಗತ್ತಿನಲ್ಲಿಯೇ ಮಾಡಲಿಕ್ಕೆ ಸಾಧ್ಯವಾಗದೆ ಇರುವಂತಹ ಸಂದರ್ಭದಲ್ಲಿ ಮಾಡಿದ್ದಾರೆ. ಅದರ ಬಗ್ಗೆ ಸರ್ಕಾರ ಓಡೋಡಿ ಹೋಗಿ ಅದರ ಸದುಪಯೋಗ ಮಾಡಿಕೊಳ್ಳಲಿಕ್ಕೆ ಓಡೋಡಿ ಹೋಗಿ ಕೆಲಸ ಮಾಡಬೇಕಾಗಿತ್ತು. ಇದರ ಬಗ್ಗೆ ಸರ್ಕಾರ ಏಕೆ ನಿದ್ರೆ ಮಾಡುತ್ತಿವೆ ಎನ್ನತಕ್ಕ ಪ್ರಶ್ನೆಯನ್ನು ಕೇಳಲಿಕ್ಕೆ ಇಷ್ಟಪಡುತ್ತೇನೆ. ಇದೊಂದು ಮಹತ್ವವಾದಂತಹ ಕ್ರಾಂತಿಕಾರಕವಾದ ಬದಲಾವಣೆ. ಇವತ್ತು ಅದನ್ನು ಎಷ್ಟು ಗಂಭೀರವಾಗಿ ತೆಗೆದುಕೊಳ್ಳಬೇಕೋ ಅಷ್ಟು ಗಂಭೀರವಾಗಿ ತೆಗೆದುಕೊಳ್ಳುತ್ತಿಲ್ಲ. ಅದರ ಬಗ್ಗೆ ಸರ್ಕಾರವನ್ನು ವಿಶೇಷವಾಗಿ ಒತ್ತಾಯ ಮಾಡಿ ಕೇಳುತ್ತಿದ್ದೇನೆ, ಪೆಟ್ರೋಲ್, ಡೀಸಲ್ ಇವುಗಳಿಗೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದೇವೆ. ತಾವು ಇದಕ್ಕೆ ೧ ಕೋಟಿ ರೂಪಾಯಿ ಪ್ರತ್ಯೇಕ ಇಡಿ, ಅದಕ್ಕೆ ಅವರನ್ನು ಬರಮಾಡಿ ಅತನ್ನು ಯಾವ ರೀತಿ ಇನ್ನೂ ಪರಿಸ್ಕರಿಸಿ ಇದಕ್ಕಿಂತ ತೀವ್ರವಾಗಿ ಪರಿಸ್ಕರಣೆ ಮಾಡಿ ಲಾರ್ಜ್‌ಸ್ಕೇಲ್‌ನಲ್ಲಿ ಪ್ರೊಡಕ್ಷನ್ ಯಾವ ರೀತಿಯಲ್ಲಿ ಮಾಡಬಹುದು ಎನ್ನುವುದರ ಬಗ್ಗೆ ಯೋಚನೆ ಮಾಡಬೇಕು. ಕೇಂದ್ರ ಸರ್ಕಾರದೊಡನೆ ಅವಶ್ಯವಿದ್ದರೆ ಮಾತನಾಡಿ. ಅದರ ಬಗ್ಗೆ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಹೇಳುವಂತಹ ಒತ್ತಾಯವನ್ನು ಈ ಸಂದರ್ಭದಲ್ಲಿ ಸರ್ಕಾರದ ಮೇಲೆ ಹಾಕುತ್ತೇನೆ. ಅದೇ ರೀತಿ ಗೋಬರ್ ಗ್ಯಾಸ್ ಪ್ಲಾಂಟ್‌ಗಳನ್ನು ಮಾಡುತ್ತೀರಿ ಅದರ ಕೀರ್ತಿ ಕೂಡ ಶಿವಮೊಗ್ಗ ಜಿಲ್ಲೆಗೆ ಹೋಗಬೇಕು. ಅದನ್ನು ಮಾಡುವಾಗ ಶಿವಮೊಗ್ಗದ ಪ್ರತಿಭಾವಂತ ವ್ಯಕ್ತಿ, ಕೇವಲ ೨ ಸಾವಿರ ರೂಪಾಯಿಗಳಲ್ಲಿ, ಇವತ್ತು ನಾವು ೨ ಸಾವಿರ ರೂಪಾಯಿಗಳನ್ನು ಸಬ್ಸಿಡಿ ಕೊಡುತ್ತಿದ್ದೇವೆ ೨ ಸಾವಿರ ರೂಪಾಯಿಗಳಲ್ಲಿ ಒಂದು ಡ್ರಮ್ ಮಾಡಿ ಅದು ೨ ಚೀಲ ಸಿಮೆಂಟ್ ಹಾಕಿ ಮಾಡಬಹುದು ಎಂದು ಮಾಡಿ ತೋರಿಸಿದ್ದಾರೆ, ಇದನ್ನೆಲ್ಲಾ ಸರ್ಕಾರ ಏತಕ್ಕೆ ನೋಡುತ್ತಿಲ್ಲ. ೧೨ ಸಾವಿರ ರೂಪಾಯಿಗಳನ್ನು ಗೋಬರ್ ಗ್ಯಾಸ್ ಪ್ಲಾಂಟ್‌ಗಳಿಗೆ ಖರ್ಚು ಮಾಡುತ್ತಿದ್ದೇವೆ, ಇದನ್ನು ಸರ್ಕಾರ ತೀವ್ರವಾಗಿ ಪರಿಶೀಲನೆ ಮಾಡುತ್ತಿಲ್ಲ ಎನ್ನುವ ಅಂಶವನ್ನು ನಾನು ಈ ಸಂದರ್ಭದಲ್ಲಿ ಒತ್ತಿ ಹೇಳುತ್ತೇನೆ, ಈ ರೀತಿ ಬದಲಾವಣೆ ಮಾಡುವಂತಹ ಯುವಕರು ಬಹಳ ಜನರಿದ್ದಾರೆ. ಅವರೇನು ಎಂ.ಇ. ಡಿಗ್ರಿ ಹೊಂದಿದವರಲ್ಲ, ಸಾಮಾನ್ಯ ವ್ಯಕ್ತಿಗಳು, ಅವರೇನು ದೊಡ್ಡ ವಿಜ್ಞಾನಿಗಳಲ್ಲ. ಅವರೇನು ಕಲಿತು ಬಂದವರೇನಲ್ಲ. ಯಾವುದೋ ಸಂದರ್ಭದಲ್ಲಿ ದೇವರು ಅವರಿಗೆ ಅಂತಹ ಶಕ್ತಿಯನ್ನು ಕೊಡುತ್ತಾನೆ. ನಮ್ಮಲ್ಲಿ ಅಂತಹ ಶಕ್ತಿಯನ್ನು ಸದುಪಯೋಗ ಮಾಡುತ್ತಿಲ್ಲ. ಅದರ ಕಡೆಗೆ ನಮ್ಮಲ್ಲಿ ವಿಶೇಷ ಆಸಕ್ತಿ ಇಲ್ಲವೆಂದು ಹೇಳುತ್ತೇನೆ.

Post harvest technology ಇದರಲ್ಲಿ ಸಂಪೂರ್ಣವಾಗಿ ಹಿಂದೆ ಬಿದ್ದಿವೆ. ಒಂದು ಉದಾಹರಣೆ ಕೊಡುತ್ತೇನೆ, ನಮ್ಮಲ್ಲಿ ಸುಳ್ಯ ಅಲ್ಲಿ ತೆಂಗಿನ ಹಾಳೆಯಿಂದ ಕಪ್ಪುಗಳನ್ನು ಮಾಡುತ್ತಿದ್ದಾರೆ. ತಮಗೆ ಗೊತ್ತಿರಬಹುದು ರೈಲ್ವೆಯಲ್ಲಿ ಚಹ ಕುಡಿಯಲು ಮಣ್ಣಿನ ಕಪ್ಪುಗಳನ್ನು ಕೊಡುತ್ತಿದ್ದರು, ಚಹ ಕುಡಿದ ಮೇಲೆ ಬೀಸಾಡುತ್ತಿದ್ದರು. ಅದೇ ರೀತಿ ತೆಂಗಿನ ಹಾಳೆಯಿಂದ ಕಪ್ಪುಗಳನ್ನು ಮಾಡುತ್ತಿದ್ದಾರೆ. ಒಬ್ಬ ಹುಡುಗ ಅಲ್ಪಸ್ವಲ್ಪ ಬಂಡವಾಳ ಹಾಕಿಕೊಂಡು ಬಹಳ ಯಶಸ್ವಿಯಾಗಿ ನಡೆಸುತ್ತಿದ್ದಾನೆ ಅದು ಬೆಂಗಳೂರಿನ ಮಾರುಕಟ್ಟೆಗೂ ಬರುತ್ತಾ ಉಂಟು. ಹಾಗೆಯೇ ಕೇರಳದಲ್ಲಿ ಕೆಲವು ಮಂದಿ ಇದೇ ಹಾಳೆಯಿಂದ ಕಬ್ಬಾರ್ಡ್ ಮಾಡಿದ್ದಾರೆ, ಚಪ್ಪಲಿಗಳನ್ನು ಮಾಡಿದ್ದಾರೆ,

ಶ್ರೀ ಯು. ಬಿ. ಬೋರ್ಕರ್.— ಮಾನ್ಯ ಸದಸ್ಯರು ಹೇಳುವುದು ಅಡಿಕೆ ಹಾಳೆಯೋ ತೆಂಗಿನ ಹಾಳೆಯೋ?

ಶ್ರೀ ಕೆ. ರಾಮಭಟ್.— ತೆಂಗಿನ ಹಾಳೆಯಲ್ಲ, ಅಡಿಕೆ ಹಾಳೆ ದಯವಿಟ್ಟು ಕ್ಷಮಿಸಿ. ಅಡಿಕೆ ಹಾಳೆ ಕಚ್ಚಾ ವಸ್ತುವಾಗಿ ವೇಸ್ಟ್ ಆಗುತ್ತಿದೆ. ಇಂತಹ ವಸ್ತುಗಳನ್ನು ಪ್ರಯೋಜನ ಮಾಡಿಕೊಳ್ಳಲು ಸಂಶೋಧನೆ ಅಗತ್ಯ. ಆರೀತಿ ಪ್ರಯೋಜನ ಮಾಡಿಕೊಳ್ಳಲು ಯಾವ ರೀತಿಯ ಪ್ರಯೋಗ ನಡೆದಿದೆ? ಅದನ್ನು ಸರ್ಕಾರದ ಪತಿಯಿಂದ ಮಾನ್ಯ ಸಚಿವರು ಉತ್ತರ ಹೇಳುವಾಗ ಹೇಳಬೇಕು. ಅದರ ಬಗ್ಗೆ ಸಂಪೂರ್ಣವಾಗಿ ಅಲಕ್ಷ್ಯವಾಗಿದೆ. ಮೂರು ವಿಷಯಗಳನ್ನು ಮಾತ್ರ ಈ ಸಂದರ್ಭದಲ್ಲಿ ಹೇಳಿದ್ದೇನೆ, ಸರ್ಕಾರ ಇದರ ಬಗ್ಗೆ ವಿಶೇಷವಾಗಿ ಗಮನಕೊಟ್ಟು ಅದನ್ನು ಉಪಯೋಗ ಮಾಡಿಕೊಳ್ಳಬೇಕೆಂದು ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

4-00 P. M.

†SRI K. BHASKAR NAIDU (Bellary).—Mr. Speaker, Sir speaking on the Demands placed today before the House, I limit myself to Industries. Industrial Development, unlike agricultural development, should be viewed in the international context. Whereas agricultural development will have necessarily to be anchored to the soil and climatic conditions of each country· industrial development has no such barriers excepting perhaps the need to adopt technologies. With regard to international development, the United Nations Industrial Development Organisation's conference that was held in Lima in 1974 March 12, has done a great service all over the world, particularly for the under developed countries. I would like to quote from the extract.

> "that is view of the low percentage share of the developed countries in total world industrial production recalling the General Assembly resolution on 3306 of 14th December 1974. I am taking into account the policies and guidelines on the qualitative recommendations made in the present declaration that their share should be increased to the maximum possible to extent and as for as possible to at least 25% of the total world industrial production by the year 2000 A.D. While making every endeavour to ensure that industrial production is distributed among the developed countries as evenly as possible-"

This implies that the developing countries would increase their industrial growth at a rate considerably higher than 8 per cent recommended by the International Development Stretegy for the Second United Nations Development Change. So, the world at best has thought that is should not remain only in one sector and one big country. They thought that they must help all other underdeveloped countries in a way that they can come up in a phased manner. Their progress has been really helpful to us and they have coms for-

ward to help the underdeveloped countries. Lima declaration adopted in 1975 was strengthened by another declaration adopted at the 3rd Conference of United Nations Industrial Development Organisation held in July 1980. I would like to quote from the extracts.

> "stressed that attaining Lima target and its related objectives on the process of industrialisation of developing countries especially the ill-developed among them requires exceptional integral measures to the national, regional, sub-regional and inter-regional levels by developing countries themselves within the frame work and the collective self-reliance measures must also be taken by industrialised countries which will help for free flow of developing countries of special and additional financial and technical resources of free exercise of technology and market. As such, measures should guarantee the developing countries adequate and free availability of essential inputs, material and skilled human resources."

So, after this Delhi meeting the world has felt that India is a country that could be developed, that could be depended upon because previously we had too many controls, inadequate raw material, shortage of power which is staggering in our faces, has slowly started moving thereby the foreigners who where shy of coming and investing in our country have come forward on lien basis.

Sir, the I.M.F. loan has come in a big way. This is a proof to say that the world powers have though that other minor and small countries should also come forward. I hope hon. members will bear with me if I go through this because what has been given to this country in the I.M.F. loan is 5.75 million dollars, i.e. about 5,334 crores. I would read the names of countries so that the House would know how much money they have got and how much money we have got. As already said, we have got 5.75 million dollars. The other countries are :

Moracco	...	0.82
Senegal	...	0.18
Sudan	...	0.43
Bangla Desh	...	0.8
Pakistan	...	1.26
Gayana	...	0.10
Zairi	...	0.97

Phillipines	...	0.26
Sri Lanka	...	0.26
Zambia	...	0.8
Egypt	...	0.6
Tanzania	...	0.015

If all these countries are put together, totally would be about 7.7 million dollars but whereas only India has got 5.75 million dollars. Some of my friends might say that it is a wrong policy. While I am not prepared to speak politics on this issue but at leas I thin: the nations that have come forward to think that we have to come up. Whatever might be their feelings I don't go d ep into that but I would like to say that the foreign countries have thought that these downtrodden countries and these underdeveloped countries should also come up industrially. Sir, people may ask what the I M. F. loan has got to do with this. Sir, out of this top most priority is being given for augmenting domestic fertilisers, building up thermal factorie, building up electricity in our country which are in a very poor condition. Apart from this I would like to mention about modernisation of coal expansion. Sir, coal expansion is just reminding me of our thermal plant in Raichur Sir what is that we have done in Karnataka? I would like to know it. I was really wondering what we have done after the independence and what we have achieved before our independence. I really compliment the Maharaja of Mysore who had a great vition He has started Bhadravathi Steel factory and many other big projects. What is that you have got, Sir, I don't know whether anyone of the Ministers could tell me what is our achievement after the independence. I am not asking only about this term. I am asking, right from the independence what has Karnataka got? Excepting a little such as MICO factory, NGEF, we have not got anything. We cannot boast ourselves of what we have achieved. We simply say that we are industrially very very far. There was a time when I heard that Karnataka had plenty of power but now we are powerless people, Sir Let me tell you, we don't have any power. What is the reason, Sir. I was reading the other day in a newspaper that the Railways have not improved in our State because of some sleepers not being given to Railways. What a shame, Sir, What was the length and breadth of the Railways during the period of Maharaja, which was known as "Mysore Railways"? How much it was expanded. After Independence I think we have not gone much beyond excepting painting a few carriages and painting few suggestions in our mother tongue. I don't think railways have done any improvement in Karnataka.

I do not think that the railways have done anything. At least, Madras has got the railway extended up to Salem. The railway is very important thing. Because that is the most important transport system in our country. In America, of course it has become an absolute thing. I quite agree with that because the road transport system is such that they move so much by railways If the raw materials for industries were to come down south or to Karnataka, one has to bring them from Bombay port or even from Mangalore port. From Bombay, he has to put it in wagons. Nowa days wagons are in a shortage. He has to comes to Miraj and there he has to tranship again. If he comes via Guntakal, he has to tranship it at Guntakal. You can say, alright, let him go up to Madras. Why not send him down up to Triconamalee and bring it? The most important thing is railway line. We have absolutely not increased by one mile our railway system. People may say that they find conform now in travelling.

ಶ್ರೀ ಕೆ. ರಾಮಭಟ್.—ಸ್ವಾಮಿ, ಹಾಸನ ಮಂಗಳೂರು ರೈಲ್ವೆ ಓಡಾಡುತ್ತಾ ಇದೆಯೆಲ್ಲಾ ಸ್ವಾಮಿ ?

SRI K. BHASKAR NAIDU.—I know Hassan-Mangalore railway is limping. We must be ashamed to say that we have not got a straight line from Mangalore Port town to our capital city of Karnatakas Bangalore Fighting on language will not help us. What is happening in other states ? When I went to the Railway Minister', chamber two months' back in Delhi, I saw a chart showing cluster of train services crisscrossing. What is ours? From Mirag to Bangalore. I will tell one more thing. A train that leaves Hubli comes to our capital city, Bangalore late than a train that leaves Andhra capital and reach Bangalore. That train has precedence over other trains that come to Bangalore. A Kannada mother or a Karnataka man, who travels by the train has to leave at 6'0 Clock in the evening and come to Bangalore at 9.30 a. m. But a man from Hyderabad, who has absolutely no business in Bangalore is brought to the capital of Karnataka by 6.30. That is what it is. The Minister has not changed the time table. Why I am telling this is it is easy to say that we do not get sleepers. It is just like saying I do not buy horse because I did not get horse shoe. Could that be analogy for this? Development of this state, depends much on the communications we have. You take Air ports for example. How many air services have you got in Karnataka ? Only one, that is a Plane comes from Delhi. We think it is a great thing. Look at our neighbour Tamilnadu It has got in Madras and in so many other places. What we have got is a small run-way. We are happy that God has spared us one small run-way

at Malpe or somewhere. We have not got any international air port. But, look at other places like Gujarat. Why I am saying this is, these are very important. If you want to develop the State, transport is the most important thing. If our country wants to develop industrially, India must also have good railway system and good connections.

Sir, I would say that KSIIDC is doing some good work. But they are very small. I am not satisfied with that but they are doing their best. I have no grouse against them

ಶ್ರೀ ಜೆ. ಹೆಚ್. ಪಟೇಲ್.—ನಿಮ್ಮ ವಿಜಯನಗರದ ಉಕ್ಕು ಮಾರ್ಕೆಟ್‌ಗೆ ಬಂದಿದೆಯೇ

SRI K. BHASKAR NAIDU —You have got to speak about it. You have got to fight with me. I am not prepared to fight along with you for the languoge but I am prepared to fight with you for my steel factory at Vijayanagar. I know it has been a myth.

ಶ್ರೀ ಪಿ, ರಾಮದೇವ್.—ಆ ಸಮಸ್ಯೆ ಇರುವವರೆಗೂ ಕೂಡ ನೀವು ಹಾಗೇನೇ ಬರುತ್ತದೆ ಬರುತ್ತದೆ ಅಂತ ಸದಾ ನಿಮ್ಮ ಮನಸ್ಸಿಲ್ಲಿಟ್ಟುಕೊಳ್ಳಬೇಕು ಅಷ್ಟೆ.

SRI K. BHASKAR NAIDU.—Please sit Mr. Ramdev. I will fight for this much better than you. Language is very very small as far as I am concerned because I can communicate with you in any language. But the other day my friend was telling that there are so many Bahubalis in the street. The stomachs of those Bahubalis won't fill in if you talk in Kannada. Factories must come up, potentialities to work, water, power and machinery and then only their stomcks would fill in. Think of my steel factory, From Shimoga right up to Bellary District will be "Rohar value" that is how they call in Germany. The whole family atleast will have two square meals a day. When I first came into this House I came with open mouth and as a steel man because I was coming from place where I thought steel factory would come and drinking water would be given. Neither water nor twe steel factory I am able to find to-day even though I am singing my swanfl song.

ಶ್ರೀ ಪಿ. ರಾಮದೇವ್.—ಬಳ್ಳಾರಿಯವರು ಕನ್ನಡ ಮಾತನಾಡುವವರೆಗೂ ಕೂಡ ನಿಮ್ಮಗೆ ಅಲ್ಲಿ ಸ್ಟೀಲ್ ಪ್ಲಾಂಟ್ ಬರುವುದಿಲ್ಲ. ಕನ್ನಡಿಗರಿಗೆ ಆ ಫ್ಯಾಕ್ಟರಿ ಬರಬೇಕು ಅನ್ನುವುದಾದರೆ ಕನ್ನಡಿಗರಿಗೆ, ಅದರಲ್ಲಿ ಉದ್ಯೋಗ ಸಿಗಬೇಕು ಅನ್ನುವುದಾದರೆ ನೀವು ಮೊದಲು ಕನ್ನಡವನ್ನು ಕಲಿಯಬೇಕು. ನೀವು ಎಲ್ಲಿಯವರೆಗೆ ಕನ್ನಡ ಕಲಿಯುವುದಿಲ್ಲವೋ ಅಲ್ಲಿಯವರೆಗೂ ಅದು ಹಾಗೆಯೇ ಇರುತ್ತದೆ.

SRI K. BHASKAR NAIDU.—What a shame Mr. Ramdev that a man like you have not associated himself or raised his little finger fight for this steel frctory. You have never voiced your feeling all these days. I thought any member must speak about this steel factory, factory wh a whould give potential employment for a lakh of people, by which the face of Karnataka will change, the problem of unemployment will be solved.

ಶ್ರೀ ಜೆ. ಹೆಚ್. ಪಟೇಲ್.—ತಾವು ಹೇಳಿದರಲ್ಲಾ ಈ ಸದನದ ಸದಸ್ಯರು ಯಾರು ಕೂಡ ಇದರ ಬಗ್ಗೆ ಮಾತನಾಡಲಿಲ್ಲ ಎಂದು ಏತಕ್ಕೆ ಗೊತ್ತೇ ? ನೀವು ೩ ವರ್ಷದಿಂದಲು ಇದರ ಬಗ್ಗೆ ಹಾಕಿದ ಬೊಬ್ಬೆ ನೋಡಿದರೆ ಏನಾದರೂ ಬರುತ್ತದೋ ಏನೋ ಅಂತ ತಿಳಿದುಕೊಂಡಿದ್ದೆವು. ಯಾವಾಗ ಸರ್ಕಾರದವರು ನಿಮ್ಮ ಬೊಬ್ಬೆ ನೋಡಿದರೂ ಕೂಡ ಆ ಸ್ಟೀಲ್ ಪ್ಲಾಂಟ್ ಬರುವುದಕ್ಕೆ ಮನಸ್ಸು ಮಾಡಲಿಲ್ಲವೋ ಇನ್ನು ನಾವುಗಳು ಮಾತನಾಡಿದರೆ ಏನು ಪ್ರಯೋಜನವಾದೀತು ಎಂದು ತಿಳಿದುಕೊಂಡು ಯಾರು ಸಹ ಇದರ ಬಗ್ಗೆ ಮಾತನಾಡುವುದಕ್ಕೆ ಹೋಗಲಿಲ್ಲಾ

SRI K. BHASKAR NAIDU.—I am just saying that a man who was a Minister once told that this steel factory cannot come up at Hospet because there is no broad guage line between Hospet and Guntakal. What a state of affa rs ? Broad guage line is there from 1967, only put for the sake of transporting from Hospet. My feeling is that Sri M. Veerappa Moily. is the man who could get it and he should fight for it. Otherwise. let all of us march in one procession, fight like the Gokak battle. I know, tomorrow morning papers will say that Bhaskar Naidu also spoke.

ಶ್ರೀ ಪಿ. ರಾಂದೇವ್.—ನಮ್ಮಲ್ಲಿ ಒಂದು ಗಾದೆ ಇದೆ. ಅದೇನೆಂದರೆ ಉತ್ತರನ ಪೌರುಷ ಒಲೆ ಮುಂದೆ ಅಂತ. ಹಾಗೆ ನಿಮ್ಮ ಪೌರುಷ. ಇಲ್ಲಿ ಈ ತರಹವಾಗಿ ಮಾತನಾಡಿದ ಮೇಲೆ ನಿಮ್ಮ ಮನೆಗೆ ಹೋಗಿಬಿಡುತ್ತೀರಿ ಮತ್ತೇನೂ ಮಾಡುವುದಕ್ಕೆ ಹೋಗುವುದಿಲ್ಲ. ಆದರಿಂದ ಬರುವುದಿಲ್ಲ. ಏನಾದರೂ ನಿಮಗೆ ವಿಜಯನಗರ ಸ್ಟೀಲ್ ಪ್ಲಾಂಟ್ ಬೇಕು ಅನ್ನುವುದಾದರೆ ಸರ್ಕಾರದ ವಿರುದ್ಧವಾಗಿ ಏನಾದರೂ ಒಂದು ದಿವಸ ಮೆರೆವಣಿಗೆ ಏನಾದರೂ ನಡೆಸಿದ್ದೀರಾ?

ಶ್ರೀ ಕೆ. ಭಾಸ್ಕರನಾಯಿಡು.—ನಾವೆಲ್ಲಾ ಕನ್ನಡಿಗರು ಅಂತ ಅನಿಸಿಕೊಂಡವರು ನಾವು ನೀವೂ ಎಲ್ಲಾ ಯಾವತ್ತಾದರೂ ಒಂದು ದಿವಸ ಕುತುಕೊಂಡು ವಿಜಯನಗರ ಸ್ಟೀಲ್ ಪ್ಲಾಂಟ್ ನಮ್ಮ ಕರ್ನಾಟಕಕ್ಕೆ ಯಾಕೆ ಬರಲಿಲ್ಲಾ ಅಂತ ಅವರನ್ನು ಕೇಳಿದ್ದೀರಾ ? ಈ ಬಗ್ಗೆ ಅವರೊಂದಿಗೆ ಏನಾದರೂ ಮಾತನಾಡಿದ್ದೀರಾ ? ನಿಮಗೆ ಬೇಕಾಗಿರುವುದೇನೆಂದರೆ ನಮ್ಮಲ್ಲಿಗೆ ಆ ಕಡೆಯಿಂದ ಎಷ್ಟು ಜನ ಬಂದರು, ಇಲ್ಲಿಂದ ಎಷ್ಟು ಜನ ಆ ಕಡೆಗೆ ಹೋದರು ಅನ್ನುವುದು. ನಿಮ್ಮಿಂದ ನಮ್ಮ ಕಡೆಗೆ ೪ ಜನ ಬಂದಿದ್ದಾರೆ, ನಮ್ಮ ಕಡೆಯಿಂದ ನಿಮ್ಮ ಕಡೆಗೆ ೩ ಜನ ಹೋಗಿದ್ದಾರೆ, ಗೊತ್ತಾಯಿತೇ ಸ್ವಾಮಿ ?

ಶ್ರೀ ಹೆಚ್. ಗಂಗಾಧರನ್.—ಈ ವಿಜಯನಗರ ಸ್ಟೀಲ್ ಪ್ಲಾಂಟ್ ಬಗ್ಗೆ ಕೇಂದ್ರ ಸರ್ಕಾರಕ್ಕೆ ೧೦ ವರ್ಷದಿಂದಲೂ ನಾವು ಹೇಳುತ್ತಾ ಇದ್ದೇವೆ.

SRI K. BHASKAR NAIDU.— Yes. But, how much effort did you do for Karnataka ?

SRI P. RAMDEV.— Sri Naidu, please come this side and under your leadership we w ll wage a battle.

SRI K. BHASKAR NAIDU.— Agreed. Sri Moily and others will gladly send me the moment you get the steel factory. I am prepared to come. Are you prepared to accept that by calling you will get it? No. You spend more time on swimming. I do not do that. Do not worry.

In Bellary there was a fire this morning and an explosion was there in a small place where they make crackers. I do not know whether you have that information. Somebody phoned to me. I believe 15 deaths have taken place. In a small industrial area which

has been licensed to prepare crackers. I believe 4 houses have been broken. I am mentioning it because, fortunately, to-day there is the demand. People must take care of industrial areas. It is not that only in Bangalore rules must be strictly followed. It is not that only in Bangalore people must be given drinking water. It is not only people in Bangalore should be looked after Every village and every place in Karnataka must be considered on par with this.

About industrial distribution of the material, I do not like to speak about other districts because I do not know. But, in Bellary they have got it. You cannot get 4 lorries at Hospet. It is very costly there. To get it from Bongalore is not cheaper. I do not know why they think of district headquarters. If only they had thought on those lines Bangalore would not have had this plight, Sri Ramdev. Bangalore had enough water. Pollution in the city is so much because of industries. There is no use of having them round about Bangalore. What is the use ? People are unemployed everywhere in the country. You should ask the people to go to the south. The crime is increasing in Bangalore because all sorts of people come here. You get them away and give them avocation for their living. This is how you can develop Karnataka and not by holding flags, not by getting film stars as politicians. A politician is a politician. A film star is a film star. There is nothing that a film star can do for out country. He can only at best do to avoid income-tax.

My neighbouring districts Ananthapur and Kurnool are from Andhra. Yesterday Sri Deve Gowda said that there was a great advancement asfar as Andhra is concerned. I would like to draw your attention to the book Industrial Development of Andhra Pradesh'. It is stated there as follows.—

" The central subsidy by the size of the capital investment in different districts covered by it, it is obvious from the total amount Rs. 390.74 lakhs disbursed in 1972 to 1977 the Telangana region had the highest share of 64.03% This was followed by Rayalaseema's 34.53% and Coastal Andhra's only 1.44% Medak, Chittor and Kadappa are the first three districts which claim aggregate share of 53.86% in the total subsidies disbursed in the period 1972 to 1977. If you consider that the units which invests less than Rs. 10 lakhs belonging to the small sector, we shall find that this sector received only 23.26% of the subsidy in the State. However its share in the total number of units was quite substantial about 90%. In the districts of Medak, Kurnool Chittor and Kadappa only a few units received a disproportionately

highest share of subsidy. In Medak District the Nagarjuna scheme, in Andhra there are about 7 companies like this which have received 58. 0% of the total amount of subsidy granted in this district.'

So, it is not like that as Sri Deve Gowda said. There also it is only in certain districts, there is development. It may be for whatever reasons, may be for political reasons, may be for any reason that the money has been distributed, not in a proper way. Certain places are getting. I would like the Ministry for Industries to at least get up and say in a few days we are going to fiet a steel factory. What about the cement factory that my friend from Chittapur is shouting at everyday ? What is the consumption of cement in our State ? What is the export ? Cement that is produced in the Karnataka State is 22.000 M. Tonnes per month. It is subject to corruption. But, what is the amount that is needed ? It is much less. But, it is sent away. It is a funny way. Even about the sugar movement the sugar produced in Hospet goes to Mandya and Mandya sugar goes to Belgaum. It is a very funny way. I do not know who is at the bottom of this ? All the transport contractors are benefitted by this. I do not know as to how many cement factories are there. We have enough raw materials. Whatever may be the obligations that have come from Chittapur. I do not know as to whether they are going to see the light of the day. We can produce enough cement. We can produce enough iron. We can produce enough steel. Everything we can produce. But, our production capacity is not there. That is the whole problem. We do not have power. We do not have water. I assure you, through you, to this House that the Raichur Thermal Plant will also be another mess, because the movement of coal from Pattagundam in days to come will only be a problem. You are not going to get the coal from the Pattagundam. Cost of coal will go up so much higher unless you stop thinking of it from Nagalur. The power is the most essential thing. We have been neglecting it.

Finally looking at our charming Health Minister, I would like to put him a word about Wakfs. In Bellary where there are 33 1/3% of muslims, acres and acres of Wakfs property are being swallowed by certain interested persons. Time and again we have brought it to your notice. I do not think anything has been done.

(MR. SPEAKER in the Chair)

Sir, Sri Bhaskar Shetty asked me to conclude. I would conclude.

ಶ್ರೀ ಜಿ. ಬಸವಣ್ಣಪ್ಪ (ಹೊಳೇಹೊನ್ನೂರು).—ಸನ್ಮಾನ್ಯ ಅಧ್ಯಕ್ಷರೇ, ಇಂದು ಸಭೆಯ ಮುಂದೆ ಏನು ಬೇಡಿಕೆಗಳು ಇವೆ ಅವುಗಳನ್ನು ವಿರೋಧಿಸುತ್ತಾ ತಮ್ಮ ಮುಖಾಂತರ ಕೆಲವು ಸಲಹೆಗಳನ್ನು ಸರ್ಕಾರಕ್ಕೆ ಕೊಡಬಯಸುತ್ತೇನೆ. ನಿನ್ನೆಯ ದಿವಸ ಕೈಗಾರಿಕಾ ಇಲಾಖೆಯ ಬೇಡಿಕೆಯ ಬಗ್ಗೆ ಸಮಗ್ರವಾಗಿ ಈ ಮನೆಯ ಸದಸ್ಯರಾದ ಮಾನ್ಯ ದೇವೇಗೌಡ ಅವರು ಮಾತನಾಡಿದ್ದಾರೆ. ಅವರು ಮೈಸೂರು ಪೇಪರ್ ಮಿಲ್ಸ್ ಭದ್ರಾವತಿ ಮೂರು ಕೋಟಿ ರೂಪಾಯಿಗಳ ವಿಸ್ತರಣಾ ಯೋಜನೆಯ ಬಗ್ಗೆ ಸವಿಸ್ತಾರವಾಗಿ ಮಾತನಾಡಿದ್ದಾರೆ ಅಲ್ಲಿ ಕೆಲಸ ಯಾವರೀತಿಯಾಗಿ ಕುಂಠಿತವಾಗಿದೆ ಅದರ ಲೋಪದೋಷಗಳು ಏನು ಎನ್ನುವುದರ ಬಗ್ಗೆ ಅವರು ಮಾತನಾಡಿದ್ದಾರೆ. ಮಾನ್ಯ ದೇವೇಗೌಡ ಅವರು ಈ ಸಂಸ್ಥೆಯ ಮಾಜಿ ಅಧ್ಯಕ್ಷರಾದ ಶ್ರೀ ಜಾಫರ್ ಸೈಫುಲ್ಲಾ ಅವರ ಮೇಲೆ ಆಪಾದನೆಗಳನ್ನೂ ಕೂಡ ಮಾಡಿದ್ದಾರೆ. ಯಂತ್ರೋಪಕರಣಗಳನ್ನು ತರುವುದರ ವಿಚಾರದಲ್ಲಿ ಕೆಮಿಕಲ್ ಬ್ಯಾಂಕನಿಂದ ಹಣವನ್ನು ತರುವ ವಿಚಾರದಲ್ಲಿ...

ಅಧ್ಯಕ್ಷರು.—ಸಭೆಯಲ್ಲಿ ಇಲ್ಲದಿರುವ ಸದಸ್ಯರ ಹೆಸರುಗಳನ್ನು ಹೇಳುವುದು ಬೇಡ.

ಶ್ರೀ ಜಿ ಬಸವಣ್ಣಪ್ಪ.—ಕೆಮಿಕಲ್ ಬ್ಯಾಂಕ್‌ನಿಂದ ಹಣವನ್ನು ತರುವ ವಿಚಾರದಲ್ಲಿ ಇವರು ಕಮಿಷನ್‌ನ್ನು ತೆಗೆದುಕೊಂಡಿದ್ದಾರೆ ಎನ್ನತಕ್ಕ ಮಾತನ್ನು ಹೇಳುತ್ತಾ ಗುರುತರವಾದ ಆಪಾದನೆಗಳನ್ನು ಅವರು ಮಾಡಿದ್ದಾರೆ. ಸನ್ಮಾನ್ಯ ಅಧ್ಯಕ್ಷರೆ. ನಾನು ಇಲ್ಲಿ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರಬೇಕಾಗಿದೆ. ಏನೆಂದರೆ, ಈ ವ್ಯವಹಾರಗಳನ್ನು ಮಾಡುವಾಗ ಬರೀ ಹಿಂದಿನ ಅಧ್ಯಕ್ಷರೇ ಇದಕ್ಕೆ ಜವಾಬ್ದಾರರಲ್ಲ, ರಾಜ್ಯದ ಕೈಗಾರಿಕಾ ಮಂತ್ರಿಗಳು, ಕೇಂದ್ರದ ಕೈಗಾರಿಕಾ ಮಂತ್ರಿಗಳು, ಕೂಡಾ ಜವಾಬ್ದಾರರಿರುತ್ತಾರೆ. ಬರೀ ಹಿಂದಿನ ಮಾಜಿ ಅಧ್ಯಕ್ಷರಿಂದಲೇ ಇದಾಗಿದೆ ಎನ್ನುವ ಮಾತು ಸತ್ಯಕ್ಕೆ ದೂರವಾದುದು ಎನ್ನುವುದನ್ನು ನಾನು ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

೪.೩೦. ಪಿ.ಎಂ.

ಇದರ ಜೊತೆಗೆ ಮಾನ್ಯ ದೇವೇಗೌಡರು "ಹಕ್ಕಿಗೆ ಗುರಿಯಿಟ್ಟು ಹೊಡೆಯುವುದಕ್ಕೆ ಬದಲಾಗಿ ಗೂಡಿಗೆ ಗುರಿಯಿಟ್ಟು ಹೊಡೆದಿದ್ದಾರೆ" ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಈ ದೇಶದಲ್ಲಿ ಕಾಗದದ ಕೊರತೆ ಇದ್ದಾಗ ನ್ಯೂಸ್‌ಪ್ರಿಂಟ್‌ನ ಕೊರತೆ ಇದ್ದಾಗ ಭದ್ರಾವತಿಯ ಎಂ.ಪಿ.ಎಂ. ನಿಂದ ವಿಸ್ತರಣಾ ಯೋಜನೆಯನ್ನು ತೆಗೆದುಕೊಳ್ಳಬೇಕು ಎಂದು ಕೇಂದ್ರ ಸರ್ಕಾರ ನಿಲುವು ತೆಗೆದುಕೊಂಡು ೧೯೭೭ನೇ ಇಸವಿಯಲ್ಲಿ ಲೆಟರ್ ಆಫ್ ಇಂಡೆಂಟ್ ಕೊಟ್ಟಾಗ ಇದು ಕಾರ್ಯರೂಪಕ್ಕೆ ಬಂತು. ಹಿಂದಿನ ಮಾನ್ಯ ಅಧ್ಯಕ್ಷರು ಅದರ ಅಧಿಕಾರವನ್ನು ವಹಿಸಿಕೊಂಡಾಗ ಅದಕ್ಕೆ ೧೦೦ ಕೋಟಿ ರೂಪಾಯಿಗಳನ್ನು ಒದಗಿಸಿ, ಯಂತ್ರೋಪಕರಣಗಳನ್ನು ತರುವುದರಿಂದ ಹಿಡಿದು, ಅದನ್ನು ಕಮಿಷನ್ ಮಾಡುವವರೆಗೆ ಹಗಲು ರಾತ್ರಿ ಬಹಳ ದಕ್ಷತೆಯಿಂದ ದುಡಿದ್ದಾರೆ. ನಾನು ಶಿವಮೊಗ್ಗ ಜಿಲ್ಲೆಯವನಾದ್ದರಿಂದ ಅದು ನನ್ನ ಕ್ಷೇತ್ರಕ್ಕೆ ಒಳಪಟ್ಟಿರುವುದರಿಂದ ಪ್ರತಿಯೊಂದು ವಿಚಾರವನ್ನು ನಾನು ಮನಗಂಡಿರುವವನಾದ್ದರಿಂದ ಇದರಲ್ಲಿ ಸತ್ಯಾಂಶ ಏನಿದೆ ಎಂಬುದನ್ನು ಅರಿತವನಾದ್ದರಿಂದ ಈ ಬಗ್ಗೆ ಸಭೆಯಲ್ಲಿ ಧೈರ್ಯವಾಗಿ ಮಾತನಾಡುವುದಕ್ಕೆ ನನಗೆ ಕೆಲವೊಂದು ಆಧಾರಗಳಿವೆ. ಹಿಂದಿನ ಅಧ್ಯಕ್ಷರು ಶಿವಮೊಗ್ಗ ಜಿಲ್ಲೆಯ ಎಲ್ಲಾ ಶಾಸಕರನ್ನೂ ಕೂಡ ಈ ಒಂದು ವಿಸ್ತರಣಾ ಯೋಜನೆಯಲ್ಲಿ ಇನ್‌ವಾಲ್ವ್ ಮಾಡಿದರು. ಆಯಾ ಭಾಗಗಳಲ್ಲಿ ಏನಾದರೂ ಕೆಲಸಕಾರ್ಯಗಳು ನಡೆಯಬೇಕಾದರೆ ನಮ್ಮನ್ನೆಲ್ಲಾ ಕಾನ್‌ಫಿಡೆನ್ಸ್‌ಗೆ ತೆಗೆದುಕೊಂಡು ಕೆಲಸ ಮಾಡಿದ್ದಾರೆ ಇದು ೧೦೦ ಕೋಟಿ ರೂಪಾಯಿಗಳ ಒಂದು ರಾಷ್ಟ್ರೀಯ ಕಾರ್ಯಕ್ರಮ ಇದರಿಂದ ೭೫ ಸಾವಿರ ಟನ್ ನ್ಯೂಸ್ ಪ್ರಿಂಟ್ ಉತ್ಪಾದನೆಯಾಗುತ್ತದೆ. ಇದು ನಿಜವಾಗಿಯೂ ಕೂಡ ರಾಷ್ಟ್ರೀಯ ಯೋಜನೆ ಇದಕ್ಕಾಗಿ ನಾನು ನನ್ನ ತನುಮನಧನಗಳಿಂದ ಸೇವೆ ಮಾಡುವುದಕ್ಕೆ ಬದ್ಧನಾಗಿದ್ದೇನೆ. ಯಾವ ಒಂದು ಆಸೆ, ಆಮಿಷಗಳಿಗೆ ಒಳಗಾಗದೇ ನಾನು ದುಡಿಯುತ್ತೇನೆ; ಎಂದು ಹೇಳಿ ಹಿಂದಿನ ಅಧ್ಯಕ್ಷರು ಅದರಂತೆ ಪ್ರಾಮಾಣಿಕವಾಗಿ ದುಡಿದಿದ್ದಾರೆ. ಅವರ ಕೆಲಸವನ್ನು ಬಹಳ ಜನ ಮೆಚ್ಚಿದ್ದಾರೆ. ಮಾನ್ಯ ದೇವೇಗೌಡರು ಮಾಡಿರತಕ್ಕಂಥ ಆಪಾದನೆಗಳು ಏನೇ ಇರಲಿ, ಶ್ರೀ ಜಾಫರ್‌ಸೈಫುಲ್ಲಾರವರು ಒಬ್ಬ ದಕ್ಷ ಆಡಳಿತಗಾರರು ಎನ್ನುವುದನ್ನು ಅವರು ಒಪ್ಪಬೇಕು. ಅವರು ಆಡಳಿತವನ್ನು ಚೆನ್ನಾಗಿ ಅರಿತುಕೊಂಡವರು, ಕರ್ನಾಟಕ ರಾಜ್ಯದಲ್ಲಿ ಅವರು ದಕ್ಷತೆಗೆ ಹೆಸರಾದವರು ಎನ್ನುವ ಮಾತನ್ನು ಅವರು ಒಪ್ಪಿಯೇ ಒಪ್ಪುತ್ತಾರೆ. ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ

ಬಯಸುತ್ತೇನೆ ಮಾನ್ಯ ಅಧ್ಯಕ್ಷರೇ ಮಾನ್ಯ ದೇವೇಗೌಡರು ೧೯೮೦ನೇ ಇಸವಿಯಿಂದ ಇಲ್ಲಿಯವರೆಗೆ ಏನೇನು ನಡೆದಿದೆ ಎನ್ನುವುದರ ಬಗ್ಗೆ ಆಪಾದನೆಗಳನ್ನು ಮಾಡಬಹುದಾಗಿತ್ತು. ಈ ಎಂ.ಪಿ.ಎಂ ನಲ್ಲಿ ನಡೆದಿರತಕ್ಕ ದುರ್ವ್ಯವಹಾರದ ಬಗ್ಗೆ ಸವಿಸ್ತಾರವಾದ ನ್ಯಾಯಾಂಗ ತನಿಖೆಯಾಗಬೇಕೆಂದು ಅವರು ಹೇಳಿದ್ದಾರೆ ನಾನಾದರೂ ಸಹ ೧೯೭೭ನೇ ಇಸವಿಯಿಂದ ಇಲ್ಲಿಯವರೆಗೆ ಆಗಿರತಕ್ಕಂಥ ವ್ಯವಹಾರದ ಬಗ್ಗೆ ಶ್ರೇಷ್ಟ ಮಟ್ಟದ ನ್ಯಾಯಾಂಗ ತನಿಖೆಯಾಗಬೇಕು ಎಂದು ಅವರೊಡನೆ ನನ್ನ ಧ್ವನಿಗೂಡಿಸುತ್ತೇನೆ ಮಾನ್ಯ ಅಧ್ಯಕ್ಷರೇ, ಅಲ್ಲಿ ೭೫ ಸಾವಿರ ಟನ್‌ಗಳಷ್ಟು ನ್ಯೂಸ್‌ಪ್ರಿಂಟ್ ಉತ್ಪಾದನೆ ಮಾಡಬೇಕಾದರೆ ಅದಕ್ಕೆ ಬೇಕಾಗಿರತಕ್ಕಂಥ ರಾಮೆಟೀರಿಯಲ್ಸ್ ಬಗ್ಗೆ ಹಿಂದಿನ ಅಧ್ಯಕ್ಷರು ನಮ್ಮ ಜೊತೆಯಲ್ಲಿ ಅನೇಕ ವಿಧವಾದ ಚರ್ಚೆ ಮಾಡಿದ್ದಾರೆ. ಅದಕ್ಕೋಸ್ಕರ ಸುಮಾರು ೭೦ ಸಾವಿರ ಎಕರೆ ಫಾರೆಸ್ಟ್ ಇಲಾಖೆಯ ಜಮೀನನ್ನು ಹಿಂದಿನ ಮಾನ್ಯ ಮುಖ್ಯಮಂತ್ರಿಯವರಾದ ಶ್ರೀಮಾನ್ ದೇವರಾಜ ಅರಸ್‌ರವರು ಕೊಡಿಸಿಕೊಟ್ಟು ಅದಕ್ಕೆ ಸಂಪೂರ್ಣ ಸಹಕಾರವನ್ನು ಕೊಟ್ಟರು. ಆಗ ಫಾರೆಸ್ಟ್ ಮಿನಿಸ್ಟರ್ ಆಗಿದ್ದಂತಹ ಶ್ರೀ ರಾಮೇಗೌಡರನ್ನು ನಾವೆಲ್ಲಾ ಶಾಸಕರು ಜಂಟಿಯಾಗಿ ಹೋಗಿ ಕಂಡು ಆ ಫಾರೆಸ್ಟ್ ಲ್ಯಾಂಡನ್ನು ರಿಲೀಸ್ ಮಾಡುವುದಕ್ಕೆ ಎಷ್ಟು ಪ್ರಯತ್ನಪಟ್ಟೆವು ಎಂಬುದು ನಮಗೆ ಗೊತ್ತಿದೆ. ಅಲ್ಲಿ ೭೫ ಸಾವಿರ ನ್ಯೂಸ್‌ಪ್ರಿಂಟ್ ಉತ್ಪಾದನೆ ಮಾಡಬೇಕಾದರೆ ೧ ಲಕ್ಷ ೨೦ ಸಾವಿರ ಟನ್‌ನಷ್ಟು ಬಂಬು ಬೇಕು, ೮೫ ಸಾವಿರ ಟನ್‌ನಷ್ಟು ಯೂಕಲಿಪ್ಟಸ್ ಬೇಕು. ೪೫ ಸಾವಿರ ಟನ್‌ನಷ್ಟು ಹಾರ್ಡ್‌ವುಡ್ ಬೇಕು. ಇಂದಿನ ಆಡಳಿತ ವ್ಯವಸ್ಥೆ ಅಫಾರೆಸ್ಟೇಷನ್ ಬಗ್ಗೆ ಏನೂ ಮಾಡಿಲ್ಲ. ಈಗಿನ ಆಡಳಿತ ವ್ಯವಸ್ಥೆ ಸ್ಥಗಿತಗೊಂಡಿದೆ ಮಾನ್ಯ ಮಂತ್ರಿಯವರು ಸ್ಟೇಟ್‌ಮೆಂಟ್ ಕೊಡಬಹುದು. ಮಾನ್ಯ ವೀರಪ್ಪಮೊಯ್ಲಿಯವರು ೨-೩ ಸಾರಿ ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಅವರಿಗೆ ನಾನು ಕೇಳುತ್ತಿದ್ದೇನೆ. ಅವರು ಏನಾದರೂ ಇನ್ಸ್‌ಪೆಕ್ಷನ್ ಮಾಡಿದ್ದಾರೆಯೋ ಹೇಗೆ ? ಸ್ಥಳ ಪರೀಕ್ಷೆ ಏನಾದರೂ ಮಾಡಿದ್ದಾರೆಯೋ ಹೇಗೆ ? ಅಲ್ಲಿ ಅಫಾರೆಸ್ಟೇಷನ್ ವರ್ಕ್ಸ್ ನಡೆದಿದೆಯೋ ಹೇಗೆ ಎಂದು ನೇರವಾಗಿ ಕೇಳುತ್ತಿದ್ದೇವೆ. ಅಲ್ಲಿ ಏನೋ ಕೆಲಸವಾಗಿಲ್ಲ. ಸನ್ಮಾನ್ಯ ಅಧ್ಯಕ್ಷರೇ ಎರಡನೇಯದಾಗಿ ಈ ೭೫ ಸಾವಿರ ಟನ್‌ಗಳಷ್ಟು ನ್ಯೂಸ್‌ಪ್ರಿಂಟ್ ಉತ್ಪಾದನೆ ಮಾಡಬೇಕಾಗಿರತಕ್ಕಂಥ ರಾಮೆಟೀರಿಯಲ್ಸ್ ಬಗ್ಗೆ ಯಾರಾದರೂ ಯೋಚನೆ ಮಾಡಬೇಕು. ಹಿಂದಿನ ಅಧ್ಯಕ್ಷರು ಅದರ ಬಗ್ಗೆ ಬಹಳ ದೀರ್ಘವಾಗಿ ಯೋಚನೆ ಮಾಡಿ ಸೂಕ್ತ ಯೋಜನೆ ಮತ್ತು ನಿಲುವನ್ನು ತೆಗೆದುಕೊಂಡಿದ್ದರು. ೩೦ ಪರ್ಸೆಂಟ್ ರಾಮೆಟೀರಿಯಲ್ಸ್ ಆಗಿ ಕಬ್ಬಿನ ಸಿಪ್ಪೆಯನ್ನು ಉಪಯೋಗಿಸಿ ಕಾಗದನ್ನು ಉಪಯೋಗಿಸುವ ಯೋಜನೆ ರೂಪಿತವಾಗಿದೆ. ಅದಕ್ಕಾಗಿ ೨೫೦೦ ಟನ್ಸ್ ಕ್ಯಾಪಾಸಿಟಿಯ ಸಕ್ಕರೆ ಕಾರ್ಖಾನೆಗೆ ಲೈಸೆನ್ಸ್ ಸಿಕ್ಕಿದೆ ಲೈಸೆನ್ಸ್ ಸಿಕ್ಕಿ ಈಗ ಮೂರು ವರ್ಷಗಳಾದವು. ಆದರೂ ಸಕ್ಕರೆ ಕಾರ್ಖಾನೆ ಬರದಂತೆ ಮಾಡಲಾಗಿದೆ. ಅದಕ್ಕೆ ಕಾರಣ ತುಂಗಭದ್ರಾ ಪ್ರವೇಟ್ ಷುಗರ್ ಫ್ಯಾಕ್ಟರಿ ಇದೆ. ಅಲ್ಲಿ ಒಬ್ಬ ಮಾರ್ವಾಡಿ ಆ ಷುಗರ್ ಫ್ಯಾಕ್ಟರಿಯನ್ನು ನಡೆಸುತ್ತಿದ್ದಾರೆ. ಅಲ್ಲಿ ಈ ಒಂದು ಹೊಸಫ್ಯಾಕ್ಟರಿ ಬರುವುದರಿಂದ ನಮಗೆ ತೊಂದರೆಯಾಗುತ್ತದೆ, ನಮ್ಮ ಈ ಫ್ಯಾಕ್ಟರಿಯನ್ನು ಮುಚ್ಚಬೇಕಾಗುತ್ತದೆ ಎಂದು ತಿಳಿದು ಕೊಂಡು ಈ ವಿಚಾರದಲ್ಲಿ ಪ್ರಭಾವಿ ರಾಜಕಾರಣಿಗಳೊಡನೆ ಷಾಮೀಲಾಗಿ ಇದನ್ನು ನಿಲ್ಲಿಸಿದರು. ಇದರ ಜೊತೆಗೆ ಹಿಂದಿದ್ದ ಅಧ್ಯಕ್ಷರು ನಮ್ಮನ್ನೆಲ್ಲಾ ಆ ಸ್ಥಳಕ್ಕೆ ಕರೆದುಕೊಂಡು ಹೋಗಿ ತೋರಿಸಿದರು ಮತ್ತು ನಮ್ಮಲ್ಲಿ ಇಂತಿಂತಹ ಸಲಕರಣೆಗಳು ಇವೆ, ಇಂತಿಂತಹ ಮಿಷಿನರಿಗಳು ಇವೆ, ಕೇವಲ ನಾಲ್ಕು ಕೋಟಿ ರೂಪಾಯಿಗಳಲ್ಲಿ ಈ ಷುಗರ್ ಫ್ಯಾಕ್ಟರಿಯನ್ನು ಸ್ಥಾಪನೆ ಮಾಡುತ್ತೇನೆಂದು ಹೇಳಿದರು. ಈಗ ೧೪ ಕೋಟಿ ರೂಪಾಯಿಗಳು ಬೇಕು ನಮ್ಮ ಹತ್ತಿರ ದುಡ್ಡು ಇಲ್ಲ ಎಂದು ಹೇಳುತ್ತಿದ್ದಾರೆ. ಈಗ ರಾಜಕೀಯ ಹಿನ್ನೆಲೆಯನ್ನು ತಿಳಿದುಕೊಳ್ಳುವುದು ಅವಶ್ಯಕ. ನೂರಾರು ಕೋಟಿ ರೂಪಾಯಿಗಳ ಕೆಲಸ ವಿವಿಧ ಹಂತದಲ್ಲಿ ಇರುವಾಗ ೯೫ ಭಾಗದಷ್ಟು ಕೆಲಸವೆಲ್ಲಾ ಮುಗಿದಿರುವಾಗ ದುರುದ್ದೇಶದಿಂದ ತುಂಗಭದ್ರಾ ಫ್ಯಾಕ್ಟರಿಯ ಮಾಲೀಕರೊಡನೆ ಶಾಮೀಲಾಗಿ ಕೆಲವು ರಾಜಕಾರಣಿಗಳು ಹಿಂದಿನ ಅಧ್ಯಕ್ಷರನ್ನು ವರ್ಗಾಯಿಸಿದರು. ಯಾರಾದರೂ ವಿಚಾರವಂತರಾದವರು ಇಂತಹ ಒಂದು ಕೆಲಸವನ್ನು ಮಾಡುತ್ತಾರೆಯೋ ? ತಾವೇ ಯೋಚನೆ ಮಾಡಿ ನೋಡಿ. ೧೦೦ ಕೋಟಿ ರೂಪಾಯಿಗಳ ಕೆಲಸ ವಿವಿಧ ಹಂತದಲ್ಲಿವೆ, ಕೆಲಸಗಳೆಲ್ಲಾ ಭರದಿಂದ ಸಾಗಿದೆ, ಯಂತ್ರೋಪಕರಣಗಳೆಲ್ಲಾ ಫಾರಿನ್‌ನಿಂದ ಬರುತ್ತಾ ಇವೆ. ಇಂತಹ ಸಂದರ್ಭದಲ್ಲಿ ಎಲ್ಲಾ ವ್ಯವಹಾರಗಳನ್ನೂ ತಿಳಿದುಕೊಂಡಿದ್ದಂತಹ ವ್ಯಕ್ತಿ ಹಿಂದಿನ ಅಧ್ಯಕ್ಷರಾಗಿದ್ದರು. ಅವರು ಬೆಂಗಳೂರಿನಲ್ಲೇ ಇರಲೀ ಭದ್ರಾವತಿಯಲ್ಲೇ ಇರಲಿ ಅವರು ಅಧಿಕಾರಿಗಳಿಗೆ ಒಂದು ಕನಸಿನೋಪಾಧಿಯಲ್ಲಿದ್ದರು, ಅಧಿಕಾರಿಗಳು ಅವರನ್ನು ಕಂಡರೆ ಹೆದರುತ್ತಿದ್ದರು, ಈ ರೀತಿ ಆಡಳಿತ ಬಿಗಿಯನ್ನು ಇಟ್ಟುಕೊಂಡು ಎಲ್ಲಾ ಕೆಲಸಕಾರ್ಯಗಳನ್ನೂ ಬಹಳ

ದಕ್ಷತೆಯಿಂದ ನಡೆಸಿಕೊಂಡು ಹೋಗುತ್ತಿದ್ದಂತಹ ಒಬ್ಬ ವ್ಯಕ್ತಿಯನ್ನು ಕ್ಷುಲ್ಲಕ ಕಾರಣಗಳಿಂದ ಸ್ವಾರ್ಥ ಸಾಧನೆಗಾಗಿ ವರ್ಗಾಯಿಸಿದರು. ಇವತ್ತು ಅಲ್ಲಿ ೧೦೦ ಕೋಟಿ ರೂಪಾಯಿಗಳಲ್ಲಿ ೧೪೦ ಕೋಟಿ ರೂಪಾಯಿಗಳಲ್ಲಿ ೨೦೦ ಕೋಟಿ ರೂಪಾಯಿಗಳನ್ನು ಹಾಕಿದರೂ ಕೂಡ ೭೫ ಸಾವಿರ ಟನ್‌ನಷ್ಟು ಕೆಪಾಸಿಟಿಯ ನ್ಯೂಸ್‌ಪ್ರಿಂಟ್ ಉತ್ಪಾದನೆ ಮಾಡುವುದಕ್ಕೆ ಅದು ಅಸಮರ್ಥವಾಗಿದೆ. ಇದಕ್ಕೆ ಕಾರಣರಾರು ? ಇಂದಿನ ಸರ್ಕಾರ ಅದನ್ನು ಈಗಲೂ ಅರ್ಥ ಮಾಡಿಕೊಳ್ಳದೆ ಇರತಕ್ಕಂಥ ಪರಿಸ್ಥಿತಿ ಉಂಟಾಗಿದೆ. ಈಗಿನ ಅಧ್ಯಕ್ಷರು ಒಳ್ಳೆಯವರು ಇರಬಹುದು, ಪ್ರಾಮಾಣಿಕರು ಇರಬಹುದು. ಅವರ ಪ್ರಾಮಾಣಿಕತನ, ಒಳ್ಳೆಯತನ ನಮಗೆ ಒಳ್ಳೆಯ ಕೆಲಸವನ್ನು ಕೊಡುವುದಿಲ್ಲ. ಸನ್ಮಾನ್ಯ ಅಧ್ಯಕ್ಷರೇ ಇವತ್ತು ಏನಾಗಿದೆ ಎಂದರೆ ನಮ್ಮಲ್ಲಿ ನ್ಯೂಸ್‌ಪ್ರಿಂಟ್ ಕೊರತೆ ಇದೆ. ಪ್ರತಿ ವರ್ಷ ನಮಗೆ ೪ ಲಕ್ಷ ಟನ್‌ಗಳಷ್ಟು ನ್ಯೂಸ್‌ಪ್ರಿಂಟ್ ಕೊರತೆ ಬೇಕು. ನಮ್ಮ ದೇಶದಲ್ಲಿ ಈಗ ನಾವು ೫೫ ಸಾವಿರ ನ್ಯೂಸ್ ಪ್ರಿಂಟನ್ ತಯಾರು ಮಾಡುತ್ತಿದ್ದೇವೆ ಅದನ್ನು ಮಧ್ಯಪ್ರದೇಶದಲ್ಲಿ ತಯಾರು ಮಾಡುತ್ತಿದ್ದೇವೆ. ಕೇರಳದಲ್ಲಿ ಕೂಡ ೭೫ ಸಾವಿರ ಟನ್ ನ್ಯೂಸ್‌ಪ್ರಿಂಟ್ ಉತ್ಪಾದನೆ ಮಾಡತಕ್ಕಂಥ ಒಂದು ಯೋಜನೆ ಇದೆ. ಅದು ಯಾವಾಗ ಪ್ರಾರಂಭವಾಗುತ್ತದೆಯೋ ಗೊತ್ತಿಲ್ಲ. ಆದ ದರಿಂದ ಇಲ್ಲಿ ಈ ಒಂದು ಯೋಜನೆಯನ್ನು ೧೯೮೦ನೇ ಇಸವಿಯ ಅಕ್ಟೋಬರ್‌ನಲ್ಲಿ ಮುಗಿಸಬೇಕೆಂದು ಹೇಳಿ ಕೇವಲ ೩-೪ ವರ್ಷ ಗಳಲ್ಲಿ ಹಿಂದಿನ ಅಧ್ಯಕ್ಷರು ಎಷ್ಟು ಕೆಲಸ ಮಾಡಿದ್ದಾರೆ ಎಂಬುದನ್ನು ಇದನ್ನು ವರ್ಣಿಸಲು ಅಸಾಧ್ಯ. ಅವರು ಎಷ್ಟೆಲ್ಲಾ ಕೆಲಸ ಮಾಡಿದ್ದಾರೆ ಎಂಬುದನ್ನು ಕೇವಲ ಬಾಯಲ್ಲಿ ಹೇಳುವುದಕ್ಕೆ ಸಾಧ್ಯವಿಲ್ಲ. ಅಷ್ಟು ಉನ್ನತವಾಗಿ ದುಡಿದಂತಹ ವ್ಯಕ್ತಿಗೆ ನಾವು ಕೊಡುತ್ತಿರುವ ಗೌರವವಾದರೂ ಏನು ? ಮಾನ್ಯ ಶೀರ್ನಾಳಿ ಚಂದ್ರಶೇಖರ್‌ರವರು ಮಾತನಾಡತಕ್ಕಂಥ ಕಾಲದಲ್ಲಿ ಅವರು ವಿದೇಶಕ್ಕೆ ಹೋಗುವುದಕ್ಕೆ ಒಂದು ಕೆಲಸವಾಗಿದೆ ಅವರು ಹಾಗೆ ಮಾಡುತ್ತಾ ಇದ್ದರು, ಹೀಗೆ ಮಾಡುತ್ತಾ ಇದ್ದರು ಎಂದು ಏನೇನೋ ಹೇಳಿದರು. ಕೆಮಿಕಲ್ ಬ್ಯಾಕ್‌ನಿಂದ ದುಡ್ಡು ತರಬೇಕು, ಜಪಾನ್‌ನಿಂದ ಇನ್ನಿತರ ವಿದೇಶಿ ಯಂತ್ರೋಪಕರಣಗಳನ್ನು ತರಬೇಕು ಇದಕ್ಕಾಗಿ ಅವರು ಹೋಗುತ್ತಿದ್ದರು. ಬರೀ ಕಾಗದ ಬರೆದು ಭದ್ರಾವತಿಯಲ್ಲಿ ಕುಳಿತುಕೊಂಡರೆ ಅದೆಲ್ಲಾ ಬರುತ್ತದೆಯೇ ? ಇದು ನೂರಾರು ಕೋಟಿ ರೂಪಾಯಿಗಳ ಯೋಜನೆ ಇದನ್ನು ೧೯೮೦ನೇ ಇಸವಿಯ ಅಕ್ಟೋಬರ್‌ನಲ್ಲಿ ಮುಗಿಸಬೇಕೆನ್ನುವ ಗುರಿಯನ್ನು ಇಟ್ಟು ಕೊಂಡಿದ್ದಾಗ ಪ್ಲೇನ್‌ನಲ್ಲಿ ಹೋಗಲೇಬೇಕಾಗುತ್ತದೆ. ಬರಲೇಬೇಕಾಗುತ್ತದೆ. ಆದ್ದರಿಂದ ಮಾನ್ಯ ಶೀರ್ನಾಳಿ ಚಂದ್ರಶೇಖರ್‌ರವರು ಹೇಳಿದ ಮಾತಿಗೆ ನಾವು ಅಷ್ಟು ಪ್ರಾಮುಖ್ಯತೆ ಕೊಡುವುದಿಲ್ಲ. ಪ್ರಸ್ತುತ ಪರಿಸ್ಥಿತಿ ತಜ್ಞರ ಅಭಿಪ್ರಾಯದ ಪ್ರಕಾರ ಸುಮಾರು ೬೦ ಕೋಟಿ ರೂಪಾಯಿಗಳಷ್ಟು ನಾವು ನ್ಯೂಸ್‌ಪ್ರಿಂಟ್‌ನ್ನು ಆಮದು ಮಾಡಿಕೊಳ್ಳುವುದಕ್ಕೆ ವಿದೇಶಿವಿನಿಮಯ ಕೊಡುತ್ತಿದ್ದೇವೆ. ೧೯೯೦ನೇ ಇಸವಿಯೊಳಗೆ ೬ ಲಕ್ಷ ಟನ್ ನ್ಯೂಸ್‌ಪ್ರಿಂಟ್ ನಮಗೆ ಬೇಕಾಗುತ್ತದೆ. ಆದ್ದರಿಂದ ಇದೆಲ್ಲವನ್ನೂ ವಿಚಾರ ಮಾಡಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಇವೆರಡೂ ಹಾಕಿದಂತಹ ಈ ಒಂದು ಯೋಜನೆ ಇವತ್ತು ಮೂಲೆಗುಂಪಾಗುವ ಸಂದರ್ಭ ಬಂದಿದೆ. ಈ ಬಗ್ಗೆ ಸರಿಯಾದ ರೀತಿಯಲ್ಲಿ ತೆಗೆದುಕೊಳ್ಳದೇ ಇರುವುದರಿಂದ ಈ ತರಹದ ಪರಿಸ್ಥಿತಿ ಬಂದಿದೆ. ಸನ್ಮಾನ್ಯ ಅಧ್ಯಕ್ಷರೇ ತಮ್ಮ ಮೂಲಕ ನಾನು ಮಾನ್ಯ ಮುಖ್ಯ ಮಂತ್ರಿಯವರಲ್ಲಿ ಮತ್ತು ಮಾನ್ಯ ಅರ್ಥ ಮಂತ್ರಿಯವರಲ್ಲಿ ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ ಇದೊಂದು ರಾಷ್ಟ್ರೀಯ ಯೋಜನೆ, ಇದು ದೇಶದ ಸ್ವತ್ತು, ಇದಕ್ಕೆ ೧೮೦ ಕೋಟಿ ರೂಪಾಯಿ ಗಳಲ್ಲಿ ಮುಗಿಯಬೇಕಾಗಿತ್ತು ಇವತ್ತು ೧೫೫ ಕೋಟಿಗಳಾಗಿದೆ ಅದು ಇನ್ನೂ ೧೭೫, ೨೦೦ ಕೋಟಿಗಳ ವರಿವಿಗೆ ಹೋಗುತ್ತದೆ. ಯಾವುದೋ ಒಂದು ಸಣ್ಣ ತಪ್ಪಿಗೆ ನೂರಾರು ಕೋಟಿ ರೂಪಾಯಿಗಳನ್ನು ಸಾರ್ವಜನಿಕ ತಲೆಯ ಮೇಲೆ ಹಾಕುವಂತಾಯಿತು. ಇದಕ್ಕೆ ಯಾರು ಹೊಣೆ. ಯಾರು ಜವಾಬ್ದಾರರು ಇದರ ಬಗ್ಗೆ ವಿಚಾರಣೆ ನಡೆಯಲೇ ಬೇಕು. ಈ ಕೂಡಲೇ ಸರ್ಕಾರ ಸುಗರ್ ಫ್ಯಾಕ್ಟರಿ ಬರುವುದಕ್ಕೆ ಏನೊಂದು ಅಡ್ಡಿ ತಡೆಗಳು ಇವೆಯೋ ಅದನ್ನೆಲ್ಲಾ ನಿವಾರಣೆ ಮಾಡಿ ಅದಷ್ಟು ಬೇಗ ಅದನ್ನು ಕಮಿಷನ್ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಅದಕ್ಕೆ ಈಗ ಅಲ್ಲಿ ೧೬ ಕೋಟಿ ರೂಪಾಯಿಗಳ ವೆಚ್ಚವಾಗುತ್ತದೆ, ಎಂದು ಹೇಳುತ್ತಿದ್ದಾರೆ. ನನ್ನ ದೃಷ್ಟಿಯಲ್ಲಿ ಅದನ್ನು ಕೇವಲ ೫-೬ ಕೋಟಿ ರೂಪಾಯಿಗಳಲ್ಲಿ ಮಾಡಬಹುದು, ಏಕೆಂದರೆ ಅಲ್ಲಿ ಎಲ್ಲಾ ಸೌಲಭ್ಯಗಳೂ ಇವೆ. ಬಾಯ್ಲರ್ ಇದೆ. ಇನ್ನಿತರ ಸಲಕರಣೆಗಳೂ ಇವೆ. ಮಾನ್ಯ ಫೈನಾನ್ಸ್ ಮಿನಿಸ್ಟರ್‌ರವರು ಖುದ್ದಾಗಿ ಅಲ್ಲಿಗೆ ಹೋಗಿ ನೋಡಿ ಅದನ್ನು ಪರಿಶೀಲನೆ ಮಾಡಿ ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಮತ್ತು ೭೦ ಸಾವಿರ ಎಕರೆ ಅರಣ್ಯ ಪ್ರದೇಶವನ್ನು ಬಿಡುಗಡೆ ಮಾಡಿ ಅಲ್ಲಿ ಏನು ಬ್ಯಾಂಬು ಯಾಕಲಿಪ್ಟ್ಸ್ ಬೇಕಾಗಿದೆ ಅದನ್ನು

ಬೆಳೆಸುವುದಕ್ಕೆ ತೀವ್ರಗತಿಯಲ್ಲಿ ಪ್ರಯತ್ನ ಮಾಡಬೇಕು ಇಲ್ಲಿ ಹಿಂದಿನ ಅಧ್ಯಕ್ಷರ ಬಗ್ಗೆ ಏನೊಂದು ಆಪಾದನೆಯನ್ನು ಹೊರಿಸಲಾಗಿದೆಯೋ ಅದು ಸತ್ಯಕ್ಕೆ ದೂರವಾದುದೆಂದು ನಾನು ತಿಳಿದುಕೊಂಡಿದ್ದೇನೆ. ವೈಯಕ್ತಿಕವಾಗಿ ನನಗೆ ಅವರಿಂದ ಏನೂ ಲಾಭವಿಲ್ಲ ಅಥವಾ ನನ್ನಿಂದ ಅವರಿಗೇನೂ ಲಾಭವಿಲ್ಲ. ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ ಅವರು ಮಾಡಿರತಕ್ಕಂಥ ದುಡಿಮೆಗೆ ಅವರ ಶ್ರಮದ ಪ್ರತಿಫಲಕ್ಕೆ ಇದೊಂದೇ ನಾನು ಅವರಿಗೆ ಕೊಡತಕ್ಕಂಥ ಅಲ್ಪ ಕಾಣಿಕೆ ಎಂದು ನಾನು ಹೇಳಬಯಸುತ್ತೇನೆ. ಇನ್ನು ಎರಡನೇಯದಾಗಿ ನಮ್ಮ ರಾಜ್ಯದ ವಿ.ಐ ಎಸ್.ಎಲ್ ಫ್ಯಾಕ್ಟರಿ ಏನು ಇದೆ, ಅದು ನಮ್ಮ ದೇಶದಲ್ಲಿ ಒಂದು ಪಬ್ಲಿಕ್ ಸೆಕ್ಟರ್ ಫ್ಯಾಕ್ಟರಿಯಾಗಿದೆ. ಇದು ಬಹಳ ದೊಡ್ಡ ಪ್ರಮಾಣದಲ್ಲಿ ಉಪಕರಣಗಳನ್ನು ಉತ್ಪತ್ತಿ ಮಾಡತಕ್ಕಂತಹ ಫ್ಯಾಕ್ಟರಿ. ಆದರೆ ಇಲ್ಲಿ ಕೆಲವಾರು ವರ್ಷಗಳಿಂದ ವಿದ್ಯುತ್ ಕಡಿತದಿಂದಾಗಿ ಕೋಟ್ಯಾಂತರ ರೂಪಾಯಿಗಳು ನಷ್ಟವಾಗಿ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಆದರೆ ಈ ಮಧ್ಯೆ ಈ ಒಂದು ಫ್ಯಾಕ್ಟರಿ ಸುಮಾರು ೫ ಕೋಟಿ ರೂಪಾಯಿಗಳನ್ನು ಲಾಭ ಸಂಪಾದನೆ ಮಾಡಿದೆ ಎಂದು ಕೇಳಿದ ಮೇಲೆ ನನಗೆ ತುಂಬಾ ಸಂತೋಷವಾಗಿದೆ. ಮತ್ತು ಈಗ ಅಲ್ಲಿರತಕ್ಕಂತಹ ಮ್ಯಾನೇಜಿಂಗ್ ಡೈರೆಕ್ಟರ್ ಒಳ್ಳೆಯ ದಕ್ಷ ರೀತಿಯಲ್ಲಿ ಮತ್ತು ಪ್ರಾಮಾಣಿಕತನದಿಂದ ಕೆಲಸ ಮಾಡುತ್ತಿದ್ದಾರೆ. ಆದ್ದರಿಂದ ಅವರಿಗೆ ನಾನು ನನ್ನ ವಂದನೆಗಳನ್ನು ಸಲ್ಲಿಸುತ್ತೇನೆ. This factory is a power based one. charcoal based, blast furnce based industry. It soley depends on electrical energy. ಈ ಒಂದು ಫ್ಯಾಕ್ಟರಿಗೆ ಸುಮಾರು ೩೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಒಂದು ಯೋಜನೆಯನ್ನು ಹಾಕಿಕೊಳ್ಳಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಈ ವಿ.ಐ.ಎಸ್.ಎಲ್ ಫ್ಯಾಕ್ಟರಿಯ ಸೇಲ್ಸ್ ಡಿಪಾರ್ಟ್‌ಮೆಂಟಿನಲ್ಲಿ ಕೋಟ್ಯಾಂತರ ರೂಪಾಯಿಗಳ ಅವ್ಯವಹಾರ ನಡೆದಿದೆ ಎಂದು ನಾನು ಆಪಾದನೆ ಮಾಡುತ್ತಿದ್ದೇನೆ ಮತ್ತು ಯಾರು ಈ ಅವ್ಯವಹಾರವನ್ನು ಮಾಡಿದರು ಅವರನ್ನು ಸಸ್‌ಪೆಂಡ್ ಸಹ ಮಾಡಲಾಗಿದೆ. ಆದರೆ ಇದುವರೆವಿಗೂ ತನಿಖೆಯನ್ನು ಮಾತ್ರ ಮಾಡಲಿಲ್ಲ. ಆದರೆ ಅವರನ್ನು ತನಿಖೆ ಮಾಡುವುದರಲ್ಲಿ ಕೆಲವು ರಾಜಕೀಯ ವ್ಯಕ್ತಿಗಳ ಪ್ರವೇಶ ಮಾಡಿದ್ದಾರೆ. ಆದ್ದರಿಂದ ನಾನು ಹೇಳುವುದೇನೆಂದರೆ ನಮ್ಮ ರಾಷ್ಟ್ರದ ಸ್ವತ್ತಿನಲ್ಲಿ ಅವ್ಯವಹಾರ ನಡೆದಿರುವಾಗ ಏತಕ್ಕೆ ನ್ಯಾಯಾಂಗ ತನಿಖೆಯನ್ನು ಮಾಡಬಾರದು ಎಂದು ನಾನು ಈ ಸಂದರ್ಭದಲ್ಲಿ ಕೇಳಬಯಸುತ್ತೇನೆ. ಇಷ್ಟು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† SRI M. ABDUL LATHEEF (Kolar)—Sir, I support the demands brought forward by the Hon'ble Chief Minister and I would like to speak on Wakfs Very recently the Wakf Board has been reconstituted by the Government of Karnataka for which the community at large has resented this move. In view of this I hope the reconstitution of the Board is only an adhoc arrangement and as soon as possible Government would take steps to appoint men from public life on this Board.

Sir, most of the Wakf properties are now vested with the Central Government, State Government, Corporations, Municipalities and in some places even with the Village Panachayats. I therefore urge upon the Government to take suitable steps to recover all those properties and place them at the disposal of the Wakfs Board because under the Land Reforms Act some of the Land Tribunals have given different verdicts so far as Wakf Properties are concerned. Some of the Land Tribunals have held that Land Reforms Act is not applicable to the Wakf properties, some have held that the Act is applicable, some of them have passed orders in favour of the tenants and some tribunals have restored those properties in favour of the

Government to distribute the lands among landless people. Looking at this I am of the view that there is some sort of ambiguity prevailing. I therefore request the Government to pass a Government Order clearing the doubts of the Tribunals and all such lands given to different authorities may be recovered through that Government Order and place them at the disposal of the Wakfs Board. The present Wakf Board consists of most of the Police Officers and I hope they would take steps to recover all those properties and place them at the disposal of the Wakf Board.

Then, Sir, in some places Wakf Properties have been acquired but till today compensation has not been paid to the Board. There are cases pending since 10 years. I urge upon the Government to take steps to arrange compensation at an early date so that the amount could be made use of for the development of Wakf Board.

Another matter I would like to bring to the notice of the Government is that whenever the Chairman of the Wakf Committee approacher the authorities like, Police, Deputy Commissioner, Tahasildar, Block Development Officers, proper response is not given to complaints and there have been instances wherein protections has also b en denied by the police department whenever protection is sought. I therefore request the Government to set right these things and direction be given to authorities to look into the complaints without fail.

Now, coming to my own place there is a famous Dhargain Mulbagal. It is an institution of 800 years old. Cash grant of 60 huns per year was sanctioned about 200 years back. Uuder the agreement Rs. 40,000 per year ought to have been given. At present they are getting Rs. 2,000. I therefore urge upon the Government to increase the grant to atleast Rs. 15,000 per month as this is a very big institution and has got to pay to the servants looking after this.

There is another institution called Darga Navab Pathealishah at Kolar. This is being managed by the Government with a grant of Rs. 12,000 per year. At present there are about 15 people employed in this institution and amount of grant is not sufficient. I therefore request the Government to increase it to Rs. 25,000 per year.

Lastly, Sir, all the Wakf properties are in the name of God and many of them have changed hands from one to another because of the Land Reforms Act. I hope the Wakf Board would initiate steps to recover all those properties and manage them properly.

With regard to wakf Developement Corporation, you have a very ambitions scheme but it has not come up to the expectation. Now

that the Commissioner of police has been elected as the Chairman of the wakf Developement Corporation, it is possible to activate this Corporation. I therefore request the Hon'ble Minister to see that it is activated.

Coming to the Sericulture Department, I would like to say that the overall performance of this Department could be epitomised in two or three sentences. In the year 1977-78, the budget of this Department was Rs. 100 lakhs but in the year 1982-83, the budget of this Department is Rs.800 lakhs. This enlargement of the budget has been effected to achieve 500 tonnes less of silk production ; We were spending Rs. 100 lakhs but to-day by spending 8 times the amount, we have produced 500 tonnes less of silk. This is the overall performance of this department ; A wise farmar would stop sheering the sheep when he reaches the skin but unfortuntely, this Department is sheering the industry when it is bleeding. How many taxes that you have levied on this industry ? Left to itself, the industry would have performed ten times better than its performance to-day but for the interference at very stage this is the stage of affairs. The total amount of tax that you collect on one k.g. of silk produced, what might be your expectation ? It is abnormally high. A rearer who rears the worms in the fields, a reeler who reels and a weaver who weaves and producer who produces glamorous article won'tget more than whatyou are getting. You are getting more than what all these peole will get. Have pity on this industry. It is in a very bad shape and things are going from bad to worse every day. Laying is the basic requirement of this industry. There are research institutions and Central Silk Boards reserch institutions are also there. With all these things, we have not been able to supply the disease free layings so far. We have concentrated on bi-voltine silk which has not proved a success in our area. I would request the Hon'ble Minister to check how many Kgs of bi-voltine silk are sold in your exchange. As per the existing law, even 1 Kg of silk produced has to be sold in the silk exchange. You may have paper figures but actually how many Kgs of silk are being sold at the silk exchange is the question. Why are you wasting so much of money on these bi-voltine programmes ? Even the races have degenerated. Two years back, the rendetta was something like this ; for 1 Kg of silk 6.5 or 7Kgs of cocoons but now 10 Kgs of cocoons are required to produce 1 Kg of silk. So, for the past two years, the races have degenerated. This Scientists may say so many things ; Your Deptpartment may say somany things butI am a man who knowabout it and I am coming from the field' I know better than others. You can ask any reeler or members who are here and who know about it. They

will tell you how many Kgs of cocoones are required toproduce 1Kg of silk, I am telling all these things with full responsibility. I am telling that the races that are being supplied to the field have degenerated. Please look-into this.

Sir, March, April and May are the peak sericultural season. You might be knowing what has happened during those months ? Sir, it was Rs. 120 for 100 layings. This was due to the defective planning of your department. Even your grainages have sold pure Mysore race in our areas and the private seed producers have prepared seeds out of this hybrid race and the market's were full of these cocoons. Even at the very sight of the cocoon, if you are a Sericulturist, you can say that it is pure Mysore race, or hybrid or cross-bread hybrid variety. Sir, what were the people of your Department doing when hundreds of these layings were being sold in the markets ? It is not in one place, but in every market, this was going on. You have neither anticipated the demand and prepared for the layings nor the Govt. grainages supplied the required quantity of layings to the people. You have given enough Mysore cocoons to private seed producers. Therefore, a lot of confusion was created at that time. Please see that this confusion does not occur again. Even in Andhra Pradesh i.e., border places of my area, they prepared these Mysore seeds and they have certain area also. All sorts of layings were prepared and lot of confusion was there for about 3 months and the rate was Rs, 120 for 100 layings. Even in your department, there was lot of black-marketing. Sir, you have deleted these seed areas like Bidadi and Sugannahalli, stating that the present areas are sufficient to supply the required quantity of cocoons. Beside our own requirements, we have a very heavy demand from our adjoining States like Andhra Pradesh and Tamil Nadu. Therefore, I request the Government to increase these areas and see that the areas that are now deleted are again included. Sir, Bidadi is a very good area and I request the Government to include it.

On a long range policy, please see that it is supplied to your grainages or to Service Centres well in time. I request the Government to supply these layings through your Department instead of giving it to others. You have so many chakey centers. You have extended your department Therefore. your department could do this job. Instead of supplying layings if second mould worms are supplied, the industry will be greatly benefitted.

Coming to Uzi fly, it is still a menace. I would request the Hon'ble Minister to visit some of the cocoon markets along with Mr. Samadji because he is a man from the Sericulture field. Sir your departmental officials are not taking proper care in the cocoon

markets. They are not insisting for plastic bags for conveyance of these cocoons. They are not burning it properly in the dry chambers and in some places, the villagers convey these cocoons in the packets, and these Uzi flies will be falling down all along the way and that is another way of spreading this disease. Therefore, I request the Honble Minister to kindly make it a point to visit some cocoon markets after the Session is over and see what havoc is being done by the Uzi flies.

5-00 P. M.

Sir, reeling is a very important sector of this industry and your Department has never touched that sector of industry. Nothing has been done to improve that sector. Charaka is an inevitable process of this industry and whatever filature you may open, charaka is an important process of this industry. So far, you have not paid any attention to this process. You may send 100 persons to Japan on an excursion and they may come after studying in depth, but charaka is a process which is a must in this industry. I would like to suggest one thing with regard to Government filatures. My suggestion is a very practical one. You kindly bear in mind my suggestion. My suggestion is, kindly write off all previous losses and start on a clean slate. Under the charge of a Joint Director or a Deputy Director, you give him one filature and ask him to operate it on the lines of a private operator. He should be held responsible for all profits and losses, But. what is the position now ? If they incur a loss of one lakh of rupees, you show it as a loss in the book and you give him another two lakhs or three lakhs of rupees. This will never improve the conditions of filatures. Give him one unit of 60 or 100 basins and ask him to operate on the lines of a private operator. He should also procure cocoons in the open market as any other private operator purchases and see in one year what will happen, I think much of these losses will diminish Sir, there are large malpractices going on in the purchase of cocoons. Your filatures will have agents in the cocoon market. To your filatures it is almost a second sale. The ryot brings cocoons and makes a deal with the agent, that agent sells cocoons to your filatures keeping a margin of Rs. 2 or 3 per Kg. on the rate that he has actually paid to the ryots. Often and often you are sending a delegation to Japan. We differ from them with regard to one basic concept. Our approach to the industry is different from their approach. Our approach should be to create more and more employment opportunities in this industry, whereas their approach is towards automation. By sending so many people to Japan, what is

it that we have achieved and given to our people ? Ours is a different country and the conditions are different here, we cannot implement their technology here. We cannot go in for automation, if you go for automation, I don't think we can manage it in our country because it will not serve the purpose of creating employment. If at all you are bent upon sending further delegations, I would request the Hon. Minister to send some men from the field. You send some reelers, some rearers and some weavers. Whatever they learn it will be utilised and it can be used in the field. If you send these officers, after having learnt all these things, these officers will go home after 5 or 10 years, and no purpose will be served. But, if you send people from traditional area of sericulture they bring back home what all they have learnt and spread the same among other sericulturists. If at all you want to send a delegation, you please see that some of these people are included in the delegation. I have been urging this for the last so many years, even in the regime of Sri K. B. Shivaiah. We have got so many legislators who are intimately connected with this industry. Fortunately, many legislators like Abdul Samad, Siddamadaiah, Rajugowda, Muniraju are coming from the areas where sericulture industry is going on well. Why not we have a consultative committee consisting of these legislators and take their valuable guidance because they have practical experience of this industry. Please see that a consultative committee is constituted as soon as possible and see that their services are utilised properly. When we have got so much of money for this industry we can make available thier services for some good purpose. We have found one Silk Corporation and I want to know what is the gain that the industry has made by forming this corporation apart from the employees of the Corporation getting fat salaries. When they were in the Sericulture Department they used to get lower salaries, and by virtue of this Corporation Act they get higher salaries. Apart from this, nothing has taken place. This Corporation was formed to avoid exploitation. But, now the Government has become an organised exploiting agency. I have been urging the Government to remove this sort of bottleneck for the flow of raw materials from the producing centres to the consuming centres. Sir, we have some 20 to 21 silk reelers society and we have a Silk Marketing Federation in Bangalore, please see that these are also treated as silk exchanges making necessary modifications in your Act, If we convert these reelers societies into silk exchanges under the co-operative sector, they will certainly avoid exploitation that is being done today. With these few words I thank the Chair and conclude my speech. Thank you

† ಶ್ರೀ ಕಡಿದಾಳ್ ದಿವಾಕರ್ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೆ, ಸರ್ಕಾರ ಸಭೆಯ ಮುಂದೆ ಮಂಡಿಸಿರುವ ಎಲ್ಲಾ ಬೇಡಿಕೆಗಳನ್ನು ನಾನು ಸ್ವಾಗತಿಸುತ್ತಾ ಕೆಲವಾರು ವಿಚಾರಗಳನ್ನು ಹೇಳುವುದಕ್ಕೆ ಇಚ್ಛೆ ಪಡುತ್ತಾ ಇದ್ದೇನೆ. ಮೈಸೂರು ಪೇಪರ್ ಮಿಲ್ಸ್ ಏನಿದೆ ಅದರ ಬಗ್ಗೆ ನಾವು ಎಂ.ಎಲ್.ಎ. ಆದ ಆರಂಭದಲ್ಲಿ ತಿಳಿದುಕೊಂಡಿದ್ದೆವು, ಏನೆಂದರೆ ಇದು ಬಹುಶಃ ಈ ರಾಜ್ಯಕ್ಕೆ ದೇಶಕ್ಕೆ ಮುಖ್ಯವಾಗಿ ಶಿವಮೊಗ್ಗ ಜಿಲ್ಲೆಗೆ ಹೆಮ್ಮೆಯ ಕಾಣಿಕೆಯಾಗುತ್ತದೆ ಎಂದು ಅವರು ಹಿಂದೆ ಕೊಟ್ಟಂಥ ವರದಿಯಲ್ಲಿ ೧೯೮೦ಕ್ಕೆ ನಾವು ಉತ್ಪನ್ನವನ್ನು ಶುರುಮಾಡುತ್ತೇವೆ. ಮೂರನೇ ಒಂದು ಭಾಗ ಶುರು ಮಾಡುತ್ತೇವೆ, ಜೊತೆಯಲ್ಲಿ ಶುಗರ್ ಫ್ಯಾಕ್ಟರಿಮಾಡಿ ಅದರಲ್ಲಿ ಬರತಕ್ಕ ಬಗಾಸೆಯನ್ನು ಉಪಯೋಗಿಸುತ್ತೇವೆ, ಇದರಿಂದ ರೈತರಿಗೆ ಅನುಕೂಲವಾಗುತ್ತದೆ ಎಂದು ಹೇಳಿದರು. ಆಮೇಲೆ ಎರಡು ಮೂರು ಸಾರಿ ಆ ಜಿಲ್ಲೆಯ ಶಾಸಕರನ್ನು, ನಮ್ಮನ್ನೆಲ್ಲಾ ಕರೆದು ಉಟೋಪಚಾರ ಮಾಡಿಸಿದ್ದು ಆಯಿತು. ಆದರೆ ಇವತ್ತಿನ ಪರಿಸ್ಥಿತಿಯನ್ನು ನೋಡಿದಾಗ ಆ ಕಾರ್ಖಾನೆ ಟ್ರಯಲ್ ಪ್ರೊಡಕ್ಷನ್ ಸಹಾ ಮಾಡುವಂಥ ಸ್ಥಿತಿಯಲ್ಲಿಲ್ಲ ಎಂದು ಗೊತ್ತಾದಾಗ, ಭದ್ರಾವತಿ ಕಾಗದ ಕಾರ್ಖಾನೆ ಬಿಳಿ ಕಾಗದ ತಯಾರು ಮಾಡುವಂಥ ಕಾರ್ಖಾನೆ ಆಗದೆ ನಮ್ಮ ರಾಜ್ಯದ ಬಿಳಿ ಆನೆ ಆಗುತ್ತಿದೆ ಎಂಬ ಮನೋಭಾವನೆ ನನಗೆ ಬರುತ್ತಾ ಇದೆ. ಇದರ ಬಗ್ಗೆ ಮಾನ್ಯ ದೇವೇಗೌಡರು ಹೇಳಿದ್ದಾರೆ. ನಾನು ಇದರ ಬಗ್ಗೆ ಹೆಚ್ಚಿಗೆ ಹೇಳುವುದಿಲ್ಲ. ಒಂದು ವಿಚಾರ ಹೇಳುತ್ತೇನೆ. ಶಿವಮೊಗ್ಗ ಕ್ಯಾಬಿನೆಟ್‌ನಲ್ಲಿ ಶುಗರ್ ಫ್ಯಾಕ್ಟರಿಯಲ್ಲಿ ಕ್ರಷಿಂಗ್ ಶುರುಮಾಡಬೇಕು ಎಂದು ಮಂತ್ರಿಮಂಡಲ ತೀರ್ಮಾನ ಮಾಡಿದೆ. ಇದರಿಂದ ಶಿವಮೊಗ್ಗ ಜಿಲ್ಲೆಯ ರೈತರಿಗೆ ಅನುಕೂಲವಾಗುತ್ತದೆ. ಈ ಬಗ್ಗೆ ನಾನು ಸರ್ಕಾರವನ್ನು ಅಭಿನಂದಿಸುತ್ತೇನೆ. ವಿಜಯನಗರ ಉಕ್ಕು ಕಾರ್ಖಾನೆ ಇನ್ನೂ ಆಗದೇ ಇರುವಂಥಾದ್ದು ದುರಾದೃಷ್ಟ. ಈಗ ಆಗುವಂಥ ಹಂತ ಮುಟ್ಟಿದೆ. ಮಾನ್ಯ ವಿರೋಧಪಕ್ಷದ ಮಿತ್ರರು ವಿಜಯನಗರ ಉಕ್ಕು ಕಾರ್ಖಾನೆ ಆಗಲಿಲ್ಲ ಎಂದು ಸರ್ಕಾರವನ್ನು ಕೇಳುತ್ತಾ ಇದ್ದರು. ಬಹುಶಃ ನನ್ನ ರೀತಿಯಲ್ಲಿ ಹೇಳುವುದಾದರೆ, ಕೇಂದ್ರದಲ್ಲಿ ೧೯೭೭ ರಿಂದ ಅಧಿಕಾರದಲ್ಲಿದ್ದಂಥ ಜನತಾ ಸರ್ಕಾರವೇ ಇದು ಆಗದೇ ಇರುವುದಕ್ಕೆ ಕಾರಣ. ೩ ವರ್ಷ ಜನತಾ ಸರ್ಕಾರ ಅಧಿಕಾರದಲ್ಲಿ ಬರದೇ ಇದ್ದಿದ್ದರೆ ಖಂಡಿತವಾಗಿಯೂ ವಿಜಯನಗರ ಉಕ್ಕಿನ ಕಾರ್ಖಾನೆ ಆಗುತ್ತಿತ್ತು.

ಶ್ರೀ ಎಸ್. ಆರ್. ಬೊಮ್ಮಾಯಿ.—೧೯೭೧ ರಲ್ಲಿ ಅದರ ಅಡಿಗಲ್ಲು ಹಾಕಿದ್ದು. ೧೯೭೭ರವರೆಗೆ ನಿಮ್ಮ ಸರ್ಕಾರ ಇತ್ತು, ೧೯೭೭ ರವರೆಗೆ ಏತಕ್ಕೆ ಆಗಲಿಲ್ಲ ?

ಶ್ರೀ ಕಡಿದಾಳ್ ದಿವಾಕರ್.—ಎಲ್ಲಾ ವ್ಯವಹಾರ ಕುದುರಿ ಪಶ್ಚಿಮ ಜರ್ಮನಿಯವರ ಸಹಯೋಗದೊಡನೆ ಒಪ್ಪಂದವಾಗಿ ಈ ಉಕ್ಕಿನ ಕಾರ್ಖಾನೆ ಪ್ರಾರಂಭವಾಗುವ ಹಂತದಲ್ಲಿತ್ತು. ಆದರೆ ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂದಾಗ ನಿಮ್ಮ ಸ್ನೇಹಿತರಾದ ಶ್ರೀ ಜಾರ್ಜ್ ಫರ್ನಾಂಡೀಸ್‌ರವರು ಚಿಕ್ಕಮಗಳೂರು ಲೋಕಸಭಾ ಚುನಾವಣೆಯಲ್ಲಿ ಮಾತನಾಡುತ್ತಾ ನಾವು ವಿಜಯನಗರ ಉಕ್ಕಿನ ಕಾರ್ಖಾನೆಯನ್ನು ಅಲ್ಲಿ ಮಾಡದೇ ಮಂಗಳೂರಿನಲ್ಲಿ ಮಾಡುತ್ತೇವೆಂದು ಹೇಳಿದರು. ಹೀಗಾಗಿ ಅದು ಇಲ್ಲಿ ಆಗದೆ ಕೊನೆಗೆ ಸೇಲಂನಲ್ಲಿ ಆಯಿತು, ವಿಶಾಖಪಟ್ಟಣದಲ್ಲಿ ಆಯಿತು ಕರ್ನಾಟಕದಲ್ಲಿ ಉಕ್ಕಿನ ಕಾರ್ಖಾನೆ ಆಗದೇ ಇರುವುದಕ್ಕೆ ನೀವು ಸಹ ಸಲ್ಪ ಕಾಣಿಕೆ ಸಲ್ಲಿಸಿದ್ದೀರಿ ಎನ್ನುವುದನ್ನು ಇದರಿಂದ ಮರೆಯುವ ಹಾಗಿಲ್ಲ. ನೀವು ಎಂದರೆ ನೀವಲ್ಲ, ನಿಮ್ಮ ಸ್ನೇಹಿತರು ಕಾರಣರೆಂದು ತಮ್ಮ ಗಮನಕ್ಕೆ ತರಬಯಸುತ್ತಿದ್ದೇನೆ. ಈಗಲೂ ಸಹ ನಮ್ಮ ಸರ್ಕಾರ ಇದರ ಬಗ್ಗೆ ವಿಶೇಷವಾಗಿ ಪ್ರಯತ್ನ ಮಾಡುತ್ತಿದ್ದೆ. ಖಂಡಿತವಾಗಿಯೂ ಈ ಸಾರಿ ಸಕ್‌ಸ್ಸ್ ಆಗಿಯೇ ಆಗುತ್ತೇವೆ. ಪಶ್ಚಿಮ ಜರ್ಮನಿಯ ಸಂಸ್ಥೆಯೊಂದು ಮುಂದೆ ಬಂದಿದೆಂದು ಕೇಳಿದ್ದೇನೆ ಆದುದರಿಂದ ಇದು ಆಗುವ ಬಗ್ಗೆ ನಮ್ಮ ಸರ್ಕಾರದವರು ಹೆಚ್ಚಿನ ಗಮನ ನೀಡುತ್ತಾರೆಂದು ಹಾರೈಸುತ್ತೇನೆ. ಪಶ್ಚಿಮ ಘಟ್ಟಗಳ ಅಭಿವೃದ್ಧಿಯ ಬಗ್ಗೆ ತಾವು ೨೮೮ ಲಕ್ಷ ರೂ.ಗಳನ್ನು ಮಾತ್ರ ಕೊಟ್ಟಿದ್ದೀರಿ. ಪಶ್ಚಿಮ ಘಟ್ಟಗಳ ಅಭಿವೃದ್ಧಿಯ ಪಟ್ಟಿಯಲ್ಲಿ ಹಿಂದೆ ೨೩ ತಾಲ್ಲೂಕ್‌ಗಳು ಮಾತ್ರ ಇತ್ತು ಆದರೆ ಈಗ ಇನ್ನೂ ಹೊಸದಾಗಿ ೧೪ ತಾಲ್ಲೂಕ್‌ಗಳನ್ನು ಸೇರಿಸಿ ಒಟ್ಟು ೪೦ ತಾಲ್ಲೂಕ್‌ಗಳಿಗೆ ವಿಸ್ತಾರ ಮಾಡಿದ್ದೀರಿ. ಇದಕ್ಕೆಲ್ಲಾ ನೀವು ಕೊಟ್ಟಿರುವಂಥಾ ಹಣ ಬರೀ ೨೮೮ ಲಕ್ಷ ರೂಪಾಯಿಗಳು ಅದು ಏನಿದೆ, ಅಷ್ಟು ಸಾಕಾಗುವುದಿಲ್ಲವೆಂದು ಹೇಳ ಬಯಸುತ್ತೇನೆ. ಇವತ್ತು ಅನೇಕ ಸಂಘಸಂಸ್ಥೆಗಳ ಮುಖಾಂತರ ಕೆಲಸ ಮಾಡುತ್ತಿದ್ದೇವೆಂದು ಹೇಳುತ್ತಿದ್ದೀರಿ, ಆದರೆ ಈಗ ಆಗುತ್ತಿರುವಂಥಾ ಕಾರ್ಯವನ್ನು ನೋಡಿದರೆ ಅದರಿಂದ ಆ ಭಾಗದ ಜನತೆಗೆ ಯಾವುದೇ ರೀತಿಯಲ್ಲಿ ಅನುಕೂಲವಾಗುತ್ತಿಲ್ಲ. ಯಾವ ಉದ್ದೇಶವನ್ನಿಟ್ಟುಕೊಂಡು ಪಶ್ಚಿಮ ಘಟ್ಟಗಳ ಅಭಿವೃದ್ಧಿ ನಿಗಮವನ್ನು ಸ್ಥಾಪನೆ ಮಾಡಿದಿರೋ ಆ ಉದ್ದೇಶ ಈಡೇರುತ್ತಿಲ್ಲವೆಂದು ನನಗನ್ನಿಸುತ್ತದೆ. ಆದುದರಿಂದ ಇದಕ್ಕೆ ಸರ್ಕಾರ

ದವರು ಹೆಚ್ಚಿನ ಹಣವನ್ನು ಕೊಟ್ಟು ಆ ಭಾಗದ ಜನರ ಆಶೋತ್ತರಗಳನ್ನು ಶೀಘ್ರವಾಗಿ ಈಡೇರಿಸ ಬೇಕು. ಈಗ ಏನು ಪಶ್ಚಿಮ ಘಟ್ಟಗಳಲ್ಲಿ ಅರಣ್ಯ ನಾಶವಾಗುತ್ತಿದೆ ಅದೇ ರೀತಿಯಾಗಿ ಬಿಟ್ಟರೆ ಪಶ್ಚಿಮ ಘಟ್ಟವೆಲ್ಲಾ ಸಂಪೂರ್ಣವಾಗಿ ನಾಶ ವಾಗುತ್ತದೆ ಎನ್ನುವುದು ಸರ್ಕಾರದವರ ಗಮನಕ್ಕೆ ಬಂದಿದೆ. ಇವತ್ತು ಪಶ್ಚಿಮ ಘಟ್ಟಗಳ ನಿಗಮವೆಂದು ಮಾಡಿದ್ದರೂ ಸಹ ಅದರಿಂದ ನಿರೀಕ್ಷಿಸಿದಷ್ಟು ಕೆಲಸವಾಗು ತ್ತಿಲ್ಲ. ಅದು ಇನ್ನೂ ಉತ್ತಮ ರೀತಿಯಲ್ಲಿ ಕೆಲಸ ಮಾಡುವ ಹಾಗೆ ಮಾಡಬೇಕೆಂದು ಸರ್ಕಾರದವರಲ್ಲಿ ಕೇಳಿಕೊಳ್ಳುತ್ತೇನೆ. ಅತಿ ಮುಖ್ಯವಾಗಿ ಈ ಅಬ್ಕಾರಿ ಇಲಾಖೆಯ ಬಗ್ಗೆ ಕೆಲವು ಮಾತುಗಳನ್ನು ಹೇಳು ವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ರಾಜ್ಯಕ್ಕೆ ೧೩೩ ಕೋಟಿ ರೂಪಾಯಿಗಳ ಆದಾಯವನ್ನು ತರುವಂಥಾ ಬಹು ಮುಖ್ಯವಾದ ಇಲಾಖೆ ಇದು ಆಗಿದೆ. ಟಾಡಿ ವರ್ಕರ್ಸ್ ವೆಲ್‌ಫೇರ್ ಬಿಲ್‌ನ್ನು ತರುತ್ತಿದ್ದೇ ವೆಂದು ಹೇಳಿದ್ದೀರಿ. ಮಾನ್ಯ ಅಧ್ಯಕ್ಷರೇ ಇವತ್ತು ಟಾಡಿ, ಈ ಸೇಂದಿ ಏನಿದೆ, ಇದು ಕೊಡಗು ಜಿಲ್ಲೆ, ಆನೇಕಲ್, ಸಿರಸಿ, ಧಾರವಾಡ, ಮತ್ತು ಹೊಸನಗರ, ಯಲ್ಲಾಪುರ ಇನ್ನು ಮುಂತಾದ ಅನೇಕ ಮಲೆನಾಡು ಬೆಲ್ಟ್ ಏರಿಯಾದಲ್ಲಿ ಇದೆ, ಇಲ್ಲಿ ಬಗನೆ ಮರಗಳು ಸಿಗುತ್ತದೆ. ಯಥೇಚ್ಛವಾಗಿ ಸಿಗತಕ್ಕಂಥ ಈ ಮರಗಳಿಂದ ಸೇಂದಿಯನ್ನು ತೆಗೆಯಬಹುದಾಗಿದೆ. ಆ ಜಾಗದಲ್ಲಿ ಇವತ್ತಿನ ದಿವಸ ಸೇಂದಿಯನ್ನು ಮಾಗುವುದಕ್ಕೆ ಅವಕಾಶ ಕೊಟ್ಟಿಲ್ಲ. ಎಲ್ಲಿ ಮರವಿಲ್ಲ ಅಲ್ಲಿ ಸೇಂದಿ ಮಾರಬಹುದೆಂದು ಹೇಳುತ್ತೀರಿ ಇವತ್ತು ಟಾಡಿ ಮತ್ತು ಸೇಂದಿಗೆ ಒಂದು ರೀತಿಯ ಪೌಡರನ್ನು ಮಿಕ್ಸ್ ಮಾಡಿ ಮಾರುತ್ತಿರುವುದಾಗಿ ತಾವು ಹೇಳಿದ್ದೀರಿ. ಇದು ಜನತೆಗೆ ಮಾರಕವಾದಂಥದ್ದು ಇದನ್ನು ಕುಡಿದರೆ ಸ್ಲೋ ಪಾಯಿಜನ್ ತರಹ, ಇದನ್ನು ಎರಡು ಮೂರು ವರ್ಷ ಕುಡಿದರೆ ಜನ ಸಾಯುತ್ತಾರೆ. ಕ್ಲೋರಾಲ್ ಹೈಡ್ರೇಟ್‌ನ್ನು ನೀರಿನಲ್ಲಿ ಮಿಕ್ಸ್ ಮಾಡಿ ಒಂದು ಕೊಳಾಯಿಯಲ್ಲಿ ಅದನ್ನು ಹಾಕಿ ಅದರಲ್ಲಿ ಈ ಲೆಪ್ರಸ್ಸಿಯವರನ್ನು ಈಜಾಡಿಸುತ್ತಾರಂತೆ ಇದರಿಂದ ಒಂದು ರೀತಿಯ ಫ್ಲೇವರ್ ಬರುತ್ತದಂತೆ. ಇದು ನಿಜವಾಗಿದ್ದರೆ ಅದನ್ನು ನಿಲ್ಲಿಸುವಂಥಾ ವ್ಯವಸ್ಥೆ ಮಾಡಬೇಕು. ಜೊತೆಗೆ ಇವತ್ತು ಬಗನೆ ಮರ ಗಳು ಎಲ್ಲೆಲ್ಲಿವೆ ಎಂಬುದು ತಮಗೂ ಗೊತ್ತಿದೆ ತಾವು ಪ್ರವಾಸ ಮಾಡಿದಾಗ ನೋಡಿದ್ದೀರಿ. ಆದುದ ರಿಂದ ಎಲ್ಲೆಲ್ಲಿ ಬಗನೆ ಮರಗಳು ಇವೆ ಅವುಗಳನ್ನು ಉಪಯೋಗಿಸಿಕೊಳ್ಳುವ ಬಗ್ಗೆ ಸರಿಯಾದ ವ್ಯವಸ್ಥೆ ಮಾಡಿಲ್ಲ. ಅದರ ಬದಲು ಇವತ್ತಿನ ದಿವಸ ತುಮಕೂರು ಜಿಲ್ಲೆಯ ಚಿಕ್ಕನಾಯಕನ ಹಳ್ಳಿಯಲ್ಲಿ ೨೦ ಸಾವಿರ ಎಕರೆ ಪ್ರದೇಶವನ್ನು ಸೇಂದಿ ಮರಕ್ಕಾಗಿ ರಿಜರ್ವ್ ಇಟ್ಟಿದ್ದೀರಿ. ಅದನ್ನು ಬೇರೆ ಉದ್ದೇಶಗಳಿ ಗೋಸ್ಕರವಾಗಿ ಕೊಡುತ್ತಿಲ್ಲ. ತಾವು ಬೇಕಾದರೆ ಅಲ್ಲಿಗೆ ಹೋಗಿ ನೋಡಿ ಅಲ್ಲಿ ಯಾವುದೇ ವಿಧವಾದ ಸೇಂದಿ ಮರಗಳು ಇಲ್ಲ. ಎಲ್ಲಾ ಬ್ಯಾರಲ್ ಲ್ಯಾಂಡ್ ಅಲ್ಲಿ ತೆಂಗಿನ ಕೃಷಿಗೆ ಅವಕಾಶ ಮಾಡಿಕೊಡ ಬಹುದಾಗಿದೆ. ಎಲ್ಲಿ ಸೇಂದಿ ಮರಗಳಿವೆಯೋ ಅಲ್ಲಿ ಇವತ್ತಿನ ದಿವಸ ನೀವು ಸೇಂದಿ ತೆಗೆಯುವುದಕ್ಕೆ ಅವಕಾಶ ಮಾಡಿಕೊಡುತ್ತಿಲ್ಲ, ಬಗನೆ ಮರದ ಸೇಂದಿ ಬಹಳ ಉತ್ತಮವಾದ ಸೇಂದಿಯಾಗಿದೆ ಅಂಥಾದ್ದ ರಲ್ಲಿ ಅದಕ್ಕೆ ಅವಕಾಶ ಮಾಡಿಕೊಡದೇ ಇರುವುದು ನಿಜಕ್ಕೂ ಒಂದು ದ್ವಂದ ನೀತಿಯಾಗಿದೆ. ಸ್ವಾಮಿ, ಇನ್ನು ಮುಖ್ಯವಾಗಿ ಬ್ರಾಂದಿ ಶಾಪ್‌ಗಳು ಇದರ ಬಗ್ಗೆ ಹೇಳುವುದಾದರೆ ಹಿಂದೆ ಇದ್ದ ಕಮಿಷನರ್ ಭಟ್ಟಾಚಾರ್ಯರವರು ಬಹಳ ಉತ್ತಮವಾದ ಕೆಲಸವನ್ನು ಮಾಡಿದ್ದರು. ಆಗ ಅವರು ಏನು ಮಾಡಿದ್ದರು ಎಂದರೆ ೨೦೦ ಲೀಟರ್‌ಗಿಂತ ಕಡಿಮೆ ಸೇಲ್ ಆಗುವಂಥಾ ಕಡೆಗಳಲ್ಲಿ ಮತ್ತೆ ಹೊಸದಾಗಿ ಆ ಊರುಗಳಿಗೆ ಬ್ರಾಂದಿ ಶಾಪ್‌ಗಳನ್ನು ಕೊಡುವುದಿಲ್ಲವೆಂದು ಹೇಳಿದ್ದರು. ಇದರಿಂದ ಏನಾಗಿದೆ ಎಂದರೆ ಸೆಕೆಂಡ್ಸ್ ಡಿಸ್ಟಿಲರೀಸ್ ಎಂದು ನಮ್ಮಲ್ಲಿ ತಯಾರು ಮಾಡುತ್ತಿದ್ದಾರೆ ಇದು ಒಂದು ಕಾಟೇಜ್ ಇಂಡಸ್ಟ್ರೀಸ್ ಆಗಿದೆ. ಯಾವ ಬ್ರಾಂಡಿನ ಬ್ರಾಂದಿ, ಬೀರ್ ಬೇಕೋ ಅದನ್ನು ಡೂಪ್ಲಿಕೇಟ್ ಆಗಿ ತಯಾರು ಮಾಡು ತ್ತಿದ್ದಾರೆ. ಈ ತರಹ ಅಡಲ್ಟ್ರೇಷನ್ ಆಗುತ್ತಿದೆಂದು ನಮ್ಮ ಸ್ನೇಹಿತರು ಹೇಳಿರುವುದನ್ನು ಕೇಳಿದ್ದೇನೆ. ಇದು ಒಂದು ಕಾಟೇಜ್ ಇಂಡಸ್ಟ್ರೀಸ್ ಆಗಿ ಬಿಟ್ಟಿರುವುದರಿಂದ ಇದನ್ನು ತಪ್ಪಿಸಬೇಕೆಂದು ಹೇಳ ಬಯಸುತ್ತೇನೆ. ಮತ್ತೆ ಯಾರು ಬ್ರಾಂದಿ ಶಾಪ್‌ಗಳನ್ನು ತೆರೆಯಲು ಕೇಳುತ್ತಾರೋ ಅವರಿಗೆಲ್ಲರಿಗೂ ಕೊಡಿ ಕಾಂಪಿಟೇಷನ್ ಇಲ್ಲದೇ ಹೋದರೆ ಊರಿಗೆ ಒಬ್ಬಳೇ ಪದ್ಮಾವತಿ ತರಹವಾಗಿ ಬಿಡುತ್ತದೆ. ಗೋವಾದಲ್ಲಿ ನೋಡಿದರೆ ಒಂದು ನೂರು ಮೀಟರ್‌ಗೆ ಒಂದು ಶಾಪ್ ಇದೆ, ನೀವು ಇವತ್ತಿನ ದಿವಸ ಎಷ್ಟೇ ಶಾಪ್‌ಗಳನ್ನು ತೆರೆದರೂ ಸಹ ಅಷ್ಟೇ ಆದಾಯ ಸರ್ಕಾರಕ್ಕೆ ಬರುತ್ತದೆ, ಆದುದರಿಂದ ಬ್ರಾಂದಿ ಶಾಪ್‌ಗಳನ್ನು ತೆರೆಯುವುದಕ್ಕೆ ಅವಕಾಶ ಮಾಡಿಕೊಡಿ ಎಂದು ನಿಮ್ಮ ಹತ್ತಿರ ಒತ್ತಾಯ ಮಾಡಿ ಕೇಳಬಯಸುತ್ತೇನೆ.

ಈ ರಾಜ್ಯದಲ್ಲಿ ಒಟ್ಟು ಎಷ್ಟು ಶಾಪ್‌ಗಳಿವೆ? ಅವುಗಳ ಕನ್‌ಸಮ್‌ಷನ್ ಎಷ್ಟು? ಡಿಸ್ಟಿಲರೀಸ್ ತಯಾರಿಸುವುದು ಎಷ್ಟು? ಬ್ರಾಂಡಿ, ಬೀರು ತಯಾರಿಸುವುದು ಎಷ್ಟು? ಒಟ್ಟು ಪ್ರೊಡಕ್ಷನ್ ಎಷ್ಟಿದೆ ಶಾಪ್‌ಗಳಲ್ಲಿ ಖರ್ಚಾಗುವುದು ಎಷ್ಟು. ಈ ಎಲ್ಲ ವಿವರಗಳನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮುಖ್ಯವಾಗಿ ಜೀವನಕ್ಕೆ ಅಗತ್ಯವಾದ, ಸಾಮಾನ್ಯ ಜನರ ಅದರಲ್ಲೂ ಬಡವರ ಅಮೃತ "ಅರೇಕ" ಆಗಿದೆ ಅದರ ಬೆಲೆ ವಿಪರೀತ ಜಾಸ್ತಿಯಾಗಿದೆ. ಮಿನಿಮಂ ವೇಜಸ್ 5½ ಎಂದು ಫಿಕ್ಸ್ ಮಾಡಿದ್ದಾರೆ. ಎಲ್ಲ ಕಡೆ ಒಂದು ಕ್ವಾರ್ಟರ್ ಅರೇಕ ಬೆಲೆ ೬-೫೦ ಪೈಸೆ ಇದೆ. ಒಂದು ದಿವಸ ದುಡಿದಿದ್ದರಲ್ಲಿ ಒಂದು ಕ್ವಾರ್ಟರ್ ಬಾಟಲನ್ನು ಕುಡಿಯುವುದಕ್ಕಾಗುವುದಿಲ್ಲ. ದುಡಿದವರು ಕುಡಿಯದೆ ಇರುವುದಕ್ಕಾಗುವುದಿಲ್ಲ ಮತ್ತು ಆ ಕುಡುಕತನವನ್ನು ನಿಲ್ಲಿಸುವುದಕ್ಕೆ ಆಗುವುದಿಲ್ಲ. ಅದನ್ನು ನಿಲ್ಲಿಸಿದರೆ ಕಳ್ಳಬಟ್ಟಿ ಬರುತ್ತದೆಂದು ಗೊತ್ತು. ಆದುದರಿಂದ, ಪ್ರೊಹಿಬಿಷನ್ ತರುವುದಕ್ಕೆ ಆಗುವುದಿಲ್ಲ. ಕಡೆಯಪಕ್ಷ ಇದೊಂದರ ಬೆಲೆಯನ್ನಾದರೂ ಕಡಿಮೆ ಮಾಡದಿದ್ದರೆ ಬಡಜನರಿಗೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ, ಇದಕ್ಕೆ ಸೂಕ್ತವಾದ ಒಂದು ಬೆಲೆಯನ್ನು ನಿಗದಿ ಮಾಡಿ. ಆದಾಯದ ದೃಷ್ಟಿಯಿಂದ ನೋಡುವುದನ್ನು ಬಿಟ್ಟು ಕುಡಿಯುವವರ ಮತ್ತು ಅವರ ಆರ್ಥಿಕ ದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಬೆಲೆ ಕಡಿಮೆ ಮಾಡಬೇಕೆಂದು ಹೇಳುತ್ತೇನೆ ಇವತ್ತಿನ ದಿವಸ, ಮಂದ್ರಾಸ್‌ನಲ್ಲಿ ಅಂಗಡಿವಾರು ಹರಾಜು ಮಾಡುತ್ತಿದ್ದಾರೆ ಇದರಿಂದ ಜಾಸ್ತಿ ಜನಕ್ಕೆ ಉದ್ಯೋಗ ಸಿಕ್ಕುತ್ತಿದೆ. ಅದೇ ರೀತಿ ನಮ್ಮಲ್ಲೂ ಕೂಡ ತಾಲ್ಲೂಕು ಮತ್ತು ಜಿಲ್ಲಾವಾರು ಹರಾಜು ಹಾಕುವುದನ್ನು ನಿಲ್ಲಿಸಿ ಅಂಗಡಿವಾರು ಹರಾಜಾಗುವಂತೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಅದರಿಂದ ಜಾಸ್ತಿ ಜನರಿಗೆ ಉದ್ಯೋಗ ಸಿಗುತ್ತದಲ್ಲದೆ ಸರ್ಕಾರಕ್ಕೆ ಆದಾಯ ಕೂಡ ಜಾಸ್ತಿ ಬರುತ್ತದೆ. ಆದ್ದರಿಂದ ಷೆಡ್ಯೂಲ್ ಬಿ. ಮತ್ತು ಸಿ. ಯನ್ನು ರದ್ದು ಮಾಡಿ ಎ. ಯನ್ನು ಮಾತ್ರ ಜಾರಿಗೆ ತಂದು ಅಂಗಡಿವಾರು ಹರಾಜಾಗುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತಿನ ದಿವಸ, ಹೈಸ್ಕೂಲ್ ಮತ್ತು ಕಾಲೇಜುಗಳಲ್ಲಿ ಓದತಕ್ಕ ವಿದ್ಯಾರ್ಥಿಗಳೇ ಹೆಚ್ಚಾಗಿ ಕುಡಿಯುತ್ತಿದ್ದಾರೆ. ಆದ್ದರಿಂದ ದೇಶದ ಜನರ ಹಿತದೃಷ್ಟಿಯಿಂದ ಟೋಟಲ್ ಪ್ರೊಹಿಬಿಷನ್ ಅನ್ನು ಜಾರಿಗೆ ತರುವುದು ಒಳ್ಳೆಯದೆಂದು ಸರ್ಕಾರಕ್ಕೆ ಸಲಹೆ ಮಾಡುತ್ತೇನೆ.

ಶ್ರೀ ಸಿ. ಎಂ. ಇಬ್ರಾಹಿಂ.—ಇಷ್ಟು ಹೊತ್ತು ಜಾಸ್ತಿ ಕೊಡಿ ಎಂದು ಈಗ ತೆಗೆಯಿರಿ ಎಂದು ಹೇಳುತ್ತಿದ್ದೀರಲ್ಲ.

ಶ್ರೀ ಕಡಿದಾಳ್ ದಿವಾಕರ್.— ಮಾದಕ ಪದಾರ್ಥಗಳ ಬೆಲೆಯನ್ನು ಕಡಿಮೆ ಮಾಡದಿದ್ದರೆ ಅರ್ಥವಿಲ್ಲವಾಗುತ್ತದೆ. ಆದ್ದರಿಂದ ಅವು ಎಲ್ಲರಿಗೂ ಅಗ್ಗದ ರೀತಿಯಲ್ಲಿ ಸಿಗುವಂತೆ ಮಾಡೋಣ, ಇಲ್ಲದಿದ್ದರೆ ಟೋಟಲ್ ಪ್ರೊಹಿಬಿಷನ್ ಜಾರಿಗೆ ತರೋಣ. ಇವತ್ತಿನ ದಿವಸ, ಕೊಲೆ, ದರೋಡೆಗಳು ಹೆಚ್ಚಾಗುತ್ತಿವೆ ಮತ್ತು ಸಾರ್ವಜನಿಕರು ಹಾಳಾಗುತ್ತಿದ್ದಾರೆ. ಬೆಂಗಳೂರಿನಲ್ಲಿ ಯಾವ ಬಾರ್‌ಗಳಲ್ಲಿ ನೋಡಿದರೂ ೧೮-೨೦ ವರ್ಷದವರೇ ಜಾಸ್ತಿ ಇರುತ್ತಾರೆ. ಅಮೇರಿಕಾದಲ್ಲಿ ೨೧ ವರ್ಷದವರಿಗೆ ಕೂಡ ಕುಡಿಯುವುದಕ್ಕೆ ಅವಕಾಶ ಇಲ್ಲ. ನಮ್ಮಲ್ಲಿ ಅಂಥ ಕಾನೂನು ತರಬೇಕು. ೧೮ ವರ್ಷದೊಳಗೆ ಇರತಕ್ಕವರು ಬಹಿರಂಗವಾಗಿ ಕುಡಿಯುವುದನ್ನು ತಪ್ಪಿಸಬೇಕು. ದಯವಿಟ್ಟು ಈ ಒಂದು ಕಾನೂನನ್ನು ಈ ವರ್ಷವೇ ತರಬೇಕೆಂದು ಒತ್ತಾಯ ಮಾಡುತ್ತೇನೆ, ಯಾರು ಜನರಿಗೆ ತಿಳಿವಳಿಕೆ ನೀಡಬೇಕೋ ಅಂಥ ವೈದ್ಯರೇ ಕುಡಿಯುವುದು ಜಾಸ್ತಿಯಾಗಿದೆ.

ಶ್ರೀ ಜಿ. ರಾಮೇಗೌಡ.— ಬಗನೆ ಹೆಂಡಕ್ಕೂ ಮತ್ತು ಈಚಲ ಹೆಂಡಕ್ಕೂ ಏನು ವ್ಯತ್ಯಾಸ ಇಲ್ಲವೆನ್ನುವುದಾದರೆ ಅದರಲ್ಲಿ ಯಾವುದು ಉತ್ತಮವೋ ಅದನ್ನು ರೂಢಿ ಮಾಡಿಕೊಳ್ಳಬಹುದು.

ಶ್ರೀ ಕಡಿದಾಳ್ ದಿವಾಕರ್.— ನಾನು ಈಚಲ ಹೆಂಡವನ್ನು ನೋಡಿಲ್ಲ, ನಿಮ್ಮ ಊರಿಗೆ ಕರೆದುಕೊಂಡು ಹೋಗಿ ಕೊಟ್ಟಿಲ್ಲ. ನೀವು ನಮ್ಮ ಊರಿಗೆ ಬಂದಿಲ್ಲ, ಬಗನೆ ಹೆಂಡವನ್ನು ಕುಡಿದಿಲ್ಲವೆಂದು ಕಾಣುತ್ತದೆ. ನೀವೇ ಅದರ ವ್ಯತ್ಯಾಸವನ್ನು ಹೇಳಬೇಕು. ವೈದ್ಯರು ಕುಡಿಯುವುದನ್ನು ನಿಲ್ಲಿಸುವಂತೆ ಆರೋಗ್ಯ ಮಂತ್ರಿಗಳು ಕ್ರಮ ಕೈಗೊಳ್ಳಬೇಕು, ಅನೇಕ ಸಂದರ್ಭಗಳಲ್ಲಿ ಆಸ್ಪತ್ರೆಗೆ ಬರುವಾಗ ಕುಡಿದುಕೊಂಡು ಬರುತ್ತಾರೆ ಮತ್ತು ಅದೇ ಮೂಡ್‌ನಲ್ಲಿ ಆಪರೇಷನ್ ಮಾಡುತ್ತಾರೆ. ಇದನ್ನು ತಪ್ಪಿಸದಿದ್ದರೆ ರೋಗಿಗಳ ಗತಿ ಏನು. ಯಾವುದೋ ಮಾತ್ರೆ ಕೊಡುವುದಕ್ಕೆ ಯಾವುದೋ ಮಾತ್ರೆ ಕೊಟ್ಟರೆ ರೋಗಿಗಳ ಪರಿಸ್ಥಿತಿ ಏನಾಗಬೇಕು. ಆದ್ದರಿಂದ ದಯಮಾಡಿ ವೈದ್ಯರು ಕುಡಿಯುವುದನ್ನು ತಪ್ಪಿಸಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ (ಬಸವನಗುಡಿ).— ಸನ್ಮಾನ್ಯ ಅಧ್ಯಕ್ಷರೇ, ಈ ವಿಚಾರದಲ್ಲಿ ಮಾತನಾಡುವುದಕ್ಕೆ ಮೊದಲು ಕನ್ನಡದಲ್ಲಿ ಅಬ್ಕಾರಿ ಇಲಾಖೆಯ ವರದಿ ಕೊಟ್ಟಿರುವುದನ್ನು ನೋಡಿದರೆ, ಅದರಲ್ಲಿ ಹೆಂಡ ಅಂತ ಹೆಡ್ಡಿಂಗ್ ಹಾಕಿದ್ದರೆ, ಅದೇ ಪ್ಯಾರಾದಲ್ಲಿ ಸಾರಾಯಿ ಎಂಬ ಪದವನ್ನು ಬಳಸಿದ್ದಾರೆ.

ಅಧ್ಯಕ್ಷರು.— ಬರವಣಿಗೆಯಲ್ಲಿ ವ್ಯತ್ಯಾಸವಾದರೆ ಆಶ್ಚರ್ಯಪಡಬೇಕಾಗಿಲ್ಲ.

ಶ್ರೀ ಪಿ. ರಾಮದೇವ್.— ಹೆಂಡದ ಅಂಗಡಿಗೆ ಸಾರಾಯಿ ಅಂಗಡಿ ಅನ್ನುತ್ತಾರೆ.

ಶ್ರೀ ಜಿ. ರಾಮೇಗೌಡ.— ರಾಮದೇವ್‌ರವರಿಗೆ ಈ ಯೋಚನಾಶಕ್ತಿ ಯಾವಾಗಿನಿಂದ ಬಂತು ?

ಶ್ರೀ ಹೆಚ್. ಎಲ್. ತಿಮ್ಮೇಗೌಡ.— ಅಬ್ಕಾರಿ ಇಲಾಖೆಯಿಂದ ನಮ್ಮ ರಾಜ್ಯಕ್ಕೆ ೧೯೮೨-೮೩ನೇ ಸಾಲಿನಲ್ಲಿ ೧೩೩ ಕೋಟಿ ರೂಪಾಯಿ ಆದಾಯ ಬರುತ್ತದೆಂದು ಅಂದಾಜು ಮಾಡಿದ್ದಾರೆ. ಅದರಲ್ಲಿ ಮಂತ್ರಿಗಳು ೩೧-೧೨ಕ್ಕೆ ಅಂಕಿ ಅಂಶಗಳನ್ನು ಕೊಟ್ಟಿದ್ದಾರೆ. ಇನ್ನೂ ೩ ತಿಂಗಳದ್ದನ್ನು ಸೇರಿಸಿ ಹೇಳಿದರೆ ಸಾರಾಯಿ ಹರಾಜಿನಿಂದ ೬೩ ಕೋಟಿ ಚಿಲ್ಲರೆ ಬರುತ್ತದೆ, ಶುಲ್ಕ ೧೦ ಕೋಟಿ, ಬೆಲೆ ೮ ಕೋಟಿ, ಒಟ್ಟು ಅಕ್ರಮ ಸಾರಾಯಿ ಮೇಲೆ ಶುಲ್ಕ ಹಾಕಿರುವುದು ೯ ಕೋಟಿ. ಒಟ್ಟು ೯೨ ಕೋಟಿ ೧೪ ಲಕ್ಷ ರೂಪಾಯಿ ಹಣ ಸಾರಾಯಿನಿಂದ ನಮ್ಮ ರಾಜ್ಯದ ಬೊಕ್ಕಸಕ್ಕೆ ಬಂದಿದೆ ಎಂದು ಹೇಳಿದ್ದಾರೆ. ಮರಗಳ ಬಾಬ್ತು ೨೭ ಲಕ್ಷ ರೂಪಾಯಿ ಮತ್ತು ಹೆಂಡದ ಹರಾಜಿನಿಂದ ೨೨ ಕೋಟಿ ೨೮ ಲಕ್ಷ ರೂಪಾಯಿಗಳು ಬಂದಿದೆ. ಬೀರಿನ ಮೇಲೆ ಶುಲ್ಕ ಹಾಕಿರುವುದು ಒಂದು ಕೋಟಿ ೯೨ ಲಕ್ಷ ರೂಪಾಯಿ. ಇತರೆಬಾಬುಗಳು ಎಂದರೆ ಬ್ರಾಂದಿ, ವಿಸ್ಕಿ— ಈ ಬಾಬುಗಳಿಂದ ಸರ್ಕಾರಕ್ಕೆ ೭ ಕೋಟಿ ರೂಪಾಯಿ ಬಂದಿದೆ. ಇದನ್ನು ನಾವು ನೋಡಿದರೆ ಸಾರಾಯಿಯಿಂದ ೯೨ ಕೋಟಿ ಚಿಲ್ಲರೆ, ಹೆಂಡದಿಂದ ೨೨ ಕೋಟಿ ಚಿಲ್ಲರೆ ಅಂದರೆ ೧೧೪ ಕೋಟಿ ರೂಪಾಯಿ ಸರ್ಕಾರಕ್ಕೆ ಬಂದಿದೆ. ಅದನ್ನು ಮಾರಾಟಗಾರರು ಕನಿಷ್ಟ ಪಕ್ಷ ನೂರಕ್ಕೆ ೯೦ ಭಾಗವನ್ನಾದರೂ ಲಾಭ ಇಟ್ಟುಕೊಂಡು ಮಾಡಿರುತ್ತಾರೆ. ಸರಾಯಿ—ಹೆಂಡ ಕುಡಿಯುವವರು ಪೂರ್ತಿ ಬಡಜನರು, ಐಶ್ವರ್ಯವಂತರು ಯಾರೂ ಕುಡಿಯುವುದಿಲ್ಲ. ಮಲೆನಾಡು ಪ್ರದೇಶಗಳಲ್ಲಿ ಬಗನೆ ಹೆಂಡವನ್ನು ಪ್ಲಾಂಟರ್ಸ್ ಕೂಡ ಕುಡಿಯುತ್ತಾರೆ. ಅದನ್ನು ಬಿಟ್ಟರೆ ಬೇರೆ ಹೆಂಡ ಮತ್ತು ಸಾರಾಯಿ ಕುಡಿಯುವವರೆಂದರೆ ಬಡವರು. ೧೫೮ ಕೋಟಿ ರೂಪಾಯಿನ ಮದ್ಯಪಾನವನ್ನು ಬಡವರಿಗೆ ಮಾಡಿಸಿ ಅವರಿಂದ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ೧೧೪ ಕೋಟಿ ರೂಪಾಯಿಗಳನ್ನು ಮತ್ತು ಮಾರಾಟಗಾರರಿಗೆ ೪೪ ಕೋಟಿ ರೂಪಾಯಿಗಳನ್ನು ಕೊಡಿಸುತ್ತಿದ್ದಾರಲ್ಲ ಇದು ಯಾವ ಧರ್ಮ ಎಂಬುದನ್ನು ಯೋಚಿಸಬೇಕು. ಇಷ್ಟು ದುಡ್ಡು ಖರ್ಚು ಮಾಡುವುದರ ಜೊತೆಗೆ ಕುಡಿದಂಥವರ ಆರೋಗ್ಯಕ್ಕೆ ಎಷ್ಟು ನಷ್ಟವಾಗುತ್ತದೆ, ಲಿವರ್ ಎಷ್ಟು ಕೆಡುತ್ತದೆ ಅಲ್ಲದೆ ಬಂದ ಹಣವನ್ನು ಕುಡಿಯುವುದಕ್ಕೆ ಖರ್ಚು ಮಾಡಿ, ಆಹಾರಕ್ಕೆ ಕೂಡ ದುಡ್ಡಿಲ್ಲದೆ ಗೋಳಾಡತಕ್ಕದ್ದು, ಕಾಯಿಲೆ ಬಂದು ಔಷಧಿ ತೆಗೆದುಕೊಳ್ಳಲು ಹಣವಿಲ್ಲದೆ ಇರುವುದು ಅಡಲ್ಟ್ರೇಟ್ ಮಾಡಿದ ಮದ್ಯವನ್ನು ಕುಡಿದು ಹಾಳಾಗತಕ್ಕದ್ದು—ಇದನ್ನೆಲ್ಲ ಸರ್ಕಾರದವರು ನೋಡಬೇಕು. ಇವತ್ತಿನ ದಿವಸ, ಬಡವರು ಔಷಧಿಗಾಗಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಇಂಥ ಸಂದರ್ಭದಲ್ಲಿ ಸರ್ಕಾರದವರು ಬಡವರಿಂದ ೧೫೮ ಕೋಟಿ ರೂಪಾಯಿಗಳನ್ನು ವಸೂಲ್ ಮಾಡತಕ್ಕದ್ದು ಯಾವ ಧರ್ಮ . ಇದನ್ನು ದೀರ್ಘವಾಗಿ ಆಲೋಚಿಸಬೇಕು. ಪಾನನಿರೋಧವನ್ನು ಜಾರಿಗೆ ತಂದರೆ ೧೫೮ ಕೋಟಿ ರೂಪಾಯಿ ಎಲ್ಲಿಂದ ಬರುತ್ತದೆಂದು ಮಂತ್ರಿಗಳು ಕೇಳುತ್ತಾರೆ. ಅದನ್ನು ಬೇರೆ ರೀತಿಯಲ್ಲಿ ತೆಗೆದುಕೊಳ್ಳುವುದರ ಬಗ್ಗೆ ಸರ್ಕಾರದವರು ಪರಿಶೀಲನೆ ಮಾಡಬೇಕು.

೫-೩೦ ಪಿ.ಎಂ.

೧೫೮ಕೋಟಿ ರೂಪಾಯಿಗಳನ್ನು ವಿವಿಧ ಬಾಬುಗಳಲ್ಲಿ ಹಳ್ಳಿಗಳಲ್ಲಿ ಖರ್ಚು ಮಾಡುತ್ತೀರಿ. ನ್ಯೂಟ್ರಿಷನ್ ಫಂಡ್‌ಗೆ ಅದಕ್ಕೆ ಇದಕ್ಕೆ ಎಲ್ಲಾ ಖರ್ಚು ಮಾಡುತ್ತೀರಿ ಇಷ್ಟೆಲ್ಲಾ ಮಾಡಿದರೂ ಅವರಿಗೆ ಹೆಂಡಸಾರಾಯಿ ಕುಡಿಸಿ ಜನಗಳ ಆರೋಗ್ಯವನ್ನು ಹಾಳು ಮಾಡುತ್ತಿದ್ದೀರಿ. ನಿಮ್ಮ ಕೈಯಲ್ಲಿ ಪೂರ್ತಿಯಾಗಿ ಪಾನನಿರೋಧವನ್ನು ಜಾರಿಗೆ ತರುವುದಕ್ಕೆ ಆಗದಿದ್ದರೂ ಕೊನೇಪಕ್ಷ ಹೆಂಡ ಸಾರಾಯಿ ಕುಡಿಯುವುದನಾದರೂ ತಪ್ಪಿಸಿ. ಪಟ್ಟಣದಲ್ಲಿ ದೊಡ್ಡ ದೊಡ್ಡವರಿಗೆ ಕುಡಿಯುವುದಕ್ಕೆ ಯಾವರೀತಿ ಪರ್ಮಿಷನ್ ಕೊಟ್ಟು ೭ ಕೋಟಿ ರೂಪಾಯಿ ತೆರಿಗೆ ತೆಗೆದುಕೊಳ್ಳುತ್ತಿದ್ದೀರೋ ಅದೇರೀತಿ ಹಳ್ಳಿ ಜನರಿಗೂ ಕೊಡಿ. ಹೆಂಡಸಾರಾಯಿ ಕುಡಿಯುವುದನ್ನು ತಪ್ಪಿಸಿ, ಅದರಿಂದ ದುಡ್ಡೂ ಖರ್ಚಾಗುತ್ತದೆ, ಆರೋಗ್ಯವೂ

ಹಾಳಾಗುತ್ತದೆ. ಬೀರ್ ಮೇಲೆ ಶುಲ್ಕ ಹಾಕಿದ್ದೀರಿ. ಅದರಲ್ಲಿ ೧೯೨ ಲಕ್ಷ ರೂಪಾಯಿ ಬರುತ್ತಿದೆ. ಹೆಂಡ ಸಾರಾಯಿ ಬದಲು ಬೀರನ್ನು ಒಂದು ಬಾಟಲ್‌ಗೆ ೮ ಆಣೆಯಂತೆ ಕೊಡಿ. ಬೀರನ್ನಾದರೂ ಕುಡಿದು ಆರೋಗ್ಯವನ್ನು ಚೆನ್ನಾಗಿ ಇಟ್ಟುಕೊಳ್ಳಲಿ. ನಿಮಗೆ ಬರತಕ್ಕ ಆದಾಯ ಕಡಿಮೆಯಾದರೂ ಜನರ ಆರೋಗ್ಯ ಚೆನ್ನಾಗಿರುತ್ತದೆ. ಆದ್ದರಿಂದ ಇದನ್ನು ಪರಿಶೀಲನೆ ಮಾಡಬೇಕೆಂದು ಸಲಹೆ ಮಾಡುತ್ತೇನೆ.

ಶ್ರೀ ವೈ. ರಾಮಕೃಷ್ಣ.—ವೈದ್ಯರಾಗಿ ಒಳ್ಳೆಯ ಸಲಹೆ ಕೊಡುತ್ತಿದ್ದೀರಿ.

ಶ್ರೀ ಜಿ. ರಾಮೇಗೌಡ.—ಬೀರಿನ ಬೆಲೆ ಎಷ್ಟಿದೆ ಎಂಬುದು ನಮ್ಮ ತಿಮ್ಮೇಗೌಡರಿಗೆ ಗೊತ್ತಿಲ್ಲ ಎಂದು ಕಾಣುತ್ತದೆ. ಆದ್ದರಿಂದಲೇ ಅವರು ಎಂಟಾಣೆಗೆ ಕೊಡಿ ಎಂದು ಹೇಳುತ್ತಿದ್ದಾರೆ.

ಶ್ರೀ ಪಿ. ರಾಮದೇವ್.—ಆಗಸ್ಟ್ ೧೫ ರಿಂದ ಒಂದು ಲೀಟರ್ ನೀರಿಗೇ ೮ ಆಣೆ ಆಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಬೀರೇ ಕುಡಿಯಲಿ ನೀರಿನ ಬದಲು.

ಶ್ರೀ ಕೆ. ಎಂ. ತಮ್ಮಯ್ಯ.—ಸಾಯಂಕಾಲದ ಹೊತ್ತು ಎಕ್ಸೈಜ್ ಇಲಾಖೆ ಬೇಡಿಕೆ ಇಟ್ಟುಕೊಂಡಿದ್ದೀರಲ್ಲ ? ಆ ವಿಷಯ ಮಾತಾಡುತ್ತಿದ್ದರೆ ಜನ ಹೊರಗೆ ಹೋಗಿಬಿಡುತ್ತಾರೆ. ಏಕೆಂದರೆ ಥಂಡಿ ಹವ. ಆಮೇಲೆ ಕೋರಮ್‌ಗೆ ತೊಂದರೆಯಾಗುತ್ತದೆ.

ಅಧ್ಯಕ್ಷರು.—ಇದು ಬೆಳಗ್ಗಿನಿಂದ ಇದೆ. ಸಾಯಂಕಾಲ ಇಟ್ಟಿಲ್ಲ.

ಶ್ರೀ ಎಚ್. ಎಲ್. ತಿಮ್ಮೇಗೌಡ.—ಬೆಂಗಳೂರಿನಲ್ಲಿ ಬೀರಿಗೆ ನಾಲ್ಕೈದು ರೂಪಾಯಿ ಬೆಲೆ ಇದೆ. ನನಗೆ ಕುಡಿಯುವ ಅಭ್ಯಾಸ ಇಲ್ಲದಿದ್ದರೂ ಕೂಡ ನನ್ನ ಸ್ನೇಹಿತರ ಜೊತೆ ಕುಳಿತಿರುತ್ತೇನೆ. ಆದ್ದರಿಂದ ನನಗೆ ಸ್ವಲ್ಪಮಟ್ಟಿಗೆ ಗೊತ್ತು. ಬರೀ ತಯಾರಿಕೆ ವೆಚ್ಚವನ್ನು ಲೆಕ್ಕ ಹಾಕಿದರೆ ಎಂಟಾಣೆ, ಹನ್ನೆರಡು ಆಣೆಯೊಳಗೆ ಒದಗಿಸಬಹುದು. ಸರ್ಕಾರದವರೇ ಇದನ್ನು ತಯಾರು ಮಾಡಿಸಿ ಬಡವರಿಗೆ ಕೊಟ್ಟು ಹೆಂಡ ಸಾರಾಯಿಯನ್ನು ತಪ್ಪಿಸುವುದಕ್ಕೆ ಪ್ರಯತ್ನ ಮಾಡಬೇಕು ಎಂದು ನಾನು ಸಲಹೆ ಮಾಡುತ್ತೇನೆ. ಮತ್ತು ಅದರಲ್ಲಿ ಬರಬೇಕಾದ ಆದಾಯವನ್ನು ಬೇರೆ ಯಾವುದಾದರೂ ರೀತಿಯಲ್ಲಿ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು. ಕೈಗಾರಿಕೆಗಳ ಬಗ್ಗೆ ಹೇಳುವುದಾದರೆ ಕನ್ನಡಿಗರಲ್ಲದೇ ಇರುವವರು ಬೇರೆ ರಾಜ್ಯಗಳವರು ನಮ್ಮ ರಾಜ್ಯದಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡಿದ್ದಾರೆ. ಕಳೆದ ವರ್ಷ ೬೦೦ ಅರ್ಜಿಗಳ ಪೈಕಿ ಕನ್ನಡಿಗರಿಗೆ ಲೈಸನ್ಸ್ ಸಿಕ್ಕಿರುವುದು ಕೇವಲ ೧೦–೧೫ ಮಾತ್ರ ಈ ವರ್ಷವೂ ಅದೇರೀತಿ ಆಗುತ್ತಿದೆ. ಇದಕ್ಕೆ ಕಾರಣ ಕನ್ನಡಿಗರು ಹೆಚ್ಚಿಗೆ ಅರ್ಜಿಗಳನ್ನು ಹಾಕುವುದಿಲ್ಲ. ಮೈಸೂರು ಜಿಲ್ಲೆ ಕೈಗಾರಿಯಲ್ಲಿ ಹಿಂದುಳಿದ ಪ್ರದೇಶವೆಂದು ಅಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡಲು ೨೫ ಪರ್ಸೆಂಟ್ ಸಬ್ಸಿಡಿ ಕೊಡುತ್ತಾರೆ. ಹುಣಸೂರಿನಲ್ಲಿ ನಾಲ್ಕು ಕೈಗಾರಿಕೆಗಳಿವೆ. ಬ್ರಿಕ್ ಇಂಡಸ್ಟ್ರಿ, ಕಾಟನ್ ಇಂಡಸ್ಟ್ರಿ, ವುಲನ್ ಇಂಡಸ್ಟ್ರಿ ಅಲ್ಲಿದೆ. ವುಲನ್ ಇಂಡಸ್ಟ್ರಿಯನ್ನು ಬೇರೆಯವರು ನಡೆಸುತ್ತಿದ್ದಾರೆ. ಸಬ್ಸಿಡಿಯನ್ನು ಅವರು ತೆಗೆದುಕೊಳ್ಳುತ್ತಿದ್ದಾರೆ. ಆದ್ದರಿಂದ ನಿಮ್ಮ ಇಲಾಖೆಯಲ್ಲಿ ಲೈಸೆನ್ಸ್ ಕೊಡುವಾಗ ಕನ್ನಡಿಗರಿಗೆ ಆದ್ಯತೆ ಕೊಡಬೇಕು ಎಂದು ಹೇಳುತ್ತೇನೆ. ಕನ್ನಡಿಗರು ಕೈಗಾರಿಕೆಗಳನ್ನು ಸ್ಥಾಪನೆ ಮಾಡಲು ಮುಂದೆ ಬರದಿರುವುದರಿಂದ ಕೈಗಾರಿಕೆಗಳನ್ನು ಹೆಚ್ಚಿಗೆ ಸ್ಥಾಪನೆ ಮಾಡಲು ಅದರಲ್ಲೂ ಕೈಗಾರಿಕೆಯಲ್ಲಿ ಹಿಂದುಳಿದಿರುವ ಕಡೆಗಳಲ್ಲಿ ಹೆಚ್ಚಿಗೆ ಸಬ್ಸಿಡಿ ಕೊಟ್ಟು ಕನ್ನಡಿಗರೇ ಹೆಚ್ಚಿನ ರೀತಿಯಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವಂತೆ ಪ್ರಯತ್ನ ಮಾಡಬೇಕು. ಪ್ಲಾನಿಂಗ್ ವಿಚಾರದಲ್ಲಿ ಹೇಳುವುದಾದರೆ ಈಗ ೩ನೇ ಯೋಜನೆ ಆಗುತ್ತಿದೆ. ನಮ್ಮ ದೇಶಕ್ಕೆ ಕಬ್ಬಿಣ, ಸಿಮೆಂಟ್ ಸಕ್ಕರೆ ಎಷ್ಟು ಬೇಕು ಎಂಬುದನ್ನು ಪ್ಲಾನ್ ಹಾಕಿ ಕೆಲಸ ಮಾಡುತ್ತಿದ್ದೀರಿ. ಒಳ್ಳೆಯದು ನಾನು ಮೊದಲಿನಿಂದಲೂ ಹಳ್ಳಿಗಳ ಮಟ್ಟದಿಂದ ಪ್ಲಾನಿಂಗ್ ಆಗಬೇಕೆಂದು ಹೇಳುತ್ತಿದ್ದೇನೆ. ಅಲ್ಲಿ ಅದನ್ನು ಇಂಪ್ಲಿಮೆಂಟ್ ಮಾಡಿದ್ದೀರಾ ? ಕೇಂದ್ರಸರ್ಕಾರದವರು ಮಾಡುವುದಕ್ಕಾಗುವುದಿಲ್ಲ ಆದರೆ ರಾಜ್ಯಸರ್ಕಾರದವರು ಮಾಡುವುದಕ್ಕೆ ಏನು ತೊಂದರೆ ಇದೆ ? ಹಳ್ಳಿಗಳಲ್ಲಿ ಎಷ್ಟು ಜನರು ರೈತರಿದ್ದಾರೆ ಅದರಲ್ಲಿ ಎಷ್ಟು ಜನರು ಜಮೀನಿಲ್ಲದೇ ಇರತಕ್ಕವರಿದ್ದಾರೆ, ನಿರುದ್ಯೋಗಿ ರೈತ ಕಾರ್ಮಿಕರು ಎಷ್ಟಿದ್ದಾರೆ, ಅವರಿಗೆ ಅನ್ನ ವಸತಿ, ಬಟ್ಟೆ ದೊರೆಯುವ ರೀತಿಯಲ್ಲಿ ಏನು ಮಾಡಬೇಕು, ಎಷ್ಟು ಮನೆಗಳನ್ನು ಕಟ್ಟಿಸಬೇಕು ಇದನ್ನೆಲ್ಲಾ ಸರ್ವೆ ಮಾಡಿ ಕ್ರಮ ತೆಗೆದುಕೊಳ್ಳಬೇಕು. ವರ್ಷದಲ್ಲಿ ೩ ತಿಂಗಳು ವ್ಯವಸಾಯ ಮಾಡಿ ೯ ತಿಂಗಳು ಸುಮ್ಮನೆ ಇರುವವರು ಗೃಹ ಕೈಗಾರಿಕೆಗಳನ್ನು ಮಾಡಬಹುದು. ಈ

ರೀತಿ ಪ್ಲಾನಿಂಗನ್ನು ಹಳ್ಳಿಗಳ ಮಟ್ಟದಿಂದ ಮಾಡದೇಹೋದರೆ ೧೦ನೇ ಯೋಜನೆ ಮಾಡಿದರೂ ಏನೂ ಪ್ರಯೋಜನವಾಗುವುದಿಲ್ಲ. ಮಾನ್ಯ ಬೇಗಾನೆ ರಾಮಯ್ಯನವರು ಟ್ರೈಸಮ್ ಸ್ಕೀಮು ಮುಂತಾದ ಸ್ಕೀಮುಗಳನ್ನು ಹಾಕಿ ಎಷ್ಟು ಹಣವನ್ನು ಗ್ರಾಮಾಂತರ ಪ್ರದೇಶದಲ್ಲಿ ಖರ್ಚು ಮಾಡಿದರೂ ಏನೂ ಪ್ರಯೋಜನವಾಗುವುದಿಲ್ಲ. ಆದ್ದರಿಂದ ಪ್ರತಿಯೊಂದು ಹಳ್ಳಿಯನ್ನೂ ಯೂನಿಟ್ ಮಾಡಿಕೊಂಡು ಎಲ್ಲರಿಗೂ ಅನ್ನ, ವಸತಿ, ಬಟ್ಟೆ ದೊರೆಕುವಂತೆ ಮಾಡಲು ಏನೇನು ಹಳ್ಳಿಗಳಲ್ಲಿ ಮಾಡಬೇಕೋ ಅದನ್ನು ಮಾಡಿ. ಜಪಾನಿನಲ್ಲಿ ಪ್ರತಿಯೊಂದು ಮನೆಯಲ್ಲೂ ಗೃಹಕೈಗಾರಿಕೆ ಇದೆ. ಅಲ್ಲಿ ಯುದ್ಧವಾಗಿ ಆಟಂ ಬಾಂಬ್ ಡೆಸ್ಟ್ರಾಯ್ ಮಾಡಿದಮೇಲೆ ಎಷ್ಟು ಜನ...

ಅಧ್ಯಕ್ಷರು.—(ಮಾನ್ಯ ಸದಸ್ಯರಾದ ಬಿ. ಎ. ಮೊಯಿದ್ದೀನ್ ರವರನ್ನು ಉದ್ದೇಶಿಸಿ are Reading paper is prohibited. You should not read.

ಶ್ರೀ ಎಚ್. ಎಲ್. ತಿಮ್ಮೇಗೌಡ.—ಹಳ್ಳಿಗಳಲ್ಲೂ ಗೃಹಕೈಗಾರಿಕೆಗಳನ್ನು ಸ್ಥಾಪನೆ ಮಾಡಬೇಕು, ಮತ್ತು ಪ್ಲಾನಿಂಗ್ ಸೆಲ್ ಮಾಡಿ ಪ್ಲಾನಿಂಗ್‌ನ್ನು ಹಳ್ಳಿಮಟ್ಟದಲ್ಲೂ ಮಾಡತಕ್ಕ ಕೆಲಸವನ್ನು ರಾಜ್ಯ ಸರ್ಕಾರದವರು ಮಾಡಬೇಕು ಎಂದು ಒತ್ತಿ ಹೇಳುತ್ತೇನೆ. ಇನ್ನು ವಿದ್ಯುಚ್ಛಕ್ತಿ ಮಂಡಳಿ ವಿಚಾರದಲ್ಲಿ ಹೇಳುವುದಾದರೆ ಮಂಡಳಿಯವರು ೬ ತಿಂಗಳಿಗೊಂದು ಸಲ ಬಿಲ್ ಕೊಡುವ ಪದ್ಧತಿಯನ್ನು ಇಂಟ್ರೊಡ್ಯೂಸ್ ಮಾಡಿದರು. ಆದರ ಬಗ್ಗೆ ಆ ಮಂಡಲಿಯ ನೌಕರರೇ ಕೋರ್ಟಿಗೆ ಹೋಗಿ ಆ ಬಗ್ಗೆ ಸ್ಟೇ ತಂದಿದ್ದಾರೆ. ಈಗ ಆರು ತಿಂಗಳ ಬಿಲ್ಲೂ ಇಲ್ಲ, ಒಂದು ತಿಂಗಳ ಬಿಲ್ಲೂ ಇಲ್ಲ. ಆದ್ದರಿಂದ ಈ ಕನ್‌ಫ್ಯೂಷನ್ ತಪ್ಪಿಸಿ ೬ ತಿಂಗಳ ಬದಲು ಮೊದಲಿದ್ದಂತೆ ಪ್ರತಿ ತಿಂಗಳೂ ಬಿಲ್ ಕೊಡುವ ಪದ್ಧತಿಯನ್ನೇ ಜಾರಿಗೆ ತನ್ನಿ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ಬಿ. ಡಿ. ಎ. ವಿಚಾರದಲ್ಲಿ ಹೇಳುವುದಾದರೆ ಕೆಲವು ತಿಂಗಳುಗಳ ಹಿಂದೆ ಅವರು ಕೆಲವು ಮನೆಗಳಿಗೆ ಅರ್ಜಿಗಳನ್ನು ಕರೆದಿದ್ದರು. ಅದರಲ್ಲಿ ಕಡಿಮೆ ಆದಾಯದವರು, ಮಧ್ಯಮ ಆದಾಯದವರು ಹೆಚ್ಚಿನ ಆದಾಯದವರು ಅರ್ಜಿ ಹಾಕಿಕೊಳ್ಳಬೇಕು ಎಂದು ಹೇಳಿದರು. ಪೂರ್ತಿ ಹಣ ಕಟ್ಟುವುದಕ್ಕೆ ಶಕ್ತಿ ಇರುವವರು, ಬ್ಯಾಂಕ್ ನೌಕರರು, ಅಧಿಕಾರಿಗಳು ಅರ್ಜಿ ಹಾಕಿದ್ದಾರೆ. ಅನುಕೂಲಸ್ಥರು, ಐಶ್ವರ್ಯವಂತರಿಗೆ ಅದರಿಂದ ಅನುಕೂಲವಾಗುತ್ತದೆ. ಆದರೆ ಒಂದೇಸಾರಿ ಹಣ ಕಟ್ಟಲು ಶಕ್ತಿ ಇಲ್ಲದೇ ಇರುವವರಿಗೆ ಅನುಕೂಲವಾಗುವುದಿಲ್ಲ. ಇನ್‌ಸ್ಟಾಲ್‌ಮೆಂಟಿನಲ್ಲಿ ಹಣ ಕಟ್ಟಿ ತೆಗೆದುಕೊಳ್ಳುವಂಥ ಬಡವರಿಗೆ ಅದರಿಂದ ಏನೂ ಪ್ರಯೋಜನವಾಗಿಲ್ಲ. ಆದ್ದರಿಂದ ೧೦ ಸಾವಿರ ಮನೆಗಳನ್ನು ಕಟ್ಟಿಸಿ ಇನ್‌ಸ್ಟಾಲ್‌ಮೆಂಟ್ ಮೇಲೆ ಬಡವರಿಗೆ ಮನೆ ಕೊಡುವಂಥ ವ್ಯವಸ್ಥೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಬರೀ ದುಡ್ಡು ಇರುವವರಿಗೇ ಮನೆ ಕೊಡುತ್ತೇವೆಂದರೆ ಸಾಮಾಜಿಕ ನ್ಯಾಯ ಪರಿಪಾಲನೆ ಮಾಡಿದಂತಾಗುವುದಿಲ್ಲ. ಆದ್ದರಿಂದ ಬಡವರಿಗೆ ಅನುಕೂಲ ಆಗುವಂಥ ವ್ಯವಸ್ಥೆಯನ್ನೇನಾದರೂ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನಾನು ಈ ಬಗ್ಗೆ ಒಂದು ಗಮನ ಸೆಳೆಯುವ ಸೂಚನೆಯನ್ನೂ ಕಳುಹಿಸಿದ್ದೆ. ಅದನ್ನು ಅಧ್ಯಕ್ಷರು ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ವಿಜಯನಗರ ಸ್ಟೀಲ್ ಪ್ಲಾಂಟ್ ವಿಚಾರದಲ್ಲಿ ಹೇಳುವುದಾದರೆ ೧೯೭೧ ರಲ್ಲಿ ಇದಕ್ಕೆ ಅಡಿಗಲ್ಲನ್ನು ಹಾಕಿದರೂ ಕೂಡ ಅದರ ಬಗ್ಗೆ ಏನೂ ಕೆಲಸ ನಡೆದಿಲ್ಲ. ಚುನಾವಣೆಗೆ ಎರಡು ತಿಂಗಳು ಮುಂಚೆ ಮಂತ್ರಿಗಳು ಒಂದು ಸ್ಟೇಟ್‌ಮೆಂಟ್ ಕೊಡುತ್ತಾರೆ. ನಾನು ಪ್ರಧಾನಮಂತ್ರಿಗಳನ್ನು ಕೈಗಾರಿಕಾ ಮಂತ್ರಿಗಳ ಜೊತೆ ಮಾತನಾಡಿದೆ, ಮುಂದಿನ ವರ್ಷ ವಿಜಯನಗರ ಸ್ಟೀಲ್ ಪ್ಲಾಂಟನ್ನು ಮಾಡೇ ಮಾಡುತ್ತೇವೆ ಎಂದು ಹೇಳುತ್ತಾರೆ. ಚುನಾವಣೆ ಇನ್ನು ಒಂದು ವರ್ಷ ಅಥವಾ ಆರು ತಿಂಗಳಿದೆ ಎನ್ನುವಾಗ ಈ ವಿಷಯ ಶುರುವಾಗುತ್ತದೆ. ೧೯೭೧ ರಿಂದ ೧೯೮೨ ರವರೆಗೆ ೧೧ ವರ್ಷಗಳಾದರೂ ವಿಜಯನಗರ ಸ್ಟೀಲ್‌ಪ್ಲಾಂಟ್ ಸ್ಥಾಪನೆಯಾಗಿಲ್ಲ. ಸೇಲಂ ಸ್ಟೀಲ್ ಪ್ಲಾಂಟ್ ಆಯಿತು, ವೈಜಾಗ್ ಸ್ಟೀಲ್ ಪ್ಲಾಂಟ್ ಆಯಿತು, ಆದರೆ ನಮ್ಮ ರಾಜ್ಯಕ್ಕೆ ಏತಕ್ಕೆ ಮಲತಾಯಿ ಧೋರಣೆ. ಕೇಂದ್ರ ಸರ್ಕಾರದಲ್ಲಿ ಈ ಪಕ್ಷದ ಸರ್ಕಾರವೇ ಇದೆ, ಆದರೂ ಏತಕ್ಕೆ ಮಾಡಿಲ್ಲ? ದಯವಿಟ್ಟು ಇನ್ನು ಮುಂದಾದರೂ ಅದನ್ನು ಚುನಾವಣಾ ವಿಷಯಕ್ಕೋಸ್ಕರ ಬಳಸಿಕೊಳ್ಳದೆ ನಿಜವಾಗಿ ಪ್ರಯತ್ನ ಮಾಡಿ ಅಲ್ಲಿ ವಿಜಯನಗರ ಸ್ಟೀಲ್ ಪ್ಲಾಂಟನ್ನು ಸ್ಥಾಪನೆ ಮಾಡಿ ಹಿಂದುಳಿದಿರತಕ್ಕ ಬಳ್ಳಾರಿ ಜಿಲ್ಲೆಯಲ್ಲಿರತಕ್ಕ ಸಂಪತ್ತನ್ನು ಉಪಯೋಗಿಸಿಕೊಳ್ಳುವ ಕೆಲಸವನ್ನು ಮಾಡಬೇಕು. ಸುಮ್ಮನೆ ಚುನಾವಣೆ ಸಮಯದಲ್ಲಿ ಡೆಲ್ಲಿಗೆ ಹೋಗಿದ್ದಾಗ ಅರ್ಥ ಮಂತ್ರಿಗಳ ಜೊತೆ ಚರ್ಚೆ ಮಾಡದೆ, ಅವರು ಮುಂದಿನ ವರ್ಷ ಇಷ್ಟು ಕೋಟಿ ರೂಪಾಯಿ ಕೊಡುತ್ತೇವೆ ಎಂದು ಹೇಳಿದರು ಎಂದು ಸ್ಟೇಟ್‌ಮೆಂಟ್ ಕೊಡಬೇಡಿ. ನಿಜವಾಗಿ ಕೆಲಸ ಶುರು ಮಾಡಿ.

ಇದರಿಂದ ನಿಮ್ಮ ಪಕ್ಷಕ್ಕೆ ಓಟುಗಳು ಬಂದರು ಚಿಂತೆ ಇಲ್ಲ ಕೆಲಸ ಆಗಲಿ ಎಂದು ಹೇಳು ವುದಕ್ಕೆ ಇಷ್ಟಪಡುತ್ತೇನೆ. ನಾನು ಆಗಲೇ ಹೇಳಿದಂತೆ ಮಾನ್ಯ ಅರ್ಥಮಂತ್ರಿಗಳು ಮಧ್ಯಪಾನ ನಿರೋಧವನ್ನು ಜಾರಿಗೆ ತರುವುದಕ್ಕೆ ಪ್ರಯತ್ನಮಾಡಬೇಕು. ಅದು ಆಗದಿದ್ದರೆ ಬೀರನ್ನಾ ದರೂ ಕಡಿಮೆ ಬೆಲೆಯಲ್ಲಿ ಎಲ್ಲರಿಗೂ ಕೊಟ್ಟು ಹೆಂಡ ಸಾರಾಯಿ ಕುಡಿಯುವುದನ್ನು ತಪ್ಪಿಸಬೇಕು. ಆದ್ದರಿಂದ ೧೨೦ ಕೋಟಿ ರೂಪಾಯಿ ನಷ್ಟವಾದರೂ ಚಿಂತೆಯಿಲ್ಲ, ಬೇರೆ ರೀತಿಯಲ್ಲಿ ಅವರಿಂದಲೇ ತೆಗೆದುಕೊಳ್ಳಿ. ಒಟ್ಟಿನಲ್ಲಿ ಅವರ ಆರೋಗ್ಯ ಕೆಡದೇ ಇರುವಂತೆ ಮಾಡಿ. ಮಂಡ್ಯ ಮತ್ತು ಮೈಸೂರು ಜಿಲ್ಲೆಯಲ್ಲಿ ಯಾವ ಹಳ್ಳಿಯಲ್ಲಿ ಮನೆಗೆ ಹೋದರೂ ಅವರು ಕುಡಿದಿರುವುದರಿಂದ ಅವರನ್ನು ಮಾತನಾಡಿ ಸುವುದಕ್ಕಾಗುವುದಿಲ್ಲ. ಯಾವ ಜಾತಿಯವರನ್ನೂ ಮಾತನಾಡಿಸುವುದಕ್ಕಾಗುವುದಿಲ್ಲ. ಬಹುಶಃ ಹೆಂಡ ಸಾರಾಯಿ ಕುಡಿಯುವವರಲ್ಲಿ ಬ್ರಾಹ್ಮಣರು ಇಲ್ಲ. ಅವರನ್ನು ಬಿಟ್ಟರೆ ಬೇರೆ ಎಲ್ಲಾ ಜಾತಿಯವರೂ ಹೆಂಡ ಸಾರಾಯಿ ಕುಡಿಯುತ್ತಾರೆ. ಎಂದರೆ ಇವರು ಹೆಂಡ ಹಾಗೂ ಸಾರಾಯಿಯನ್ನು ಮಾತ್ರ ಕುಡಿ ಯುವುದಿಲ್ಲವೆಂದು ನಾನು ಹೇಳಿದ್ದು.

ಶ್ರೀ ಸಿ. ಎಂ. ಇಬ್ರಾಹಿಂ.—ತಾವು ಹೆಂಡಾ ಸಾರಾಯಿ ಕುಡಿಯುವ ಬ್ರಾಹ್ಮಣರನ್ನು ಭೇಟಿಯಾಗಿಲ್ಲ ವೆಂದು ಕಾಣುತ್ತದೆ.

ಶ್ರೀ ಎಚ್. ಎಲ್. ತಿಮ್ಮೇಗೌಡ.—ಎಂದರೆ, ಅವರು ಹೆಂಡ ಸಾರಾಯಿ ಕುಡಿಯುವುದಿಲ್ಲ ಎಂದು...

ಶ್ರೀ ಸಿ. ಎಂ ಇಬ್ರಾಹಿಂ.—ಸ್ವಲ್ಪ ತಾವು ಬೆಂಗಳೂರಿನ ಶಿವಾಜಿ ರಸ್ತೆಗೆ ಬನ್ನಿ ಸ್ವಾಮಿ ನಾನು ತೋರಿಸುತ್ತೇನೆ.

ಶ್ರೀ. ಎಚ್. ಎಲ್. ತಿಮ್ಮೇಗೌಡ.—ದಯಮಾಡಿ ಅನಾಹುತವನ್ನು ತಪ್ಪಿಸುವುದಕ್ಕೆ ಧೀರ್ಘ ಯೋಜನೆ ಮಾಡಿ. ಬರೀ ಹಾರಿಕೆ ಉತ್ತರವನ್ನು ಕೊಡುವುದು ಸರಿಯಲ್ಲ. ಮಾನ್ಯ ಮಂತ್ರಿಗಳು ಈ ಬಗ್ಗೆ ಪರಿಶೀಲನೆ ಮಾಡಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಜಿ. ಕೆ. ತಕ್ಕೇಡ್ (ಸೌಂದತ್ತಿ).—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿವರ್ಯರು ಮಂಡಿಸಿರತಕ್ಕ ಬೇಡಿಕೆಗಳನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ. ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯವರು ಕೊಟ್ಟಿರತಕ್ಕ ವರದಿಯಲ್ಲಿ, ಕರ್ನಾಟಕ ರಾಜ್ಯ ಖಾದಿ ಗ್ರಾಮೋದ್ಯೋಗ ಮಂಡಲಿಯ ಬೇಡಿಕೆಯನ್ನು ಓದಿದರೆ, ಇದರಲ್ಲಿ ಒಂದು ದೊಡ್ಡ ಸಾಧನೆ ಮಾಡಿದ್ದಾರೆಂದು ಕಾಣಿಸು ತ್ತದೆ. ನಾನು ಈ ಸದನದಲ್ಲಿ ಖಾದಿ ಗ್ರಾಮೋದ್ಯೋಗದಲ್ಲಿ ಕೆಲಸ ಮಾಡುವ ನೌಕರರ ಬಗ್ಗೆ ಪ್ರಶ್ನೆ ಕೇಳಿದ್ದೆ. ಅಲ್ಲಿನ ಕಾರ್ಮಿಕರ ಬೇಡಿಕೆಗಳನ್ನು ನಾವು ಕೂಡಲೇ ಕಾರ್ಯರೂಪಕ್ಕೆ ತರುತ್ತೇವೆಂದು ಆ ಕಾಲಕ್ಕೆ ಆಶ್ವಾಸನೆಯನ್ನು ಕೊಟ್ಟಿದ್ದರು. ಮಾನ್ಯ ಸಿ. ಎಂ. ಇಬ್ರಾಹಿಂ ಅವರು ಕೈಗಾರಿಕಾ ಮಂತ್ರಿ ಗಳಾಗಿದ್ದಾಗ ಉತ್ತರವನ್ನು ಕೊಟ್ಟಿದ್ದರು. ೨ ವರ್ಷಗಳಾದವು, ಈ ದಿನ ಈ ಖಾತೆ ನಿದ್ರೆ ಮಾಡು ತ್ತಿದೆ ಎಂದು ನನಗನ್ನಿಸುತ್ತಿದೆ. ಕೆಲಸ ಮಾಡುವವರು ಈ ಖಾತೆಯಲ್ಲಿ ಯಾರೂ ಇಲ್ಲವೇ ಎಂದು ನನಗನ್ನಿಸುತ್ತಿದೆ. ಖಾದಿ ಗ್ರಾಮೋದ್ಯೋಗದಲ್ಲಿ ಕೆಲಸ ಮಾಡತಕ್ಕ, ಅತ್ಯಂತ ಪವಿತ್ರ ಕಾರ್ಯ ಮಾಡತಕ್ಕ ನೌಕರರನ್ನು ಅಷ್ಟೊಂದು ಕೀಳು ಮಟ್ಟದಲ್ಲಿ ಕೈಗಾರಿಕಾ ಖಾತೆ ನೋಡುವುದು ಸರಿಯಲ್ಲ. ಈ ಬಗ್ಗೆ ಮಾನ್ಯ ಮಂತ್ರಿಗಳು ಸದನದಲ್ಲಿ ಉತ್ತರ ಕೊಡಬೇಕೆಂದು ನಾನು ಹೇಳುತ್ತೇನೆ. ಎರಡನೆಯ ದಾಗಿ, ಗೋಬರ್‌ಗ್ಯಾಸ್ ಪ್ಲಾಂಟ್ ನಿರ್ಮಾಣ ಮಾಡುವಂತಹ ಖಾದಿ ಗ್ರಾಮೋದ್ಯೋಗದಲ್ಲಿ ಕಳೆದ ೨೦–೨೫ ವರ್ಷಗಳಿಂದ ಕೆಲಸ ಮಾಡಿಕೊಂಡು ಬಂದ ನೌಕರರನ್ನು ತೆಗೆಯುತ್ತಿದ್ದಾರೆ. ಏಕೆ ಈ ರೀತಿಯ ಕೆಲಸಗಳು ಜಗುತ್ತಿವೆ ? ಈ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕೆಂದು ನಾನು ಹೇಳುತ್ತೇನೆ. ಇನ್ನು ಪೆನ್‌ಷನ್ ಇಲ್ಲದೇ ಕೆಲಸ ಮಾಡುವ ಜನರು ಇವರು. ಎಷ್ಟೋ ಜನರು ಹೀಗೇ ರಿಟೈರ್ ಆಗಿದ್ದಾರೆ. ಇಂತಹವರಿಗೆ ಯಾವ ರೀತಿಯಿಂದಲೂ ನಿವೃತ್ತಿ ವೇತನ ಕೊಡುವ ಕೆಲಸ ಆಗಿಲ್ಲವೆಂದರೆ ಎಷ್ಟು ಶೋಚನೀಯ. ಇಷ್ಟೊಂದು ದೊಡ್ಡ ಅಧಿಕಾರಿಗಳು ಇದ್ದರೂ ಕೂಡಾ ಖಾದಿ ಮತ್ತು ಗ್ರಾಮೋದ್ಯೋಗವನ್ನು ಏಕೆ ನಿರ್ಲಕ್ಷ್ಯ ಮಾಡಿದರು ಎಂದು ನಾನು ಕೇಳುತ್ತೇನೆ.

ಇನ್ನು ಯೋಜನೆ ಬಗ್ಗೆ ಹೇಳಬೇಕೆಂದರೆ, ಪಶ್ಚಿಮ ಘಟ್ಟದಲ್ಲಿ ನನ್ನ ತಾಲ್ಲೂಕೂ ಬರುತ್ತದೆ. ಸವದತ್ತಿ, ಬೈಲಹೊಂಗಲ, ಬೆಳಗಾಂನ ಖಾನಾಪುರ ಬರುತ್ತದೆ. ಪಶ್ಚಿಮ ಘಟ್ಟದ ಯೋಜನೆಯಲ್ಲಿ

ಶಿವಮೊಗ್ಗ, ಚಿಕ್ಕಮಗಳೂರು ಕಡೆ ಹೋಗಿದೆ. ನಮ್ಮ ಜಿಲ್ಲೆಯಲ್ಲಿ ಯಾವ ಕಡೆಯಲ್ಲಿ ಈ ಹಣ ಖರ್ಚಾಗಿದೆಯೆಂದು ಗೊತ್ತಿಲ್ಲ. ಹೋದಸಾರಿ ಒಂದು ಬ್ರಿಡ್ಜ್‌ಗೆ ಒಂದು ಲಕ್ಷ ರೂಪಾಯಿ ಕೊಟ್ಟಿದ್ದರು. ಇವತ್ತು ಪಶ್ಚಿಮ ಘಟ್ಟದ ಯೋಜನೆಯ ಹಣ ಇವತ್ತು ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಗೆ ಖರ್ಚಾಗುತ್ತಿದೆ. ನಮ್ಮ ಕಡೆ ಖರ್ಚಾಗಿಲ್ಲ, ಈ ಯೋಜನೆಯಲ್ಲಿ ನಮ್ಮ ಕಡೆ ಖರ್ಚಾಗಿರುವ ಹಣದ ಬಗ್ಗೆ ತೋರಿಸಿಲ್ಲ. ೪೦ ತಾಲ್ಲೂಕುಗಳನ್ನು ತೆಗೆದುಕೊಂಡಿದ್ದೀರಿ, ಎಷ್ಟು ಹಣವನ್ನು ಖರ್ಚು ಮಾಡಿದ್ದೀರೆಂದು ಹೇಳಿಲ್ಲ. ನಮ್ಮ ಸೌಂದತ್ತಿ ತಾಲ್ಲೂಕಿಗೆ, ಬೆಳಗಾಂ ಜಿಲ್ಲೆಗೆ ಪಶ್ಚಿಮ ಘಟ್ಟದ ಯೋಜನೆಯಲ್ಲಿ ಎಷ್ಟು ಹಣ ಖರ್ಚಾಗಿದೆ ಎಂಬುದನ್ನು ಹೇಳಬೇಕು ಹಿಂದುಳಿದ ಜಿಲ್ಲೆಗೆ ಈ ಯೋಜನೆ ಬರಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಇನ್ನು ಅಬಕಾರಿ ಇಲಾಖೆ ಬಗ್ಗೆ ಹೇಳಬೇಕಾಗಿದೆ. ಕಳೆದ ನಾಲ್ಕು ವರ್ಷಗಳಿಂದ ಈ ಇಲಾಖೆಯವರು ಕೊಟ್ಟಿರತಕ್ಕ ವಾರ್ಷಿಕ ವರದಿಯನ್ನೂ, ಈ ವರ್ಷ ಕೊಟ್ಟಿರತಕ್ಕ ವಾರ್ಷಿಕ ವರದಿಯನ್ನು ನೋಡಿದರೆ, ಈ ಖಾತೆಯಲ್ಲಿ ಕೆಲಸ ಮಾಡುವವರು ಇಲ್ಲವೇ ಎಂದು ಕೇಳುತ್ತೇನೆ. ಈ ದೊಡ್ಡ ಇಲಾಖೆಯವರು ಇಷ್ಟೊಂದು ಚಿಕ್ಕ ವರದಿಯನ್ನೂ ಅದು ಚೊಕ್ಕವಲ್ಲದ ವರದಿಯನ್ನು ಕೊಟ್ಟಿದ್ದಾರೆ. ಈ ವರದಿಯಲ್ಲಿರುವ ಲೋಪದೋಷಗಳನ್ನು ನಾನು ತಮ್ಮ ಗಮನಕ್ಕೆ ತರಬಯಸುತ್ತಿದ್ದೇನೆ. ಇವತ್ತು ಭಾರತದೇಶದಲ್ಲೇ ತಯಾರಾದ ಮದ್ಯದ ಬಗ್ಗೆ ಹೇಳಿದ್ದಾರೆ. ೧೯೮೧-೮೨ರಲ್ಲಿ ಮತ್ತು ಹಿಂದಿನ ಮೂರು ವರ್ಷಗಳಲ್ಲಿ ರಾಜ್ಯ ಅಬ್ಕಾರಿಯ ಮೂಲಕ ವಸೂಲಾದ ಒಟ್ಟು ರಾಜಸ್ವದ ಬಗ್ಗೆ ವರದಿ ಕೊಡುತ್ತಾ ಈ ಕೆಳಕಂಡಂತೆ ಮುದ್ರಿಸಿದ್ದಾರೆ.

	ಆರ್ಥಿಕ ವರ್ಷ		ಕೋಟಿ ರೂ, ಗಳಲ್ಲಿ
೧	೧೯೭೭-೭೮	...	೫೬.೨೪
೨	೧೯೭೮-೭೯	...	೬೨.೬೦
೩	೧೯೭೯-೮೦	...	೭೪,೧೦
೪	೧೯೮೦-೮೧	...	೯೪.೧೩
೫	೧೯೮೧-೮೨	...	೧೩೩-೦೦

ಇಲ್ಲಿ ೧೯೮೧-೮೨ ಎಂದು ಮುದ್ರಿಸಬೇಕಾದ ಕಡೆ ೧೯೭೧-೮೨ ಎಂದು ಮುದ್ರಿಸಿದ್ದಾರೆ. ಇದೇನು ಕುಡಿದು ಪ್ರಿಂಟ್ ಮಾಡಿದ್ದಾರಾ ? ಈ ಖಾತೆ ಇಷ್ಟೊಂದು ನಿರ್ಲಕ್ಷ್ಯವಾಗಿದೆಯೋ ? ಇಂತಹ ತಪ್ಪು ಅಚ್ಚಾಗಿರತಕ್ಕ ವರದಿಯನ್ನು ಶಾಸಕರ ಕೈಗೆ ಕೊಡುವುದರಲ್ಲಿ ಇಷ್ಟೊಂದು ನಿರ್ಲಕ್ಷ್ಯವಹಿಸಬಾರದು,

ಇನ್ನು ಹೆಂಡದ ಬಗ್ಗೆ ವರದಿಯಲ್ಲಿ ಈ ರೀತಿ ಹೇಳಿದ್ದಾರೆ.

> ' ಕೊಡಗು ಜಿಲ್ಲೆ ಪೂರ್ತಿ, ಉತ್ತರ ಕನ್ನಡ ಜಿಲ್ಲೆಯ ಕಾರವಾರ, ಅಂಕೋಲ, ಸಿರಸಿ, ಮುಂಡಗೋಡು, ಸಿದ್ದಾಪುರ, ಹಳಿಯಾಲ ಎಲ್ಲಾಪುರ ಮತ್ತು ಸೂಪ ತಾಲ್ಲೂಕುಗಳು. ಶಿವಮೊಗ್ಗ ಜಿಲ್ಲೆಯ ಸೊರಬ, ತೀರ್ಥಹಳ್ಳಿ, ಸಾಗರ ಮತ್ತು ಹೊಸನಗರ ತಾಲ್ಲೂಕುಗಳು, ಚಿಕ್ಕಮಗಳೂರು ಜಿಲ್ಲೆಯ ಶ್ರಿಂಗೇರಿ, ಕೊಪ್ಪ ಮತ್ತು ನರಸಿಂಹರಾಜಪುರ ತಾಲ್ಲೂಕುಗಳು, ಧಾರವಾಡ ಜಿಲ್ಲೆಯ ಕಲ್ಘಟಗಿ, ಕುಂದಗೋಳ, ನರಗುಂದ ಮತ್ತು ನವಲಗುಂದ ತಾಲ್ಲೂಕುಗಳನ್ನು ಬಿಟ್ಟು ರಾಜ್ಯದಲ್ಲಿ ಸಾರಾಯಿಯ ಚಿಲ್ಲರೆ ವ್ಯಾಪಾರದ ಹಕ್ಕನ್ನು ಸಾರ್ವಜನಿಕ ಹರಾಜಿನ ಮೂಲಕ ಕೊಡಲಾಗುವುದು. ೧೯೮೧-೮೨ನೇ ವರ್ಷದ ಅವಧಿಯಲ್ಲಿ (ಡಿಸೆಂಬರ್ ೧೯೮೧ರ ವರೆಗೆ) ಸಾರಾಯಿ ಅಂಗಡಿಗಳನ್ನು ಗೇಣಿ ಕೊಟ್ಟಿದುದಕ್ಕಾಗಿ ವಾಸ್ತವವಾಗಿ ಬಂದ ಕಂದಾಯಗಳು ಕೆಳಗಿನಂತಿವೆ ''

ಸಾರಾಯಿ ಅಂಗಡಿಗಳನ್ನು ಗೇಣಿಗೆ ಕೊಡುವುದು ಎಂದರೆ ಏನು ಸ್ವಾಮಿ ? ಹಾಗೂ ಈ ಮೇಲೆ ತಿಳಿಸಿರತಕ್ಕ ಪ್ಯಾರಾಗೆ ''ಹೆಂಡ'' ಎಂದು ಶೀರ್ಷಿಕೆ ಕೊಟ್ಟು, ಪ್ಯಾರಾದಲ್ಲಿ ಸಾರಾಯಿಯ ಬಗ್ಗೆ ಹೇಳಿಕೊಂಡು ಬಂದಿದ್ದಾರೆ, ಈ ವರದಿ ಅಚ್ಚಾಗುವುದಕ್ಕಿಂತ ಮೊದಲು ಇಲಾಖೆಯ ಐ. ಎ. ಎಸ್.

ಅಧಿಕಾರಿಗಳು ಇದನ್ನೆಲ್ಲಾ ನೋಡುವುದಿಲ್ಲವೇ ? ಇಂತಹ ಬೇಜವಾಬ್ದಾರಿ ಅಧಿಕಾರಿಗಳನ್ನು ಮನೆಗೆ ಕಳುಹಿಸಿ ಎಂದು ನಾನು ಸಲಹೆ ಮಾಡುತ್ತೇನೆ. ಮುಂದುವರೆದು ತಮ್ಮ ವರದಿಯಲ್ಲಿ

" ಅಂಗಡಿಗಳ ಹರಾಜು	...	ರೂ.	೧೬,೫೫,೯೨,೪೩೬.೨೫
ಮರದ ತೆರಿಗೆ	...	ರೂ.	೨೬,೪೦,೨೩೩.೭೦
ಮರದ ಬಾಡಿಗೆ	...	ರೂ.	೧,೦೨,೭೩೮.೫೦ "

ಎಂದು ಅಚ್ಚು ಮಾಡಿದ್ದಾರೆ. ಅಧ್ಯಕ್ಷರೇ, ಇವತ್ತು ರಾಜ್ಯದ ಜನತೆ, ಅದರಲ್ಲೂ ಕಡುಬಡವರು, ಶ್ರೀಸಾಮಾನ್ಯರು ಸೇಂದಿ ಕುಡಿಯುತ್ತಿದ್ದಾರೆ. ಅವರು ನಿತ್ಯ ಜೀವನದಲ್ಲಿ ದುಡಿದಿದ್ದು ಸ್ವಲ್ಪ ಆರಾಮವಾಗಿ ಇರಲಿ ಎಂದು ಇದನ್ನು ಕುಡಿಯುತ್ತಿದ್ದಾರೆ. ಇವತ್ತು ಮರದ ಬಾಡಿಗೆ ಸುಮಾರು ೧ ಲಕ್ಷ ಬರುತ್ತಿದ್ದು, ಅಂಗಡಿಗಳ ಹರಾಜು ಸುಮಾರು ೧೬ ಕೋಟಿ ರೂಪಾಯಿಗೆ ಹೋಗಿದೆ ಎಂದರೆ, ಇದನ್ನು ಹಿಡಿದಿರುವವರು ಮಹಾರಾಜರಂತೆ ಇದ್ದಾರೆ. ಮರದ ಬಾಡಿಗೆ ಮಾತ್ರ ೧ ಲಕ್ಷ ಬಂದಿದೆ. ೫ ಪರ್ಸೆಂಟ್ ಕೂಡಾ ಇವತ್ತು ಸೇಂದಿ ಮರದಿಂದ ಬರುವುದಿಲ್ಲ. ಮರದ ಸೇಂದಿ ಕುಡಿಸಿರಿ, ಆರೋಗ್ಯವಾದಂಥ ಸೇಂದಿಯನ್ನು ಕುಡಿಸಿರಿ. ೧೯೫೧ ರಲ್ಲಿ ಗೋವಾ ಕಾಂಗ್ರೆಸ್ ಅಧಿವೇಶನದಲ್ಲಿ ಮದ್ಯಪಾನ ನಿರೋಧವನ್ನು ನಾನು ವಿರೋಧ ಮಾಡಿದ್ದೆ. ಪ್ರಾಹಿಬಿಷನ್ ಮಾಡುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಸದಸ್ಯರಾದ ತಿಮ್ಮೇಗೌಡ ವಿಚಾರ ನನ್ನ ವಿಚಾರ ಒಂದೇ ಇದೆ. ೧೯೪೭ರ ಸ್ವಾತಂತ್ರ್ಯನಂತರ ಮಧ್ಯಪಾನದಿಂದ ವಿವೇಚನೆ, ವಿವೇಕ, ಪ್ರಜ್ಞೆ ಹಾಗೂ ಭಾವನೆಗಳನ್ನು ಹಾಳು ಮಾಡಿದೆ. ನಮ್ಮ ಸಮಾಜದ ಸಂಸಾರಗಳನ್ನು ಸಂಪೂರ್ಣವಾಗಿ ಹಾಳು ಮಾಡಿದೆ. ನಮ್ಮ ಪೂಜ್ಯ ಮಹಾತ್ಮಗಾಂಧೀಜಿ ಅವರು, ನಮ್ಮ ದೇಶದ ಮಹಾನಾಯಕರುಗಳಾದ ಪಂಡಿತ್ ಜವಹರಲಾಲ್ ನೆಹರೂರವರು, ವಲ್ಲಭಾಯ್ ಪಟೇಲ್‌ರವರೂ, ಮೊರಾರ್ಜಿ ದೇಸಾಯಿಯವರೂ, ದಿವಂಗತ ರಾಜ ಗೋಪಾಲ ಚಾರಿಯವರು, ಕೂಡ ಮಧ್ಯಪಾನ ಬಡವರು ಕುಡಿಯುತ್ತಾರೆ, ಅವರ ಅಮಲಿನಲ್ಲಿ ಬರಬೇಕೆಂದು ಹೇಳಿದ್ದರು. ಇವತ್ತು ದೇಶದಲ್ಲಿ ಕಳ್ಳಬಟ್ಟಿಸಾರಾಯಿಯನ್ನು ಮತ್ತು ವಿಷಪೂರಿತವಾದಂಥ ಮಧ್ಯವನ್ನು ಕುಡಿಸುತ್ತಿದ್ದೀರಿ. ಇದರಿಂದ ಸರ್ವ ನಾಶವಾಗುತ್ತಿದೆ. ಮಧ್ಯಪಾನ ಪ್ರತಿಬಂಧಕ್ಕೆ ಸಂಬಂಧಪಟ್ಟಂತೆ ಟೆಂಪರೆನ್ಸ್ ಬೋರ್ಡು ಇದೆ. ಕುಡಿಯುವಂತ ಜನರಿಗೆ ಚಲೋ ಇರುವುದನ್ನು ಕುಡಿಸಿರಿ. ಸರ್ಕಾರೀ ಅಧಿಕಾರಿಗಳು ಸೇರಿಕೊಂಡು ಇವತ್ತು ಕ್ಲೋರಲ್ ಹೈಡ್ರೇಟ್ ಅತ್ಯಂತ ವಿಷಪೂರಿತವಾದ ವಸ್ತುವನ್ನು ಸಾರಾಯಿಯನಲ್ಲಿ ಬೆರಸಿ, ಮನುಷ್ಯರನ್ನು ಸಾಯಿಸುತ್ತಿದ್ದಾರೆ. ನಾನು ಈ ವಿಷಯವನ್ನು ಸಂಬಂಧಪಟ್ಟ ಮಂತ್ರಿಗಳ ಜೊತೆ, ಮುಖ್ಯಮಂತ್ರಿಗಳ ಜೊತೆ, ಸರ್ಕಾರದ ಅಧಿಕಾರಿಗಳ ಜೊತೆ ಹೇಳಿಕೊಂಡಿದ್ದೇನೆ. ನನ್ನ ತಾಲ್ಲೂಕಿನಲ್ಲಿ ಒಂದು ಸಾವಿರ ಗಿಡ ಕೂಡ ಇಲ್ಲ. ಜಮುಖಂಡಿ ತಾಲ್ಲೂಕಿನಲ್ಲಿ ೧೦,೦೦೦ ಗಿಡಗಳು ಇವೆ, ಅಲ್ಲಿ ಸೇಂದಿ ಮಾರಾಟದ ಅಂಗಡಿಗಳು ಇಲ್ಲ. ನರಗುಂದ ಮತ್ತು ನವಿಲುಗುಂದಗಳಲ್ಲಿ ಸೇಂದಿ ಅಂಗಡಿಗಳು ಇಲ್ಲ. ಈ ವರ್ಷ ಅಲ್ಲಿಕೂಡ ಪ್ರಾರಂಭವಾಗಿವೆ. ಎಕ್ಸೈಜ್ ಕಮೀಷನರ್ ನೋಡುವುದಿಲ್ಲವೇ ? ಸಂಬಂಧಪಟ್ಟ ಅಧಿಕಾರಿಗಳಿಂದ ರಿಪೋರ್ಟು ಬರುವುದಿಲ್ಲವೆ ಸ್ವಾಮಿ, ಜಿಲ್ಲಾಧಿಕಾರಿಗಳು, ಜಿಲ್ಲಾ ಪೋಲೀಸ್ ಅಧಿಕಾರಿಗಳು, ಸೇಂದಿ ಬಾಬನ್ನು ಯಾರು ಹರಾಜಿನಲ್ಲಿ ಹಿಡಿಯುತ್ತಾರೆ, ಅವರೊಂದಿಗೆ ಷಾಮೀಲಾಗಿ ದೊಡ್ಡ ಪ್ರಮಾಣದಲ್ಲಿ ಹಣದ ಹೊಂದಾಣಿಕೆ ಮಾಡಿಕೊಂಡು, ಎಲ್ಲಾ ಕಡೆಗಳಲ್ಲಿಯೂ ಅಂಗಡಿಗಳನ್ನು ತೆರೆಯುವಂತೆ ಮಾಡುತ್ತಾರೆ. ಖಾನಾಪುರ ತಾಲ್ಲೂಕಿನಲ್ಲಿ ಕೂಡ ಗಿಡಗಳು ಇವೆ. ರಾಯಭಾಗ ತಾಲ್ಲೂಕಿನಲ್ಲಿ ೫೦೦ ಗಿಡಗಳು ಕೂಡ ಇಲ್ಲ. ಜಮುಖಂಡಿ ತಾಲ್ಲೂಕಿನಲ್ಲಿ ಗಿಡಗಳು ಇವೆ ಪ್ರಭಾವಿಯುತರಾದ ನಾಯಕರುಗಳು ಇದ್ದಾರೆ. ಹಿಂದಿನ ಮುಖ್ಯಮಂತ್ರಿಯವರಾದ ಜತ್ತಿಯವರು ಜಮುಖಂಡಿ ತಾಲ್ಲೂಕಿನವರೇ. ಸವದತ್ತಿ ತಾಲ್ಲೂಕಿನಲ್ಲಿ ಒಂದು ಗಿಡವೂ ಇಲ್ಲ ಆದರೆ, ಒಂದು ದೊಡ್ಡ ಕೊಪ್ಪರಿಗೆ ಮಾಡಿದ್ದಾರೆ. ಅದರೊಳಗೆ ನೀರು, ಪೌಡರ್, ಕ್ಲೋರಲ್ ಹೈಡ್ರೇಟ್, ಸಕ್ಕರೆ, ಎಲ್ಲವನ್ನೂ ಹಾಕಿ ವಿಷದಿಂದ ಕೂಡಿದಂಥ ಮಧ್ಯವನ್ನು ಸರಬರಾಜು ಮಾಡುತ್ತಾರೆ. ನಿಮ್ಮ ಸಿ. ಐ. ಡಿ ದಳ, ಗುಪ್ತ ದಳಗಳು ಏನು ಮಾಡುತ್ತವೆ ? ಇವುಗಳನ್ನೆಲ್ಲಾ ಸುಟ್ಟು ಹಾಕಿ, ಜನಗಳಿಗೆ ವಿಷ ಕುಡಿಸಿ, ಸಂಸಾರಗಳು ಹಾಳಾಗಿ ಹೋಗುತ್ತಿವೆ. ನಮ್ಮ ಸರ್ಕಾರದ ಅಧಿಕಾರಿಗಳು ಮಾಡಿದಂಥ ಪಾಪದ ಕೂಪವನ್ನು ಬಡವರ ಮನೆ ಬಾಗಿಲಿಗೆ ಇಡುತ್ತಾರೆ. ಬಡವರು ಕುಡಿದು, ಕಣ್ಣು ಹಿಂಗಿ ಹೋಗುತ್ತವೆ, ನಡ ಹೋಗುತ್ತದೆ.

SRI M. VEERAPPA MOILY.—Mr. Speaker, the hon. member is expected to address the Chair.

ಅಧ್ಯಕ್ಷರು.—ಎಕ್ಸೈಸ್ ಮೇಲೆ ಮಾತನಾಡುವಾಗ ಸುಮ್ಮನೆ ಇರಬೇಕು.

ಶ್ರೀ ಸಿ. ಎಂ. ಇಬ್ರಾಹಿಂ.—ಅವರು ಮಾತನಾಡುವುದನ್ನು ನೋಡಿದರೆ, ಅವರ ಮೇಲೆ ನನಗೆ ಅನುಮಾನ ಬರುತ್ತೆ.

ಶ್ರೀ ಜಿ. ಕೆ. ತೆಕ್ಕೇದ್.—ನನ್ನ ಜೀವನದಲ್ಲಿ ಅಡಿಕೆ ಹಾಕಿಕೊಂಡಿಲ್ಲ. ಚಾ ಕುಡಿದಿಲ್ಲ.

ಅಧ್ಯಕ್ಷರು.—ತೆಕ್ಕೇಡ್‌ರವರೇ, ಅಡಿಕೆ ಹಾಕದೇ ಇರತಕ್ಕ ಜನ, ಚಾ ಕುಡಿಯದೇ ಇರತಕ್ಕ ಜನ ಕೂಡ ಇದನ್ನು ಕುಡಿಯುತ್ತಾರೆ. ನೀವು ಕುಡಿತೀರಿ ಅಂತ ಅಲ್ಲ.

ಶ್ರೀ ಜಿ. ಕೆ. ತಕ್ಕೇಡ್.—ಮಧ್ಯಪಾನ ನಿರ್ಬಂಧವನ್ನು ನಮ್ಮ ದೇಶವಲ್ಲಿ ತರುವುದಕ್ಕಾಗುವುದಿಲ್ಲವೆಂದು ಇದನ್ನು ಒಪ್ಪಿಕೊಂಡು ಪ್ರಾರಂಭ ಮಾಡಿದ್ದೇವೆ. ಸರಿಯಾದ ಉತ್ಕೃಷ್ಟವಾದಂಥ ಮಧ್ಯಪಾನವನ್ನು, ಜನತೆಯ ಆರೋಗ್ಯಕ್ಕೆ ಭಾದಕವಾದಂತ, ಆರೋಗ್ಯ ಕೆಡದಂಥ ಮಧ್ಯವನ್ನು ಸರಬರಾಜು ಮಾಡಿ. ಇದರ ಮೇಲ್ವಿಚಾರಣೆ ಮಾಡುವಂತ ಅಧಿಕಾರಿಗಳು, ಅಂದರೆ ಗಾರ್ಡಗಳು ಇನ್ನಿತರೆ ಅಧಿಕಾರಿ ವರ್ಗದವರು ಷಾಮೀಲಾಗಿ ಈ ಉದ್ಯೋಗಕ್ಕೆ ಹೆಚ್ಚು ಅವಕಾಶ ಕೊಟ್ಟಿದ್ದಾರೆ. ರಾಜ್ಯದಲ್ಲಿ ಅರಾಕ್ ಮಾಡಲಿಕ್ಕೆ ಸುಮಾರು ೧೭ ಫ್ಯಾಕ್ಟರಿಗೆ ಅವಕಾಶ ಕೊಟ್ಟಿದ್ದೀರಿ. ನಾನು ಅರಾಕ್‌ನಲ್ಲಿ ದೋಷ ಇದೆ ಎಂದು ಹೇಳುವುದಿಲ್ಲ ಕೆಲವು ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ಮತ್ತೆ ಕೆಲವು ಖಾಸಗೀ ಕಂಪನಿಯವರಿಗೆ ಅರಾಕ್ ತಯಾರು ಮಾಡುವುದಕ್ಕೆ ಲೆಸೆನ್ಸ್ ಕೊಟ್ಟಿದ್ದೀರಿ. ಮಾನ್ಯ ಅಧ್ಯಕ್ಷರೇ ತಮ್ಮ ಮುಖಾಂತರ ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಸರ್ಕಾರದವರೇ ಈ ಖಾಸಗೀಯವರಿಗೆ ಮಧ್ಯವನ್ನು ತಯಾರು ಮಾಡುವುದಕ್ಕೆ ಅವಕಾಶ ಕೊಟ್ಟಮೇಲೆ, ಕಳೆದ ಮೂರು ವರ್ಷಗಳಲ್ಲಿ ಕೈಯಿನಲ್ಲಿ ಕಾಸು ಯಿಲ್ಲದೇ ಇದ್ದಂಥವರು ಇಂದು ಕೋಟ್ಯಾದೀಶ್ವರರಾಗಿದ್ದಾರೆ. ಜನತೆಯ ಜೀವವನ್ನು ಹಾಳು ಮಾಡಿ ಅವರ ಆಸ್ತಿಪಾಸ್ತಿಗಳನ್ನು ಹಾಳು ಮಾಡಿ, ಸರ್ಕಾರಕ್ಕೆ ಬರಬೇಕಾದಂಥ ಕೋಟ್ಯಾಂತರ ರೂಪಾಯಿಗಳನ್ನು ದೋಚುತ್ತಿದ್ದಾರೆ. ಈ ವಿಚಾರದಲ್ಲಿ ನಿಮ್ಮ ಗುಪ್ತದಳ ಏನು ಕೆಲಸ ಮಾಡುತ್ತಿದೆ ? ಸೆಕೆಂಡ್ಸ್‌ನ್ನು ಎಲ್ಲಾ ಕಡೆ ಮಾರಾಟ ಮಾಡುತ್ತಿದ್ದಾರೆ. ಇದು ನಗ್ನ ಸತ್ಯವಾದ ವಿಚಾರ. ಇಗನ್ನು ತಡೆಹಿಡಿಯುವುದಕ್ಕೆ ಏನು ಪ್ರಯತ್ನ ಮಾಡಿದ್ದೀರಿ. ಎಷ್ಟು ಜನರ ಮೇಲೆ ಕೇಸು ಹಾಕಿದ್ದೀರಿ ಎಷ್ಟು ಜನರ ಮೇಲೆ ಮೊಕದ್ದಮೆಗಳನ್ನು ಹಾಕಿದ್ದೀರಿ? ಪ್ರಭಾವಿಗಳಾದಂಥ ಜನ ಇವತ್ತು ಸರ್ಕಾರಕ್ಕೆ ಬರತಕ್ಕಂಥ ಆದಾಯವನ್ನು ನುಂಗಿ ಹಾಕುತ್ತಿದ್ದಾರೆ. ಭಾರತದಲ್ಲಿ ತಯಾರಾಗುವಂಥ ಮಧ್ಯದಹಿಡಿತವನ್ನು ಮಾಡುವುದು ನಮ್ಮ ಅಬ್ಕಾರಿ ಖಾತೆಯಿಂದ ಆಗುವುದಿಲ್ಲ. ಮುನ್ನೂರು ಜನ ಬೆಂಗಳೂರು ನಗರದಲ್ಲಿ ಕಳ್ಳಬಟ್ಟಿ ಸಾರಾಯಿಯನ್ನು ಕುಡಿದು ಸತ್ತಾಗ, ತಮ್ಮಲ್ಲಿ ಸಿಬ್ಬಂದಿ ಎಷ್ಟು ಇತ್ತು. ನಿಮ್ಮ ಸಿಬ್ಬಂದಿಗೆ ತರಬೇತಿ ಏನಾದರೂ ಕೊಟ್ಟಿದ್ದೀರಾ ? ರಾತ್ರಿ ಹೊತ್ತು ರೈಡ್ ಮಾಡುವಾಗ, ರಿವಾಲ್ವರ್ ಕೊಟ್ಟಿದ್ದೀರಾ ? ಗುಂಡು ಹಾರಿಸುವಂಥ ತರಬೇತಿ ಕೊಟ್ಟಿದ್ದೀರಾ ? ನಿಮ್ಮಲ್ಲಿ ವಾಹನಗಳು ಎಷ್ಟು ಇವೆ ? ಅವುಗಳಿಗೆ ಲೈಟುಗಳು ಇವೆಯೆ ? ರಕ್ಷಣೆಯ ವಾಹನಗಳು ಇವೆಯೆ ? ಯಾವ ಮಾಹಿತಿಯನ್ನು ಕೊಟ್ಟಿಲ್ಲ. ಇಷ್ಟೊಂದು ಆದಾಯ ಬರುವಂಥ ಬಾಬಿರುವಾಗ ೧೯೮೧–೮೨ರಲ್ಲಿ ೩೩೨ ಕೋಟಿ ರೂಪಾಯಿ ಆದಾಯ ತೋರಿಸಿದ್ದೀರಿ. ಸುಮಾರು ೨೦೦ ಕೋಟಿ ರೂಪಾಯಿಗಳು ಬರಬೇಕಾಗಿತ್ತು. ಈ ಬಾಬಿನಲ್ಲಿ ಸುಮಾರು ೨೭೦ ಕೋಟಿ ರೂಪಾಯಿಗಳ ಆದಾಯ ಸೋರಿಹೋಗುತ್ತಿದೆ, ಯಾರ ಕಿಸೆಗೆ ಹೋಗುತ್ತಿದೆ ಎಂಬುದನ್ನು ಪರಿಶೀಲನೆ ಮಾಡಬೇಕು. ಇವರ ಒಾದು ಜಾಲವನ್ನು ಬಂದೋಬಸ್ತು ಮಾಡಬೇಕಾದರೆ. ಪೋಲೀಸ್ ಅಧಿಕಾರಿಗಳಿಗೆ ವಹಿಸಿಕೊಡಬೇಕು. ಪೋಲೀಸ್ ಅಧಿಕಾರಿಗಳನ್ನು ಕರೆಸಿದರೆ, ನಮಗೆ ಒಪ್ಪಿಸಿಲ್ಲ. ನಾವು ಬರುವುದಿಲ್ಲವೆಂದು ಹೇಳುತ್ತಾರೆ.

೬–೦೦ ಪಿ. ಎಂ.

ಇವೊತ್ತು ಪೋಲೀಸ್ ಅಧಿಕಾರಿಗಳು ರೈಡ್‌ಗೆ ಹೋಗಬೇಕಾದರೆ ನಮ್ಮ ಎಕ್ಸೈಸ್ ಪೋಲೀಸ್ ಅಧಿಕಾರಿಗಳ ಕೈಕಾಲಿಗೆ ಬಿದ್ದು ಕರೆದುಕೊಂಡು ಹೋಗಬೇಕಾಗಿದೆ. ನಮ್ಮಲ್ಲಿಯೇ ಕೋ–ಆರ್ಡಿನೇಷನ್ ಇಲ್ಲ. ಪ್ರತಿ ದಿವಸ ನೂರಾರು, ಸಾವಿರಾರು ಜನ ಹೆಂಡ ಕುಡಿದು ಸಾಯಲಿಕ್ಕೆ ಹತ್ತಿದ್ದಾರೆ. ಇವರ ಜೀವನ ಆಸ್ತಿ ಮೇಲೆ ಚೆಲ್ಲಾಟ ಆಡುತ್ತಿದ್ದಾರೆ. ಆದ್ದರಿಂದ, ಇವೊತ್ತು ಸೇಂದಿ ಮಾರಾಟ ಮಾಡುವು

ದನ್ನು ತಡೆಯಬೇಕಾಗಿದೆ ಮೊದಲು ಪ್ರೊಹಿಬಿಷನ್ ಆದಕೂಡಲೇ ನೀರಾ ಕುಡಿಯುವುದಕ್ಕೆ ಪ್ರಾರಂಭ ಮಾಡಿದರು. ಇವೊತ್ತು ಸೇಂದಿ ಮಾರಾಟಗಾರರಿಗೆ ಸೇಂದಿ ಗಿಡಗಳಲ್ಲಿ ಬರತಕ್ಕ ನೀರಾವನ್ನು ಮಾರಾಟ ಮಾಡಲಿಕ್ಕೆ ಅವರಿಗೆ ಕೊಟ್ಟುಬಿಡಿ. ಮೊನ್ನೆ ೧೫೦ ಮಂದಿ ನಿರುದ್ಯೋಗಿಗಳಾಗಿದ್ದಾರೆಂದು ಮಾನ್ಯ ಸದಸ್ಯರಾದ ಪಂಪಾಪತಿಯವರು ಅಮರಣಾಂತ ಉಪವಾಸ ಕುಳಿತಿದ್ದರು. ಇವೊತ್ತು ನಾನು ಹೇಳುತ್ತೇನೆ ಈ ಸೇಂದಿ ಅಂಗಡಿಗಳನ್ನು ಸಂಪೂರ್ಣ ಬಂದ್ ಮಾಡಬೇಕು, ಈಗ ತಾವು ಇದರಲ್ಲಿ ೧೭ ಕೋಟಿ ರೂಪಾಯಿ ಉತ್ಪನ್ನ ಬರುತ್ತದೆ ಅಂಥ ಹೇಳಿದರೆ ಇದಕ್ಕಿಂತಲೂ ಹೆಚ್ಚಿಗೆ ಉತ್ಪನ ಬರತಕ್ಕ ಸೂಚನೆಯನ್ನು ನಾನು ತಮಗೆ ಕೊಡುತ್ತೇನೆ. ಅದರಲ್ಲಿ ಸುಮಾರು ೨೦ ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚು ಉತ್ಪನ್ನವಾಗಬಹುದು ಈ ಸೇಂದಿ ಗಿಡಗಳು ಏನಿವೆ ಇವುಗಳನ್ನು ಸೇಂದಿ ಮಾರಾಟಗಾರರಿಗೆ ಕೊಟ್ಟುಬಿಡಿ, ಅವರು ಕೋ-ಆಪರೇಟೀವ್ ಸೊಸೈಟಿಗಳ ಮುಖಾಂತರ ಈ ಸೇಂದಿ ಗಿಡಗಳಿಂದ ರಸವನ್ನು ತೆಗೆದು ಅದನ್ನು ಮುಂಜಾನೆ ಬೆಳಿಗ್ಗೆ ೬ ಗಂಟೆಯಿಂದ ೮ ಗಂಟೆಯೊಳಗೆ ಈ ನೀರಾವನ್ನು ಮಾರಾಟ ಮಾಡಲಿ, ಅಥವಾ ಬೆಲ್ಲ ಮಾಡಲಿ, ಅದನ್ನು ಅವರಿಗೆ ಕೊಟ್ಟುಬಿಡಿ ಆ ಉದ್ಯೋಗವನ್ನು ಹಚ್ಚಿದರೆ ಸರಿಹೋಗುತ್ತದೆ. ಈ ತರಹ ಸರಿಯಾದ ರೀತಿಯಿಂದ ಕೆಲಸವಾಗಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ. ಇನ್ನು ಹೊಡದ ಹರಾಜಿನಿಂದ ೧೬,೫೫,೯೨,೪೫೬ ರೂಪಾಯಿ ಮರದ ಬಾಡಿಗೆ ೧ ಲಕ್ಷ ರೂಪಾಯಿ ಇದರಲ್ಲಿ ಸ್ಪಷ್ಟವಾಗಿ ಕಾಣುತ್ತದೆ. ಇವೊತ್ತು ಇದನ್ನು ನೀರಾ ರೂಪದಲ್ಲಿ ಜನರಿಗೆ ಕೊಡಬೇಕೆಂದರೆ ಕೊಡಿ. ಯಾರು ಈಡಿಗರು ಇದ್ದಾರೆ, ಅವರಿಗೆ ಉದ್ಯೋಗ ಕೊಡುವ ಸಲುವಾಗಿ, ಈ ನೀರಾ ತೆಗೆಯಲಿಕ್ಕೆ ಪ್ರಾರಂಭ ಮಾಡಿಸಿ. ಮುಂದಿನ ವರ್ಷ ಇಡೀ ರಾಜ್ಯಲ್ಲಿ ಈ ಸೇಂದಿ ಮಾರಾಟವನ್ನು ಸಂಪೂರ್ಣವಾಗಿ ನಿಷೇಧಿಸಬೇಕೆಂದು ಅಧ್ಯಕ್ಷರ ಮುಖಾಂತರ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ಲೈಸೆನ್ಸ್‌ಗಳ ಬಗ್ಗೆ ಹೇಳಬೇಕೆಂದರೆ ಈ ವರ್ಷದಲ್ಲಿ ಮಂಜೂರು ಮಾಡಿದಂಥ ಲೈಸೆನ್ಸ್‌ಗಳಿರಿ ಸಗಟು ೧೭೦, ಸಗಟು ಶಾಖಾ ಲೈಸೆನ್ಸ್ ೩೦, ಚಿಲ್ಲರೆ ೧೬೮೪, ಬಾರ್‌ಗಳು ೪೦೦, ಹೋಟೆಲ್ ಬಾರ್‌ಗಳು ೧೭, ಕ್ಲಬ್‌ಗಳು ೪೬, ಮಿಲಿಟರಿ ಕ್ಯಾಂಟೀನ್‌ಗಳು ೩೨, ಅಧ್ಯಕ್ಷರೆ ಇವೊತ್ತು ಸಮಾಜವನ್ನು ಕೆಡಿಸುವಂಥ ಕಾರ್ಯ ನಡೆದಿದೆ, ಕ್ಲಬ್‌ಗಳಿಗೆ ದಯಮಾಡಿ ಅಂಗಡಿಗಳನ್ನು ತಾವು ಕೊಡಬಾರದು. ಈ ಕ್ಲಬ್‌ಗಳಲ್ಲಿ ಎಷ್ಟೋ ಅಧಿಕಾರಿಗಳು, ಸಾಮಾನ್ಯ ಜನರು ಕುಡಿಯಲಿಕ್ಕೆ, ಹೋಗುತ್ತಿದ್ದಾರೆ. ಶಾಲಾ ಪ್ರಾಧ್ಯಾಪಕರು ಹೋಗಿ ಶಾಲೆಗಳಗೆ ಕುಡಿದು ಬರುತ್ತಾರೆ. ನಾನು ಸವದತ್ತಿ ಎರಡನೇ ನಂಬರ್ ಶಾಲೆಗೆ ಹೋಗಿ ನೋಡಿದರೆ ಇನ್ನೂ ಮೂರು ಗಂಟೆಗೆ ಕುಡಿದು ಬಂದು ಕುಳಿತಿದ್ದರು ಆ ಬಗ್ಗೆ ನಾನು ಎ.ಇ.ಓ.ಗೆ ತಿಳಿಸಿದೆ. ನಾನು ರಿಪೋರ್ಟ್ ಬರೆದುಕೊಟ್ಟ ಮೇಲೆ ಅವರನ್ನು ಸ್ಥಳಾಂತರಿಸಲಾಗಿದೆ. ಈ ಕ್ಲಬ್‌ಗಳಿಗೆ ಕೊಡುವಂಥ ಕಾರ್ಯವನ್ನು ಮಾಡಬೇಡಿ. ಇನ್ನು ಈಗ ಇರತಕ್ಕ ಅಂಡಿಗಳು ಏನಿದೆ ಅವು ರಾತ್ರಿ ೧೦ ಗಂಟೆಯೊಳಗೆ ಮುಚ್ಚುವಂತೆ ಮಾಡಬೇಕು. ಈಗ ಏನಾಗಿದೆ, ರಾತ್ರಿ ೧ ಗಂಟೆಯವರೆಗೂ ಬ್ರಾಂದಿ ಅಂಗಡಿಗಳು ನಡೆಯುತ್ತಿವೆ. ಇನ್ನು ಬೆಳಗಾಂನಲ್ಲಿ ಎಲ್ಲಿ ಗುಡಿ, ಚರ್ಚ್, ಬಸದಿ, ಶಾಲೆಗಳು ಇವೆ, ಅಲ್ಲಿ ಎಷ್ಟೋ ಅಂಗಡಿಗಳನ್ನು ತೆರೆದಿದ್ದಾರೆ. ದಯಮಾಡಿ ಆ ಅಂಗಡಿಗಳನ್ನು ಬಂದ್ ಮಾಡಿಸಿ. ಬೆಂಗಳೂರು ನಗರದಲ್ಲಿ ಹಿಂದೂಸ್ತಾನ್ ಹೋಟಲ್ ಪಕ್ಕದಲ್ಲಿ ಒಂದು ಅರೇಕ್ ಷಾಪ್ ಇದೆ, ಅದರ ಪಕ್ಕದಲ್ಲಿಯೇ ಒಂದು ಮಸೀದಿ ಇದೆ, ಪವಿತ್ರವಾದಂಥ ಸ್ಥಳಕ್ಕೆ ಪ್ರಾರ್ಥನೆ ಮಾಡಲಿಕ್ಕೆ ಹೋಗುವಾಗ ಅಲ್ಲಿ ಸಾವಿರಾರು ಜನರು ಕುಡಿದು ಓಡಾಡುವುದರಿಂದ ಜನರಿಗೆ ಅಡಚಣೆಯಾಗುತ್ತಿದೆ.

ಶ್ರೀ ಸಿ. ಎಂ. ಚಂದ್ರೇಗೌಡ.—ದೇವಾನುದೇವತೆಗಳು ಸುರಪಾನ ಮಾಡುತ್ತಿದ್ದರು ಎನ್ನುವುದು ಪ್ರತೀತಿ ಇದೆ.

ಶ್ರೀ ಜಿ ಕೆ. ತೆಕ್ಕೆಡ್.—ಹಿಂದೂಸ್ಥಾನ ಹೋಟೆಲ್ ಪಕ್ಕದಲ್ಲಿ ಮಸೀದಿ ಏನು ಇದೆ, ಅದರ ಪಕ್ಕದಲ್ಲಿರತಕ್ಕ ಅಂಗಡಿಯನ್ನು ಆದಷ್ಟು ತೀವ್ರವಾಗಿ ತೆಗೆದುಹಾಕಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಈ ಚಿಲ್ಲರೆ ಅಂಗಡಿಗಳಿಗೆ ಲೈಸೆನ್ಸ್ ಕೊಡಬಾರದು. ಇನ್ನು ಅಫೀಮು ಲೈಸೆನ್ಸ್ ಬಗ್ಗೆ ಹೇಳಬೇಕೆಂದರೆ. ಅವರು ಏನು ಹೇಳಿದ್ದಾರೆ, ಅಫೀಮು : ಲೈಸೆನ್ಸ್ ಪಡೆದಂಥ ಅಫೀಮು ಚಟವಿರುವವರಿಗೆ ಮಾತ್ರವೇ ಅಫೀಮು ನೀಡಲಾಗುತ್ತಿದೆ. ಔಷಧಿಯ ಉದ್ದೇಶಗಳಿಗಾಗಿಯೂ ಸಹ ಅಫೀಮು ಕೊಡಲಾಗುತ್ತಿದೆ, ಅಫೀಮಿನ ಚಟವಿರುವವರ ಸಂಖ್ಯೆ ಈ ವರ್ಷ ೧೬೩ ಎಂದು ಹೇಳಿದ್ದಾರೆ. ಈ ಅಫೀಮು ಅವರು ತೆಗೆದುಕೊಂಡು ಅವರ ಮುಖಾಂತರ ಬೇರೆಯವರಿಗೆ ಮಾರಾಟ

ವಾಗುತ್ತಿದೆ. ಇವೊತ್ತು ನಮ್ಮ ತಾಯಂದಿರು ತಂದೆಯರು ಎಷ್ಟೋ ಜನ ಈ ಅಫೀಮು ತೆಗೆದುಕೊಂಡು ಸಾಯುತ್ತಿದ್ದಾರೆ. ಈ ದೃಷ್ಟಿಯಿಂದ ಈ ಅಫೀಮು ಯಾವರೀತಿಯಿಂದ ವೈಯುಕ್ತಿಕವಾಗಿ ಕೊಡಬಾರದು ಇದನ್ನು ಕೊಡುವುದರಿಂದ ವಿಷ ಕೊಟ್ಟಂತಾಗುತ್ತದೆ. ಈ ಅಫೀಮು ಕೊಡುವಂತಾದ್ದು ಬಂದ್ ಮಾಡಬೇಕು. ಮುಂದಿನ ವರ್ಷದಿಂದ ಈ ರಾಜ್ಯದಲ್ಲಿ ಯಾವ ದೃಷ್ಟಿಯಿಂದಲೂ ರಾಜ್ಯದಲ್ಲಿ ಸೇಂದಿ ಮಾರಾಟವಾಗಬಾರದು. ಈ ವಿಷವನ್ನು ಕೊಡಬಾರದು, ಈ ರೀತಿಯ ವಿಷವನ್ನು ಕೊಟ್ಟು ಜನರ ಪ್ರಾಣ ಹಾನಿ ಮಾಡಬಾರದು. ಈ ವಿಷ ದುಡ್ಡು ತೆಗೆದುಕೊಂಡು ನಾವು ಯೋಜನೆಗಳನ್ನು ಮಾಡಿದರೆ ಅದು ಅಷ್ಟೊಂದು ಪಾವಿತ್ರ್ಯತೆಯಾಗಲಿಕ್ಕಿಲ್ಲ ಈ ಪಾಪದ ಹಣ ಬೇಡ ಆ ದೃಷ್ಟಿಯಿಂದ ನಾನು ಮುಖ್ಯಮಂತ್ರಿಗಳಲ್ಲಿ, ನನ್ನ ಮತದಾರರ ಸಂಘದ ಪತಿಯಿಂದ ಕಡುಬಡವರ ಪತಿಯಿಂದ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ಸೇಂದಿ ಮಾರಾಟವನ್ನು ಬಂದ್ ಮಾಡಬೇಕು, ಇದರಿಂದ ಬರುವಂಥ ಆದಾಯ ಯೋಗ್ಯ ರೀತಿಯಿಂದ ಬರಲಿ. ನಮ್ಮ ಅಧಿಕಾರಿಗಳು ಹೆಚ್ಚು ಚುರುಕಿನಿಂದ ಉತ್ಸಾಹದಿಂದ ಕಾರ್ಯ ಮಾಡಿದರೆ ೧೩೦ ಕೋಟಿ ಅಲ್ಲ ೨೦೦ ಕೋಟಿ ರೂಪಾಯಿ ಆದಾಯ ಬರಬಹುದು ಇನ್ನು ಕೊನೆಯದಾಗಿ ಹೇಳಬೇಕೆಂದರೆ, ಈ ಟೆಂಪರೆನ್ಸ್ ಬೋರ್ಡ್ ಮುಖಾಂತರ ರಾಜ್ಯದಲ್ಲಿ ಪ್ರಚಾರ ಕೈಗೊಂಡು ಜನರಿಗೆ ಸರಿಯಾದ ರೀತಿಯಲ್ಲಿ ತಿಳುವಳಿಕೆ ಬರುವಂತೆ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಂಡು ಇಷ್ಟು ಕಾಲ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಪಿ. ರಾಂದೇವ್ (ಮಲ್ಲೇಶ್ವರಂ).—ಸನ್ಮಾನ್ಯ ಅಧ್ಯಕ್ಷರೆ ಇವೊತ್ತು ಇಲಾಖಾ ಬೇಡಿಕೆಗಳ ಕೊನೆಯ ದಿವಸ, ಸುಮಾರು ಕಳೆದ ೮ನೇ ತಾರೀಖಿನಿಂದ ಇವೊತ್ತಿನವರೆಗೂ ಇದು ನಡೆದುಕೊಂಡು ಬಂದಿದೆ. ಈ ಸಂದರ್ಭದಲ್ಲಿ ನಾನು ಮೊದಲನೆಯದಾಗಿ ಅಧ್ಯಕ್ಷರವರನ್ನು ಅಭಿನಂದಿಸಬೇಕೆಂದು ಅಂದುಕೊಂಡಿದ್ದೇನೆ. ಸತತವಾಗಿ ಇಷ್ಟೊಂದು ದಿನಗಳ ಕಾಲ ಬೇಡಿಕೆಗೆ ಚರ್ಚೆಗೆ ಅವಕಾಶ ಕೊಟ್ಟಿರತಕ್ಕದ್ದು ಅಪರೂಪ. ಆದರೆ ಮಾನ್ಯ ಅಧ್ಯಕ್ಷರವರು ಔದಾರ್ಯದಿಂದ ಯಾರು ಯಾರು ಮಾತನಾಡಬೇಕೆಂದು ಕೇಳಿದ್ದಾರೆ ಅವರುಗಳೆಲ್ಲಾ ಅವಕಾಶವನ್ನು ಕೊಟ್ಟು ಎಲ್ಲರಿಂದಲೂ ಮೆಚ್ಚುಗೆಯನ್ನು ಸಂಪಾದನೆ ಮಾಡಿದ್ದಾರೆ, ಆದ್ದರಿಂದ, ಅಧ್ಯಕ್ಷರಿಗೆ ಅಭಿನಂದನೆ ಅರ್ಪಿಸಬೇಕಾದ್ದು ನನ್ನ ಕರ್ತವ್ಯ. ಈಗ ನಾನು ಜಾಸ್ತಿ ಸಮಯವನ್ನು ಕೇಳುವುದಿಲ್ಲ.

ಶ್ರೀ ಸಿ. ಎಂ. ಇಬ್ರಾಹಿಂ.—ನಿಮ್ಮ ಹಿನ್ನೆಲೆ ಇರುವುದು ಅದೇ.

ಶ್ರೀ ಪಿ. ರಾಂದೇವ್.—ಹಾಗೇನೂ ಇಲ್ಲ. ಇದ್ದುದನ್ನು ಇದ್ದ ಹಾಗೆ ಹೇಳಬೇಕಾಗುತ್ತದೆ. ನಾನು ನಮ್ಮಕಡೆಯ ಪಾರ್ಟಿ ವಿಪ್ ಆಗಿದ್ದೇನೆ. ಮಾನ್ಯ ಅಧ್ಯಕ್ಷರು ಮಾನ್ಯ ಉಪಾಧ್ಯಕ್ಷರು ಯಾವ ಸದಸ್ಯರೇ ಮಾತನಾಡತಕ್ಕ ಸಂದರ್ಭದಲ್ಲಿಯೂ ಸಮಯವನ್ನು ಕಡಿಮೆ ಮಾಡದೇ ಗಿಲಿಟಿನ್‌ಗೆ ಹಾಕದೇ ಮಾತನಾಡಲಿಕ್ಕೆ ಸಮಯಾವಕಾಶ ಕೊಟ್ಟಿದ್ದಾರೆ. ಇದನ್ನು ನಾವೆಲ್ಲರೂ ಮೆಚ್ಚಬೇಕು, ಅವರ ಔದಾರ್ಯವನ್ನು ಕೊಂಡಾಡಬೇಕು.

ಸ್ವಾಮಿ, ಈ ಎಕ್ಸೈಸ್ ಇಲಾಖೆಯ ಚರ್ಚೆ ಮೊದಲೇ ಬರಬೇಕಾಗಿತ್ತು. ಆದರೆ ಕೊನೆಯ ದಿವಸ ಮತ್ತು ಕೊನೆಯ ಘಳಿಗೆಯಲ್ಲಿ ಬಂದಿರುವುದಕ್ಕೆ we a-e not doing justice to this departm nt. ಇದರಿಂದ ಎಂಥ ದುಃಖಕರ ಘಟನೆ ನಡೆಯಿತು ಎಂಬುದು ತಮಗೆ ಗೊತ್ತಿದೆ, ಎಕ್ಸೈಸ್ ಬಗ್ಗೆ ತಮ್ಮ ವರದಿಯನ್ನು ನಾನು ಓದಿನೋಡಿದ್ದೇನೆ. ಆ ದುಃಖಕರ ಘಟನೆಯ ಬಗ್ಗೆ ಶಬ್ದವನ್ನೂ ಕೂಡ ತಾವು ಹೇಳಿಲ್ಲ. ಜವಾಬ್ದಾರಿ ಇರತಕ್ಕ ನಿಮ್ಮ ಅಧಿಕಾರಿಗಳೂ ಕೂಡ ಒಂದು ಮಾತನ್ನು ಹೇಳಿಲ್ಲ, ಅದಕ್ಕೂ ನಮಗೂ ಏನೇನೂ ಸಂಬಂಧವೇ ಇಲ್ಲ ಎನ್ನುವ ರೀತಿಯಲ್ಲಿ ಈ ಎಕ್ಸೈಸ್ ಕಮಿಷನರ್‌ರವರು ಹೇಳಿದ್ದಾರೆ.

SRI M. VEERAPPA MOILY.—That is under investigation by the Inquiry Commission

ಶ್ರೀ ಪಿ. ರಾಮದೇವ್.—ನಾನು ದೇಸಾಯಿ ಕಮಿಷನ್ ಮುಂದೆ ಕೂಡ ಅಪಿಯರ್ ಆಗಿದ್ದೆ. ಸುಮಾರು ೬–೭ ಗಂಟೆ ಕಾಲ ನನ್ನನ್ನು ಕ್ರಾಸ್ ಎಕ್ಸಾಮಿನೇಷನ್ ಮಾಡಿದರು ಅಬ್ಕಾರಿ ಕಾನೂನನ್ನು ಜಾರಿಗೆ ತರುವ ಕೆಲಸ ಅಬ್ಕಾರಿ ಇಲಾಖೆಗೆ ಮತ್ತು ಪೋಲೀಸ್ ಇಲಾಖೆಗೆ ಸಂಬಂಧಪಟ್ಟಿದ್ದು.

ಆದರೆ ಇವರಿಬ್ಬರೂ ಇದು ನಮ್ಮ ಜವಾಬ್ದಾರಿ ಅಲ್ಲ ಎನ್ನುವ ರೀತಿಯಲ್ಲಿ ಉತ್ತರ ಕೊಟ್ಟಿದ್ದಾರೆ. ಈ ದುಃಖಕರ ಘಟನೆಯ ಬಗ್ಗೆ ಪೋಲೀಸರನ್ನು ಕೇಳಿದರೆ ಎಕ್ಸೈಸ್ ಡಿಪಾರ್ಟ್‌ಮೆಂಟ್ ಕಡೆಗೆ ಕೈ ತೋರಿಸುತ್ತಾರೆ ಎಕ್ಸೈಸ್ ಡಿಪಾರ್ಟ್‌ಮೆಂಟ್‌ನವರನ್ನು ಕೇಳಿದರೆ ಪೋಲೀಸ್ ಇಲಾಖೆಯವರ ಕಡೆ ಕೈ ತೋರಿಸುತ್ತಾರೆ. ಇದರ ಬಗ್ಗೆ ಒಂದು ಜವಾಬ್ದಾರಿಯುತವಾದ ರಿಪೋರ್ಟ್ ಬರಬೇಕಾಗಿತ್ತು. ಆದರೆ ಏತಕ್ಕೆ ಇನ್ನೂ ಬಂದಿಲ್ಲವೋ ಗೊತ್ತಿಲ್ಲ. ದೇಸಾಯಿ ಕಮಿಷನ್ ರಿಪೋರ್ಟ್ ಬರಬೇಕಾಗಿದೆ.

ಇನ್ನೊಂದು ಟ್ರಾಜಿಡಿ ಎಂದರೆ ಸರ್ಕಸ್‌ನ ಮಕ್ಕಳ ದುರಂತದ ಬಗ್ಗೆ ರಿಪೋರ್ಟ್ ಬರಬೇಕು. ಒಂದು ವೇಳೆ ಅದು ಬಂದಿದ್ದರೆ ಸಭೆಯ ಮುಂದೆ ಅದನ್ನು ಏತಕ್ಕೆ ತರುತ್ತಿಲ್ಲ? ಆಫೀಸರ್‌ಗಳು ತಪ್ಪು ಮಾಡಿದ್ದಾರೆ, ಅವರನ್ನು ಏನಾದರೂ ಮಾಡಿ ಸೇಫ್‌ಗಾರ್ಡ್ ಮಾಡಬೇಕೆಂಬ ಉದ್ದೇಶದಿಂದ ಏನಾದರೂ ತರುತ್ತಿಲ್ಲವೋ ಏನೋ ಅರ್ಥವಾಗುತ್ತಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಪಾರ್ಲಿಮೆಂಟ್ ಸಚಿವರು ಭರವಸೆ ಕೊಟ್ಟಿದ್ದಾರೆ. ಈ ಎರಡು ವರದಿಗಳನ್ನು ಸಭೆಯ ಮುಂದಿಡಬೇಕೆಂದು ಜನರ ಪರವಾಗಿ ನಾನು ಒತ್ತಾಯ ಮಾಡುತ್ತಿದ್ದೇನೆ

ಸ್ವಾಮಿ, ಪಿಡಬ್ಲ್ಯುಸಿ ಮತ್ತು ಎಕ್ಸೈಸ್ ಇಲಾಖೆಗಳು ನಿಮ್ಮ ಸರ್ಕಾರವನ್ನು ಸಂಪೂರ್ಣವಾಗಿ ತಮ್ಮ ಹಿಡಿತದಲ್ಲಿ ಇಟ್ಟುಕೊಟ್ಟುಕೊಳ್ಳತಕ್ಕವು. ಇದು ಇವತ್ತೇ ಅಲ್ಲ, ಬಹಳ ಹಿಂದಿನಿಂದಲೂ ಸರ್ಕಾರವನ್ನು ಸಚಿವರನ್ನೂ ಹತೋಟಿಯಲ್ಲಿಟ್ಟುಕೊಂಡಿರುವುವು. ಏಕೆಂದರೆ, ತಮ್ಮ ಚುನಾವಣೆಗೆ ಬೇಕಾದಂಥ ಹಣವನ್ನು ಈ ಇಲಾಖೆಯವರು ಕೊಡುತ್ತಾರೆಂಬುದು ತಮಗೆ ಗೊತ್ತಿದೆ. ಹಿಂದೆ ಯಾವ ರೀತಿ ರೈಡ್‌ಗಳಾಯಿತು? ನೇಮಕವಾದ ಕಮಿಷನ್ ಏನಾಯಿತು? ಅವರಿಗೆ ಯಾವ ರೀತಿ ದುಡ್ಡು ಕೊಡುತ್ತಿದ್ದರು? ಇದನ್ನೆಲ್ಲಾ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಇದೆಲ್ಲ. ದೇಸಾಯಿ ಕಮಿಷನ್‌ಗೆ ಸಂಬಂಧಪಟ್ಟಿದ್ದು. ರಾಜ್ಯದ ಜನತೆ ನಮ್ಮನ್ನು ಚುನಾಯಿಸಿ ಕಳುಹಿಸಿದ್ದಾರೆ. ಬೇರೆ ಬೇರೆ ಜಿಲ್ಲೆಗಳಲ್ಲಿ ಸ್ಥಿತಿ ಯಾವ ರೀತಿ ಇದೆಯೋ ನನಗೆ ಗೊತ್ತಿಲ್ಲ. ನಮ್ಮ ನಮ್ಮ ಕ್ಷೇತ್ರದ ಮಧ್ಯದಲ್ಲಿ ಹೆಂಡದ ಅಂಗಡಿಗಳು, ಸಾರಾಯಿ ಅಂಗಡಿಗಳು ಬಂದಿವೆ. ಮೊದಲು ಬೆಂಗಳೂರು ಪ್ರಾರಂಭವಾದಾಗ ಅವು ಊರಿನಿಂದ ಹೊರಗಡೆ ಇದ್ದವು ಬೆಂಗಳೂರು ಬೃಹದಾಕಾರವಾಗಿ ಬೆಳೆದ ಮೇಲೆ ಊರಿನ ಮಧ್ಯೆ ಸೇರಿಕೊಂಡಿರುವುವು. ಸುಮಾರು ೩೬ ಹೆಂಡ ಮತ್ತು ಸಾರಾಯಿ ಅಂಗಡಿಗಳನ್ನು ಅಲ್ಲಿಂದ ಸ್ಥಳಾಂತರ ಮಾಡಬೇಕೆಂದು ಬೆಂಗಳೂರಿನ ಜನತಾ ಪಕ್ಷದವರು ಒಂದೇ ಸಮನೆ ಬೊಬ್ಬೆ ಹೊಡೆದರೂ ನೀವು ಕೇಳಲಿಲ್ಲ ವೈಯಾಲಿಕಾವಲ್‌ನಲ್ಲಿ ನಡೆದ ಘಟನೆ ತಮಗೇ ಗೊತ್ತಿದೆ. ನಾನೂ ಇದರ ಬಗ್ಗೆ ಒಂದೆರಡು ಕಾಗದಗಳನ್ನು ಬರೆದೆ. ಸತ್ಯಾಗ್ರಹವನ್ನು ಮಾಡುತ್ತೇನೆಂದು ಹೇಳಿದೆ. ಆದರೂ ಸರ್ಕಾರ ಏನೂ ಮಾಡಲಿಲ್ಲ. ಇವತ್ತು ಏನಾಗಿದೆ ಎಂದರೆ ಎಕ್ಸೈಸ್ ಡಿಪಾರ್ಟ್‌ಮೆಂಟ್‌ನವರು ಬಹಳ ಪವರ್‌ಫುಲ್ ಆಗಿದ್ದಾರೆ ಇಡೀ ಸರ್ಕಾರವನ್ನೇ ಅವರು ಕಂಟ್ರೋಲ್ ಮಾಡುತ್ತಿದ್ದಾರೆ. ಆದ್ದರಿಂದ ನಾನು ತಮಗೆ ಹೇಳುತ್ತಿದ್ದೇನೆ ಈಗಲಾದರೂ ಈ ೩೬ ಅಂಗಡಿಗಳನ್ನು ಊರಿನ ಮಧ್ಯಭಾಗದಿಂದ ಹೊರಕ್ಕೆ ಸ್ಥಳಾಂತರಿಸಲು ಕ್ರಮ ಕೈಗೊಳ್ಳಬೇಕು. ದೇವಸ್ಥಾನ. ಚರ್ಚ್. ಸ್ಕೂಲು. ಇರುವ ಕಡೆಗಳಲ್ಲಿ ಈ ಹೆಂಡ ಮತ್ತು ಸಾರಾಯಿ ಅಂಗಡಿಗಳನ್ನು ತೆರೆಯಬಾರದೆಂದು ತಮ್ಮ ರೂಲ್ಸ್‌ನಲ್ಲಿ ಸ್ಪಷ್ಟವಾಗಿದೆ. ಆದರೂ ಲೈಸೆನ್ಸ್ ಕೊಟ್ಟಿರುತ್ತಾರೆ. ಇಂಥ ಕಡೆ ಇರತಕ್ಕ ಹೆಂಡ ಮತ್ತು ಸಾರಾಯಿ ಅಂಗಡಿಗಳನ್ನು ಅಲ್ಲಿಂದ ಸ್ಥಳಾಂತರ ಮಾಡಬೇಕು, ಸಾರ್ವಜನಿಕರಿಗೆ ಇದರಿಂದ ತುಂಬಾ ತೊಂದರೆಯಾಗುತ್ತದೆಂದು ದೂರು ಕೊಟ್ಟರೆ, ಯಾರು ಯಾರು ದೂರು ಕೊಟ್ಟಿರುತ್ತಾರೆ ಅವರನ್ನು ಪೋಲೀಸರು ಬಂದು ಕೇಳದೆ, ಆ ಹೆಂಡ, ಸಾರಾಯಿ ಮಾರತಕ್ಕ ಅಂಗಡಿಗಳ ಹತ್ತಿರ ಹೋಗಿ ಅಲ್ಲಿನ ಕುಡುಕರನ್ನು ಕರೆದು ಈ ಅಂಗಡಿಗಳು ಇಲ್ಲೇ ಇರಬೇಕೆಂದು ಅವರಿಂದ ಬರೆಸಿಕೊಂಡು ಬರುತ್ತಾರೆ. ಈ ಮಾತನ್ನು ನಾನು ದೇಸಾಯಿ ಕಮಿಷನ್ ಮುಂದೆ ಕೂಡ ಹೇಳಿದ್ದೇನೆ. ಈ ರೀತಿ ನಿಮ್ಮ ಅಧಿಕಾರಿಗಳು ಜನತೆಗೆ ದ್ರೋಹ ಬಗೆಯುತ್ತಿದ್ದಾರೆ. ಇದು ಮೊದಲು ಹೋಗಬೇಕು. ಜನತೆಯ ಆಶೋತ್ತರಗಳನ್ನು ಈಡೇರಿಸಿಕೊಂಡು ಜನತಾ ಪ್ರತಿನಿಧಿಗಳಾದ ನಾವುಗಳು ತಮ್ಮನ್ನು ಕೇಳಿದರೆ, ಆ ಜನರ ದೃಷ್ಟಿಯಲ್ಲಿ ನಮಗೆ ಏನೇನೂ ಬೆಲೆಯೇ ಇಲ್ಲದಂತೆ ಮಾಡಿದ್ದೀರಿ. ನಮ್ಮನ್ನು ನಿಸ್ಸಹಾಯಕರನ್ನಾಗಿ ಮಾಡಿದ್ದೀರಿ. ಈ ಬಾಬಿನಿಂದ ೧೦ ಲಕ್ಷ ರೂ. ಆದಾಯ ಬರುತ್ತಿದೆ. ಆದ್ದರಿಂದ ಇದನ್ನು ನಿಲ್ಲಿಸುವುದಕ್ಕಾಗುವುದಿಲ್ಲವೆಂದು ಮಾನ್ಯ ಮುಖ್ಯ ಮಂತ್ರಿಗಳು ನನಗೆ ಒಂದು ಕಾಗದವನ್ನು ಬರೆದರು.

ಸ್ವಾಮಿ ತಮಗೆ ಈ ೧೦ ಲಕ್ಷ ರೂ. ಗಳು ಜಾಸ್ತಿಯಾಯಿತೇ ಹೊರತು ಜನರ ತೊಂದರೆಗಳು ನಿಮಗೆ ಜ್ಞಾಪಕಕ್ಕೇ ಬರಲಿಲ್ಲ. ಈಗ್ಗೆ ೨ ತಿಂಗಳ ಹಿಂದೆ ಮಲ್ಲೇಶ್ವರಂನಲ್ಲಿ ಸುಮಾರು ೪೦ ಜನರು

ರಾತ್ರಿ ೮ ಗಂಟೆ ಸಮಯದಲ್ಲಿ ಚೆನ್ನಾಗಿ ಕುಡಿದು ದಾರಿಯಲ್ಲಿ ಹೋಗುತ್ತಿದ್ದವರ ಹೊಟ್ಟೆಗೆ ಚಾಕು ಹಾಕಿದರು, ತಲೆಗೆ ಹೊಡೆದರು, ಅಂಗಡಿಗಳನ್ನು ಲೂಟಿ ಮಾಡಿದರು. ಅದರಲ್ಲೂ ೩ ಸ್ಟೇಷನ್‌ಗಳು ಇರತಕ್ಕ ಪ್ರದೇಶದಲ್ಲಿ ಈ ರೀತಿ ಗಲಾಟೆ ಮಾಡಿದ್ದಾರೆ. ಬೆಂಗಳೂರಿನಲ್ಲಿ ಆಗಿರತಕ್ಕ ಕೊಲೆ, ದರೋಡೆ, ಬೇರೆ ಎಲ್ಲೂ ಕೂಡ ಆಗಿಲ್ಲ. ಸಂಜೆಯ ಹೊತ್ತು ಹೆಂಡದ ಅಂಗಡಿಯ ಮುಂದೆ ಯಾರೂ ಓಡಾಡುವುದಕ್ಕಾಗುವುದಿಲ್ಲ. ಆದ್ದರಿಂದ ನನ್ನ ಪ್ರಾರ್ಥನೆ ಏನೆಂದರೆ, ತಾವು ಮೊದಲು ಈ ಎಕ್ಸೈಸ್ ಲಾಭದ ಹಿಡಿತದಿಂದ ತಾವು ಹೊರಗೆ ಬರಬೇಕು. ಮೊದಲು ತಾವು ಈ ಅಂಗಡಿಗಳನ್ನು ಮುಚ್ಚಿಸಿ, ಇದರಿಂದ ಸರ್ಕಾರಕ್ಕೆ ಯಾವ ನಷ್ಟವೂ ಇಲ್ಲ. ನೀವು ಹೆಂಡ ಸಾರಾಯಿ ಮಾರಾಟ ಮಾಡುವುದಕ್ಕೆ ಏನು ಲೈಸೆನ್ಸ್ ಕೊಟ್ಟಿದ್ದೀರಿ, ಅದೇ ಕಂಟ್ರಾಕ್ಟರ್, ಅದೇ ಅಂಗಡಿಯ ಪಕ್ಕದಲ್ಲೇ ಅನ್ ಲೈಸೆನ್ಸ್ಡ್ ಇಲ್ಲಿಸಿಟ್ ಲಿಕ್ಕರ್‌ನ್ನು ಮಾರುತ್ತಿರುತ್ತಾನೆ. ಇದರಲ್ಲಿ ಅವರಿಗೆ ಹೆಚ್ಚು ಲಾಭ ಬರುತ್ತದೆ. ಆದ್ದರಿಂದ ಈ ಕುಡುಕರೂ ಕೂಡ ಅಲ್ಲಿಗೆ ಹೋಗಿ ಕುಡಿಯುತ್ತಾರೆ. ಈ ವಿಚಾರವನ್ನೂ ದೇಸಾಯಿ ಕಮಿಷನ್ ಮುಂದೆ ನಾನು ಹೇಳಿದ್ದೇನೆ. ಇವತ್ತು ನೀವು ಲೈಸೆನ್ಸ್ ಕೊಟ್ಟಿರುವುದಕ್ಕಿಂತ ಹೆಚ್ಚಿಗೆ ಅನ್ ಲೈಸೆನ್ಸ್ಡ್ ಇಲ್ಲಿಸಿಟ್ ಲಿಕ್ಕರ್ ಮಾರಾಟ ಜಾಸ್ತಿಯಾಗುತ್ತದೆ. ಇದನ್ನು ತಡೆಗಟ್ಟುವುದಕ್ಕೆ ನಿಮ್ಮಿಂದ ಸಾಧ್ಯವಾಗಿಲ್ಲ. ದೇಸಾಯಿ ಕಮಿಷನ್ ಎದುರಿನಲ್ಲೇ ಇಲ್ಲಿ ಟ್ ಲಿಕ್ಕರ್ ಬಾಟಲ್‌ನ್ನು ತರಿಸಿಕೊಟ್ಟಿದ್ದೇನೆ. ಇದರ ಬಗ್ಗೆ ಎನ್‌ಕ್ವೈರಿ ಆದಮೇಲಾದರೂ ನಿಮ್ಮ ಅಧಿಕಾರಿಗಳು ಬಿಗಿಯಾಗಿರಬೇಕೆಂದು ಅಂದುಕೊಂಡಿದ್ದೆ. ಆದರೆ ಅದು ನಿಂತಿಲ್ಲ. ಇದಕ್ಕೆ ಕಾರಣ ಅವರು ನಿಮ್ಮ ಇಡೀ ಸರ್ಕಾರ ಮತ್ತು ಮಂತ್ರಿಗಳನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಂಡಿದ್ದಾರೆ. ಆದ್ದರಿಂದ ಇದು ಸಾಧ್ಯವಾಗಿಲ್ಲ. ನಿಮ್ಮ ಅಧಿಕಾರಿಗಳನ್ನು ನಾವು ಮಾತನಾಡಿಸುವ ಹಾಗೆಯೇ ಇಲ್ಲ. ಅವರು ಸಂಪೂರ್ಣವಾಗಿ ಆ ಕಂಟ್ರಾಕ್ಟರ್‌ಗಳ ಕೈಕೆಳಗೆ ಇದ್ದಾರೆ. ಇದನ್ನು ತಪ್ಪಿಸುವ ಛಾತಿ ನಿಮ್ಮಲ್ಲಿದ್ದರೆ ನಾನು ಒಪ್ಪಿಕೊಳ್ಳುತ್ತೇನೆ. ಸ್ವಾಮಿ, ಕಿಲ್ಲರ್ ಡ್ರಿಂಕ್ಸ್. ಮೆಥನಾಲ್ ಎಲ್ಲಿಂದ ಬಂತು ಎಂಬುದು ತಮಗೆ ಗೊತ್ತಿದೆಯೋ ? ಇದೇ ಊರಿನಲ್ಲೇ ನೀವೇ ಲೈಸೆನ್ಸ್ ಕೊಟ್ಟಿರತಕ್ಕ ಡಿಸ್ಟಿಲರೀಸ್‌ನಲ್ಲಿ ಅಂದರೆ ಖೋಡೆ ಡಿಸ್ಟಿಲರೀಸ್, ಜೆಮಿನಿ ಡಿಸ್ಟಿಲರೀಸ್‌ನವರಿಂದ ತಯಾರಾಗುತ್ತಿದೆ. ಅವರು ಇದನ್ನು ಹೇಗೆ ಮಾಡುತ್ತಾರೆ ಎಂಬುದನ್ನು ನಾನು ಹೇಳುತ್ತೇನೆ. ಮೊಲ್ಯಾಸಿಸ್‌ನ್ನು ಬಾಯಿಲ್ ಮಾಡಿದಾಗ ವಿಸ್ಕಿಯಾಗಿ ಹೋಗುತ್ತವೆ. ಮೆಥನಾಲ್ ಅಲ್ಲೇ ಉಳಿಯುತ್ತದೆ. ನಿಮ್ಮ ರೂಲ್ಸ್ ಪ್ರಕಾರ ಎಕ್ಸೈಸ್ ಇನ್‌ಸ್ಪೆಕ್ಟರ್ ಅಲ್ಲೇ ಎದುರಿಗೇ ನಿಂತುಕೊಂಡು ಅದಕ್ಕೆ ಕೆಮಿಕಲ್ಸ್ ಹಾಕಬೇಕು. ಅದರಿಂದ ಬರತಕ್ಕ ದುರ್ವಾಸನೆಯನ್ನು ಯಾರು ಕುಡಿಯಬಾರದು. ಆದರೆ ಇವರು ಯಾರೂ ಕೂಡ ಅದಕ್ಕೆ ಕೆಮಿಕಲ್ಸ್ ಹಾಕುವುದಿಲ್ಲ. ಇವರ ಜೇಬಿಗೆ ಅವರ ದುಡ್ಡು ಹಾಕಿದರೆ ಇವರು ಸುಮ್ಮನೆ ಹೋಗುತ್ತಾರೆ, ಅನಂತರ ಅವರು ಇದನ್ನು ಮಾರಾಟ ಮಾಡುವುದಕ್ಕೆ ಬಿಡುತ್ತಾರೆ. ಇದನ್ನು ಕುಡಿದು ಜನರು ಸಾಯುತ್ತಾ ಇದ್ದಾರೆ. ಇವತ್ತು ಸಾಯುತ್ತಿರುವವರು ಎಂದರೆ ಬಡಜನರು, ಹಿಂದುಳಿದವರು, ದುರ್ಬಲವರ್ಗದವರು, ಹರಿಜನರು. ಅದಕ್ಕೆ ಸ್ವಲ್ಪ ಉನ್ನತ ಮಟ್ಟದಲ್ಲಿರುವವರು ಯಾರೂ ಕೂಡ ಹೆಂಡ, ಸಾರಾಯಿ ಕುಡಿಯುವುದಕ್ಕೆ ಹೋಗುವುದಿಲ್ಲ. ನಿಮ್ಮ ಇನ್‌ಸ್ಪೆಕ್ಟರ್‌ಗಳ ಮೇಲೆ ನೀವು ಬಿಗಿ ಕ್ರಮವನ್ನು ತೆಗೆದುಕೊಳ್ಳುತ್ತಿಲ್ಲ. ಡಿಸ್ಟಿಲರೀಸ್ ಮೇಲೆ ನೀವು ಕ್ರಮ ತೆಗೆದುಕೊಳ್ಳುತ್ತಿಲ್ಲ. ಇನ್ನಾದರೂ ತಾವು ದಯವಿಟ್ಟು ಇವರ ಮೇಲೆ ಕ್ರಮ ತೆಗೆದುಕೊಳ್ಳಬೇಕು.

ಇನ್ನು ಎರಡನೆಯ ದಾಗಿ ಅಡಲ್ಟ್ರೇಷನ್ ವಿಚಾರದಲ್ಲಿ ಹೇಳುವುದಾದರೆ, ಯಾವುದೇ ಹೆಂಡದ ಅಂಗಡಿಯ ಪಕ್ಕದಲ್ಲಿ ಹೋಗಿ ನೋಡಿದರೂ ಅಡಲ್ಟ್ರೇಟೆಡ್ ಬಹಳವಾಗಿ ಸಿಕ್ಕುತ್ತದೆ. ಇದು ಲೋಯರ್ ಲೆವೆಲ್‌ನಲ್ಲಿ ಆದರೆ ಇನ್ನೂ ವೈನ್ಸ್ ಷಾಪ್ಸ್, ಲಿಕ್ಕರ್ ಷಾಪ್ಸ್ ಬಗ್ಗೆ ಕೂಡ ಹೇಳಬೇಕಾಗುತ್ತದೆ. ಅಲ್ಲಿ ಬಾಟಲ್‌ಗಳ ಮೇಲೆ ಇರತಕ್ಕ ಲೇಬಲ್‌ನಲ್ಲಿ ಒಂದು ಇದ್ದರೆ ಬಾಟಲ್‌ನ ಒಳಗಡೆ ಬೇರೆ ಇರುತ್ತದೆ. ಅಂದರೆ ಅಲ್ಲೂ ಕೂಡ ಅಡಲ್ಟ್ರೇಷನ್ ಆಗುತ್ತಿದೆ. ಇದನ್ನು ಕುಡಿಯುವುದರಿಂದ ಜನರ ಆರೋಗ್ಯ ಕೆಡುತ್ತದೆ. ಇಂಥ ಪ್ರಕರಣಗಳಲ್ಲಿ ನಿಮ್ಮ ಪೋಲೀಸ್‌ರು ಕೆಲವರನ್ನು ಹಿಡಿದಿದ್ದೂ ಆಯಿತು, ಅನಂತರ ಅವರನ್ನು ಬಿಟ್ಟಿದ್ದೂ ಆಯಿತು. ಕೊನೆಗೂ ಈ ಅಡಲ್ಟ್ರೇಷನ್‌ನ್ನು ನಿಲ್ಲಿಸುವುದಕ್ಕೆ ನಿಮ್ಮಿಂದಾಗಲಿಲ್ಲ. ಸರ್ಕಾರಕ್ಕೆ ಹಣ ಬರುತ್ತದೆ ಎಂಬುದು ಒಂದೇ ಒಂದು ನಿಮಗಿರತಕ್ಕ ದೃಷ್ಟಿ. ಹಾಗಾದರೆ ನಾಳೆಯಿಂದ ಊರಿನಲ್ಲಿ ಸೂಳೆಗಾರಿಕೆಯನ್ನೂ ಮಾಡಿಸಿದರೆ ಇನ್ನೂ ಹೆಚ್ಚಿನ ದುಡ್ಡು ಬರುತ್ತದೆ. ಇದೆಲ್ಲಾ ಬೇಡ ಸ್ವಾಮಿ. ಕೇವಲ ಹಣ ಸಂಪಾದನೆಯ ದೃಷ್ಟಿಯನ್ನು ಬಿಟ್ಟು ಜನಸಾಮಾನ್ಯರ ಆರೋಗ್ಯವನ್ನು ಕಾಪಾಡತಕ್ಕ ಕಡೆಗೆ ತಾವು ಗಮನಹರಿಸಿ ಒಳ್ಳೆಯ ಕೆಲಸ ಮಾಡಬೇಕು. ಇಲ್ಲದೇ ಹೋದರೆ ನಿಮ್ಮ ಇಲಾಖೆಯ ಅಧಿಕಾರಿಗಳನ್ನು ತೆಗೆದು ಇದನ್ನು ಸಾಧು ಸಮಾಜಕ್ಕೆ ವಹಿಸಿಕೊಡಿ, ಅವರು ಚೆನ್ನಾಗಿ ಕೆಲಸ ಮಾಡು

ತ್ತಾರೆ, ಅಲ್ಲದೆ ಜನರ ಮನಸ್ಸನ್ನೂ ಬದಲಾವಣೆಮಾಡಿ ಇಂಥ ಘಟನೆಗಳನ್ನು ತಡೆಗಟ್ಟುತ್ತಾರೆ. ಆದರೆ ನಿಮ್ಮ ಇಲಾಖೆಯಿಂದ ಖಂಡಿತವಾಗಿಯೂ ಇದನ್ನು ತಡೆಗಟ್ಟುವುದಕ್ಕೆ ಸಾಧ್ಯವಿಲ್ಲ ಎನ್ನುವ ಮಾತನ್ನು ನಾನು ಹೇಳಬಯಸುತ್ತೇನೆ. ಇವತ್ತು ಪೋಲೀಸ್ ಮತ್ತು ಎಕ್ಸೈಸ್ ಇಲಾಖೆಗಳು ಜನರ ದುಡ್ಡನ್ನು ಲೂಟಿ ಹೊಡೆಯುತ್ತಿದ್ದಾರೆ.

ಕನ್‌ಸರ್‌ವೇನ್ಸ್ ಆಫ್ ಫಾರೆಸ್ಟ್ ಪ್ರಕಾರ ಇಷ್ಟು ಮರಗಳನ್ನು ಬೆಳೆಸಬೇಕೆಂದು ಇದೆ. ಈಗ ಎಷ್ಟು ಮರಗಳನ್ನು ಬೆಳೆಸಿದ್ದೀರಿ. ಈಚಲ ಮರಗಳು ಎಲ್ಲಿ ಇದೆ, ಲೆಕ್ಕವೇನಾದರೂ ಇಟ್ಟಿದ್ದೀರಾ? ದುಡ್ಡು ಮಾತ್ರ ಖರ್ಚುಮಾಡುತ್ತಿದ್ದೀರಿ. ಇದನ್ನು ಬೆಳೆಸುತ್ತಲೇ ಇಲ್ಲ. ಸುಮ್ಮನೆ ಬೋಗಸ್ ಲೆಕ್ಕಾಚಾರವನ್ನೇ ಕೊಡುತ್ತಿರುತ್ತಾರೆ. ನಿಜವಾಗಿಯೂ ಜನರಿಗೆ ಇದರಿಂದ ಯಾವ ಪ್ರಯೋಜನವೂ ಆಗುತ್ತಾ ಇಲ್ಲ ಎನ್ನತಕ್ಕಂಥಮಾತನ್ನು ಹೇಳುತ್ತೇನೆ.

ಇನ್ನೊಂದು ಮಾತನ್ನು ಹೇಳುವುದಾದರೆ ಎವೇಶನ್ ಆಫ್ ಎಕ್ಸೈಸ್ ಡ್ಯೂಟೀಸ್ ಇದೆಯೋ ಎಂದು ನೋಡುವುದಕ್ಕೆ ಯಾವುದಾದರೂ ಒಂದು ಫ್ಯಾಕ್ಟರಿಗೆ ಹೋಗಿ ನೋಡಿದರೆ, ಎಕ್ಸೈಸ್ ಕೊಟ್ಟಿರತಕ್ಕಂಥದ್ದು ಒಂದು ಬಾಟಲಿಯಾದರೆ ಒಂದು ನೂರು ಬಾಟಲುಗಳು ಹಾಗೆಯೇ ಹೊರಗೆ ಹೋಗುತ್ತದೆ. ಇದು ಶತಸಿದ್ಧ. ಇದರಲ್ಲಿ ಏನೇನೂ ಅನುಮಾನವಿಲ್ಲ ಯಾವುದೇ ಫ್ಯಾಕ್ಟರಿಯನ್ನು ತೆಗೆದುಕೊಂಡರೂ ಅದರ ಒಳಗಡೆ ಹೋಗುವುದಕ್ಕೆ ಆಗುವುದಿಲ್ಲ. ಕಳೆದವರ್ಷ ಒಬ್ಬ ಸೇಲ್‌ಟ್ಯಾಕ್ಸ್ ಕಮೀಷನರ್ ಹೋದಾಗ ಅವರನ್ನು ತಡೆ ಹಿಡಿದರು. ಸೇಲ್ಸ್‌ಟ್ಯಾಕ್ಸ್ ಕಮೀಷನರನ್ನೇ ಚೆಕ್‌ಮಾಡಲಿಕ್ಕೆ ಬಿಡಲಿಲ್ಲ. ಕೊನೆಗೆ ಅವರನ್ನೇ ಟ್ರಾನ್ಸ್‌ಫರ್ ಮಾಡಿದರು.

ಶ್ರೀ ಸಿ.ಎಂ. ಇಬ್ರಾಹಿಮ್.—ಮಾನ್ಯ ಅಧ್ಯಕ್ಷರೇ ಯಾವುದೋ ಒಂದು ಫ್ಯಾಕ್ಟರಿ ಎಂದು ಹೇಳುವುದು, ಅದರ ಹೆಸರು ಹೇಳುವುದು ಬೇಡವೆಂದು ಹೇಳುವುದು ಏತಕ್ಕೆ, ಫ್ಯಾಕ್ಟರಿ ಎಂದು ಹೇಳಿದ ಮೇಲೆ ಅದರ ಹೆಸರನ್ನು ಹೇಳಬೇಕು. ಆಕಾಶದಮೇಲೆ ಮೂರುಸಾವಿರದ ನಾನೂರ ಅರವತ್ತಾರು ನಕ್ಷತ್ರಗಳಿವೆ ಎಂದು ಹೇಳುವುದರಿಂದ ಏನು ಪ್ರಯೋಜನ, ಯಾವ ಫ್ಯಾಕ್ಟರಿ ಎಂದು ಹೆಸರು ಹೇಳಬೇಕು. ನಿಮಗೆ ಶಕ್ತಿ ಇದ್ದರೆ ಮಂತ್ರಿಗಳ ಮೇಲೆ ಆಪಾದನೆ ಮಾಡುವುದು ನಿಜವಿದ್ದರೆ ಇಂಥ ಫ್ಯಾಕ್ಟರಿ ಎಂದು ಹೆಸರು ಹೇಳಲಿ. ಏತಕ್ಕೆ ಹೇಳುವುದಿಲ್ಲವೆಂದರೆ ಏನಾದರೂ ವಿಚಾರ ಇರಬೇಕಲ್ಲ. ಒಳಗಡೆ ವಿಚಾರನೂ ಇಲ್ಲ ಏನೂ ಇಲ್ಲ. ಅಲ್ಲಿ ಅಷ್ಟಾಯಿತು, ಇಲ್ಲಿ ಇಷ್ಟಾಯಿತು ಎಂದು ಹೇಳುವುದರಲ್ಲಿ ಯಾವ ಅರ್ಥವೂ ಇಲ್ಲ.

ಶ್ರೀ ಪಿ. ರಾಮ್‌ದೇವ್.—ಎಲ್ಲ ರೆಕಾರ್ಡ್‌ನಲ್ಲಿ ಬಂದುಬಿಟ್ಟಿದೆ. ದಯವಿಟ್ಟು ನೋಡಿ. ಸ್ವಾಮಿ ಅಷ್ಟೇ ಅಲ್ಲ ನೀವು ಎಕ್ಸೈಸ್ ಡಿಪಾರ್ಟ್‌ಮೆಂಟ್ ಮಂತ್ರಿಗಳಾಗಿ ಜನತೆಗೆ ಏನೂ ಒಳ್ಳೆಯದು ಆಗಲಿಲ್ಲ.

ಶ್ರೀ ಸಿ. ಎಮ್. ಇಬ್ರಾಹಿಮ್.—ಸ್ವಾಮಿ ಫ್ಯಾಕ್ಟರಿಯವರು ಎಲ್ಲರಿಗೂ ಚೆನ್ನಾಗಿ ಕೊಡುತ್ತಿದ್ದರು.

ಶ್ರೀ ಪಿ. ರಾಮ್‌ದೇವ್.—ನಮಗೇನು ಮೂರು ಕಾಸು ಕೊಡುವುದಿಲ್ಲ ನೀವು ಹೇಳಿದಂತೆಲ್ಲ ಕೊಡುವುದಕ್ಕೆ ಯಾವುದೋ ಫ್ಯಾಕ್ಟರಿ ಇರಬೇಕು. ರೆಕಾರ್ಡ್‌ನಲ್ಲಿ ಇದೆ. ನಾವು ಅವರಿಂದ ಹಣ ತೆಗೆದುಕೊಳ್ಳುವುದಿಲ್ಲ ತಾವು ಧೈರ್ಯವಾಗಿ ಇರಿ.

ಶ್ರೀ ಸಿ. ಇಬ್ರಾಹಿಮ್.- ಅಂಥ ಫ್ಯಾಕ್ಟರಿಯ ಮೇಲೆ ಕೈಹಾಕಿದ್ದಕ್ಕೆ ಗ್ರಹಚಾರ ಬಂದರು ಫ್ಯಾಕ್ಟರಿಯ ಮೇಲೆ ಕೈಹಾಕಿದ್ದರೆ...

ಶ್ರೀ ಪಿ. ರಾಮದೇವ್.—ಇದರಲ್ಲಿ ತಾವು ಡಿಮ್ಯಾಂಡ್ ಮಾಡಿದಿರಿ...

SRI C. M. IBRAHIM.—I am the first Labour Minister to take action against the factory ನಿಮಗೆ ಧೈರ್ಯವಿದ್ದರೆ ಇಂಥ ಫ್ಯಾಕ್ಟರಿ ಎಂದು ಹೆಸರು ಹೇಳಿ.

ಶ್ರೀ ಪಿ. ರಾಮ್‌ದೇವ್.—ನಮಗೆ ತಿಳಿದಮಟ್ಟಿಗೆ ಹೇಳುವುದಾದರೆ ತಾವು ಇಷ್ಟು ಹಣವನ್ನು ಬೇಕು ಎಂದು ಡಿಮ್ಯಾಂಡ್ ಮಾಡಿದಿರಿ. ಅದಕ್ಕೆ ಅವರು ಕೊಡಲಿಲ್ಲ.

SRI C. M. IBRAHIM.—I will move a privilege motion against this. If he is having guts, if he is honest, let him prove the charges If it is proved, I will resign the membership Otherwise he will have to resign.

ಗೊಂದಲ.

ಅಧ್ಯಕ್ಷರು.—ಇನ್ನು ೫-೬ ತಿಂಗಳಿಗೆಲ್ಲ ಏತಕ್ಕೆ ರಾಜಿನಾಮೆ ಕೇಳುತ್ತೀರಿ?

ಶ್ರೀ ಪಿ. ರಾಮ್‌ದೇವ್.—ಎಕ್ಸೈಸ್ ಡಿಪಾರ್ಟ್‌ಮೆಂಟ್ ಬಂದಾಗ ಅದರ ಬಗ್ಗೆ ಮಾತನಾಡಿದರೆ ಶ್ರೀ ಇಬ್ರಾಹಿಮ್‌ರವರಿಗೆ ಕೋಪ ಬರುತ್ತದೆ ನಾನು ಏನು ಮಾಡಲಿ. ನಾನು ಅದರ ಬಗ್ಗೆ ಹೆಚ್ಚಿಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ದೇಸಾಯ್ ಕಮಿಷನ್ ರಿಪೋರ್ಟ್ ಬರುತ್ತದೆ.

ಶ್ರೀ ಸಿ. ಎಂ. ಇಬ್ರಾಹಿಮ್.—ಎಲ್ಲ ಎಕ್ಸೈಸ್‌ನವರೂ ನಿಮ್ಮ ಹತ್ತಿರವೇ ಇದ್ದಾರೆ.

ಶ್ರೀ ಪಿ. ರಾಮ್‌ದೇವ್.—ಸ್ವಾಮಿ ತಾವು ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್ ಬೆಳೆಸಬೇಕು ಎಂದು ಹೇಳುವಾಗ ಇಂಡಿಜಿನಿಸ್ ಇಂಡಸ್ಟ್ರೀಸ್ ಏತಕ್ಕೆ ಬೆಳೆಸುತ್ತಿಲ್ಲ. ಒಂದೇ ಒಂದು ಉದಾಹರಣೆಯನ್ನು ಹೇಳುತ್ತೇನೆ ಹೈವಾಕ್ಯೂಮ್ ಟೆಕ್ನಾಲಜಿ ಈವತ್ತು ನಮ್ಮ ದೇಶದಲ್ಲಿ ಇದ್ದರೂ ಸಹ ಈವತ್ತು ಫಾರಿನ್ ಇಂದ ಇಂಪೋರ್ಟ್ ಮಾಡುತ್ತಿದ್ದಾರೆ. ಸುಮಾರು ಮೂರು ನಾಲ್ಕು ವರ್ಷಗಳಿಂದ ವಾಕ್ಯೂಮ್ ಟೆಕ್ನಾಲಜಿಯಲ್ಲಿ ಎಕ್ವಿಪ್ ಮೆಂಟ್ಸ್‌ನ್ನು ಬೆಂಗಳೂರಿನಲ್ಲಿಯೇ ತಯಾರು ಮಾಡತ್ತಿರುತ್ತಾರೆ. ಏತಕ್ಕೆ ೧೦ ಲಕ್ಷ ೧೫ ಲಕ್ಷ ಹೊರಗಿನ ದೇಶಗಳಿಗೆ ಕೊಡುತ್ತಿದ್ದೀರಿ. ದಯುವಿಟ್ಟು ಒಂದೇ ಒಂದು ಉದಾಹರಣೆ ಯನ್ನು ಕೊಟ್ಟಿದ್ದೇನೆ. ಇದಕ್ಕೆ ಪ್ರೋತ್ಸಾಹ ಕೊಡಬೇಕು ಎನ್ನತಕ್ಕಂಥದ್ದು ಒಂದು. ಇನ್ನೊಂದು ಮೋಸ ನಡೆಯುತ್ತಿದೆ. ಇಂಡಿಜೀನಿಸ್ ಎಂದರೆ ಬಿಗ್ಗರ್ ಪಾರ್ಟ್ಸ್ ತೆಗೆದುಕೊಂಡು ಸ್ಮಾಲರ್ ಪಾರ್ಟ್ಸ್ ಮಾಡತಕ್ಕಂಥ ಒಂದು ದೊಡ್ಡ ಮೋಸ ನಡೆಯುತ್ತಾ ಇದೆ. ಇದನ್ನು ತಾವು ಸ್ವಲ್ಪ ನಿಲ್ಲಿಸಬೇಕು ಇದರಿಂದ ನಮ್ಮ ಜನಕ್ಕೆ ಕೆಲಸ ಹೋಗುತ್ತಾ ಇದೆ. ದಯುವಿಟ್ಟು ಅದನ್ನೂ ಕೂಡ ಸ್ವಲ್ಪ ಗಣನೆಗೆ ತೆಗೆದುಕೊಳ್ಳಬೇಕು.

ಕೊನೆಯದಾಗಿ ಕರ್ನಾಟಕ ಫೈನಾನ್‌ಷಿಯಲ್ ಕಾರ್ಪೋರೇಷನ್, ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಸ್ ಕೆಲಸದ ಬಗ್ಗೆ ಈಗಾಗಲೇ ಹೇಳಿದ್ದಾರೆ. ಈ ಸ್ಮಾಲ್‌ಸ್ಕೇಲ್ ಇಂಡಸ್ಟ್ರೀಯಲ್ಲಿ ನಿಮ್ಮದೇಯಾದ ಒಂದು ಜವಾಬ್ದಾರಿ ಇರುತ್ತದೆ ಎಂಪ್ಲಾಯ್‌ಮೆಂಟ್ ಪ್ರೊವೈಡ್ ಮಾಡತಕ್ಕಂಥ ಜವಾಬ್ದಾರಿ ಇರುತ್ತದೆ. ಅವರು ಡೈಲಿ ವೇಜಸ್‌ಮೇಲೆ ತೆಗೆದುಕೊಳ್ಳುತ್ತಿರುತ್ತಾರೆ. ದಯುವಿಟ್ಟು ಎಲ್ಲ ಇಂಡಸ್ಟ್ರೀರವರೂ ಡೈಲಿವೇಜಸ್‌ಮೇಲೆ ಕೆಲಸಗಾರರನ್ನು ತೆಗೆದುಕೊಳ್ಳುವಾಗ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ನಿಂದಲೇ ತೆಗೆದುಕೊಳ್ಳುವಂತೆ ಮಾಡಬೇಕೆಂದು ಮಾನ್ಯ ಅರ್ಥಸಚಿವರನ್ನು ಕೇಳಿಕೊಳ್ಳುತ್ತಿದ್ದೇನೆ. ಹೆಗ್ಗಡೆ ಅಂಡ್ ಗೋಲೆ ಅವರು ಸುಮಾರು ೬ ಕೋಟಿ ರೂಪಾಯಿಗಳನ್ನು ನಿಮ್ಮಿಂದ ತೆಗೆದುಕೊಂಡಿದ್ದಾರೆ. ಆ ಹಣವನ್ನು ಅವರು ವಾಪಸ್ ಮಾಡಿಲ್ಲ. ಅದು ಏನಾಯಿತು, ಹಣ ವಾಪಸ್ ಬಂದಿತೆ, ಅವರಮೇಲೆ ಒಂದು ಪ್ರಿವಿಲೈಜ್ ಮೋಷನ್ ಇತ್ತು. ಆ ಹಣವನ್ನು ರಿಕವರಿ ಮಾಡತಕ್ಕಂಥ ಪ್ರಯತ್ನ ತಾವು ಅಧಿಕಾರದಲ್ಲಿ ಬಂದಮೇಲೆ ಮಾಡಿದ್ದೀರಾ ಎನ್ನತಕ್ಕಂಥದ್ದು ಒಂದು. ಎರಡನೆಯದಾಗಿ ಹ್ಯಾಂಡ್‌ಲೂಮ್ ಡೆವಲಪ್‌ಮೆಂಟ್ ಕಾರ್ಪೋರೇಷನ್‌ನಲ್ಲಿ ಕನ್ನಡಿಗರಿಗೆ ಕೊಡತಕ್ಕಂಥ ಪ್ರಯತ್ನ ತಾವು ಮಾಡಬೇಕು. ಇಲ್ಲಿ ಸಾಮಾನ್ಯವಾಗಿ ಕನ್ನಡಿಗರಿಗೆ ಅವಕಾಶ ಸಿಗುತ್ತಿಲ್ಲ. ಇನ್ನು ಮೈಸೂರು ಎಲೆಕ್ಟ್ರಿಸಿಟಿ ಇಂಡಸ್ಟ್ರೀಸ್‌ನಲ್ಲಿ ಡಿಪಾಸಿಟ್ ಹೋಲ್ಡರ್ಸ್‌ಗೆ ದುಡ್ಡು ವಾಪಸ್ ಕೊಟ್ಟಿಲ್ಲ. ಅವರೆಲ್ಲರೂ ತಮ್ಮನ್ನು ಕೇಳಿದ್ದಾರೆ. ಅದರ ಬಗ್ಗೆ ನಾವು ಏನು ಹೇಳುತ್ತೀರಿ? ಇನ್ನು ಖಾದಿಬೋರ್ಡ್ ಮತ್ತು ವಿಲೇಜ್ ಇಂಡಸ್ಟ್ರೀಸ್ ನವರು ತಮ್ಮ ಬೇಡಿಕೆಯನ್ನು ೫-೩-೮೦ರಲ್ಲಿ ಇಟ್ಟು ಒಂದು ಮೀಟಿಂಗ್ ನಡೆಯಿತು. ಚೇಂಬರ್ಸ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರೀಸ್ ಡಿಪಾರ್ಟ್‌ಮೆಂಟ್ ಮತ್ತು ಸೆಕ್ರೆಟರಿ ಟು ದಿ ಗೌವರ್ನಮೆಂಟ್ ಮತ್ತು ಎಲ್ಲ ಡಿಪಾರ್ಟ್‌ಮೆಂಟ್ ಸೆಕ್ರೆಟರಿಯವರೂ ಇದ್ದರೂ. ಅದರಲ್ಲಿ ಅವರು ಕೇಳಿರತಕ್ಕಂಥದ್ದು ಎಂದರೆ Pensioners Benefits, revision of payscales, finalisation of cadre and recruitment rules, providing house building advance, finalisation of seniority list, preferance should be given to

qualified persons providing employment opprotunities to the children of the retired staff, immediately shifting of office to better premiser. Consideration of anomolies in payscales, application of family benefit scheme. ಮತ್ತು ಎಂಪ್ಲಾಯ್ಸ್ ಯೂನಿಯನ್ ರೆಕಾಗ್ನೇಷನ್ ಇಷ್ಟು ಬೇಡಿಕೆಗಳನ್ನು ಅವರು ಕೇಳಿದ್ದಾರೆ. ಅವರು ಇದನ್ನು ೫-೩-೮೦ನೇ ಇಸವಿಯಲ್ಲಿ ಕೇಳಿರುತ್ತಾರೆ. ಇದುವರವಿಗೂ ಇಂಪ್ಲಿಮೆಂಟ್ ಮಾಡಿಲ್ಲ. ಅವರು ಮುಂದೆ ಸತ್ಯಾಗ್ರಹ ಮಾಡುತ್ತೇವೆಂದು ಕೇಳಿದರೆ ಜೈಲಿಗೆ ತೆಗೆದುಕೊಂಡು ಹೋಗುತ್ತೀರಿ. ದಯವಿಟ್ಟು ಅವರ ಬೇಡಿಕೆಗಳನ್ನು ಇಂಪ್ಲಿಮೆಂಟ್ ಮಾಡಬೇಕೆಂದು ಕೇಳುತ್ತೇನೆ.

ಇನ್ನು ಗೋಕಲೆ ವಸ್ತ್ರ ಘಟಕವೆಂದು ಇದೆ. ಕರ್ನಾಟಕದಲ್ಲಿ ಇದು ಒಂದೇ ಒಂದು ಯಶವಂತಪುರದಲ್ಲಿ ಇದೆ. ಇದು ಬಹಳ ನಷ್ಟದಲ್ಲಿ ನಡೆಯುತ್ತಿದೆ ಎಂದು. ಕಾಗದವನ್ನೂ ಕೂಡ ಬರೆದಿದ್ದೇವೆ ನಿಮಗೆ ಒಂದು ಚಾಲೆಂಜ್ ಕೊಡುತ್ತೇನೆ. ಇದು ಒಂದೇ ಲಾಸ್ ಆಗುತ್ತದೆಂದು ಕ್ಲೋಸ್ ಮಾಡುವುದಾದರೆ ಲಾಸ್ ಆಗುತ್ತಿರುವ ಎಲ್ಲ ಇಂಡಸ್ಟ್ರೀಸ್‌ಗಳನ್ನೂ ಕ್ಲೋಸ್ ಮಾಡುತ್ತೀರಾ ಎಂದು ಕೇಳುತ್ತೇನೆ. ಇಲ್ಲಿ ಬರೆ ಹೆಣ್ಣುಮಕ್ಕಳೇ ಕೆಲಸ ಮಾಡುತ್ತಿರುತ್ತಾರೆ. ಇಲ್ಲಿ ಲಕ್ಷಾಂತರ, ಕೋಟ್ಯಾಂತರ ರೂಪಾಯಿಗಳೇನು ಲಾಸ್ ಆಗುತ್ತಿಲ್ಲ. ಇದು ಒಂದು ಸಣ್ಣ ತಾಂತ್ರಿಕ ಘಟಕವಿರುತ್ತದೆ. ಅದನ್ನು ಪ್ರಾಧಿಕಾರ ನಡೆಸಿಕೊಂಡು ಬರಬೇಕೆಂದು ಕೇಳಿಕೊಂಡು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ವಿ. ವಿ. ಪತ್ತಾರ್ (ಜಮಖಂಡಿ).—ಮಾನ್ಯ ಅಧ್ಯಕ್ಷರೇ ವಾಣಿಜ್ಯ ಮತ್ತು ಕೈಗಾರಿಕಾ ಬೇಡಿಕೆಗಳನ್ನು ಸಮರ್ಥಿಸುತ್ತಾ ಕೆಲವು ಅಂಶಗಳನ್ನು ಹೇಳಲಿಕ್ಕೆ ಬಯಸುತ್ತೇನೆ, ಬಹುಶಃ ನನ್ನ ಮಿತ್ರರು ಬಹುತೇಕ ದೊಡ್ಡ ದೊಡ್ಡ ಕೈಗಾರಿಕೆಗಳ ಸಲುವಾಗಿ ಹೇಳಿದ್ದಾರೆ. ಎಕ್ಸೈಸ್ ಡಿಪಾರ್ಟ್‌ಮೆಂಟ್ ಬಗ್ಗೆ ಹೇಳಿದ್ದಾರೆ. ಆದರೆ ಮಾನ್ಯ ಅಧ್ಯಕ್ಷರೇ ನಮ್ಮ ದೇಶದಲ್ಲಿ ಪ್ರಾಮುಖ್ಯವಾಗಿ ಗುಡಿ ಕೈಗಾರಿಕಾ ಬಹಳ ಪ್ರಮುಖವಾದ ಪಾತ್ರವನ್ನು ವಹಿಸಿದೆ. ಜನರಿಗೆ ಈವತ್ತಿನ ದಿವಸ ಉದ್ಯೋಗವನ್ನು ಕೊಡುತ್ತಿರತಕ್ಕಂಥದ್ದು ಈ ಗುಡಿ ಕೈಗಾರಿಕೆಯಾಗಿದೆ. ಇತ್ತೀಚಿನ ದಿನಗಳಲ್ಲಿ ಈ ಗುಡಿ ಕೈಗಾರಿಕೆ ನಮ್ಮ ರಾಜ್ಯದಲ್ಲಿ ನಿರ್ನಾಮವಾಗುತ್ತಿರುವ ಪ್ರಸಂಗದಲ್ಲಿ ಇದೆ ಎಂದು ಬಹಳ ವ್ಯಸನದಿಂದ ಹೇಳುತ್ತಿದ್ದೇನೆ. ಮಾನ್ಯ ಮೊಯಿಲಿಯವರು ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಮಿನಿಸ್ಟರ್ ಆದಮೇಲೆ ಬಹುತೇಕ ಅಲ್ಪಸ್ವಲ್ಪ ದೀನದುರ್ಬಲ ವರ್ಗದವರ ವಿಚಾರ ಮಾಡಿದ್ದಾರೆ. ಅವರಿಗೆ ಸಹಾಯ ಮಾಡಲು ಉತ್ತಮವಾದ ಯೋಜನೆಗಳನ್ನು ಹಾಕಿಕೊಂಡಿದ್ದಾರೆ. 'ಮಾನ್ಯ ಮೊಯಿಲಿಯವರು ಪ್ರಮುಖವಾಗಿ ಉತ್ತರ ನೀಡುವವರಾಗಿರುವುದರಿಂದ ಅಧ್ಯಕ್ಷರೇ ತಮ್ಮ ಮೂಲಕ ಅವರನ್ನು ಕೇಳುತ್ತಾ ಇದ್ದೇನೆ. ಈ ಗುಡಿ ಕೈಗಾರಿಕೆಯಲ್ಲಿ ಕೈಮಗ್ಗದ ಒಂದು ಉದ್ಯೋಗದ ಸಲುವಾಗಿ ಸರ್ಕಾರ ಸ್ವಲ್ಪ ಗಮನಹರಿಸಬೇಕು ಎನ್ನುವ ಮಾತನ್ನು ಅಧ್ಯಕ್ಷರ ಮುಖಾಂತರ ಕೇಳಿಕೊಳ್ಳುತ್ತಿದ್ದೇನೆ. ಸ್ವಾಮಿ ೧೯೭೦ನೇ ಇಸವಿಯಲ್ಲಿ ಕೈಮಗ್ಗದ ಸಲುವಾಗಿ ಸರ್ವೆ ಆಯಿತು. ಆ ಸರ್ವೆ ಪ್ರಕಾರವಾಗಿ ಒಂದು ಲಕ್ಷ ಮೂವತ್ತೇಳು ಸಾವಿರ ಕೈಮಗ್ಗಗಳು ನಮ್ಮ ರಾಜ್ಯದಲ್ಲಿ ಇದ್ದುವು. ಆದರೆ ೧೯೭೭ರಲ್ಲಿ ಮತ್ತೆ ಆದಂತ ಸರ್ವೆ ಪ್ರಕಾರ ಕೈಮಗ್ಗದ ಸಂಖ್ಯೆ ಒಂದು ಲಕ್ಷ ಎರಡು ಸಾವಿರ ಎಂಟನೂರು ಮೂವತ್ತನಾಲ್ಕಕ್ಕೆ ಇಳಿಯಿತು ಎಂದು ಸರ್ಕಾರದ ದಾಖಲೆಯಲ್ಲಿ ಇದೆ. ಇದರಿಂದಾಗಿ ಕೈಮಗ್ಗದ ಉದ್ಯಮ ಬಹುಶಃ ಫಾಯಿದೆ ಇಲ್ಲದ ಮೂಲಕ ಲಾಭದಾಯಕವಿಲ್ಲದ ಕಾರಣ ಮತ್ತು ಪವರ್‌ಲೂಮ್ ಹಾವಳಿಯಿಂದ ಈ ಉದ್ಯಮ ಸ್ಥಗಿತವಾಗುತ್ತಾ ಬಂದಿದೆ.

೬-೩೦ ಪಿ. ಎಂ.

ಇದು ನನ್ನ ಅನುಭವದ ಮಾತು. ಬಿಜಾಪುರ ಜಿಲ್ಲೆಯಲ್ಲಿ ಸುಮಾರು ೨೯ ಸಾವಿರ ಕೈಮಗ್ಗ ಇದ್ದವು. ಹಿಂದುಳಿದ ಜಿಲ್ಲೆಯಾದ ಬಿಜಾಪುರದಲ್ಲಿ ಸುಮಾರು ವರ್ಷೇ ವರ್ಷೇ ಕೈಮಗ್ಗದ ಯಂತ್ರೋಪಕರಣಗಳನ್ನು ಬೇರೆ ರಾಜ್ಯದವರಿಗೆ ಮಾರುತ್ತಿದ್ದಾರೆ. ಈ ವಿಷಯವನ್ನು ಸದನದಲ್ಲಿ ಪ್ರಶ್ನೆಗಳ ಮುಖಾಂತರ ಸರ್ಕಾರದ ಗಮನಕ್ಕೆ ತಂದಿದ್ದೇನೆ. ಮಾನ್ಯ ವಿ.ರಪ್ಪ ಮೊಯಿಲಿಯವರು ಸಹಿತ ಗಮನಕ್ಕೆ ತೆಗೆದುಕೊಳ್ಳಲಿಲ್ಲ. ಈಗಲಾದರೂ ಕಾಳಜಿ ವಹಿಸುತ್ತಾರೆಂದು ಕೆಲವು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಒಂದು ಮಾತು ಹೇಳಬೇಕೆಂದರೆ ಕೈಮಗ್ಗದ ಅಭಿವೃದ್ಧಿಯ ಸಲುವಾಗಿ ಕೈಮಗ್ಗದ

ನಿಗಮವೆಂದು ಮಾಡಿದ್ದಾರೆ. ಈ ನಿಗಮ ರಾಜ್ಯದ ಹಲವಾರು ಕಡೆಗಳಲ್ಲಿ ಡೆವಲಪ್‌ಮೆಂಟ್ ಪ್ರಾಜೆಕ್ಟ್‌ಗಳನ್ನು ಹಾಕಿಕೊಂಡು ಕೆಲಸ ಮಾಡುತ್ತಿದೆ. ಇರತಕ್ಕ ಒಂದು ಪ್ರಾಜೆಕ್ಟ್ ಈ ನಿಗಮದ ಒಂದು ಭಾಗವಾಗಿದೆ. ಅಲ್ಲಿ ನೇಕಾರರಿಗೆ ಕೂಲಿ ಕೊಡುವುದಕ್ಕೂ ಶಕ್ತಿ ಇಲ್ಲ. ಇಂತಹ ನಿಗಮಗಳನ್ನು ನೇಕಾರರಿಗೆ ಮಾಡಿ ಏನು ಪ್ರಯೋಜನ ? ಆದ್ದರಿಂದ ಸರ್ಕಾರದವರು ಕೈಮಗ್ಗದ ನಿಗಮಕ್ಕೆ ಸಾಕಷ್ಟು ಹಣ ಕೊಡಮಾಡಬೇಕು ಹೋದವರ್ಷ ಕೊಡಬೇಕಾದ ಹಣವನ್ನು ಈ ವರ್ಷ ಕೊಟ್ಟರೆ ನಿಮ್ಮ ನಿಗಮ ಸಾಫಲ್ಯವಾಗುತ್ತದೆಯೇ ? ನಿಗಮದ ಕಾರ್ಯಕ್ರಮಗಳು ಫಲಪ್ರದವಾಗುತ್ತವೆಯೋ ? ಹೋದವರ್ಷ ನಿಗಮಕ್ಕೆ ಸಲ್ಲಿಸಬೇಕಾದ ಹಣವನ್ನು ಈ ವರ್ಷ ರಿಲೀಸ್ ಮಾಡಿದ್ದೀರಿ. ಈ ವರ್ಷ ಕೊಡಬೇಕಾದ ಹಣವನ್ನು ಇನ್ನೂ ಕೊಟ್ಟಿಲ್ಲ ಇದರಿಂದ ಬನಹಟ್ಟಿ ನಿಗಮ ಶಿಥಿಲವಾಗಿದೆ, ನೇಕಾರರಿಗೆ ಬಾಕಿಯನ್ನು ಕೊಡುತ್ತಿಲ್ಲ, ಆದ್ದರಿಂದ ತಮ್ಮಲ್ಲಿ ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ ಈ ನಿಗಮದ ಸಲುವಾಗಿ ಸರ್ಕಾರ ಪೂರ್ಣ ಆಸ್ಥೆವಹಿಸಿ ಸಾಕಾಗುವಷ್ಟು ಹಣ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ನಿಗಮದ ಸಲುವಾಗಿ ಕೆಲವೊಂದು ಮಾತುಗಳನ್ನು ಹೇಳಬೇಕಾಗಿದೆ. ೩೦ ಪರ್ಸೆಂಟ್ ರಿಬೇಟ್ ಕೊಡುತ್ತೀರಿ, ರಿಬೇಟ್ ಕಾಲದಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ನಿಗಮದ ಅರಿವೆಗಳು ಮಾರುತ್ತವೆ. ೧ ತಿಂಗಳು ರಿಬೇಟ್ ಕೊಟ್ಟಾಗ ಒಂದೆರಡು ಕೋಟಿ ರೂಪಾಯಿಗಳಷ್ಟು ಹಣ ತಮ್ಮ ನಿಗಮಕ್ಕೆ ವ್ಯಾಪಾರದ ಮೂಲಕ ಬರುತ್ತದೆ. ಆದ್ದರಿಂದ ತಮ್ಮ ಮೂಲಕ ಕೇಳಿಕೊಳ್ಳುವುದೇನೆಂದರೆ ೩೦ ದಿವಸ ಇರುವುದನ್ನು ೬೦ ದಿವಸಗಳವರೆಗೆ ಮುಂದುವರಿಸಿದರೆ ನಿಗಮ ಪ್ರಸ್ತುತದಲ್ಲಿ ಆರ್ಥಿಕ ಸ್ಥಿತಿಯನ್ನು ಸುಧಾರಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಮಾನ್ಯ ಮೊಯಿಲಿಯವರು ಈ ನಿಗಮದ ಬಗ್ಗೆ ಆಸ್ಥೆವಹಿಸಿ ಉತ್ತರ ಕೊಡುವಾಗ ನಿಗಮಕ್ಕೆ ಹೆಚ್ಚು ಹಣ ಕೊಡಬೇಕೆಂದು ತಮ್ಮ ಮೂಲಕ ಪ್ರಾರ್ಥಿಸಿಕೊಳ್ಳುತ್ತೇನೆ. ಕೈಮಗ್ಗಕ್ಕೆ ಮದ್ರಾಸ್, ತಮಿಳುನಾಡು, ಆಂಧ್ರಪ್ರದೇಶ ರಾಜ್ಯಗಳಲ್ಲಿ ಸಪರೇಟ್ ಡೈರೆಕ್ಟ್‌ರೇಟ್ ಇದೆ. ಹಲವಾರು ರಾಜ್ಯಗಳಲ್ಲಿ ಕೈಮಗ್ಗಕ್ಕೆ ಒಬ್ಬ ಮಂತ್ರಿಗಳನ್ನು ನೇಮಿಸಿದ್ದು ಉಂಟು. ಈ ಬೇಡಿಕೆ ಬಹುತೇಕ ನಮ್ಮ ರಾಜ್ಯದಲ್ಲೂ ಇದೆ. ಕೈಮಗ್ಗದ ಹಲವಾರು ಸಹಕಾರ ಸಂಘಗಳು ನಾಮಶೇಷವಾಗಿವೆ, ಅವುಗಳಿಂದ ಏನೂ ಅಭಿವೃದ್ಧಿಯಾಗಿಲ್ಲ. ಆದ್ದರಿಂದ ನಮ್ಮ ಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ ಈ ಸಹಕಾರ ಸಂಘಗಳನ್ನು ಪುನರುಜ್ಜೀವನ ಮಾಡುವುದು ಒಂದು ಕರ್ತವ್ಯವಾಗಿದೆ. ಅದು ಆಗದಿದ್ದರೆ ತಾವು ಸ್ಥಾಪಿಸಿದಂತಹ ನಿಗಮದಿಂದ ಪೂರ್ಣವಾಗಿ ಉಪಕಾರ ಮಾಡುವಂತಾಗಬೇಕು ಅದರ ಮೂಲಕ ಅಭಿವೃದ್ಧಿ ಸಾಧಿಸಬೇಕೆಂದು ಕೇಳಿಕೊಳ್ಳುತ್ತೇನೆ. ಪವರ್‌ಲೂಮ್ ಸಂಖ್ಯೆ ನಮ್ಮ ರಾಜ್ಯದಲ್ಲಿ ಬಹಳ ಬೆಳೆದಿದೆ. ಈಗ ನಮ್ಮಲ್ಲಿ ೨೦ ಸಾವರ ಪವರ್‌ಲೂಮ್‌ಗಳು ಬಂದಿವೆ. ಒಂದು ಪವರ್‌ಲೂಮ್ ಬಂದರೆ ನಾಲ್ಕು ಹ್ಯಾಂಡ್‌ಲೂಮ್‌ಗಳು ಕೊಲೆಯಾದಂತೆ. ಸ್ಪೆಷಲ್ ಪ್ರೊಡಕ್ಷನ್ ಬೇಕು ಆದರೆ ಬಾಂಬೆ ಟೆಕ್ಸ್‌ಟೈಲ್ ಕಮಿಷನರ್ ಸಿಆರ್-೧೦-೧೯೭೮ ಒಂದು ನೋಟಿಫಿಕೇಶನ್ ತಂದಿದ್ದಾರೆ. ನೋಟಿಫಿಕೇಶನ್ ಕಾರ್ಯಗತ ಮಾಡಬಾರದೆಂದು ಬಹು ಪವರ್‌ಲೂಮ್‌ನವರು ನಾಲ್ಕು ವರ್ಷಗಳಿಂದ ಕೋರ್ಟ್‌ಗೆ ಹೋಗಿ ಸ್ಟೇ ಮಾಡಿಸಿ, ಸುಪ್ರೀಂ ಕೋರ್ಟ್‌ಗೆ ಸಹ ಹೋಗಿದ್ದಾರೆ. ಉಪಯುಕ್ತವಾದ ಕೈಮಗ್ಗದ ಉದ್ಯೋಗಕ್ಕೆ ಪೋಷಣೆ ಆಗುವಂತಹ ಆರ್ಡರ್‌ನ್ನು ನಮ್ಮ ಸರ್ಕಾರ ಕಾರ್ಯಗತ ಮಾಡುತ್ತಾ ಇಲ್ಲ. ಇದನ್ನು ನಾನು ಹತ್ತಾರು ಸಲ ಸರ್ಕಾರದ ಗಮನಕ್ಕೆ ತಂದಿದ್ದೇನೆ, ಕೇಳಿಕೊಂಡಿದ್ದೇನೆ. ಕೈಮಗ್ಗದ ರಕ್ಷಣೆಯಾದರೆ ಕಾರ್ಮಿಕರ ರಕ್ಷಣೆಯಾದಂತೆ. ನೇಕಾರರ ಬಡತನದ ರೇಷಿಯೋ ಬಹಳ ಕೆಳಗೆ ಇದೆ. ಅವರಿಗೆ ರಕ್ಷಣೆ ಕೊಡಬೇಕೆಂದು ಕೇಳಿದ್ದೇನೆ, ಹಲವಾರು ಸಲ ವಾದ ಮಾಡಿದ್ದೇನೆ. ಸರ್ಕಾರ ಇದನ್ನು ಕಾರ್ಯಗತ ಮಾಡುತ್ತಿಲ್ಲ. ಪ್ರಾಮುಖ್ಯವಾದ ತೊಂದರೆಯಾಗಿದೆ ಸರ್ಕಾರ ಮನಸ್ಸು ಮಾಡುತ್ತಿಲ್ಲ. ಬಡವರಿಗೆ ಕೆಲಸ ಮಾಡುವ ಮನಸ್ಸು ಆ ಒಂದು ಪ್ರವೃತ್ತಿ ಇಲ್ಲವಾಗಿದೆ. ಸರ್ಕಾರಕ್ಕೆ ರೊಕ್ಕದ ಕಡೆಗೆ ಲಕ್ಷವಿದೆ. ಅಧಿಕಾರಿಗಳು ಪವರ್‌ಲೂಮ್ ಮಾಲೀಕರ ಹತ್ತಿರ ಹಣ ತೆಗೆದುಕೊಂಡು ಆರ್ಡರ್ ಎಕ್ಸ್‌ಟೆಂಡ್ ಆಗದ ಹಾಗೆ ಮಾಡಿದ್ದಾರೆ. ನನ್ನ ಕ್ಷೇತ್ರದಲ್ಲಿ ಸುಮಾರು ೨೫ ಸಾವಿರ ರೂಪಾಯಿ ಕಲೆಕ್ಷನ್ ಆಗುತ್ತಿದೆ. ೪ ಸಾವಿರ ಪವರ್‌ಲೂಮ್‌ನವರು ೨೦ ಸಾವಿರ ರೂಪಾಯಿಗಳನ್ನು ಕಲೆಕ್ಷನ್ ಮಾಡಿ ಆ ಆರ್ಡರ್ ಕಾರ್ಯಗತವಾಗದಂತೆ ಮಾಡುತ್ತಿದ್ದಾರೆ. ಮಾನ್ಯ ಅರ್ಥ ಮಂತ್ರಿಗಳಾದ ವೀರಪ್ಪ ಮೊಯಿಲಿಯವರಲ್ಲಿ ಕೇಳಿಕೊಳ್ಳುತ್ತೇನೆ ನಿಮಗೆ ನಿಜವಾಗಿಯೂ ಬಡ ಜನರ ಬಗ್ಗೆ ಕಾಳಜಿ ಇದ್ದರೆ. ನಿಮಗೆ ನೇಕಾರರ ಸಲುವಾಗಿ ಕಾಳಜಿ ಇದ್ದರೆ ಬಾಂಬೆ ಟೆಕ್ಸ್‌ಟೈಲ್ ಸಿಆರ್-೧೦-೧೯೭೮ ಆ ಆರ್ಡರನ್ನು ಕಾರ್ಯಗತ ಮಾಡಿರಿ. ನಾನು ಹೆಚ್ಚಾಗಿ ಹೇಳುವುದಿಲ್ಲ. ಹಲವಾರು ಸಂದರ್ಭಗಳಲ್ಲಿ ಉಳಿದ ಹಣವನ್ನು ಒಕ್ಕಲುತನಕ್ಕೆ ಸಾಕಷ್ಟು ಖರ್ಚು ಮಾಡಿದ್ದಾರೆ. ಉದ್ಯೋಗ ಕೊಡುವ ಬಗ್ಗೆ ನಮ್ಮ ಜನರಿಗೆ ಖಾಯಂ ಆಗಿ ಏನು ಉದ್ಯೋಗವನ್ನು ಕೊಟ್ಟಿದ್ದೀರಿ ? ನೀವು ನಮ್ಮ ಕಡೆಗೆ ಕೊಟ್ಟಿರತಕ್ಕದ್ದು ೧೮೦ ಲಕ್ಷ ರೂಪಾಯಿಗಳು ಮಾತ್ರ.

ನಮ್ಮ ರಾಜ್ಯದಲ್ಲಿ ತಾವು ಸರ್ವೆ ಮಾಡಿರುವ ಪ್ರಕಾರ ಸುಮಾರು ೩೦ ಲಕ್ಷ ಜನ ಕುಶಲಕರ್ಮಿಗಳು ಮತ್ತು ಕೈಮಗ್ಗದ ನೇಕಾರರು ಇದ್ದಾರೆ. ಬಡಜನರಿಗೋಸ್ಕರ ನಾವು ನಮ್ಮ ಬಡ್ಜೆಟ್‌ನಲ್ಲಿ ಹಣವನ್ನು ಸರಿಯಾದ ರೀತಿಯಲ್ಲಿ ಖರ್ಚು ಮಾಡುತ್ತಾ ಇಲ್ಲ. The survey was taken up long back and it was Rs. 230 crores. Not more than 3 crores, Sri Moily is a man who has got a heart for the poor and he is a man who is interested in protecting the artisans, handloom weavers ಆದ್ದರಿಂದ ತಮ್ಮ ಮುಖಾಂತರ ಮಾನ್ಯ ವೀರಪ್ಪ ಮೊಯಿಲಿಯವರನ್ನು ಕೇಳಿಕೊಳ್ಳುತ್ತೇನೆ, ಈ ಬಡ ಜನರ ಬಗ್ಗೆ ನಿಗಾ ವಹಿಸಿ, ಇವರಿಗೋಸ್ಕರ ಹೆಚ್ಚಿನ ಹಣ ಕೊಟ್ಟು ಕೈಮಗ್ಗ ನೇಕಾರರು ಮತ್ತು ಕುಶಲಕರ್ಮಿಗಳಿಗೆ ಹೆಚ್ಚಿನ ಹಣವನ್ನು ಕೊಡುವಂತಹ ಕೆಲಸ ಮಾಡಿ. ಈ ಒಂದು ಅಭಿವೃದ್ಧಿ ನಿಗಮ ಸುಮಾರು ೫ ವರ್ಷಗಳಲ್ಲಿ ಎಲ್ಲ ನೇಕಾರರನ್ನು ತನ್ನ ಒಂದು ಕಕ್ಷೆಯಲ್ಲಿ ತರಬೇಕಾಗಿತ್ತು. ಆದರೆ ಇವರಿಗೆ ಬ್ಯಾಂಕ್‌ನವರು ಸರಿಯಾಗಿ ಸಹಾಯ ಮಾಡುತ್ತಿಲ್ಲ. ಈ ಕಾರಣದಿಂದ ಈ ಅಭಿವೃದ್ಧಿ ನಿಗಮ ಅನಭಿವೃದ್ಧಿ ನಿಗಮವಾಗಿದೆ. ಮುಖ್ಯವಾಗಿ ಈ ನೇಕಾರರು ಮತ್ತು ಕರಕುಶಲಕರ್ಮಿಗಳು ಆರ್ಥಿಕವಾಗಿ, ಶೈಕ್ಷಣಿಕವಾಗಿ ಮತ್ತು ಸಾಮಾಜಿಕವಾಗಿ ಹಿಂದುಳಿದ ಜನಾಂಗದವರಾದ ಕಾರಣ ಮತ್ತು ಅರೆ-ಹೊಟ್ಟೆ ತಿಂದು ಬದುಕುತ್ತಿರುವ ಕಾರಣದಿಂದ ಮತ್ತು ಬಡತನದ ರೇಖೆಗಿಂತ ಕೆಳಗಿರುವುದರಿಂದ ಇವರ ಬಗ್ಗೆ ಸರ್ಕಾರದವರು ಹೆಚ್ಚಿನ ಲಕ್ಷ್ಯ ಕೊಡಬೇಕೆಂದು ಮತ್ತೊಮ್ಮೆ ಕಳಕಳಿಯಿಂದ ಕೇಳಿಕೊಂಡು ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಈ ದಿನ ಕೆಲವು ಕಾರಣಗಳಿಂದ ಮಾತನಾಡುವುದಕ್ಕಾಗುವುದಿಲ್ಲ ಆದಕಾರಣ ನಾಳೆ ನನಗೆ ಕೇವಲ ೧೫ ನಿಮಿಷಗಳ ಅವಕಾಶ ಕೊಟ್ಟರೆ ಎಕ್ಸೈಜ್ ಮೇಲೆ ಮಾತನಾಡುತ್ತೇನೆ.

ಶ್ರೀ ಕೆ. ಭಾಸ್ಕರಶೆಟ್ಟಿ.—ಈ ಬೇಡಿಕೆಗಳ ಮೇಲಿನ ಚರ್ಚೆ ಇಂದೇ ಮುಗಿಯಬೇಕಾಗಿದೆ.

ಶ್ರೀ ಎಂ.ವಿ. ರುದ್ರಪ್ಪ (ಹೊಸದುರ್ಗ).—ಮಾನ್ಯ ಅಧ್ಯಕ್ಷರೇ, ಈ ಸದನದ ಮುಂದೆ ಮಾನ್ಯ ಮಂತ್ರಿಗಳು ಮಂಡಿಸಿರತಕ್ಕಂಥ ಕೈಗಾರಿಕೆ ಮತ್ತು ರೇಷ್ಮೆ ಇಲಾಖೆಯ ಬೇಡಿಕೆಗಳನ್ನು ಹಾಗೂ ಇತರೇ ಬೇಡಿಕೆಗಳನ್ನು ನಾನು ಹೃತ್ಪೂರ್ವಕವಾಗಿ ಸ್ವಾಗತ ಮಾಡುತ್ತಾ ಸರ್ಕಾರದ ಮುಂದೆ ಕೆಲವು ಸಲಹೆಗಳನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ನನ್ನ ಕ್ಷೇತ್ರವಾದಂಥ ಹೊಸದುರ್ಗ ತಾಲ್ಲೂಕ್ ಹಿಂದುಳಿದ ಪ್ರದೇಶವಾಗಿರುವುದರಿಂದ ಮತ್ತು ಅಲ್ಲಿ ಸಾಕಷ್ಟು ಮಳೆ ಬಾರದ ಕಾರಣದಿಂದ ಮತ್ತು ಅಲ್ಲಿ ಹೇರಳವಾಗಿ ಕಚ್ಚಾ ಪದಾರ್ಥಗಳು ಸಿಗುತ್ತಿರುವುದರಿಂದ ಅಲ್ಲಿ ಸರ್ಕಾರದ ವತಿಯಿಂದ ಸಿಮೆಂಟ್ ಕಾರ್ಖಾನೆಯನ್ನು ತೆರೆಯಬೇಕೆಂದು ನಾನು ಈ ಹಿಂದೆ ಶಾಸಕನಾಗಿದ್ದಾಗಲೂ ಸಹ ಒತ್ತಾಯ ಮಾಡಿದ್ದೆ. ಅದರಂತೆ ಆಗಿನ ಪಂಚವಾರ್ಷಿಕ ಯೋಜನೆಯಲ್ಲಿ ಐದು ಮಿನಿ ಸಿಮೆಂಟ್ ಫ್ಯಾಕ್ಟರಿ ಪ್ರಾರಂಭ ಮಾಡಬೇಕೆಂದು ಸೇರಿಸಿದರು. ಅಲ್ಲಿ ೫ ಮಿನಿ ಸಿಮೆಂಟ್ ಫ್ಯಾಕ್ಟರಿಗಳನ್ನು ಪ್ರಾರಂಭ ಮಾಡಲು ಅವಕಾಶವಿದೆ. ಈಗಾಗಲೇ ಅಲ್ಲಿ ವೇದ ಸಿಮೆಂಟ್ ಕಾರ್ಖಾನೆ ಬಂದಿದೆ. ಮತ್ತು ಕೆಲಸ ಕೂಡ ಪ್ರಾರಂಭವಾಗಿದೆ. ಇದರ ಜೊತೆಗೆ ಇನ್ನೂ ೪ ಸಿಮೆಂಟ್ ಕಾರ್ಖಾನೆಗಳನ್ನು ಪ್ರಾರಂಭ ಮಾಡಲು ಅವಕಾಶವಿದ್ದರೂ ಸಹ ಎರಡಕ್ಕೆ ಮಾತ್ರ ಸರ್ಕಾರದವರು ಲೆಟರ್-ಆಫ್-ಇಂಡೆಂಟ್ ಕೊಟ್ಟಿದ್ದಾರೆ. ಆದರೆ ಮುಂದೆ ಬಂದ ಫ್ಯಾಕ್ಟರಿಯವರಿಗೆ ಮೈನಿಂಗ್ ಲೀಜ್ ಮತ್ತು ಅಕ್ವಿಜಿಷನ್ ಮಾಡಿ ಜಮೀನನ್ನು ಕೊಟ್ಟಿಲ್ಲ. ಈ ಕಾರಣದಿಂದ ಈ ಎರಡು ಸಿಮೆಂಟ್ ಕಾರ್ಖಾನೆಗಳ ಕೆಲಸ ನಿಂತುಹೋಗಿದೆ. ಆದಷ್ಟು ಬೇಗ ಸರ್ಕಾರದವರು ಅವರಿಗೆ ಬೇಕಾದಂಥ ಸಹಾಯವನ್ನು ಒದಗಿಸಿ ಅಲ್ಲಿ ಇನ್ನೂ ಎರಡು ಸಿಮೆಂಟ್ ಕಾರ್ಖಾನೆಗಳು ಪ್ರಾರಂಭವಾಗುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಒತ್ತಾಯ ಮಾಡುತ್ತೇನೆ. ಈಗ ಅಲ್ಲಿರುವಂತಹ ಒಂದು ಮಿನಿ ಸಿಮೆಂಟ್ ಕಾರ್ಖಾನೆಯಲ್ಲಿ ೫೦೦ ಜನರು ಕೆಲಸ ಮಾಡುತ್ತಿದ್ದಾರೆ. ಅದು ಹಿಂದುಳಿದ ಪ್ರದೇಶವಾದ ಕಾರಣ ಅಲ್ಲಿ ಇನ್ನುಳಿದ ನಾಲ್ಕು ಸಿಮೆಂಟ್ ಕಾರ್ಖಾನೆಗಳನ್ನು ಪ್ರಾರಂಭ ಮಾಡಿದರೆ ಸುಮಾರು ೨ ಸಾವಿರ ಜನರಿಗೆ ಕೆಲಸ ಸಿಗುತ್ತದೆ. ಅಲ್ಲಿರುವಂತಹ ಬಡ ಜನರಿಗೆ ಕೂಲಿ ಕೆಲಸವಾದರೂ ಸಿಗುತ್ತದೆ. ಇದರ ಜೊತೆಗೆ ಸಿಮೆಂಟ್‌ನ ಉತ್ಪಾದನೆ ಕೂಡ ಹೆಚ್ಚಿ ಈಗ ಅಲ್ಲಿರುವಂತಹ ಸಿಮೆಂಟ್‌ನ ಒಂದು ಅಭಾವವನ್ನು ಹೋಗಲಾಡಿಸಲು ಅವಕಾಶವಾಗುತ್ತದೆ. ಆದ್ದರಿಂದ ಈ ವಿಷಯವನ್ನು ಸರ್ಕಾರದ ಗಮನಕ್ಕೆ ಒತ್ತಾಯಪೂರ್ವಕವಾಗಿ ತರಲು ಇಷ್ಟಪಡುತ್ತೇನೆ.

ಇನ್ನು ನಮ್ಮ ತಾಲ್ಲೂಕ್‌ನಲ್ಲಿ ನೇಕಾರರು ಹೆಚ್ಚು ಇದ್ದಾರೆ. ನಮ್ಮ ಹೊಸದುರ್ಗ ಟೌನ್‌ನಲ್ಲಿ ನೇಕಾರರಿಗೆ ಸಂಬಂಧಪಟ್ಟಂತೆ ಒಂದು ಸೊಸೈಟಿ ಇತ್ತು. ಈ ಸೊಸೈಟಿ ಮೂಲಕ ಬಡ ನೇಕಾರರಿಗೆ ನೂಲನ್ನು ಸರಬರಾಜು ಮಾಡಲಾಗುತ್ತಿತ್ತು. ಆದರೆ ಹಣಕಾಸಿನ ಒಂದು ಮುಗ್ಗಟ್ಟಿನಿಂದ ಈ ಸೊಸೈಟಿ ಕೆಲಸ ನಿಂತು ಹೋಗಿದೆ. ಆದ್ದರಿಂದ ಸರ್ಕಾರದವರು ಈ ಸೊಸೈಟಿಗೆ ಹಣ ಸಹಾಯ ಒದಗಿಸಿ ಅಲ್ಲಿನ ನೇಕಾರರಿಗೆ ಸಹಾಯವಾಗುವಂತೆ ಮಾಡಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಕಳಕಳಿಯ ಮನವಿಯನ್ನು ಸಲ್ಲಿಸುತ್ತೇನೆ.

ಇನ್ನು ನನ್ನ ಕ್ಷೇತ್ರದಲ್ಲಿ ತೆಂಗಿನ ಬೆಳೆ ಹೇರಳವಾಗಿರುವುದರಿಂದ ತೆಂಗಿನ ಮೊಟ್ಟೆಗಳನ್ನು ಉಪಯೋಗಿಸಿಕೊಳ್ಳಲು ತಾಲ್ಲೂಕ್ ಕೇಂದ್ರದಲ್ಲಿ ಒಂದು ಕಾಯರ್ ಇಂಡಸ್ಟ್ರಿಯನ್ನು ತೆರೆಯುವುದರ ಮೂಲಕ ತೆಂಗಿನ ನಾರಿನಿಂದ ಹಗ್ಗ ಮತ್ತು ಇತರೇ ವಸ್ತುಗಳನ್ನು ತಯಾರು ಮಾಡುವ ವ್ಯವಸ್ಥೆ ಮಾಡಿದರೆ ಜನರಿಗೂ ಸಹ ಕೆಲಸ ಸಿಗುತ್ತದೆ. ಆದ್ದರಿಂದ ಸರ್ಕಾರ ಈ ಕಾಯರ್ ಇಂಡಸ್ಟ್ರಿ ತೆರೆಯಲು ಮುಂದೆ ಬರಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಒತ್ತಾಯ ಮಾಡುತ್ತೇನೆ.

ಇನ್ನು ನಮ್ಮ ಭಾಗದಲ್ಲಿ ಒಂದು ಕೈಗಾರಿಕಾ ಷೆಡ್ ತೆರೆಯಬೇಕೆಂದು ಸರ್ಕಾರ ಈ ಹಿಂದೆಯೇ ಯೋಚನೆ ಮಾಡಿತ್ತು. ಆದ್ದರಿಂದ ಕೂಡಲೇ ಅಲ್ಲಿ ಜಾಗವನ್ನು ಸ್ವಾಧೀನ ಪಡಿಸಿಕೊಂಡು ಅಲ್ಲಿ ೫೦ ಷೆಡ್‌ಗಳನ್ನಾದರೂ ಕಟ್ಟಿಸಿ ಅಲ್ಲಿರುವಂತಹ ಸಣ್ಣಪುಟ್ಟ ಕೈಗಾರಿಕೆಯನ್ನು ನಡೆಸುವವರಿಗೆ ಹಂಚಬೇಕೆಂದು ಹೇಳುತ್ತೇನೆ. ಇದರಿಂದ ಅಲ್ಲಿರುವಂತಹ ಫಿಟ್ಟರ್, ಕಾರ್ಪೆಂಟರ್ ಮುಂತಾದವರಿಗೆ ಅನುಕೂಲವಾಗುತ್ತದೆ. ಅಲ್ಲಿರುವಂತಹ ಬಡ ಕುಶಲಕರ್ಮಿಗಳಿಗೆ ಈ ಮೂಲಕ ಸಹಾಯ ಮಾಡಬೇಕೆಂದು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ.

ಇನ್ನು ನಮ್ಮ ಭಾಗದಲ್ಲಿ ರೇಷ್ಮೆ ಬೆಳೆಗೂ ಸಹ ಅವಕಾಶ ಮಾಡಿಕೊಟ್ಟಿದ್ದಾರೆ. ಈ ಕಾರಣದಿಂದ ನಮ್ಮ ಹೊಸದುರ್ಗ ತಾಲ್ಲೂಕ್‌ನಲ್ಲಿ ರೇಷ್ಮೆ ಬೆಳೆಗೆ ಹೆಚ್ಚಿನ ಅನುಕೂಲವಾಗುವಂತೆ ಸಾಲಸೌಲಭ್ಯ ಹಾಗೂ ಧನಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಬೇರೆ ಕಡೆಗಳಿಂದ ನಮ್ಮ ರಾಜ್ಯಕ್ಕೆ ರೇಷ್ಮೆಯನ್ನು ತರಿಸುವುದಕ್ಕೆ ಬದಲು ನಮ್ಮ ರಾಜ್ಯದಲ್ಲಿಯೇ ಪ್ರತಿ ಜಿಲ್ಲೆಯಲ್ಲಿಯೂ ರೇಷ್ಮೆ ಬೆಳೆಯುವುದಕ್ಕೆ ಮತ್ತು ಮಾರಾಟ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಒತ್ತಾಯ ಮಾಡುತ್ತೇನೆ.

ಇನ್ನು ಚಿತ್ರದುರ್ಗದಲ್ಲಿರುವ ಕಾಪರ್ ಮೈನಿಂಗ್ ಕಂಪನಿಯಲ್ಲಿ ಸರ್ಕಾರದ ಬಂಡವಾಳ ಸಹ ಇದೆ. ಈ ಕಂಪನಿಯಲ್ಲಿ ಈಗ ೯೦೦ ಜನರು ಕೆಲಸ ಮಾಡುತ್ತಿದ್ದಾರೆ. ಇಲ್ಲಿ ಕಾರಣಾಂತರದಿಂದ ಸ್ಟ್ರೈಕ್‌ಗಳು ಆಗುತ್ತಿದ್ದ ಕಾರಣದಿಂದ ಮತ್ತು ಬಂಡವಾಳ ಕಡಿಮೆ ಇದ್ದ ಕಾರಣದಿಂದ ಲುಕ್ಸಾನಾಗಿತ್ತು. ಆದರೆ ಇತ್ತೀಚೆಗೆ ಲುಕ್ಸಾನನ್ನು ತೇಲಿಸಿ ಲಾಭ ಬರುವಂತೆ ಮಾಡಿದ್ದಾರೆ. ಈ ಕಂಪನಿಯ ವ್ಯವಹಾರದ ಬಗ್ಗೆ ತನಿಖೆ ಮಾಡಿ ವರದಿ ಕೊಡುವಂತೆ ಶ್ರೀ ಕೆ.ಎಲ್.ಎಸ್. ರಾವ್ ಅವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಗಿತ್ತು. ಅವರು ಈಗಾಗಲೇ ಒಂದು ವರದಿ ಕೊಟ್ಟಿದ್ದಾರೆ. ಅದರಲ್ಲಿ ಈ ಕಂಪನಿ ಪ್ರಗತಿ ಸಾಧಿಸಬೇಕಾದರೆ ೩ ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ತಿಳಿಸಿದ್ದಾರೆ. ಅಲ್ಲಿ ಹೊಸ ಸ್ಥಳಗಳನ್ನು ಪಡೆದುಕೊಂಡು ಹೆಚ್ಚು ಹೆಚ್ಚು ತಾಮ್ರದ ಅದಿರನ್ನು ತೆಗೆದು ಉಪಯೋಗ ಮಾಡಿದರೆ ಈ ಕಂಪನಿ ಲಾಭದಲ್ಲಿ ನಡೆಯಲು ಸಂದೇಹವಿಲ್ಲವೆಂದು ಅವರು ಹೇಳಿದ್ದಾರೆ. ಈ ರೀತಿ ಮಾಡುವುದರಿಂದ ಅಲ್ಲಿ ಸುಮಾರು ೫ ಸಾವಿರ ಜನರಿಗೆ ಕೆಲಸ ಸಿಗುತ್ತದೆ. ಆದ್ದರಿಂದ ಸರ್ಕಾರದವರು ಕೂಡಲೇ ಅದಕ್ಕೆ ೩ ಕೋಟಿ ರೂಪಾಯಿಗಳ ಬಂಡವಾಳವನ್ನು ಒದಗಿಸಿ ಆ ಕಂಪನಿ ಮುಂದೆ ಬರಲು ಸಹಾಯ ಮಾಡಬೇಕು ಮತ್ತು ಜನರಿಗೂ ಅನುಕೂಲ ಮಾಡಿಕೊಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಕುರಿ ಸಾಕುವವರಿಗೆ ಅನುಕೂಲ ಮಾಡಿಕೊಡಲು ಉಣ್ಣೆ ಮಂಡಲಿ ಇದೆ. ಕುರಿ ಸಾಕುವುದು ಸಹ ಒಂದು ಕೈಗಾರಿಕೆಯಾಗಿರುವುದರಿಂದ ಈಗ ಸರ್ಕಾರದವರು ಸುಮಾರು ನೂರು ಷಿಪ್ ಅಂಡ್ ವೂಲ್ ಡೆವಲಪ್‌ಮೆಂಟ್ ಸೆಂಟರ್‌ಗಳನ್ನು ತೆರೆದಿದ್ದಾರೆ. ಒಂದು ಸೆಂಟರ್‌ನಲ್ಲಿ ಮೆರಿನೋ ಜಾತಿಯ ೫೦ ಕುರಿಗಳು ಇರಬೇಕೆಂದು ನಿಯಮ ಮಾಡಿದ್ದಾರೆ. ೫೦ ಆಸ್ಟ್ರೇಲಿಯನ್ ತಳಿಗಳನ್ನು ಒಂದು ಸೆಂಟರ್‌ನಲ್ಲಿಡಬೇಕೆಂದು ನಿಯಮವಿದ್ದರೂ ಸಹ ಬಡ್ಜೆಟ್‌ನಲ್ಲಿ ಮಾತ್ರ ಇದಕ್ಕೆ ಸಂಬಂಧಪಟ್ಟಂತೆ ಕೇವಲ ಹತ್ತು ಲಕ್ಷ ರೂಪಾಯಿಗಳನ್ನಿಟ್ಟಿದ್ದಾರೆ. ಒಂದು ಸೆಂಟರ್‌ಗೆ ೨೫ ರಿಂದ ೫೦ ಸಾವಿರ ರೂಪಾಯಿಗಳಾದರೂ ಬೇಕಾಗುತ್ತದೆ. ಆದ್ದರಿಂದ ಈ ಹತ್ತು ಲಕ್ಷ ರೂ.ಗಳನ್ನು ೨-೩ ಕೋಟಿಗಾದರೂ ಹೆಚ್ಚು ಮಾಡಬೇಕೆಂದು ಹೇಳುತ್ತೇನೆ. ಈಗ ಕೆಲವು ಸೆಂಟರ್‌ಗಳಿಗೆ ವೆಟರ್ನರಿ ಲೈವ್-ಸ್ಟಾಕ್-ಮನ್‌ಗಳನ್ನು

ವರ್ಗಾವಣೆ ಮಾಡಿದ್ದಾರೆ. ಆದರೆ ಸರ್ಕಾರದವರು ಕೊಡುತ್ತಿರುವ ಹಣ ಅಲ್ಲಿ ಕೆಲಸ ಮಾಡುವವರಿಗೆ ಸಂಬಳಕ್ಕೇ ಸಾಲುವುದಿಲ್ಲ. ಸಂಬಳದ ಹಣವನ್ನೂ ಸಹ ಪ್ರತಿ ತಿಂಗಳೂ ಸಹ ರಿಲೀಜ್ ಮಾಡುತ್ತಾರೆ. ಈ ರೀತಿಯಾದರೆ ಅಭಿವೃದ್ಧಿ ಕೆಲಸ ಆಗುವುದಾದರೂ ಹೇಗೆ? ಇಂತಹ ಸ್ಥಿತಿಯಲ್ಲಿ ಈ ಬೋರ್ಡ್ ಆದರೂ ಏತಕ್ಕೆ ಇರಬೇಕು ಆದ್ದರಿಂದ ಅಲ್ಲಿನ ಕೆಲಸಗಳು ಸುಸೂತ್ರವಾಗಿ ನಡೆಯಲು ೩ ಕೋಟಿ ರೂಪಾಯಿಗಳನ್ನಾದರೂ ಕೊಡಬೇಕು. ಇದರಿಂದ ಹೆಚ್ಚಿನ ಕುರಿಗಳನ್ನು ಸಾಕಲು ಮತ್ತು ಹೆಚ್ಚಿನ ಉಣ್ಣೆ ಉತ್ಪಾದನೆ ಮಾಡಲು ಅವಕಾಶವಾಗುತ್ತದೆ. ಈಗ ಕಾಶ್ಮೀರ, ಲೂದಿಯಾನ, ಪಾನಿಪತ್‌ನಲ್ಲಿ ನೂಲುವುದು ಮತ್ತು ನೇಯುವುದು ಮೊದಲಾದ ಕೆಲಸಗಳನ್ನು ಹೇಳಿಕೊಡುವಂತೆ ಇಲ್ಲಿಯೂ ಸಹ ಇಂತಹ ಕಸುಬುಗಳನ್ನು ಇಲ್ಲಿರುವ ಜನರಿಗೆ ಹೇಳಿಕೊಟ್ಟರೆ ಅವರು ತಮ್ಮ ಜೀವನವನ್ನು ಚೆನ್ನಾಗಿ ನಡೆಸಲು ಅವಕಾಶವಾಗುತ್ತದೆ. ಆದ್ದರಿಂದ ಕೂಡಲೇ ಇದಕ್ಕೆ ೩ ಕೋಟಿ ರೂಪಾಯಿಗಳ ಸಹಾಯ ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ವಕ್ಫ್ ಬೋರ್ಡಿಗೆ ಸಂಬಂಧಪಟ್ಟಂತೆ ಹೇಳಬೇಕೆಂದರೆ, ನಮ್ಮ ಹೊಸದುರ್ಗಾದಲ್ಲಿಯೂ ಅನೇಕ ದರ್ಗಾಗಳಿವೆ. ಮತ್ತು ಮಸೀದಿಗಳಿವೆ ಜಾನ್‌ಕಲ್, ಅಹಮದ್‌ನಗರ್ ಕಲ್ಕೆರೆ ಹಾಗೂ ಇನ್ನಿತರ ಕಡೆಗಳಲ್ಲಿರುವ ಮಸೀದಿಗಳಿಗೆ ಈ ಬೋರ್ಡಿನಿಂದ ಸಹಾಯ ಸಿಕ್ಕಿಲ್ಲ. ಈಗಲಾದರೂ ಈ ಬೋರ್ಡಿನ ಮೂಲಕ ಆದಷ್ಟು ಹೆಚ್ಚಿನ ಹಣ ಸಹಾಯ ಮಾಡುವುದರ ಮೂಲಕ ಈ ಮಸೀದಿಗಳನ್ನು ಇಂಪ್ರೂವ್ ಮಾಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಎಕ್ಸೈಜ್ ಇಲಾಖೆಯವರು ಈಚಲು ಮರಗಳನ್ನು ಬೆಳೆಸಬೇಕೆಂದು ಲಕ್ಷಾಂತರ ಎಕರೆ ಜಮೀನನ್ನು ಇಟ್ಟುಕೊಂಡಿದ್ದರೂ ಸಹ ಆ ಜಮೀನಿನಲ್ಲಿ ಒಂದು ಮರವನ್ನೂ ಸಹ ಬೆಳೆಸಿಲ್ಲ. ಆದಕಾರಣ ಮರಗಳಿಲ್ಲದ ಜಮೀನನ್ನು ಈ ಇಲಾಖೆಯಿಂದ ರೆವಿನ್ಯೂ ಇಲಾಖೆಗೆ ವರ್ಗಾವಣೆ ಮಾಡುವುದರ ಮೂಲಕ ಜಮೀನು ಇಲ್ಲದ ಬಡಜನರಿಗೆ ಹಂಚಲು ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಇಲ್ಲಿಯವರೆಗೆ ನಾನು ಕೊಟ್ಟ ಸಲಹೆಗಳನ್ನು ಸರ್ಕಾರ ಗಮನಕ್ಕೆ ತೆಗೆದುಕೊಂಡು ಎಲ್ಲ ರೀತಿಯಿಂದಲೂ ಸಹಾಯ ಮಾಡಬೇಕೆಂದು ಮತ್ತೊಮ್ಮೆ ಪ್ರಾರ್ಥನೆ ಮಾಡಿಕೊಂಡು ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಕುಮಾರಿ ಎಸ್ ಪ್ರಮೀಳ (ಚಾಮರಾಜಪೇಟೆ).—ಮಾನ್ಯ ಅಧ್ಯಕ್ಷರೇ, ನಾನು ಸಿರಿಕಲ್ಚರ್ ಡಿಪಾರ್ಟ್‌ಮೆಂಟ್ ಬಗ್ಗೆ ಕೆಲವು ಮಾತುಗಳನ್ನಾಡಲು ಬಯಸುತ್ತೇನೆ. ನಾನು ಈ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳನ್ನು ಕೇಳುವುದೇನೆಂದರೆ ಈಗ ಡಚ್–ಎ–ಸ್ಕೀಂ ಒಂದು ನಮ್ಮ ರಾಜ್ಯಕ್ಕೆ ಬಂದಿದೆ ಎಂದು ಕೇಳಿದ್ದೇನೆ ಆ ಸ್ಕೀಂಗೆ ೮೦ ಕೋಟಿ ರೂಪಾಯಿಯನ್ನು ಒದಗಿಸಿಕೊಟ್ಟಿದ್ದಾರೆ ಎಂದು ತಿಳಿದು ಬಂದಿದೆ. ಇದರಲ್ಲಿ ಲೆಯಿಂಗ್ ಕಮ್ ರೇರಿಂಗ್ ಸ್ಕೀಂ ಕೆಳಗೆ ರೆಸಿಡೆಷಿಯಲ್ ಹೌಸಸ್‌ನಲ್ಲಿ ರೇಷ್ಮೆ ಗೂಡನ್ನು ಬೆಳೆಸುವುದಕ್ಕೆ ತಾವು ಅವಕಾಶ ಮಾಡಿಕೊಟ್ಟರೆ ಗ್ರಾಮಾಂತರ ಪ್ರದೇಶದಲ್ಲಿರುವ ಮಹಿಳೆಯರಿಗೆ ತುಂಬಾ ಅನುಕೂಲವಾಗುತ್ತದೆ. ಈ ಸ್ಕೀಂನಲ್ಲಿ ಮಹಿಳೆಯರಿಗೇನೇ ಆದ್ಯತೆಯನ್ನು ಕೊಡಬೇಕು ಎಂದು ಹೇಳುತ್ತೇನೆ ಏತಕ್ಕೆಂದರೆ ಸಾಮಾನ್ಯವಾಗಿ ಮಹಿಳೆಯರು, ಮೊಟ್ಟೆ ಇಡುವುದರಿಂದ ಹಿಡಿದು ರೇಷ್ಮೆ ಗಿಡ ಇಡುವುದರಿಂದ ಹಿಡಿದು ರೇಷ್ಮೆ ಸೀರೆಯನ್ನು ಉಟ್ಟುಕೊಳ್ಳುವವರೆಗೂ ಅವರ ಪಾತ್ರ ಇರುವುದರಿಂದ ಈ ಬಗ್ಗೆ ೮೦ ಕೋಟಿ ರೂಪಾಯಿನ ಸ್ಕೀಂ ಏನು ಇದೆ ಅದನ್ನು ಈ ಮಹಿಳೆಯರಿಗಾಗಿಯೇ ಉಪಯೋಗಿಸಬೇಕು ಎಂದು ಹೇಳುತ್ತೇನೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಸ್ವಾಮಿ, ಮಹಿಳೆಯರು ಮೊಟ್ಟೆಯನ್ನು ಇಡುತ್ತಾರೆ ಅಂತ ಹೇಳುತ್ತಿದ್ದಾರಲ್ಲಾ ಇದೇನು ಅನ್ನುವುದು ಗೊತ್ತಾಗಲಿಲ್ಲವಲ್ಲಾ ?

ಕುಮಾರಿ ಎಸ್. ಪ್ರಮೀಳ.—ಮೊಟ್ಟೆ ಇಡುವುದು ಎಂದರೆ ರೇಷ್ಮೆ ಗೂಡ ಇಡುವುದು ಅನ್ನುವ ಅರ್ಥ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ನಮ್ಮ ರಾಜ್ಯದಲ್ಲಿ ಮೊಟ್ಟೆಯನ್ನು ಇಡುವಂಥಾ ಹೆಂಗಸರು ಇದ್ದಾರೆಯೇ ?

ಕುಮಾರಿ ಎಸ್ ಪ್ರಮೀಳ.—ತಮ್ಮ ದೃಷ್ಟಿಕೋನದಲ್ಲಿ ಅಂಥಾವರು ಇದ್ದಾರೆ, ಅಂಥಾವರನ್ನು ನೋಡಬೇಕಾದರೆ ಶಿವಮೊಗ್ಗಾದಲ್ಲಿ ಹೋಗಿ ನೋಡಿ. ನಾನು ಮೊದಲೇ ಹೇಳಿದ ಹಾಗೆ ಈ ಸ್ಕೀಂಗೆ ೮೦ ಕೋಟಿ ರೂಪಾಯಿಯನ್ನು ಏನು ಕೊಟ್ಟಿದ್ದಾರೆ ಅದನ್ನು ಮಹಿಳೆಯರಿಗಾಗಿಯೇ ಮೀಸಲಾಗಿಡ

ಬೇಕು ಎಂದು ಹೇಳುತ್ತೇನೆ. ಈ ಸ್ಕೀಂನ ಪ್ರಯೋಜನವನ್ನು ಅವರಿಗೇನಾದರೂ ಕೊಟ್ಟರೆ ಪ್ರತಿ ಮನೆ ಮನೆಯಲ್ಲೂ ಮಹಿಳೆಯರು ತಮ್ಮ ಗೃಹಕೈಗಾರಿಕೆಗಳನ್ನು ಚೆನ್ನಾಗಿ ಬೆಳೆಸಿಕೊಂಡು ಬಂದು ಅದರಿಂದ ಹಣವನ್ನೂ ಕೂಡ ಸಂಪಾದನೆ ಮಾಡಿಕೊಂಡು ತಮ್ಮ ಸಂಸಾರವನ್ನು ಮತ್ತು ತಮ್ಮ ಮಕ್ಕಳನ್ನು ಚೆನ್ನಾಗಿ ನೋಡಿಕೊಂಡು ಹೋಗುವುದಕ್ಕೆ ಅನುಕೂಲವಾಗುತ್ತದೆ. ಅಲ್ಲದೆ ಅವರ ಮಕ್ಕಳನ್ನೂ ಸಹ ಮುಂದಕ್ಕೆ ತರುವುದಕ್ಕೆ ಅವಕಾಶವಾಗುತ್ತದೆ. ಆದುದರಿಂದ ಈ ಸ್ಕೀಂ ಅನ್ನು ಮಹಿಳೆಯರಿಗಾಗಿಯೇ ಕೊಡಬೇಕು ಎಂದು ಮತ್ತೊಮ್ಮೆ ಹೇಳುತ್ತೇನೆ.

ಈ ಸಂದರ್ಭದಲ್ಲಿ ತಮಗೆ ಒಂದು ವಿಷಯವನ್ನು ತಿಳಿಸಬೇಕಾಗಿದೆ. ಅದೇನೆಂದರೆ ನಾನು ಇರುವ ಲೋಕೇಷನ್‌ನಲ್ಲಿ ನನ್ನ ಕ್ಷೇತ್ರವಾದ ಚಾಮರಾಜಪೇಟೆಯಲ್ಲಿ ಒಬ್ಬರು ವಿಧವೆ ಒಂದು ಸೊಸೈಟಿ ಮಾಡಿದ್ದಾರೆ. ಇದರ ಬಗ್ಗೆ ಗಿರಿ ಸ್ಕೀಂ ಏನು ಇದೆ ಅದರಲ್ಲಿ ಒಂದನ್ನಾದರೂ ನನ್ನ ಕ್ಷೇತ್ರಕ್ಕೆ ಕೊಡಿ ಎಂದು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಇನ್ನು ಸಬ್ಸಿಡಿ ಕೊಡತಕ್ಕಂಥಾ ಒಂದು ಸ್ಕೀಂ ಇದೆ ಡಿ.ಐ.ಆರ್ ಅನ್ನುವ ಸ್ಕೀಂನಲ್ಲಿ ಈ ಮಹಿಳೆಯರಿಗೆ ತಾವು ಆದ್ಯತೆ ಕೊಟ್ಟು ಸಬ್ಸಿಡಿ ಕೊಡುವುದಾದರೆ ನಮ್ಮ ರಾಜ್ಯದಲ್ಲಿ ಕೈಗಾರಿಕೆಗಳನ್ನು ಮುಂದಕ್ಕೆ ತರುವುದಕ್ಕೆ ಅನುಕೂಲವಾಗುತ್ತದೆ. ಅದಲ್ಲದೆ ಕೂಡ ಗ್ರಾಮಾಂತರ ಪ್ರದೇಶಗಳಲ್ಲಿರುವ ಮಹಿಳೆಯರಿಗೆ ಇದರಲ್ಲಿ ತುಂಬಾ ಅನುಕೂಲವಾಗುತ್ತದೆ ಎಂದು ಹೇಳಬಯಸುತ್ತೇನೆ. ಇದರಲ್ಲಿ ಮೂರನೇ ಒಂದು ಭಾಗ ಸಬ್ಸಿಡಿ ಏನು ಕೊಡುತ್ತಾರೋ ಅದನ್ನು ಕೊಟ್ಟರೆ ಈ ರೇಷ್ಮೆ ಕೈಗಾರಿಕೆಯಲ್ಲಿ ಮಹಿಳೆಯರು ಚೆನ್ನಾಗಿ ಕೆಲಸ ಮಾಡಿ ಈ ಕೈಗಾರಿಕೆಯ ಬೆಳವಣಿಗೆಯನ್ನೂ ಮಾಡುವುದಕ್ಕೆ ಅನುಕೂಲವಾಗುತ್ತದೆ. ಆದುದರಿಂದ ಈ ಮಹಿಳೆಯರಿಗೆ ಆ ಸಬ್ಸಿಡಿಯನ್ನು ಕೊಡಿಸಿಕೊಡಬೇಕು ಎಂದು ಕೇಳುತ್ತೇನೆ.

SRI P. RAMDEV.—All production schemes are given to ladies.

ಕುಮಾರಿ ಎಸ್. ಪ್ರಮೀಳ.—ಇಂಡಸ್ಟ್ರಿಯಲ್ ಡಿಮ್ಯಾಂಡ್ ಮೇಲೆ ಡಿಸ್ಕಷನ್ ಮಾಡುವಾಗ ತಾವು ಹೀಗೆ ಹೇಳಬಹುದೇ. ತಾವು ಮಹಿಳೆಯರ ಬಗ್ಗೆ ಏನಂತ ತಿಳಿದುಕೊಂಡಿದ್ದೀರಿ ಎಂದರೆ ಅವರು ಮಕ್ಕಳನ್ನು ಹೆರುವ ಯಂತ್ರವನ್ನಾಗಿ ಮಾಡಿದ್ದೀರಿ. ಆದುದರಿಂದ ಈ ಒಂದು ಭಾವನೆಯನ್ನು ಹೆಂಗಸರ ಬಗ್ಗೆ ಇಟ್ಟುಕೊಂಡಿರತಕ್ಕುದನ್ನು ತಪ್ಪಿಸಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ರಾಂದೇವ್ ಮತ್ತು ನಾನು ಈ ಬಗ್ಗೆ ಏನು ಮಾಡಿಲ್ಲವಲ್ಲಾ, ನಮ್ಮ ಮೇಲೆ ಏತಕ್ಕೆ ಹೇಳುತ್ತೀರಾ?

ಕುಮಾರಿ ಎಸ್. ಪ್ರಮೀಳ — ನಿಮ್ಮ ಬಗ್ಗೆ ಅಲ್ಲ ಹೇಳಿದ್ದು. ಮಹಿಳೆಯರ ಬಗ್ಗೆ ಹೇಳಿದೆ ಅನೇಕ ಮಹನೀಯರು ಟೀಕೆ ಮಾಡಿದ್ದಕ್ಕೆ ಹೇಳಿದೆ ತಮಗಲ್ಲ. ಇನ್ನು ನಮ್ಮ ರಾಜ್ಯದಲ್ಲಿ ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಆಗಬೇಕಾದರೆ ಯಾವ ರೀತಿ ಆಗಬೇಕು ಅನ್ನುವುದೂ ತಮಗೂ ಗೊತ್ತಿದೆ. ಮಾನ್ಯ ಸಭಾಧ್ಯಕ್ಷರೇ, ನಮ್ಮ ಪ್ರಧಾನ ಮಂತ್ರಿಗಳೇ ಹೇಳಿದ್ದಾರೆ ಏನೆಂದರೆ ವುಮನ್ ಎಂಟರ್‌ಪ್ರೈಸರ್ಸ್ ಅನ್ನು ಭಾರತದಲ್ಲಿ ಮುಂದಕ್ಕೆ ತರಬೇಕಾದರೆ, ಅವರು ಒಂದು ಸಂಘಟನೆ ಮಾಡಿಕೊಳ್ಳಬೇಕಾದರೆ ಪ್ರತಿಯೊಬ್ಬ ಮಹಿಳೆಯರಿಗೂ ಕೂಡ ಉತ್ತೇಜನ ಕೊಡಬೇಕು ಎಂದು ಹೇಳಿದ್ದಾರೆ, ಆದುದರಿಂದ ನಾನು ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ, ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಕಾರ್ಪೋರೇಷನ್ ಏನು ಇದೆ ಅದರಲ್ಲಿ ಮಹಿಳೆಯರಿಗೆ ಆದ್ಯತೆ ಕೊಡಬೇಕು. ಇಲ್ಲವೇ ಮಹಿಳೆಯರಿಗೇನೇ ಒಂದು ಸೆಪರೇಟ್ ಯೂನಿಟ್ ಅಂತಾದರೂ ಮಾಡಬೇಕು ಇಲ್ಲವೇ ಇದನ್ನು ಸ್ವಲ್ಪ ಎಸ್ಟಾಬ್ಲಿಷ್ ಮಾಡಿ ಈ ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಕಾರ್ಪೋರೇಷನ್ನಿನಲ್ಲೇ ಈ ಮಹಿಳೆಯರಿಗಾಗಿ ಅಂತ ಒಂದಷ್ಟು ಹಣವನ್ನಾದರೂ ನಿಗದಿ ಮಾಡಿ ಕೊಡುವುದಾದರೆ ಅವರು ಮುಂದಕ್ಕೆ ಬರುವುದು ಸಾಧ್ಯ. ಅವರಿಗೆ ಇಂತಿಷ್ಟು ಹಣ ಎಂದು ರಿಸರ್ವ್ ಮಾಡಿದರೆ ಅನುಕೂಲವಾಗುತ್ತದೆ, ಆ ರೀತಿ ಮಾಡಿಕೊಡುವುದಾದರೆ ಅವರಿಗೆ ಗೃಹ ಕೈಗಾರಿಕೆಗಳಿಗೆ ಸ್ವಲ್ಪ ಉತ್ತೇಜನವೂ ಆಗುವುದಲ್ಲದೆ ನಮ್ಮ ರಾಜ್ಯದಲ್ಲಿ ಇಂಡಸ್ಟ್ರೀಸ್ ಕೂಡ ಡೆವಲಪ್ ಆಗುತ್ತವೆ. ಈಗ ತಾವು A seperate cell for woman in Industrial Development Corporation ಎಂದು ಮಾಡಿದರೆ ಅವರು ಈ ಗೃಹ ಕೈಗಾರಿಕೆಗಳಲ್ಲಿ ತೊಡಗಿ ತಮ್ಮ ಜೀವನಕ್ಕೆ ಬೇಕಾಗುವ ಹಣವನ್ನು ಸಂಪಾದನೆ ಮಾಡಿಕೊಳ್ಳುವುದೂ ಅಲ್ಲದೆ ಈ ಕೈಗಾರಿಕೆಯೂ ಕೂಡ ಬೆಳೆಯುವುದಕ್ಕೆ ಅವಕಾಶವಾಗುತ್ತದೆ. ಈಗ ಇಂಡಸ್ಟ್ರಿಯಲ್ ಡೆವಲಪ್‌ಮೆಂಟ್ ಯಾವರೀತಿಯಾಗಿ ಬೆಳೆಯುತ್ತಾ ಇವೆ ಎಂದರೆ, ಗೃಹ ಕೈಗಾರಿಕೆಗಳು ಯಾವರೀತಿಯಾಗಿ ಬೆಳೆಯುತ್ತಾ ಇದೆ ಎಂದರೆ ಪ್ರತಿ ಮನೆಯಲ್ಲೂ

ಕೂಡ ಕಳ್ಳಭಟ್ಟಿ ಸಾರಾಯಿ ಮಾಡಿ ಹಣವನ್ನು ಸಂಪಾದನೆ ಮಾಡುತ್ತಿದ್ದಾರೆ. ತಮಗೆ ಹೇಳಬೇಕಾದರೆ
ಮಾಲೂರಿನಿಂದ ೫ ಮೈಲಿ ದೂರದಲ್ಲಿ ಒಂದು ಹಳ್ಳಿ ಇದೆ. ಅಲ್ಲಿ ತಾವು ಹೋಗಿ ನೋಡಿದರೆ ಗೊತ್ತಾ
ಗುತ್ತದೆ. ಅಲ್ಲಿಗೆ ಈ ಅಧಿಕಾರಿಗಳು ಹೆದರಿಕೊಂಡು ಹೋಗುವುದಿಲ್ಲ ನಾವು ಹೋದರೆ ಎಲ್ಲಿ ಕೊಲೆ
ನಡೆಯುತ್ತದೋ, ಎಲ್ಲಿ ದರೋಡೆ ನಡೆಯುತ್ತದೋ ಎಂದು ಹೆದರಿಕೊಂಡು ಹೋಗುವುದಿಲ್ಲ.
ಆ ಹಳ್ಳಿಯಲ್ಲಿ ಪ್ರತಿಯೊಂದು ಮನೆಯಲ್ಲೂ ಕಳ್ಳಭಟ್ಟಿ ಸಾರಾಯಿ ಮಾಡಿ ಕೋಟ್ಯಾಂತರ
ರೂಪಾಯಿಯನ್ನು ಸಂಪಾದನೆ ಮಾಡುತ್ತಾರೆ. ತಮಗೆ ಹೇಳಬೇಕಾದರೆ ಆ ಗ್ರಾಮ ಒಂದರಲ್ಲೇ
ತಯಾರಾದಂಥಾ ಕಳ್ಳಭಟ್ಟಿ ಸಾರಾಯಿ ಇಡೀ ಬೆಂಗಳೂರಿಗೆ ಸರಬರಾಜು ಆಗುತ್ತದೆ. ಇದಕ್ಕೆ
ಸಂಬಂಧಪಟ್ಟ ಡಿಪಾರ್ಟ್‌ಮೆಂಟಿನ ಅಧಿಕಾರಿಗಳು ಹೆದರಿಕೊಂಡು ಹೋಗುವುದಿಲ್ಲ. ಆದುದರಿಂದ
ನಾನು ಹೇಳುತ್ತೇನೆ ಇಂಥಾ ಡಿಪಾರ್ಟ್‌ಮೆಂಟ್‌ನ್ನು ತಾವು ಏತಕ್ಕೆ ಇಟ್ಟುಕೊಂಡಿರಬೇಕು. ಈ ಇಲಾಖೆ
ಯನ್ನು ಅಬಾಲಿಷ್ ಮಾಡಿದರೆ ಖಂಡಿತವಾಗಿಯೂ ಇದಕ್ಕೆ ಏನು ವೆಚ್ಚವಾಗುತ್ತಿತ್ತೋ ಅದು
ಉಳಿಯುವುದೇ ಅಲ್ಲದೆ ನಮ್ಮ ಕರ್ನಾಟಕದ ಜನತೆ ಉತ್ತಮವಾಗಿ ಬಾಳುವುದಕ್ಕೂ ಅನುಕೂಲವಾಗು
ತ್ತದೆ. ಇದಕ್ಕೆ ತಮ್ಮೆಲ್ಲರ ಸಹಕಾರ ಬೇಕು ಕರ್ನಾಟಕದ ಜನರನ್ನು ಉತ್ತಮ ಪ್ರಜೆಯನ್ನಾಗಿ
ಮಾಡಬೇಕಾದರೆ ನಿಮ್ಮ ಕೈಯ್ಯಲ್ಲಿ ಇದೆ, ಹೇಗೆಂದರೆ ಮೊದಲು ನಮ್ಮ ಶಾಸಕರಾದವರು ನಾವು
ಕುಡಿಯೋದಿಲ್ಲ ಅನ್ನುವ ದೀಕ್ಷೆ ಕೊಟ್ಟರೆ ಅದಕ್ಕೆ ಸಹಕಾರ ನೀವು ಮಾಡುವುದಾದರೆ ಇದರಲ್ಲಿ ಉಳಿಯು
ತಕ್ಕಂಥಾ ದುಡ್ಡಿನಿಂದ ಜನತೆಗೆ ಅನುಕೂಲ ಮಾಡಿಕೊಡುವುದಕ್ಕಾಗುವುದಿಲ್ಲವೇ. ತಾವು ನೋಡಿರ
ಬಹುದು, ಕಲಾಸಿಪಾಳ್ಯಂ ಮತ್ತು ಸುಧಾಮನಗರದಲ್ಲಿರುವ ಸಾರಾಯಿ ಅಂಗಡಿಗಳನ್ನು ನೋಡಿದರೆ
ಗೊತ್ತಾಗುತ್ತದೆ. ಅಲ್ಲಿ ಮಹಿಳೆಯರು ಓಡಾಡುವುದಕ್ಕೇ ಆಗುವುದಿಲ್ಲ. ಹಾಗಿದೆ, ಆ ಜಾಗದ
ಪರಿಸ್ಥಿತಿ. ಈ ಅಂಗಡಿಗಳಿಗೆ ಲೈಸೆನ್ಸ್ ಕೊಡಬೇಕಾದರೆ ಮೊದಲು ಮುನಿಸಿಪಲ್ ಆಕ್ಟ್‌ನಲ್ಲಿ ಒಂದು
ಕಾನೂನು ಮಾಡಿದ್ದರು. ಏನೆಂದರೆ ಸಾರ್ವಜನಿಕರಿಂದ ಇದರ ಬಗ್ಗೆ ಅಬ್ಜಕ್ಷನ್ ಬಂದರೆ ಲೈಸನ್ಸ್
ಕೊಡಕೂಡದು ಎಂದು ಇತ್ತು. ಈಗ ಅದನ್ನು ತೆಗೆದುಹಾಕಿದ್ದಾರೆ ಅಲ್ಲಿ ದೇವಸ್ಥಾನವೇ ಇರಲಿ,
ಎಲ್ಲಿ ಅಂದರೆ ಅಲ್ಲೇ ಮನೆಗಳಿಗೆ ಲೈಸೆನ್ಸ್ ಅನ್ನು ಕೊಟ್ಟು ಬಿಡುತ್ತಾರೆ ಆದುದರಿಂದ ನಾನು ಹೇಳುವು
ದೇನೆಂದರೆ ಈಗಲಾದರೂ ಕೂಡ ಒಂದು ಅಮೆಂಡ್‌ಮೆಂಟ್ ಈ ಬಗ್ಗೆ ತಂದು, ಎಲ್ಲಿ ಸಾರ್ವಜನಿಕರಿಂದ
ಅಬ್ಜಕ್ಷನ್ ಬರುತ್ತದೋ ಅಲ್ಲಿ ಕೊಡ ಕೂಡದ ಹಾಗೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಈ ಕೈಗಾರಿಕೆಯ ವಿಷಯದ ಬಗ್ಗೆ ಹೇಳುವುದಾದರೆ, ನಮ್ಮಲ್ಲಿ ರಾ-ಮೆಟೀರಿಯಲ್ಸ್ ಬೇಕಾ
ದಷ್ಟು ಸಿಕ್ಕುತ್ತದೆ. ನಮ್ಮಲ್ಲಿ ಮುಸುಕಿನ ಜೋಳವನ್ನು ಹೆಚ್ಚಾಗಿ ಬೆಳೆಯುತ್ತಾರೆ. ಮತ್ತು ನಮ್ಮಲ್ಲಿ
ತೆಂಗಿನ ಚಿಪ್ಪು ಕೂಡ ಬೇಕಾದಷ್ಟು ಸಿಕ್ಕುತ್ತದೆ. ಈ ಮುಸುಕಿನ ಜೋಳದಲ್ಲಿ ಜಪಾನ್‌ನಲ್ಲಿ ಎಣ್ಣೆ
ತೆಗೆಯುತ್ತಾರೆ, ಅದನ್ನು ಇಲ್ಲೂ ಮಾಡುವ ಹಾಗೆ ಮಾಡಬೇಕು. ಅದರಿಂದ ಹೆಚ್ಚಿಗೆ ಆದಾಯ
ಬರುತ್ತದೆ. ಅಲ್ಲಿ ಅದು ತುಂಬಾ ಹೆಸರುವಾಸಿಯಾಗಿದೆ. ಅದರಿಂದ ನಮ್ಮ ಕರ್ನಾಟಕದಲ್ಲಿ ಹೆಚ್ಚು
ಇಡಸ್ಟ್ರೀಸ್ ಬೆಳವಣಿಗೆಯೂ ಆಗುತ್ತದೆ. ಅದನ್ನು ಮಾಡಬೇಕು ಎಂದು ಹೇಳುತ್ತೇನೆ. ಅದರಿಂದ
ಗ್ಲೂಕೋಸ್ ಡೆಕ್ಸ್‌ಟ್ರೋಸ್ ಮಾಡಬಹುದು, ಅಂತಹ ಇಂಡಸ್ಟ್ರಿಯನ್ನು ತೆಗೆಯುವುದಕ್ಕೆ ಅವಕಾಶ
ಕೊಡಿ ಎಂದು ಹೇಳಬಯಸುತ್ತೇನೆ. ಇನ್ನು ಸಿಲೋನಿನಲ್ಲಿ ಈ ತೆಂಗಿನ ಚಿಪ್ಪನ್ನು ಉಪಯೋಗಿಸಿ,
ಒಂದು ಮೆಡಿಕಲ್ ಪೌಡರ್ ವಿ.ಐ.ಎಂ. ಪೌಡರ್ ಮಾಡುತ್ತಾರಂತೆ. ಇಲ್ಲಿ ನಾವು ಈ ತೆಂಗಿನ ಚಿಪ್ಪನ್ನು
ಬೀಸಾಕಿಬಿಡುತ್ತೇವೆ. ನಮ್ಮ ಕರ್ನಾಟಕದಲ್ಲಿ ಆ ತೆಂಗಿನ ಚಿಪ್ಪನ್ನು ಉಪಯೋಗಿಸಿ ಆ ತರಹ ಮಾಡು
ವುದಕ್ಕೆ ಸರಿಯಾದಂಥಾ ತಜ್ಞರನ್ನು ತಿಳಿದು ಅಂತಹ ಇಂಡಸ್ಟ್ರಿಯನ್ನು ಇಲ್ಲಿ ಬೆಳೆಸುವುದಕ್ಕೆ ಅವಕಾಶ
ಮಾಡಿಕೊಡಬೇಕು ಎಂದು ಹೇಳುತ್ತೇನೆ. ಇನ್ನೊಂದು ವಿಷಯ ತಮಗೆ ಹೇಳಬೇಕಾದರೆ ಸಾಮಾನ್ಯ
ವಾಗಿ ನಗರದ ನಾಗರೀಕರು ದಿನನಿತ್ಯ ಉಪಯೋಗಿಸತಕ್ಕಂಥಾ ಹೆಣ್ಣುಮಕ್ಕಳಿಗೆ ಬೇಕಾದಂಥಾ
ಮೈಸೋಪು, ಬಟ್ಟೆ ಸೋಪು, ನೀಲಿ ಏನು ಇವೆ ಇದನ್ನು ಈವಾಗ ಟಾಟಾ ಮತ್ತು ಬಿರ್ಲಾ ಕಂಪನಿ
ಯವರು ಅವರು ತಯಾರು ಮಾಡುತ್ತಿದ್ದಾರೆ. ನಾಲ್ಕಾಣೆ ಬಾಳುವಂಥಾ ಈ ಪದಾರ್ಥಕ್ಕೆ ೪
ರೂಪಾಯಿ ೫ ರೂಪಾಯಿ ಹಾಕಿ ಮಾರುತ್ತಾರೆ. ಆದುದರಿಂದ ನಾನು ಹೇಳುವುದೇನೆಂದರೆ ದಿನನಿತ್ಯ
ಬಳಕೆಗೆ ಬೇಕಾದಂಥಾ ೧೦ ೨ ಪದಾರ್ಥಗಳನ್ನು ಸೋಪು ನೀಲಿ ವಗೈರೆ ಪದಾರ್ಥಗಳನ್ನು ಈ ಗೃಹ
ಕೈಗಾರಿಕೆಗಳಾಗಿ ಸ್ವಲ್ಪ ಮಾರ್ಪಾಡು ಮಾಡಿ ಮಹಿಳೆಯರಿಗೆ ಇದರ ಬಗ್ಗೆ ಉತ್ತೇಜನ ಕೊಟ್ಟರೆ ಪ್ರತಿ
ಮನೆ ಮನೆಯಲ್ಲೂ ಇಂಥಾ ಕೈಗಾರಿಕೆ ಬೆಳೆಯುತ್ತದೆ. ಅದನ್ನು ಜನತಾ ಬಜಾರ್ ಮುಖಾಂತರ
ಮಾರುವಂತೆ ಏರ್ಪಾಡು ಮಾಡುವುದಾದರೆ ಸಾರ್ವಜನಿಕರಿಗೂ ಕೂಡ ಸ್ವಲ್ಪ ಕಡಿಮೇ ಬೆಲೆಯಲ್ಲಿ ಇವರಿ

ಗಿಂತ ಕಡಿಮೆ ಬೆಲೆಯಲ್ಲಿ ದೊರಕಿದಂತಾಗುತ್ತದೆ. ಆ ರೀತಿಯಾಗಿ ಈ ಮಹಿಳೆಯರಿಗೆ ಅನುಕೂಲ ಮಾಡಿಕೊಟ್ಟರೆ ನಮ್ಮ ರಾಜ್ಯದಲ್ಲಿ ಇನ್ನೂ ಹೆಚ್ಚು ಕೈಗಾರಿಕೆಗಳು ಮುಂದುವರೆಯುವುದಕ್ಕೆ ಅನುಕೂಲ ವಾಗುತ್ತದೆ ಆ ರೀತಿ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಷಯ ಏನೆಂದರೆ ಕಸದಿಂದ ರಸ ತೆಗೆಯುವುದು. ಕಬ್ಬಿನ ಸಿಪ್ಪೆಯಿಂದ ಹೂವಿನ ಕುಂಡ ಮತ್ತು ಬೀಸಣಿಗೆ ಇವುಗಳನ್ನು ಮಾಡುತ್ತಾರಂತೆ ಈಗ ಮಂಡ್ಯ ಮತ್ತಿತರ ಕಡೆಗಳಲ್ಲಿ ಸಕ್ಕರೆ ಕಾರ್ಖಾನೆ ಏನು ಇದೆ ಅಲ್ಲಿ ಬರುವಂಥಾ ಕಬ್ಬಿನ ಸಿಪ್ಪೆಯನ್ನು ಬೀಸಾಕಿ ಬಿಡುತ್ತೇವೆ. ಹಾಂಗ್‌ಕಾಂಗ್‌ನಲ್ಲಿ ಇದನ್ನು ಉಪಯೋಗಿಸಿ ಅನೇಕ ತರಹವಾದ ಫ್ಲವರ್ಸ್ ಮಾಡುತ್ತಾರಂತೆ. ಆದುದರಿಂದ ಇದರ ಬಗ್ಗೆ ಟೆಕ್ನಿಕಲ್ ನೋಹೌ ತಿಳಿದುಕೊಂಡು ಇದನ್ನು ಗೃಹ ಕೈಗಾರಿಕೆಗಳ ಮುಖಾಂತರವಾಗಿ ಮಾಡುವುದಾದರೆ ಮಹಿಳೆಯರಿಗೆ ಒಂದು ಉದ್ಯೋಗವನ್ನೂ ಕಲ್ಪಿಸಿಕೊಟ್ಟಂತಾಗುತ್ತದೆ ಮತ್ತು ಅವರೂ ಸಹ ಇದರಿಂದ ಹೆಚ್ಚು ಹಣವನ್ನು ಸಂಪಾದನೆ ಮಾಡಿ ತಮ್ಮ ಜೀವನವನ್ನು ಸುಖವಾಗಿ ಸಾಗಿಸಬಹುದು. ಆ ಕೆಲಸ ತಾವು ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಕೊನೆಯದಾಗಿ ಇಂಡಸ್ಟ್ರಿಯಲ್ ಡಿಪಾರ್ಟ್‌ಮೆಂಟ್‌ನ ಪ್ರಮೋಷನ್ ಬಗ್ಗೆ ಎರಡು ಮಾತು ಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಈಗ ಈ ಇಲಾಖೆಯಲ್ಲಿ ಏನಾಗಿದೆ ಎಂದರೆ ತಮಗೂ ಗೊತ್ತಿದೆ ರೋಸ್ಟರ್ ಪ್ರಕಾರ ಷೆಡ್ಯೂಲ್ಡ್ ಕ್ಯಾಸ್ಟ್‌ಗೆ ಪ್ರಮೋಷನ್ ಕೊಡಬೇಕೆನ್ನುವುದು ತಮಗೂ ಗೊತ್ತಿದೆ. ಈ ಇಲಾಖೆಯಲ್ಲಿ ಅಸಿಸ್ಟೆಂಟ್ ಡೈರೆಕ್ಟರ್ ಆಫ್ ಇಂಡಸ್ಟ್ರೀಸ್ ಅಂಡ್ ಕಾಮರ್ಸ್ ಆಗಿರುವ ಶ್ರೀ ವೆಂಕಟರಮಣ ಅನ್ನುವವರು ಇದ್ದಾರೆ ಅವರು ಷೆಡ್ಯೂಲ್ಡ್ ಕ್ಯಾಸ್ಟ್‌ಗೆ ಸೇರಿದ್ದಾರೆ. ಇವರು ಪ್ರಮೋಷನ್ ಲಿಸ್ಟ್‌ನಲ್ಲಿ ೧೪ ನೆಯವರು ರೋಸ್ಟರ್ ಪೋಸ್ಟ್‌ನಲ್ಲಿ ಇವರು ೭ನೇಯವರು. ಇವರಿಗೆ ಪ್ರಮೋಷನ್ ಕೊಡಬೇಕಾದ್ದನ್ನು ಕೊಡದೇ ಹಾಗೆಯೇ ಇಟ್ಟಿದ್ದಾರೆ. ೧೪ ಜನರಲ್ಲಿ ೧೩ ಜನ ರನ್ನು ಆಗಲೇ ಫಿಲ್ ಅಫ್ ಮಾಡಿಬಿಟ್ಟಿದ್ದಾರೆ ಈ ಷೆಡ್ಯೂಲ್ಡ್ ಕ್ಯಾಸ್ಟ್‌ನ ವೆಂಕಟರಮಣ ಏನು ಇದ್ದಾರೆ ಇವರಿಗೆ ಬರತಕ್ಕಂಥಾದ್ದನ್ನು ಕೊಡದೇ ಅಷ್ಟಕ್ಕೇನೇ ನಿಲ್ಲಿಸಿಬಿಟ್ಟಿದ್ದಾರೆ. ಇದು ಅನ್ಯಾಯವಲ್ಲವೇ ? ಇಂಥಾ ಅನ್ಯಾಯವನ್ನು ಮಾಡಬಾರದು. ಷೆಡ್ಯೂಲ್ಡ್ ಕ್ಯಾಸ್ಟ್‌ಗೆ ಏನು ರಿಸರ್ವೇಷನ್ ಇದೆಯೋ ಅದರಂತೆ ಈ ಜಾಗವನ್ನು ಫಿಲ್ ಅಫ್ ಮಾಡಬೇಕಾದ್ದು ಅವರ ಕರ್ತವ್ಯವಲ್ಲವೇ ? ಈ ಬಗ್ಗೆ ಅವರಿಗೆ ನ್ಯಾಯವನ್ನು ದೊರಕಿಸಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಸೂರ್ಯನ ಬೆಳಕಿನಿಂದ ಕರೆಂಟ್ ಉತ್ಪಾದನೆ ಮಾಡಲು ಸಾಧ್ಯವಿದೆ. ಅನೇಕ ವಿಧಾನಗಳು ಇವೆ. ಈಗ ತಮಗೆ ಗೊತ್ತಿರುವ ಹಾಗೆ ಪ್ರತಿಮನೆಗಳಲ್ಲೂ ಅಡಿಗೆ ಮಾಡುವುದಕ್ಕೆ ನಾವು ಹೀಟರ್ ಅನ್ನು ಇಟ್ಟುಕೊಂಡಿದ್ದೇವೆ. ಅನೇಕ ಸಂದರ್ಭಗಳಲ್ಲಿ ಎಲೆಕ್ಟ್ರಿಸಿಟಿ ಷಾರ್ಟೇಜ್‌ನಿಂದ, ಷಟ್‌ಡೌನ್ ಆಗಿ ಬಹಳ ತೊಂದರೆಗಳಾಗುವುದು ಉಂಟು. ಸರಿಯಾಗಿ ನಂಬುವ ಹಾಗೆ ಇಲ್ಲ. ಇದರ ಬಗ್ಗೆ ಟೆಕ್ನಿಕಲ್ ನೊ ಹೌ ಏನಿದೆ ಅನ್ನುವುದನ್ನು ತಿಳಿಯಲು ಸಾಮಾನ್ಯವಾಗಿ ಹೆಣ್ಣುಮಕ್ಕಳಿಗೆ ಗೊತ್ತಾಗುವುದ ರಿಂದ ಇದರ ಬಗ್ಗೆ ತಜ್ಞರನ್ನು ಕರೆಸಿ ಈ ಸೂರ್ಯನ ಬೆಳಕಿನಿಂದ ಕರೆಂಟ್ ಮಾಡುವ ಹಾಗೆ ಒಂದು ಅನು ಕೂಲತೆಯನ್ನು ಮಾಡಿಕೊಡಬೇಕೆಂದು ಹೇಳುತ್ತೇನೆ. ಅದರಲ್ಲೂ ಕೂಡ ಹಳ್ಳಿಗಾಡಿನಲ್ಲಿರತಕ್ಕಂಥಾ ಜನರಿಗೆ ಇದರಿಂದ ಅನುಕೂಲವಾಗುವುದರಿಂದ ಅವರು ಆ ಸೂರ್ಯನ ಬೆಳಕಿನಿಂದ ಕರೆಂಟ್ ತೆಗೆದುಕೊಂಡು ಅದನ್ನು ಉಪಯೋಗ ಮಾಡಿಕೊಳ್ಳುವುದರಲ್ಲಿ ಸಂದೇಹವಿಲ್ಲ. ಈಗ ಮನೆ ಮನೆಯಲ್ಲೂ ಡೀಸಲ್ ಪಂಪ್ ಇಟ್ಟುಕೊಂಡು ಏನು ಮಾಡುತ್ತಾರೋ ಅದನ್ನು ತಪ್ಪಿಸಿ ಈ ಸೂರ್ಯನ ಬೆಳಕಿನಿಂದ ಕರೆಂಟ್ ಬರುವುದನ್ನು ಉಪಯೋಗಿಸಿಕೊಳ್ಳುವ ಹಾಗೆ ಒಂದು ಅವಕಾಶವನ್ನು ಕಲ್ಪಿಸಿಕೊಡುವಂತೆ ತಾವು ಮಾಡಬೇಕೆಂದು ಹೇಳಿ, ನನಗೆ ಇಷ್ಟುಮಾತುಗಳನ್ನಾಡಲು ಅಧ್ಯಕ್ಷರು ಅವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎ. ಬಿ. ಬೆಡಗಿ (ಸದಲಗ).—ಸನ್ಮಾನ್ಯ ಅಧ್ಯಕ್ಷರೇ, ಇವತ್ತು ಈ ಸದನದ ಮುಂದೆ ಇದ್ದಂಥ ಚಿಕ್ಕ ಉದ್ಯಮ ಮತ್ತು ಕೈಗಾರಿಕೆಯ ಬೇಡಿಕೆಗಳಿಗೆ ನನ್ನ ಬೆಂಬಲ ನೀಡುತ್ತಾ ಕೆಲವು ವಿಚಾರ ಗಳನು ತಮ್ಮ ಮುಂದಿಡಬಯಸುತ್ತೇನೆ. ಉದ್ದಿಮೆಗಳ ವಿಷಯದಲ್ಲಿ ಇದುವರೆಗೂ ಮಾತನಾಡಿದ ಸದಸ್ಯರು ಉತ್ತಮವಾದ ಸಲಹೆಗಳನ್ನು ಕೊಟ್ಟಿದ್ದಾರೆ ; ಹಾಗೆಯೇ ಸರ್ಕಾರದವರು ಉದ್ದಿಮೆಗಳ ಬೆಳವಣಿಗೆಗೆ ಸೂಕ್ತವಾದ ಅನೇಕ ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ. ಜಿಲ್ಲಾ ಮತ್ತು ತಾಲ್ಲೂಕು ಕೇಂದ್ರಗಳಲ್ಲಿ ಉದ್ದಿಮೆಗಳು ಸಾಕಷ್ಟು ಹೆಚ್ಚಿನ ರೀತಿಯಲ್ಲಿ ಬರಬೇಕು. ತಾಲ್ಲೂಕು ಕೇಂದ್ರಗಳಲ್ಲಿ ಗೃಹ

ಕೈಗಾರಿಕೆಗಳು ಹಾಗೂ ಚಿಕ್ಕ ಉದ್ದಿಮೆಗಳ ಬಗ್ಗೆ ಸರ್ಕಾರದಿಂದ ಹೆಚ್ಚಿನ ಮಾರ್ಗದರ್ಶನ ಬರಬೇಕಾಗಿದೆ. ಕನ್ನಡಿಯ ಮೇಲೆ ಸೂರ್ಯನ ಬೆಳಕು ಬಿದ್ದರೆ ಎಷ್ಟು ತೀವ್ರವಾಗಿ ಅದು ಪ್ರವೃತ್ತಿಯಾಗುತ್ತದೆಯೋ ಹಾಗೆ ಈ ಮಾರ್ಗದರ್ಶನ ಗ್ರಾಮಾಂತರ ಪ್ರದೇಶದ ಜನರಿಗೆ ಹೆಚ್ಚಿನ ಪರಿಣಾಮಕಾರಿಯಾಗಿ ಆಗುತ್ತದೆ. ಆದರೆ ತಾಲ್ಲೂಕು ಕೇಂದ್ರಗಳಲ್ಲಿ ಮಾರ್ಗದರ್ಶನ ಜನರಿಗೆ ಅಷ್ಟು ಹೆಚ್ಚಿನ ರೀತಿಯಲ್ಲಿ ಇಲ್ಲದೆ ಇದ್ದುದರಿಂದ ಅಷ್ಟು ಪರಿಣಾಮಕಾರಿಯಾಗಿ ಈ ಕೈಗಾರಿಕೆಗಳು ಮುಂದೆ ಬರುವುದಕ್ಕೆ ಸಾಧ್ಯವಾಗಿಲ್ಲವೆನ್ನುವ ಮಾತನ್ನು ನಾನು ಇಲ್ಲಿ ಹೇಳಬೇಕಾಗಿದೆ. ಎಲ್ಲಿಯೋ ಏನೋ ಅಲ್ಪ ಸ್ವಲ್ಪ ಕೈಗಾರಿಕೆಗಳು ನಡೆಯುತ್ತಿವೆ. ಗ್ರಾಮಾಂತರ ಪ್ರದೇಶಗಳಲ್ಲಿ, ಗ್ರಾಮೀಣ ಅಭಿವೃದ್ಧಿಗೆ ಗ್ರಾಮಗಳಲ್ಲಿ ದೊರೆಯುತಕ್ಕ ಕಚ್ಚಾ ಪದಾರ್ಥಗಳನ್ನು ಅನುಸರಿಸಿ ಯಾವ ಪ್ರಮಾಣದಲ್ಲಿ ಮಾರ್ಗದರ್ಶನ ಇರಬೇಕಾಗಿತ್ತೋ ಆ ಪ್ರಮಾಣದಲ್ಲಿ ಮಾರ್ಗದರ್ಶನ ಇಲ್ಲದೆ ಇದ್ದುದರಿಂದ ಈ ವಿಷಯದಲ್ಲಿ ಇನ್ನೂ ನಮ್ಮ ಜನರು ಹಿಂದೆ ಇರಬೇಕಾಗಿದೆ ಗ್ರಾಮ ಕೈಗಾರಿಕೆಗಳಲ್ಲಿ ಇಟ್ಟಿಗೆ ಕೈಗಾರಿಕೆಯು ಮಹತ್ವದ್ದಾಗಿದೆ. ಇದು ದೇಶಕ್ಕೆ ಬುನಾದಿಯನ್ನು ಕಟ್ಟುತಕ್ಕ ಇಟ್ಟಿಗೆ. ಇದನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಅಳವಡಿಸಿಕೊಂಡರೆ ಸಣ್ಣಪುಟ್ಟ ಮನೆಗಳನ್ನು ಕಡಿಮೆ ಖರ್ಚಿನಲ್ಲಿ ಕಟ್ಟಲಿಕ್ಕೆ ಶಕ್ಯ ಇದೆ. ಏಕೆಂದರೆ, ಇಟ್ಟಿಗಿಗೆ ಬೇಕಾದ್ದು ಕೇವಲ ಸರಿಯಾದ ಮಣ್ಣು ಮಾತ್ರ, ನೀರು ಎರಡನೆಯದು. ಮೂರನೆಯದು ತಯಾರು ಮಾಡಿದಂಥ ಇಟ್ಟಿಗೆಯನ್ನು ಸಾಗಾಣಿಕೆ ಮಾಡತಕ್ಕದ್ದು. ಇವರ ತಯಾರಿಕೆಯಲ್ಲಿ ಸಾಗಾಣಿಕೆಯು ಖರ್ಚು ಹೆಚ್ಚು ಬಂದು ಇನ್ನೂ ಹೆಚ್ಚಿನ ರೀತಿಯಲ್ಲಿ ಈ ಕೈಗಾರಿಕೆ ಮುಂದೆ ಬರುವುದಕ್ಕೆ ಅಡಚಣೆಯಾಗಿದೆ. ಇದರಲ್ಲಿ ಸರ್ಕಾರದವರು ಹೆಚ್ಚಿನ ಸಂಶೋಧನೆ ನಡೆಸಿ ಹಳ್ಳಿಗಳಲ್ಲಿ ಈ ಕೈಗಾರಿಕೆ ಹೆಚ್ಚಿನ ರೀತಿಯಲ್ಲಿ ಬರುವಂತೆ ಜನರಿಗೆ ಮಾರ್ಗದರ್ಶನ ನೀಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಸಿಮೆಂಟಿನ ಕೊರತೆ ನಮ್ಮ ದೇಶದಲ್ಲಿ ಬಹಳ ಇದೆ. ಇದರ ತುಟಾಗ್ರತೆಯಿಂದ ಜನಜೀವನಕ್ಕೆ ಬಹಳ ತೊಂದರೆಯಾಗಿದೆ. ಇದಕ್ಕೆ ಪರ್ಯಾಯವಾಗಿ ಸುಣ್ಣದ ತಯಾರಿಕೆಯಾಗಬೇಕು. ಸುಣ್ಣ ತಯಾರಿಕೆಯ ಕೈಗಾರಿಕೆ ಒಂದು ದೊಡ್ಡ ಕೈಗಾರಿಕೆಯಾಗಿ ಪರಿಣಮಿಸಬೇಕು. ಇದರ ತಯಾರಿಕೆಯನ್ನು ಕಡಿಮೆ ಖರ್ಚಿನಲ್ಲಿ ಮಾಡುವಂತೆ ಜನರಿಗೆ ಅನುಕೂಲ ಮಾಡಿಕೊಡಬೇಕು ಎಂದು ನಾನು ಈ ಸಮಯದಲ್ಲಿ ತಮ್ಮ ಮೂಲಕ ಸಲಹೆ ಮಾಡುತ್ತೇನೆ.

ಚರ್ಮೋದ್ಯೋಗದ ಕೈಗಾರಿಕೆ ಪ್ರತಿಯೊಂದು ಹಳ್ಳಿಯಲ್ಲಿಯೂ ದೊಡ್ಡ ಕೈಗಾರಿಕೆಯಾಗಿ ಪರಿಣಮಿಸಿವೆ. ಏಕೆಂದರೆ, ಪಟ್ಟಣಗಳಲ್ಲಿ ಪಾದರಕ್ಷೆಗಳನ್ನು ಕೊಳ್ಳಬೇಕಾದರೆ ನಾವು ೫೦ ರೂಪಾಯಿಗಳಿಂದ ನೂರು ರೂಪಾಯಿಗಳವರೆಗೂ ಕೊಡಬೇಕಾಗುತ್ತದೆ. ಇದು ಜನ ಸಾಮಾನ್ಯರಿಗೆ ಅಸಾಧ್ಯವಾದುದು. ದಿನೇ ದಿನೇ ಗ್ರಾಮಾಂತರ ಪ್ರದೇಶಗಳಲ್ಲಿ ಈ ಕಸುಬನ್ನು ನಂಬಿಕೊಂಡಿರುವವರು ಸರಿಯಾದ ಪ್ರೋತ್ಸಾಹ ಇಲ್ಲದೆ ನಷ್ಟಕ್ಕೆ ಗುರಿಯಾಗುತ್ತಿದ್ದಾರೆ. ಉದಾಹರಣೆಗೆ ಹೇಳುವುದಾದರೆ, ನನ್ನ ಮತ ಕ್ಷೇತ್ರದಲ್ಲಿ ಒಬ್ಬ ಚಮ್ಮಾರ ಬಹಳ ಉತ್ತಮ ಮಟ್ಟದಲ್ಲಿ ಪಾದರಕ್ಷೆಗಳನ್ನು ತಯಾರು ಮಾಡುತ್ತಿದ್ದ. ನಾನು ಇಲಾಖೆಯವರನ್ನು ಇಲ್ಲಿಗೆ ಕರೆದುಕೊಂಡು ಬಂದು, ಈ ಕೈಗಾರಿಕೆಯ ಬಗ್ಗೆ ಜನರಿಗೆ ಸಲಹಾ ಸೌಕರ್ಯಗಳನ್ನು ಕೊಡಿ ಎಂದು ಕೇಳಿದ ಮೇಲೆ ಇವರು ಸ್ವಲ್ಪ ತಯಾರು ಮಾಡಿದಂಥ ಚಪ್ಪಲಿಯನ್ನು ಇಲ್ಲಿಂದ ತೆಗೆದುಕೊಂಡು ಹೋದರು. ಸುಮಾರು ಮೂರು ವರ್ಷವಾದರೂ ಇವರಿಂದ ಏನೂ ಉತ್ತರ ಬರಲಿಲ್ಲ. ಬಡವ, ಕೊಟ್ಟ ಮಾಲಿಗೆ ಹಣ ಇಲ್ಲದೆ ಮಾರ್ಗದರ್ಶನವೂ ಇಲ್ಲದೆ ಕೊನೆಗೆ ಇವರ ಮೇಲೆ ದಾವೆ ಹೂಡುತ್ತೇನೆಂದು ಕಾಗದ ಬರೆದಾಗ ಹಣವನ್ನು ಕಳುಹಿಸಿಕೊಟ್ಟರು. ಹೀಗೆ ಅಧಿಕಾರಿಗಳನ್ನು ನಾವು ಏನನ್ನಾದರೂ ಕೇಳಲಿಕ್ಕೆ ಹೋದರೆ ಈ ಪರಿಸ್ಥಿತಿಯಾಗುತ್ತದೆ, ಮತ್ತು ಇವರನ್ನು ನಾವು ಕಛೇರಿಗಳಲ್ಲಿ ಭೇಟಿಯಾಗುವುದು ಕಷ್ಟ. ಹೀಗಾಗಿ ಗ್ರಾಮ ಕೈಗಾರಿಕೆಗಳು ಬಹಳ ಮಂದಗತಿಯಲ್ಲಿ ಸಾಗುತ್ತಿವೆ. ಆದಗ್ಯೂ ಕೂಡ ಸರ್ಕಾರದವರು, ಈ ಹೆಂಚಿನ ಕಾರ್ಖಾನೆ, ಕಲ್ಲಿನ ಕಾರ್ಖಾನೆ ಇವುಗಳನ್ನು ಸಾಕಷ್ಟು ಹೆಚ್ಚಿನ ರೀತಿಯಲ್ಲಿ ಪ್ರೋತ್ಸಾಹ ಕೊಟ್ಟು ಬೆಳೆಸಿಕೊಂಡರೆ ಗ್ರಾಮೀಣ ಜನರಿಗೆ ಅನುಕೂಲವಾಗುತ್ತದೆ. ಇಲ್ಲಿಯೂ ಅನೇಕ ರೀತಿಯ ಸಮಸ್ಯೆಗಳು ಇವೆ. ಇವುಗಳನ್ನು ತಾವು ನಿವಾರಣೆ ಮಾಡಬೇಕು. ಆಮೇಲೆ ಉರ್ಜಿನ ಸಮಸ್ಯೆ ನಮ್ಮ ಗ್ರಾಮಾಂತರ ಪ್ರದೇಶಗಳಲ್ಲಿ ಬಹಳವಾಗಿದೆ. ಈ ಸಮಸ್ಯೆಯನ್ನು ಕಡಿಮೆ ಮಾಡುವುದಕ್ಕೆ ಸೂರ್ಯ ಪ್ರಕಾಶದಿಂದ ಹೊರಬರುವ ಶಾಖವನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಸೂಕ್ತ ಕಾರ್ಯಕ್ರಮಗಳನ್ನು ಸರ್ಕಾರದವರು ಹಾಕಿಕೊಡಬೇಕು. ಉರ್ಜೆ ಇಲ್ಲದಿದ್ದರೆ ಅರಣ್ಯವನ್ನು ಕಡಿಯಬೇಕಾಗುತ್ತದೆ. ಇದರಿಂದ ಅರಣ್ಯ ನಾಶವಾಗಿ, ದೇಶದಲ್ಲಿ ಗಂಡಾಂತರ ಪರಿಸ್ಥಿತಿ ತಲೆದೋರುತ್ತದೆ. ಇದರ ಬೆಲೆಯೂ ದಿನೇ ದಿನೇ ಏರುತ್ತಾಹೋಗಿ ಉರುವಲನ್ನು ಜನರಿಗೆ ದೊರಕಿಸುವುದಕ್ಕೆ

ಅಸಾಧ್ಯವಾಗಿದೆ. ಆದ್ದರಿಂದ ಈ ಸೋಲಾರ ಎನರ್ಜಿಗೆ ಸಂಬಂಧಪಟ್ಟ ವಿಷಯ ಏನು ಇದೆ ಇದು ತಾಂತ್ರಿಕ ಜ್ಞಾನ ಕಡಿಮೆ ಮಟ್ಟದಲ್ಲಿ ಬೇಕಾದ ಕೈಗಾರಿಕೆ, ಇದರ ಬಗ್ಗೆ ಸರ್ಕಾರದವರು ಜನಗಳಿಗೆ ತಿಳುವಳಿಕೆಯನ್ನು ಖಾದಿ ಗ್ರಾಮೋದ್ಯೋಗ ಮಂಡಳಿಯ ಮೂಲಕ ಕೊಟ್ಟರೆ ತುಂಬಾ ಸಹಾಯವಾಗುತ್ತದೆ. ಇದರಿಂದ ದೇಶಕ್ಕೂ ದೊಡ್ಡ ಉಪಕಾರ ಮಾಡಿದಂತಾಗುತ್ತದೆ.

ಮತ್ತೆ ನಮ್ಮ ರಾಜ್ಯದಲ್ಲಿ ಸುಲಭ ರೀತಿಯಲ್ಲಿ ಸಂಡಾಸಗಳನ್ನು ಕಟ್ಟಲು ಲಕ್ಷ್ಯ ವಹಿಸಬೇಕಾಗಿದೆ. ಏಕೆಂದರೆ ಮನುಷ್ಯ ಗೊಬ್ಬರ ಬೆಳೆಗಳಿಗೆ ಬಹಳ ಉಪಯುಕ್ತವಾದುದು. ಇದನ್ನೂ ಸಹ ಸರಿಯಾದ ರೀತಿಯಲ್ಲಿ ಉಪಯೋಗ ಮಾಡುವಂತೆ ಜನರಿಗೆ ತಿಳಿವಳಿಕೆ ಕೊಡುವುದು ಅವಶ್ಯಕ ಎಂದು ನಾನು ಹೇಳುತ್ತೇನೆ.

ಮತ್ತೊಂದು ವಿಷಯವೆಂದರೆ ಗ್ರಾಮಾಂತರ ಪ್ರದೇಶಗಳಲ್ಲಿ ನಮ್ಮ ಜನರಿಗೆ ಹೈನುಗಾರಿಕೆಯ ಬಗ್ಗೆ ಸಾಕಷ್ಟು ತಿಳುವಳಿಕೆಯಿಲ್ಲ. ಹಸುಗಳನ್ನು ಹೇಗೆ ಸಾಕಬೇಕು ಯಾವರೀತಿ ಅವುಗಳಿಗೆ ಮೇವು ನೀರು ಹಾಕಬೇಕು ಎನ್ನುವುದರ ಬಗ್ಗೆ ಖಚಿತವಾದ ವಿಷಯ ಜನರಿಗೆ ಗೊತ್ತಿಲ್ಲ. ಇದನ್ನು ಪರಂಪರಾನುಗತವಾಗಿ ಬಂದ ಪದ್ಧತಿಯಿಂದಲೇ ನಮ್ಮ ಜನರು ನಡೆಸಿಕೊಂಡು ಬರುತ್ತಿದ್ದಾರೆ. ಇದನ್ನು ವೈಜ್ಞಾನಿಕ ರೀತಿಯಲ್ಲಿ ನಡೆಸಿಕೊಂಡು ಹೋಗುವಂತೆ ನಮ್ಮ ಜನರಿಗೆ ಹೆಚ್ಚಿನ ತಿಳುವಳಿಕೆಯನ್ನು ಕೊಡಬೇಕು. ಸಾಧ್ಯವಾದರೆ ನಮ್ಮ ಜನರಿಗೆ ಹೊರದೇಶದವರಿಂದ ಇದರ ಬಗ್ಗೆ ಟ್ರೈನಿಂಗ್ ಕೊಡಿಸಿದರೆ ಇದರಿಂದ ಹೆಚ್ಚಿನ ಹಾಲು ಉಪಲಬ್ಧವಾಗಿ ಜನರಿಗೂ ತಮ್ಮ ಆರ್ಥಿಕ ಮಟ್ಟವನ್ನು ಹೆಚ್ಚಿಸಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಇದು ನನ್ನ ದೃಷ್ಟಿಯಲ್ಲಿ ಒಂದು ಪ್ರಚಂಡ ಕೆಲಸವಾಗುತ್ತದೆ ಎಂದು ತಿಳಿದಿದ್ದೇನೆ.

ಮತ್ತೊಂದು ಮಹತ್ವದ ವಿಚಾರವನ್ನು ನಾನು ಮಾನ್ಯ ಅಧ್ಯಕ್ಷರ ನಜರಿಗೆ ತರಬಯಸುತ್ತೇನೆ. ಫೈಲುಗಳ ವಿಲೇವಾರಿಯನ್ನು ಜಾರಿಗೆ ತಂದು ಸರ್ಕಾರದವರು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಒಂದು ಖಾತೆಯಿಂದ ಇನ್ನೊಂದು ಖಾತೆಗೆ ಫೈಲುಗಳು ಹೋಗಬೇಕಾಗಿದ್ದರೆ ಎಷ್ಟೋ ತಿಂಗಳು ಬೇಕಾಗುತ್ತಿತ್ತು, ಆದರೆ ಈಗ ಫೈಲು ವಿಲೇವಾರಿಯನ್ನು ಜಾರಿಗೆ ತಂದ ಮೇಲೂ ಪರಿಸ್ಥಿತಿ ಹೆಚ್ಚಿನ ಮಟ್ಟದಲ್ಲಿ ಸುಧಾರಿಸಿಲ್ಲ. ಅಭಿವೃದ್ಧಿ ಕಾರ್ಯಗಳ ವಿಷಯದಲ್ಲಿ ಇನ್ನೂ ಫೈಲುಗಳು ನಿಧಾನವಾಗಿಯೇ ಚಲಿಸುತ್ತಿವೆ. ನನ್ನ ಕ್ಷೇತ್ರದ ಬಗ್ಗೆ ಎನ್ ಆರ್.ಡಬ್ಲ್ಯೂ.ಎಸ್. ಸ್ಕೀಂನಲ್ಲಿ, ಅಡ್ಮಿನಿಸ್ಟ್ರೇಟೀವ್ ಸ್ಯಾಂಕ್ಷನ್‌ಗೆ ಒಂದು ಫೈಲು ತಿರುಗಾಡುತ್ತಿದ್ದು ಇದು ತುಂಬಾ ವಿಳಂಬವಾಗಿದೆ. ಇದು ಜನರು ಕುಡಿಯುವ ನೀರಿಗೆ ಸಂಬಂಧಪಟ್ಟದ್ದಾಗಿದೆ. ಜನರು ಸಂಕಷ್ಟದಲ್ಲಿದ್ದಾರೆ ಈ ಪರಿಸ್ಥಿತಿಯನ್ನು ಇಲಾಖೆಯವರು ಅರಿತುಕೊಂಡು ಜಾಗ್ರತೆ ಇದನ್ನು ಸ್ಯಾಂಕ್ಷನ್ ಮಾಡಿಕೊಟ್ಟರೆ ಜನಗಳಿಗೆ ಹೆಚ್ಚಿನ ಉಪಕಾರ ಮಾಡಿದಂತಾಗುತ್ತದೆ.

ಇನ್ನು ಜೇನು ಸಾಗಾಣಿಕೆಯ ಬಗ್ಗೆ ಎರಡು ಮಾತುಗಳನ್ನು ಹೇಳುತ್ತೇನೆ. ಇದರ ಬಗ್ಗೆ ಇಲಾಖೆಯವರಿಂದ ಗ್ರಾಮಾಂತರ ಪ್ರದೇಶದವರಿಗೆ ಮಾರ್ಗದರ್ಶನ ಹೆಚ್ಚಿನ ರೀತಿಯಲ್ಲಿ ಆಗಬೇಕಾಗಿದೆ. ಈ ಬಯೋಗ್ಯಾಸ್ ಬಗ್ಗೆ ಯೂ ಸರ್ಕಾರದವರು ಸಾಕಷ್ಟು ಪ್ರಯತ್ನ ಮಾಡಿ ಗ್ರಾಮಾಂತರ ಪ್ರದೇಶದ ಜನರಿಗೆ ತಿಳಿವಳಿಕೆಯನ್ನು ಕೊಡಲು ಮುಂದೆ ಬಂದಿದ್ದಾರೆ. ಇದು ಕಸಕಡ್ಡಿಗಳಿಂದ ಉತ್ಪತ್ತಿಯಾಗತಕ್ಕ ಗ್ಯಾಸ್. ಇದರಿಂದ ರೈತರಿಗೆ ಹೆಚ್ಚಿನ ಉಪಲಬ್ಧತೆ ಇದೆ. ಇದನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಗ್ರಾಮಾಂತರ ಪ್ರದೇಶದ ಜನಗಳಿಗೆ ಕೊಟ್ಟು ಉಪಕಾರ ಮಾಡಬೇಕು ಎಂದು ಕೇಳಿಕೊಂಡು ಅಧ್ಯಕ್ಷರು ಇಷ್ಟು ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ

ಅಧ್ಯಕ್ಷರು.—ಈಗ ಸಭೆ ಎದ್ದು ಬೆಳಿಗ್ಗೆ ೯ ಗಂಟೆಗೆ ಸೇರುತ್ತದೆ.

(The House adjourned at Ten Minutes past Seven of the Clock to meet again at Nine of the clock on Thursday, the 29th July 1982).